ಶನಿವಾರ, ಆಗಸ್ಟ್ 9, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 220 | ಪುಟ 20

prajavani.net prajavani ● www.prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

**ಉದ್ಯೋಗಕ್ಕಾಗಿ ವಲಸೆ**

2023ರಲ್ಲಿ ನಡೆದಿದ್ದ ದ್ವಿಪಕ್ಷೀಯ ಒಪ್ಪಂದದ ಅಡಿಯಲ್ಲಿ ಪ್ರಸಕ್ತ ಸಾಲಿನ ಜುಲೈ 31ರವರೆಗೆ 6,774 ಭಾರತೀಯ ಕಾರ್ಮಿಕರು ಉದ್ಯೋಗಕ್ಕಾಗಿ ಇಸ್ರೇಲ್‌ಗೆ ತೆರಳಿದ್ದಾರೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ

**'ಮನದ ಮಾತು' ಆದಾಯ**

ಪ್ರಧಾನಿ ನರೇಂದ್ರ ಮೋದಿ ಅವರ ಮನದ ಮಾತು ಕಾರ್ಯಕ್ರಮದಿಂದ ಈವರೆಗೆ ₹34.13 ಕೋಟಿ ಆದಾಯ ದೊರೆತಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ

ಸೆನ್ಸೆಕ್ಸ್ 79,857 | ನಿಫ್ಟಿ 24,363 | $/₹87.58 | ಚಿನ್ನ (Std. 10g) ₹1,06,400 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,21,900 (ಬೆಂಗಳೂರು)

# 'ಮತ ಕಳವು ತನಿಖೆ ಮಾಡಿ'

## ಚುನಾವಣಾ ವಂಚನೆ: ದೇಶವ್ಯಾಪಿ ಹೋರಾಟಕ್ಕೆ ಎಐಸಿಸಿ ಮುನ್ನುಡಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಲೋಕಸಭೆ ಚುನಾವಣೆಯಲ್ಲಿ ಬೆಂಗಳೂರು ಕೇಂದ್ರ ಕ್ಷೇತ್ರದ ಮಹದೇವಪುರದಲ್ಲಿ ನಡೆದ ಮತ ಕಳ್ಳತನದ ಕುರಿತು ತನಿಖೆ ಮಾಡಬೇಕು. ಮತದಾರರ ಪಟ್ಟಿಯಲ್ಲಿ ನಕಲಿ ಹೆಸರು ಸೇರಿಸುವ ಚುನಾವಣಾ ಆಯೋಗದ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು' ಎಂದು ತಮ್ಮ ಪಕ್ಷವೇ ಅಧಿಕಾರದಲ್ಲಿರುವ ಕರ್ನಾಟಕ ಸರ್ಕಾರಕ್ಕೆ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸೂಚನೆ ನೀಡಿದರು.

'ಲೋಕಸಭೆ ಚುನಾವಣೆಯಲ್ಲಿ ಮತ ಕಳ್ಳತನ ನಡೆದಿದೆ' ಎಂದು ಆರೋಪಿಸಿ ದೇಶವ್ಯಾಪಿ ಪ್ರತಿಭಟನೆಗೆ ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಚಾಲನೆ ನೀಡಿರುವ ಎಐಸಿಸಿ, 'ನಮ್ಮ ಮತ, ನಮ್ಮ ಹಕ್ಕು, ನಮ್ಮ ಹೋರಾಟ' ಎಂಬ ಘೋಷಣೆಯನ್ನು ಮೊಳಗಿಸಿತು. ಚುನಾವಣಾ ವಂಚನೆಗಳ ವಿರುದ್ಧ ಸಂವಿಧಾನ ಮತ್ತು ಪ್ರಜಾಪ್ರಭುತ್ವ ಉಳಿಸುವ ಘೋಷಣೆಯೊಂದಿಗೆ ದೇಶವ್ಯಾಪಿ ಹೋರಾಟಕ್ಕೆ ಮುನ್ನುಡಿ ಬರೆಯಿತು.

'ಸಂವಿಧಾನ'ದ ಪ್ರತಿಯನ್ನು ಕೈಯಲ್ಲಿ ಹಿಡಿದು ಈ ಹೋರಾಟಕ್ಕೆ ರಾಹುಲ್ ಚಾಲನೆ ನೀಡಿದರು.

6

> **ಚುನಾವಣಾ ಆಯೋಗ ಬಿಜೆಪಿ ಶಾಖಾ ಕಚೇರಿ. ಮತ ಕಳ್ಳತನ ಮಾಡಿ ಅಧಿಕಾರ ಹಿಡಿದಿರುವ ಮೋದಿ ಅವರಿಗೆ ಪ್ರಧಾನಿ ಕುರ್ಚಿಯಲ್ಲಿ ಕುಳಿತುಕೊಳ್ಳುವ ನೈತಿಕ ಹಕ್ಕಿಲ್ಲ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> **ಆಸ್ಪತ್ರೆಗಳಲ್ಲಿ ಬ್ಲಡ್ ಬ್ಯಾಂಕ್ ಇರುವಂತೆ ಪ್ರತಿ ಕ್ಷೇತ್ರದಲ್ಲಿ ಲೀಗಲ್ ಬ್ಯಾಂಕ್ ಸ್ಥಾಪಿಸುವಂತೆ ರಾಹುಲ್ ಗಾಂಧಿ ಸೂಚನೆ ನೀಡಿದ್ದಾರೆ. ಅವರ ಸೂಚನೆಗೆ ಬದ್ಧರಾಗಿದ್ದೇವೆ**
> **ಡಿ.ಕೆ. ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಮುಖ್ಯಮಂತ್ರಿ ಸಿದ್ದರಾಮಯ್ಯ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರತಿಭಟನಾ ಸಭೆಯಲ್ಲಿ ಪಾಲ್ಗೊಂಡಿದ್ದರು ಚಿತ್ರ: ಎಂ. ಎಸ್. ಮಂಜುನಾಥ್

### ಆಯೋಗಕ್ಕೆ ರಾಹುಲ್ ಸವಾಲ್

- ಮತದಾರರ ಪಟ್ಟಿಯನ್ನು ಡಿಜಿಟಲ್ ರೂಪದಲ್ಲಿ ಹಾಗೂ ಚುನಾವಣೆಗೆ ಸಂಬಂಧಿಸಿದ ವಿಡಿಯೊ ದೃಶ್ಯಾವಳಿ ನೀಡಿದರೆ ಕರ್ನಾಟಕದಲ್ಲಷ್ಟೇ ಅಲ್ಲ, ಇಡೀ ದೇಶದಲ್ಲಿ ಮತ ಕಳ್ಳತನ ಆಗಿರುವುದಕ್ಕೆ ಸಾಕ್ಷ್ಯಗಳನ್ನು ಒದಗಿಸುತ್ತೇವೆ
- ಬಿಜೆಪಿಯು 35 ಸಾವಿರಕ್ಕಿಂತ ಕಡಿಮೆ ಮತಗಳ ಅಂತರದಿಂದ 25 ಸ್ಥಾನಗಳನ್ನು ಗೆದ್ದಿದೆ. ಅಷ್ಟೇ ಅಂತರದ ಸಂಖ್ಯೆ ಆಧರಿಸಿ ಮೋದಿ ಪ್ರಧಾನಿ ಆಗಿದ್ದಾರೆ
- ಚುನಾವಣಾ ಆಯೋಗವು ಸತ್ಯವನ್ನು ಮರೆಮಾಚಲು ಸಾಧ್ಯವಿಲ್ಲ. ಒಂದು ದಿನ, ಅದು ವಿರೋಧ ಪಕ್ಷವನ್ನು ಎದುರಿಸಬೇಕಾಗುತ್ತದೆ
- ಕಾಂಗ್ರೆಸ್ ಪಕ್ಷದವರಾದ ನಮ್ಮ ದೇಹದಲ್ಲಿ ಸಂವಿಧಾನದ ಡಿಎನ್‌ಎ ಇದೆ. ಸಂವಿಧಾನವು ಬಡ ಮತ್ತು ದೀನದಲಿತ ಜನರ ಅಸ್ತ್ರ

6

## ಧರ್ಮಸ್ಥಳ: ಹೊಸ ಸ್ಥಳದಲ್ಲಿ ಶೋಧ

**ಮಂಗಳೂರು:** ಧರ್ಮಸ್ಥಳ ಗ್ರಾಮದಲ್ಲಿ ಅಸಹಜವಾಗಿ ಸಾವಿಗೀಡಾದ ಶವಗಳನ್ನು ಹೂತು ಹಾಕಲಾಗಿದೆ ಎಂಬ ದೂರಿನ ತನಿಖೆ ನಡೆಸುತ್ತಿರುವ ಎಸ್‌ಐಟಿ ಬೋಳಿಯಾರ್ ಕಾಡಿನೊಳಗೆ ಶುಕ್ರವಾರ ಶೋಧ ನಡೆಸಿತು.

ವಿವರ 7

**ಚಿನಕುರುಳಿ** ಪ್ರಕಾಶ್ ಶೆಟ್ಟಿ

## ದ್ವಿಭಾಷಾ ನೀತಿಗೆ ಶಿಫಾರಸು

ಪ್ರಜಾವಾಣಿ ವಾರ್ತೆ

**ಎಸ್‌ಇಪಿ ಆಯೋಗ**

**ಬೆಂಗಳೂರು:** ಶಾಲಾ ಶಿಕ್ಷಣದಲ್ಲಿ ದ್ವಿಭಾಷಾ ನೀತಿಯನ್ನು ಕಡ್ಡಾಯ ವಾಗಿ ಅನುಷ್ಠಾನಗೊಳಿಸುವಂತೆ ರಾಜ್ಯ ಶಿಕ್ಷಣ ನೀತಿ ಆಯೋಗ ಶಿಫಾರಸು ಮಾಡಿದೆ. ತೃತೀಯ ಭಾಷೆಯಾಗಿ ಹಿಂದಿಯನ್ನು ಕಲಿಸುವ ಬಗ್ಗೆ ಆಯೋಗ ಪ್ರಸ್ತಾಪಿಸಿಲ್ಲ.

ರಾಷ್ಟ್ರೀಯ ಹೊಸ ಶಿಕ್ಷಣ ನೀತಿ–2020ರ (ಎನ್‌ಇಪಿ) ಬದಲಿಗೆ ರಾಜ್ಯಕ್ಕೆ ಪ್ರತ್ಯೇಕವಾದ ಶಿಕ್ಷಣ ನೀತಿ ರೂಪಿಸಲು ಪ್ರೊ.ಸುಖದೇವ್ ಥೋರಟ್ ಅಧ್ಯಕ್ಷತೆಯಲ್ಲಿ ರಾಜ್ಯ ಶಿಕ್ಷಣ ನೀತಿ ಆಯೋಗವನ್ನು ಸರ್ಕಾರ ರಚಿಸಿತ್ತು. 2,197 ಪುಟಗಳಿರುವ ಮೂರು ಸಂಪುಟ ಒಳಗೊಂಡ ತನ್ನ ಅಂತಿಮ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಆಯೋಗವು ಶುಕ್ರವಾರ ಸಲ್ಲಿಸಿತು. ಮೂರು ಸಂಪುಟಗಳನ್ನು ಶಾಲಾ ಶಿಕ್ಷಣ, ಉನ್ನತ ಶಿಕ್ಷಣ ಹಾಗೂ ವೃತ್ತಿ ಶಿಕ್ಷಣ ಎಂದು ವರ್ಗೀಕರಿಸಲಾಗಿದೆ.

ಕನ್ನಡ ಸೇರಿದಂತೆ ಇತರೆ ಮಾತೃ ಭಾಷೆಗಳನ್ನು ಪ್ರಥಮ ಭಾಷೆಯಾಗಿ, ಇಂಗ್ಲಿಷ್ ಅನ್ನು ದ್ವಿತೀಯ ಭಾಷೆಯಾಗಿ ನಿಗದಿ ಮಾಡಬೇಕು. ಈ ನಿಯಮವನ್ನು ಸರ್ಕಾರಿ, ಅನುದಾನಿತ ಹಾಗೂ ಎಲ್ಲ ಖಾಸಗಿ ಶಾಲೆಗಳಲ್ಲೂ ಅನುಷ್ಠಾನಗೊಳಿಸಬೇಕು. ಐದನೇ ತರಗತಿಯವರೆಗೆ ಮಾತೃಭಾಷೆಯಲ್ಲೇ ಬೋಧನೆಗೆ ಅವಕಾಶ ನೀಡಬೇಕು ಎಂದು ಆಯೋಗ ಶಿಫಾರಸು ಮಾಡಿದೆ.

ಇನ್ನೊಂದು ಸುದ್ದಿ 10

## ವಿಷ್ಣುವರ್ಧನ್ ಸಮಾಧಿ ತೆರವು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಉತ್ತರಹಳ್ಳಿ–ಕೆಂಗೇರಿ ರಸ್ತೆಯಲ್ಲಿರುವ ಅಭಿಮಾನ್ ಸ್ಟುಡಿಯೊದಲ್ಲಿದ್ದ ನಟ ವಿಷ್ಣುವರ್ಧನ್ ಅವರ ಸಮಾಧಿಯನ್ನು ರಾತ್ರೋರಾತ್ರಿ ತೆರವು ಮಾಡಿದ್ದನ್ನು ವಿರೋಧಿಸಿ, ವಿಷ್ಣುವರ್ಧನ್ ಅಭಿಮಾನಿಗಳು ಸ್ಟುಡಿಯೊ ಎದುರು ಶುಕ್ರವಾರ ಪ್ರತಿಭಟನೆ ನಡೆಸಿ ಆಕ್ರೋಶ ಹೊರಹಾಕಿದರು.

ರಾತ್ರೋರಾತ್ರಿ ಸಮಾಧಿಯನ್ನು ತೆರವು ಮಾಡಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಕಾರರು ಸ್ಟುಡಿಯೊದ ಒಳಗೆ ನುಗ್ಗಲು ಯತ್ನಿಸಿದರು. ಆಗ ಪೊಲೀಸರು ಹಾಗೂ ಅಭಿಮಾನಿಗಳ ಮಧ್ಯೆ ತಳ್ಳಾಟ ನಡೆಯಿತು. ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಪ್ರತಿಭಟನಕಾರರನ್ನು ಪೊಲೀಸರು ವಶಕ್ಕೆ ಪಡೆದು ಕರೆದೊಯ್ದರು.

ರಾಜ್ಯ ಸರ್ಕಾರದ ಭರವಸೆಯ ನಡುವೆಯೂ ಅಭಿಮಾನಿ ಸ್ಟುಡಿಯೊದಲ್ಲಿದ್ದ ಸಮಾಧಿಯನ್ನು ಗುರುವಾರ ರಾತ್ರಿ ನೆಲಸಮ ಮಾಡಲಾಗಿದೆ ಎಂದು ವಿಷ್ಣುಸೇನಾ ಸಮಿತಿ ಅಧ್ಯಕ್ಷ ವೀರಕಪುತ್ರ ಶ್ರೀನಿವಾಸ್ ದೂರಿದ್ದಾರೆ.

'ವಶಕ್ಕೆ ಪಡೆದ ಪ್ರತಿಭಟನಕಾರರನ್ನು ಬಿಡುಗಡೆ ಮಾಡಲಾಗಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಸ್ಥಳದಲ್ಲಿ ಪೊಲೀಸ್ ಭದ್ರತೆ ಕಲ್ಪಿಸಲಾಗಿದೆ' ಎಂದು ನೈರುತ್ಯ ವಿಭಾಗದ ಡಿಸಿಪಿ ಅನಿತಾ ಭೀಮಪ್ಪ ಹದ್ದಣ್ಣನವರ್ ತಿಳಿಸಿದ್ದಾರೆ.

ಪೊಟ್ಯಾಟೊ ಚಿಪ್ಸ್

Lay's ಎನ್ನುವುದು PepsiCo, Inc. ಕಂಪನಿಯ ನೋಂದಾಯಿತ ಟ್ರೇಡ್ ಮಾರ್ಕ್.

~ಹೇಳಿಕೆಗಳು ಆಂಧ್ರ ಪ್ರದೇಶ, ತೆಲಂಗಾಣ, ಕರ್ನಾಟಕ, ತಮಿಳುನಾಡು & ಕೇರಳಗಳಲ್ಲಿ ಆಯ್ದ Lay's ಪೊಟ್ಯಾಟೊ ಚಿಪ್ (ರೂ.10) ಗಳಲ್ಲಿ ಮಾತ್ರ ಲಭ್ಯವಿದೆ ಮತ್ತು Pecten & Pinna Insights Solutions Pvt Ltd 2025 ಮಾರ್ಚ್ 6ನೇ ಮತ್ತು 31ರ ನಡುವೆ (Lay's ಜೊತೆಗೆ ಹಂಚಿಕೊಂಡ 86% ಮಾರುಕಟ್ಟೆ ವ್ಯಾಪ್ತಿ) ನಡೆಸಿದ ಮಾರುಕಟ್ಟೆ ಸಮೀಕ್ಷೆಯನ್ನು ಆಧರಿಸಿ ನೀಡಲಾಗಿದೆ. ವಿವರಗಳಿಗಾಗಿ www.pepsnacks.com/lays/pos ನೋಡಿ.

#25g ಗ್ರಾಂಗೆ MRP ರೂ.10/- (ಎಲ್ಲಾ ತೆರಿಗೆಗಳನ್ನು ಒಳಗೊಂಡಿದೆ).

ಸೂರ್ಯೋದಯ: 6:07 ಸೂರ್ಯಾಸ್ತ : 6:44 | ಚಂದ್ರೋದಯ: ಸಂ. 6:11 ಚಂದ್ರಾಸ್ತ: ಬೆ. 4:56 | ಶುಕ್ರವಾರದ ಉಷ್ಣಾಂಶ : ಗರಿಷ್ಠ 29° ಕನಿಷ್ಠ 21°

ಶನಿವಾರದ ಉಷ್ಣಾಂಶ 29° ಗರಿಷ್ಠ 20° ಕನಿಷ್ಠ | ಭಾನುವಾರ 29° : 20° | ಸೋಮವಾರ 29° : 20° | ಮಂಗಳವಾರ 29° : 20°



**ಹವಾಮಾನ ಮುನ್ಸೂಚನೆ:** ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ತುಂತುರು ಮಳೆಯಾಗಲಿದೆ.

## ಭಕ್ತಿ ಭಾವದಿಂದ ವರಮಹಾಲಕ್ಷ್ಮೀ ಆರಾಧನೆ

ಬೆಂಗಳೂರು: ನಗರದಲ್ಲಿ ಶುಕ್ರವಾರ ವರಮಹಾಲಕ್ಷ್ಮೀ ಹಬ್ಬವನ್ನು ಸಂಭ್ರಮ ಹಾಗೂ ಭಕ್ತಿಭಾವದಿಂದ ಆಚರಿಸಲಾಯಿತು. ಮನೆ ಹಾಗೂ ದೇಗುಲಗಳಲ್ಲಿ ಹಬ್ಬದ ಸಡಗರ ಕಂಡುಬಂತು.

ವರಮಹಾಲಕ್ಷ್ಮೀ ಹಬ್ಬವು ಶ್ರಾವಣದ ತಿಂಗಳಲ್ಲಿ ಬರುವ ಪ್ರಮುಖ ಹಬ್ಬವಾಗಿದ್ದು, ಭಕ್ತರು ಲಕ್ಷ್ಮೀದೇವಿಯನ್ನು ಆರಾಧಿಸಿದರು.

ನಗರದ ಕೋಣನಕುಂಟೆ ದೇಸಾಯಿ ಗಾರ್ಡನ್ ಮಹಾಲಕ್ಷ್ಮೀ ದೇವಸ್ಥಾನದಲ್ಲಿ ವರಮಹಾಲಕ್ಷ್ಮೀ ಹಬ್ಬದ ಪ್ರಯುಕ್ತ ಭಕ್ತರು ವಿಶೇಷ ಪೂಜೆ ಸಲ್ಲಿಸಿದರು

# ನಿಲ್ದಾಣಗಳ ಹೆಸರು ಅದಲು ಬದಲು

## ಎಲೆಕ್ಟ್ರಾನಿಕ್ ಸಿಟಿ– ಕೋನಪ್ಪನ ಅಗ್ರಹಾರದಲ್ಲಿ ಭಿನ್ನ ನಾಮಫಲಕ ಗೊಂದಲ

● ಬಾಲಕೃಷ್ಣ ಪಿ.ಎಚ್.

ಬೆಂಗಳೂರು: 'ನಮ್ಮ ಮೆಟ್ರೊ' ಹಳದಿ ಮಾರ್ಗದಲ್ಲಿ ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ನಿಲ್ದಾಣಕ್ಕೆ ಕೋನಪ್ಪನ ಅಗ್ರಹಾರ ಎಂದೂ, ಕೋನಪ್ಪನ ಅಗ್ರಹಾರದ ನಿಲ್ದಾಣಕ್ಕೆ ಎಲೆಕ್ಟ್ರಾನಿಕ್ ಸಿಟಿ ನಿಲ್ದಾಣ ಎಂದೂ ಹೆಸರಿಟ್ಟಿರುವುದು ಗೊಂದಲಕ್ಕೆ ಕಾರಣವಾಗಿದೆ.

ಈ ಎರಡೂ ಮೆಟ್ರೊ ನಿಲ್ದಾಣಗಳಲ್ಲಿರುವ ಹೆಸರು ಮತ್ತು ಅಲ್ಲೇ ಪಕ್ಕದಲ್ಲಿರುವ ಬಿಎಂಟಿಸಿ ನಿಲ್ದಾಣಗಳಲ್ಲಿ ಇರುವ ಹೆಸರು ಅದಲು ಬದಲು ಇರುವುದು ಮೆಟ್ರೊ ಪ್ರಯಾಣ ಆರಂಭವಾದಾಗ ಪ್ರಯಾಣಿಕರನ್ನು ತಬ್ಬಿಬ್ಬುಗೊಳಿಸಲಿದೆ.

ರಾಷ್ಟ್ರೀಯ ವಿದ್ಯಾಲಯ– ಬೊಮ್ಮಸಂದ್ರ ಸಂಪರ್ಕಿಸುವ ನಮ್ಮ ಮೆಟ್ರೊ ಹಳದಿ ಮಾರ್ಗವು ಎಲೆಕ್ಟ್ರಾನಿಕ್ ಸಿಟಿಯನ್ನು ಹಾದು ಹೋಗುತ್ತದೆ. ಈ ಮಾರ್ಗಕ್ಕೆ ಆ.10ರಂದು ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಲಿದ್ದಾರೆ.

ಇಲ್ಲಿವರೆಗೆ ಬಿಎಂಟಿಸಿ ಬಸ್‌ಗಳಲ್ಲಿ ಸಂಚರಿಸುತ್ತಿದ್ದವರು ಮೆಟ್ರೊದಲ್ಲಿ ಸಂಚರಿಸಲು ಆರಂಭಿಸಿದಾಗ ಹೆಸರುಗಳು ಗೊಂದಲ ಉಂಟುಮಾಡಲಿವೆ. ಆರ್‌ವಿ ರಸ್ತೆ ಕಡೆಯಿಂದ ಮೆಟ್ರೊದಲ್ಲಿ ಸಂಚರಿಸುವವರು ಇಲ್ಲಿವರೆಗಿನ ವಾಡಿಕೆಯಂತೆ ಎಲೆಕ್ಟ್ರಾನಿಕ್ ಸಿಟಿಗೆ ಟಿಕೆಟ್ ತೆಗೆದುಕೊಂಡರೆ ಇಳಿಯಬೇಕಾಗಿರುವುದಕ್ಕಿಂದ ಹೆಚ್ಚುವರಿಯಾಗಿ ಒಂದು ನಿಲ್ದಾಣಕ್ಕೆ ಪಾವತಿ ಮಾಡಿದಂತಾಗಲಿದೆ. ಅದೇ ರೀತಿ ಬಿಎಂಟಿಸಿ ಬಸ್ ನಿಲ್ದಾಣದ ನೆನಪಿನಲ್ಲಿ ಕೋನಪ್ಪನ ಅಗ್ರಹಾರಕ್ಕೆ ಮೆಟ್ರೊದಲ್ಲಿ ಟಿಕೆಟ್ ತೆಗೆದುಕೊಂಡರೆ 'ಇನ್ಫೊಸಿಸ್ ಫೌಂಡೇಷನ್ ಕೋನಪ್ಪನ ಅಗ್ರಹಾರ' ಎಂದು ಹೆಸರು ಇರುವ ಮೆಟ್ರೊ ನಿಲ್ದಾಣದಲ್ಲಿ ಇಳಿಯಬೇಕಿದೆ. ಇದು ನಿಜವಾದ ಕೋನಪ್ಪನ ಅಗ್ರಹಾರದಿಂದ ಹಿಂದಿನ ನಿಲ್ದಾಣವಾಗಿದೆ. ಅಲ್ಲಿಂದ ಮುಂದಕ್ಕೆ ಮತ್ತೆ ಟಿಕೆಟ್ ತೆಗೆದುಕೊಳ್ಳಬೇಕಿದೆ.

ಕೋನಪ್ಪನ ಅಗ್ರಹಾರದಲ್ಲಿರುವ 'ಎಲೆಕ್ಟ್ರಾನಿಕ್ ಸಿಟಿ' ನಮ್ಮ ಮೆಟ್ರೊ ನಿಲ್ದಾಣ

'ಇದು ಎರಡೂ ಪ್ರಧಾನ ಜಂಕ್ಷನ್‌ಗಳಾಗಿರುವುದರಿಂದ ಪ್ರತಿದಿನ ಸಾವಿರಾರು ಪ್ರಯಾಣಿಕರಿಗೆ ಸಮಸ್ಯೆ ಉಂಟುಮಾಡಲಿದೆ. ಹೆಸರು ಅದಲು ಬದಲಾಗಿ ತಪ್ಪಾಗಿರುವ ಬಗ್ಗೆ ನಾನು ಬಿಎಂಆರ್‌ಸಿಎಲ್‌ಗೆ, ಇಎಲ್‌ಸಿಟಿಎಗೆ, ಇನ್ಫೊಸಿಸ್ ಫೌಂಡೇಷನ್‌ಗೆ ಇ-ಮೇಲ್, 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಹಾಕಿದ್ದೇನೆ. ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಅಧಿಕಾರಿಗಳಿಗೆ ಮಾಹಿತಿ ನೀಡಿದರೂ ಸ್ಪಂದನ ದೊರೆತಿಲ್ಲ' ಎಂದು ಈ ಮಾರ್ಗದಲ್ಲಿ ಸಂಚರಿಸುವ ವಿದ್ಯಾರ್ಥಿ, ಆನೇಕಲ್ ತಾಲ್ಲೂಕು ಕಿತ್ತಿಗಾನಹಳ್ಳಿ ನಿವಾಸಿ ವಿಮಲ್‌ಕಾಂತ್ ಎಲ್. ತಿಳಿಸಿದರು.

'ಆಯುರ್ವೇದ ಕಲಿಯುತ್ತಿರುವ ನಾನು, ಚಂದಾಪುರದಿಂದ ಕೆಂಗೇರಿಗೆ ನಿತ್ಯ ಬಿಎಂಟಿಸಿ ಬಸ್‌ನಲ್ಲಿ ಸಂಚರಿಸುತ್ತಿದ್ದೇನೆ. ಹೆಸರು ತಪ್ಪಾಗಿರುವುದು ನನ್ನ ಗಮನಕ್ಕೆ ಬಂದಿದೆ. ನೈಸ್ ರಸ್ತೆ, ಕೆಂಗೇರಿ, ಅತ್ತಿಬೆಲೆ ಸಹಿತ ವಿವಿಧೆಡೆಯಿಂದ ಬರುವ ಜನರು ಗೊಂದಲಕ್ಕೀಡಾಗಲಿದ್ದಾರೆ. ಹಾಗಾಗಿ ಬಿಎಂಆರ್‌ಸಿಎಲ್‌ನವರು ಹೆಸರು ಸರಿಪಡಿಸಬೇಕು' ಎಂದು ಆಗ್ರಹಿಸಿದರು.

ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ 'ಇನ್ಫೋಸಿಸ್ ಫೌಂಡೇಶನ್ ಕೋನಪ್ಪನ ಅಗ್ರಹಾರ' ಮೆಟ್ರೊ ನಿಲ್ದಾಣ

### ಎರಡೂ ಎಲೆಕ್ಟ್ರಾನಿಕ್ ಸಿಟಿಯಲ್ಲೇ ಇವೆ

ಎರಡೂ ನಿಲ್ದಾಣಗಳು ಎಲೆಕ್ಟ್ರಾನಿಕ್ ಸಿಟಿಯಲ್ಲಿಯೇ ಇವೆ. ಇನ್ಫೊಸಿಸ್ ಫೌಂಡೇಷನ್ ಇರುವಲ್ಲಿ 'ಇನ್ಫೊಸಿಸ್ ಫೌಂಡೇಷನ್ ಕೋನಪ್ಪನ ಅಗ್ರಹಾರ' ಎಂದು ಹೆಸರಿಡಲಾಗಿದೆ. ಇನ್ನೊಂದು ಭಾಗದಲ್ಲಿ ಇರುವ ನಿಲ್ದಾಣಕ್ಕೆ ಎಲೆಕ್ಟ್ರಾನಿಕ್ ಸಿಟಿ ಎಂದು ಹೆಸರಿಡಲಾಗಿದೆ. ಇದರಿಂದ ಪ್ರಯಾಣಿಕರಿಗೆ ಗೊಂದಲಗಳು ಆಗುವುದಿಲ್ಲ. ಅಲ್ಲದೇ ಹಿಂದೆ ಸಚಿವ ಸಂಪುಟದಲ್ಲಿ ಅನುಮೋದನೆಗೊಂಡು ಇಟ್ಟಿರುವ ಹೆಸರುಗಳು ತಕ್ಷಣಕ್ಕೆ ಬದಲಾಯಿಸಲು ಆಗುವುದಿಲ್ಲ. ನಮ್ಮ ಮೆಟ್ರೊ ಪ್ರಯಾಣ ಆರಂಭವಾದಾಗ ಪ್ರಯಾಣಿಕರಿಗೆ ತಮ್ಮ ನಿಲ್ದಾಣಗಳ ಹೆಸರು ಗೊತ್ತಾಗುತ್ತದೆ' ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಪ್ರತಿಕ್ರಿಯಿಸಿದ್ದಾರೆ.

ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ರಫ್ತು ನಿಗಮದಲ್ಲಿ (ಕೆಪೆಕ್) ಗುರುವಾರ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳಿಗೆ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಗುರುತಿನ ಚೀಟಿ ವಿತರಿಸಿದರು

# 'ಪಿಎಂಎಫ್‌ಎಂಇ ಬಳಸಿ ಉದ್ಯಮಿಗಳಾಗಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನ ಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮ ಬದ್ಧಗೊಳಿಸುವಿಕೆ ಯೋಜನೆಯನ್ನು (ಪಿಎಂಎಫ್‌ಎಂಇ) ಬಳಸಿಕೊಂಡರೆ ರೈತರೇ ಉದ್ಯಮಿಗಳಾಗಬಹುದು ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ರಫ್ತು ನಿಗಮದಲ್ಲಿ (ಕೆಪೆಕ್) ಗುರುವಾರ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳಿಗೆ ಗುರುತಿನ ಚೀಟಿ ವಿತರಿಸಿ ಅವರು ಮಾತನಾಡಿದರು.

ಪಿಎಂಎಫ್‌ಎಂಇ ಉತ್ತಮ ಯೋಜನೆಯಾಗಿದ್ದು, ಈ ಬಾರಿ ರಾಜ್ಯದಲ್ಲಿ 5000 ಘಟಕಗಳನ್ನು ಸ್ಥಾಪಿಸುವ ಗುರಿಯಿದೆ. ರಾಜ್ಯ ಬಜೆಟ್‌ನಲ್ಲಿ ₹206 ಕೋಟಿ ಒದಗಿಸಲಾಗಿದೆ. ಈ ಉದ್ಯಮಕ್ಕೆ ಬಂದವರಿಗೆ ಕೇಂದ್ರ ಸರ್ಕಾರದಿಂದ ₹6 ಲಕ್ಷ, ರಾಜ್ಯ ಸರ್ಕಾರದಿಂದ ₹9 ಲಕ್ಷ ಸೇರಿ ಸುಮಾರು ₹15 ಲಕ್ಷ ಸಹಾಯಧನ ಸಿಗುತ್ತಿದೆ. ರೈತರು ಉದ್ಯಮಿಗಳಾಗುವ ನಿಟ್ಟಿನಲ್ಲಿ ಈ ಯೋಜನೆಯ ಪ್ರಯೋಜನ ಪಡೆಯಬೇಕು ಎಂದು ಸಲಹೆ ನೀಡಿದರು.

ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ತರಬೇತಿ ಪಡೆದ 84 ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳಿಗೆ ಗುರುತಿನ ಚೀಟಿ ವಿತರಿಸಿದರು. ತರಬೇತಿ ಪಡೆದವರು ಗ್ರಾಮೀಣ ಮಟ್ಟದಲ್ಲಿ ಯೋಜನೆ ಕುರಿತು ಮಾಹಿತಿ ನೀಡಬೇಕು ಎಂದು ಸೂಚಿಸಿದರು.

ಕೆಪೆಕ್ ಅಧ್ಯಕ್ಷ ಬಿ.ಎಚ್. ಹರೀಶ್ ಮಾತನಾಡಿ, 'ರಾಜ್ಯದಲ್ಲಿ 6,385 ಫಲಾನುಭವಿಗಳು ಈಗಾಗಲೇ ಈ ಯೋಜನೆಯ ಲಾಭ ಪಡೆದಿದ್ದಾರೆ. ಈ ಆರ್ಥಿಕ ವರ್ಷದಲ್ಲಿ ಇನ್ನೂ 5 ಸಾವಿರ ಘಟಕಗಳನ್ನು ಸ್ಥಾಪಿಸುವ ಗುರಿಯಿದೆ. ಎಲ್ಲ ಜಿಲ್ಲೆಗಳಲ್ಲೂ ಅರಿವು ಮೂಡಿಸುವ ಕೆಲಸ ಮಾಡುತ್ತಿದ್ದೇವೆ' ಎಂದು ವಿವರಿಸಿದರು.

ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್ ಉಪಸ್ಥಿತರಿದ್ದರು.

# ಸಂಚಾರ ಮಾರ್ಗ ಬದಲಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ'ದ ಹಳದಿ ಮಾರ್ಗವನ್ನು ಆಗಸ್ಟ್ 10ರಂದು ಪ್ರಧಾನಿ ನರೇಂದ್ರ ಮೋದಿ ಅವರು ಉದ್ಘಾಟಿಸಲಿದ್ದು, ಹಲವು ಮಾರ್ಗಗಳಲ್ಲಿ ವಾಹನ ಸಂಚಾರ ಮಾರ್ಗ ಬದಲಾವಣೆ ಮಾಡಲಾಗಿದೆ. ಜತೆಗೆ, ವಾಹನಗಳ ನಿಲುಗಡೆ ಸಹ ನಿಷೇಧಿಸಲಾಗಿದೆ.

ಜಯನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಮಾರೇನಹಳ್ಳಿ ಮುಖ್ಯರಸ್ತೆಯ ರಾಗಿಗುಡ್ಡ ಮೆಟ್ರೊ ನಿಲ್ದಾಣದ ಬಳಿ ಹಳದಿ ಮಾರ್ಗದ ಉದ್ಘಾಟನಾ ಸಮಾರಂಭ ನಡೆಯಲಿದೆ. ಪ್ರಧಾನಿ ಮೋದಿ ಸೇರಿದಂತೆ ಹಲವರು ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದು, ಸಂಚಾರ ಮಾರ್ಗವನ್ನು ಮಾರ್ಪಾಡು ಮಾಡಲಾಗಿದೆ.

**ಸಂಚಾರ ನಿರ್ಬಂಧ:** ಅಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 12.30ರವರೆಗೆ ಮಾರೇನಹಳ್ಳಿ ಮುಖ್ಯರಸ್ತೆಯ ರಾಜಲಕ್ಷ್ಮಿ ಜಂಕ್ಷನ್‌ನಿಂದ ಮಾರೇನಹಳ್ಳಿ 18ನೇ ಮುಖ್ಯರಸ್ತೆಯ ವರೆಗೆ ವಾಹನ ಸಂಚಾರ ನಿರ್ಬಂಧಿಸಲಾಗಿದೆ. ಮಾರೇನಹಳ್ಳಿ ಈಸ್ಟ್ ಎಂಡ್ ಮುಖ್ಯರಸ್ತೆಯ ಜಂಕ್ಷನ್‌ನಿಂದ ಆರವಿಂದ ಜಂಕ್ಷನ್‌ವರೆಗೂ ಸಂಚಾರ ನಿರ್ಬಂಧಿಸಲಾಗಿದೆ.

ಬೆಳಿಗ್ಗೆ 11.30ರಿಂದ ಮಧ್ಯಾಹ್ನ 2.30ರ ವರೆಗೆ ಸಿಲ್ಕ್ ಬೋರ್ಡ್ ಕಡೆಯಿಂದ ಎಲೆಕ್ಟ್ರಾನಿಕ್ ಸಿಟಿ ಮೇಲ್ಸೇತುವೆ ಮತ್ತು ಹೊಸೂರು ರಸ್ತೆಯ ಮೂಲಕ ಹೊಸೂರು ಕಡೆಗೆ ಹಾಗೂ ಹೊಸೂರು ಕಡೆಯಿಂದ ಬೆಂಗಳೂರು ನಗರದ ಕಡೆಗೆ, ಎಲೆಕ್ಟ್ರಾನಿಕ್ ಸಿಟಿ 1ನೇ ಹಂತದ ಇನ್ಫೊಸಿಸ್ ಅವೆನ್ಯೂ, ವೇಲಾಂಕಣಿ ರಸ್ತೆ, ಎಚ್.ಪಿ ಅವೆನ್ಯೂ ರಸ್ತೆಗಳಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ಅಮೆರಿಕನ್ ಸ್ಕೂಲ್ ಆಫ್ ಬ್ಯುಸಿನೆಸ್ ಮ್ಯಾನೇಜ್‌ಮೆಂಟ್(ಎಬಿಬಿಎಸ್) ಸಂಸ್ಥೆ ಹಾಗೂ ಅಮೆರಿಕನ್ ಅಕಾಡೆಮಿ ಆಫ್ ಫೈನಾನ್ಷಿಯಲ್ ಮ್ಯಾನೇಜ್‌ಮೆಂಟ್ ಇಂಡಿಯಾ (ಎಎಫ್‌ಎಂ ಇಂಡಿಯಾ) ಸಂಸ್ಥೆಯು 'ಚಾರ್ಟರ್ಡ್ ವೆಲ್ತ್ ಮ್ಯಾನೇಜರ್' (ಸಿಡಬ್ಲ್ಯುಎಂ) ಕಾರ್ಯಕ್ರಮ ಕುರಿತ ಒಡಂಬಡಿಕೆಗೆ ಸಹಿ ಹಾಕಿದವು. 'ವಾಣಿಜ್ಯ ದಿನ'ದ ಅಂಗವಾಗಿ ಸಮಗ್ರ ಶಿಕ್ಷಣ ಸಮಿತಿ ಟ್ರಸ್ಟ್ ಅಡಿಯಲ್ಲಿ ಈ ಎರಡು ಸಂಸ್ಥೆಗಳ ನಡುವೆ ನಡೆದ ಈ ಒಡಂಬಡಿಕೆಯು ದಕ್ಷಿಣ ಭಾರತದ ಮೊದಲ ಪಾಲುದಾರಿಕೆಯಾಗಿದೆ

## ನಗರದಲ್ಲಿ ಇಂದು

**ಬಸವ ಪುರಸ್ಕಾರ ಪ್ರಶಸ್ತಿ ಪ್ರದಾನ: ಸಾನ್ನಿಧ್ಯ:** ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ಎನ್ ಸಂತೋಷ್ ಹೆಗ್ಡೆ, ಅತಿಥಿಗಳು: ಸಂತೋಷ್ ಎಸ್. ಲಾಡ್, ಬಿ.ವೈ. ರಾಘವೇಂದ್ರ, ಎಂ.ಪಿ. ಲತಾ ಮಲ್ಲಿಕಾರ್ಜುನ್, ಟಿ.ಎ. ನಾರಾಯಣ ಗೌಡ, ಎಚ್.ಆರ್. ಶಾಂತರಾಜಣ್ಣ, ಮಹಾಂತೇಶ್ ಆರ್. ಚರಂತಿಮಠ್, ಪ್ರಕಾಶ್ ತಾವಂಶಿ, ಆಯೋಜನೆ: ಬಸವ ಪರಿಷತ್, ಸ್ಥಳ: ಕೊಡಂಜ್ಞಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಬೆಳಿಗ್ಗೆ 9.30

**ಗ್ಲೋಬಲ್ ಕಲ್ಚರ್ ಸಂಗೀತೋತ್ಸವ 2025: ಆಯೋಜನೆ**: ಗ್ಲೋಬಲ್ ಕಲ್ಚರ್ ಸಂಘಟನೆ. ಸ್ಥಳ: ಗಾರ್ಡನ್ ಸಿಟಿ ಯುನಿವರ್ಸಿಟಿ, ಕೆ.ಆರ್.ಪುರಂ, ಬೆಳಿಗ್ಗೆ 10

**ಬಿಹಾರದ ಮತದಾರರ ಪಟ್ಟಿಯ ಪರಿಷ್ಕರಣೆಯ ಪಾತ್ರ ಕುರಿತು ಸಂವಾದ:** ಅಧ್ಯಕ್ಷತೆ: ಮೊಹಮದ್ ಸಲೀಂ. ಭಾಗವಹಿಸುವವರು: ಎಂ.ಜಿ. ದೇವಾಸಹಾಯಂ, ಜಗದೀಪ್ ಚೋಕರ್, ಮೊಹಮದ್ ತಾಹ ಮತೀನ್. ಆಯೋಜನೆ: ಫೋರಂ ಫಾರ್ ಡೆಮಾಕ್ರಸಿ ಮತ್ತು ಕಮುನ್ಯಾಲಮಿಟಿ, ಸ್ಥಳ: ಬಿ.ಐ.ಎಫ್.ಟಿ. ಹಾಲ್, ಕ್ವೀನ್ಸ್ ರೋಡ್, ಬೆಳಿಗ್ಗೆ 10.30

**ಜಿ.ಎಸ್ ಕನ್ನ ಎಕ್ಸಲನ್ಸ್ ಪ್ರಶಸ್ತಿ ಪ್ರದಾನ:** ಆಯೋಜನೆ: ಭಾರತೀಯ ವಿದ್ಯಾ ಭವನ-ಬಿ.ಬಿ.ಎಂ.ಪಿ.ಪಬ್ಲಿಕ್ ಸ್ಕೂಲ್, ಸ್ಥಳ: ಸಂಭ್ರಮ ಆಡಿಟೋರಿಯಂ, ಭಾರತೀಯ ವಿದ್ಯಾ ಭವನ–ಬಿಬಿಎಂಪಿ ಪಬ್ಲಿಕ್ ಸ್ಕೂಲ್, ಶ್ರೀರಾಮಪುರ, ಬೆಳಿಗ್ಗೆ 11

**ದಯಾನಂದ ಸಾಗರ ದಂತ ವೈದ್ಯಕೀಯ ವಿಜ್ಞಾನಗಳ ಕಾಲೇಜು ಉದ್ಘಾಟನೆ, ಪದಗ್ರಹಣ ಸಮಾರಂಭ:** ಉದ್ಘಾಟನೆ: ಭಗವಾನ್ ಬಿ.ಸಿ., ಆಯೋಜನೆ: ದಯಾನಂದ ಸಾಗರ ದಂತ ವೈದ್ಯಕೀಯ ವಿಜ್ಞಾನಗಳ ಕಾಲೇಜು, ಸ್ಥಳ: ಡಾ.ಡಿ. ಪ್ರೇಮಚಂದ್ರ ಸಾಗರ್ ಆಡಿಟೋರಿಯಂ, ಕುಮಾರಸ್ವಾಮಿ ಲೇಔಟ್, ಬೆಳಿಗ್ಗೆ 11

**ಮನೆ ಮನೆಗಳ ಮೇಲೆ ಕನ್ನಡ ಬಾವುಟ: ಆಯೋಜನೆ:** ಕನ್ನಡ ಚಳವಳಿ ಕೇಂದ್ರ ಸಮಿತಿ, ಸ್ಥಳ: ಜಿ. ನಾರಾಯಣಕುಮಾರ್ ರಸ್ತೆಯ ಟೋಲ್‌ಗೇಟ್, ವಿಜಯನಗರ, ಬೆಳಿಗ್ಗೆ 11

**ವಿ.ಕೃ.ಗೋಕಾಕ್ 116ನೇ ಜನ್ಮ ದಿನಾಚರಣೆಯ ಪ್ರಯುಕ್ತ ವಿ.ಕೃ. ಗೋಕಾಕ್ ಓದಿನ ಮೂಲೆ' ಅನಾವರಣ: ಅತಿಥಿಗಳು:** ಅನಿಲ್ ಗೋಕಾಕ್, ನರಹಳ್ಳಿ ಸುಬ್ರಹ್ಮಣ್ಯ, ಶ್ರೀನಾಥ್ ಬಿ.ಎನ್., ಆಯೋಜನೆ: ವಿನಾಯಕ ಗೋಕಾಕ್ ವಾಙ್ಮಯ ಟ್ರಸ್ಟ್, ಸ್ಥಳ: ಗುರುಶ್ರೀ ವಿದ್ಯಾಕೇಂದ್ರ, ನಾಗಸಂದ್ರ, ಬೆಳಿಗ್ಗೆ 11

**ವೀರ ರಾಣಿ ಕಿತ್ತೂರು ಚನ್ನಮ್ಮ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವಿಷಯಾಧಾರಿತ ಸ್ವಾತಂತ್ರ್ಯೋತ್ಸವ 218ನೇ ಫಲಪುಷ್ಪ ಪ್ರದರ್ಶನ ಉದ್ಘಾಟನೆ:** ಆರತಿ ಕೃಷ್ಣ, ಸ್ಥಳ: ತೋಟಗಾರಿಕೆ ಮಾಹಿತಿ ಕೇಂದ್ರ, ಲಾಲ್‌ಬಾಗ್. ಮಧ್ಯಾಹ್ನ 1

'ತ್ರಿಭಾಷಾ ನೀತಿ ಸಾಕು–ಎರಡು ನುಡಿ ಕಲಿಕೆ ಬೇಕು' ಕಿರುಹೊತ್ತಿಗೆ ಬಿಡುಗಡೆ: ಉದ್ಘಾಟನೆ: ಹಂ.ಪ. ನಾಗರಾಜಯ್ಯ, ಅತಿಥಿಗಳು: ಟಿ.ಎ. ನಾರಾಯಣ ಗೌಡ, ಪುರುಷೋತ್ತಮ ಬಿಳಿಮಲೆ, ಆಯೋಜನೆ: ಬನವಾಸಿ ಬಳಗ, ಸ್ಥಳ: ಬಿಎಂಶ್ರೀ ಪ್ರತಿಷ್ಠಾನ, ನರಸಿಂಹ ಕಾಲೊನಿ, ಬಸವನಗುಡಿ, ಸಂಜೆ 4.30

**ಜಾನಪದ ಸಂಭ್ರಮ, ರಾಜ್ಯಮಟ್ಟದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಹಾಗೂ ಸಾಧಕರಿಗೆ ಅಭಿನಂದನಾ ಸಮಾರಂಭ:** ಉದ್ಘಾಟನೆ: ಪುರುಷೋತ್ತಮ ಬಿಳಿಮಲೆ. ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ. ಸನ್ಮಾನಿತರು: ನಾಗಲಕ್ಷ್ಮೀ ಚೌಧರಿ, ಬಿ.ಜಯಪ್ರಕಾಶ್ ಗೌಡ, ರುತುಪರ್ಣ ಕೆ.ಎಸ್., ಕಿರಣ್ ಗೌಡ. ಅತಿಥಿಗಳು: ಕೆ. ಬಾಗೇಗೌಡ, ಆರ್. ಹನುಮಂತರಾಯಪ್ಪ, ಶಿವಕುಮಾರ್, ವೆಂಕಟರಮಣೇಗೌಡ, ಸಂತೋಷ್ ಹಾನಗಲ್, ಶ್ರೀನಗರ ಕಿಟ್ಟಿ, ಕೆ.ಎಸ್. ಹರ್ಷನ್, ಎ.ಎನ್. ನಟರಾಜ್‌ಗೌಡ, ಆರ್.ಮಂಜುನಾಥ್, ಅಮೃತ್ ರಾಜ್, ಉಮಾಶಂಕರ್ ಪಿ., ಶ್ರೀನಿವಾಸ್ ಹುಚ್ಚಯ್ಯ, ಇ.ಪಿ. ಸತೀಶ್, ಆಯೋಜನೆ: ರಾಜ್ಯ ಒಕ್ಕಲಿಗರ ಒಕ್ಕೂಟ ಟ್ರಸ್ಟ್, ಸ್ಥಳ: ಪುರಭವನ, ಜೆ.ಸಿ.ರಸ್ತೆ. ಬೆಳಿಗ್ಗೆ 11

**ಗ್ರೀಷಾ ಗೌಡ ರಂಗ ಪ್ರವೇಶ–ಭರತನಾಟ್ಯ: ಗುರು:** ಸುಪರ್ಣಾ ವೆಂಕಟೇಶ, ಅತಿಥಿಗಳು: ಪ್ರಶಾಂತ್ ನೀಲ್, ಸಿ. ಎಸ್. ಪುಟ್ಟರಾಜು, ಬಿ.ಆರ್. ವಿಕ್ರಂಕುಮಾರ್, ಜಿ.ಬಿ. ಶಿವಕುಮಾರ್, ಬಿ. ಶಿವಲಿಂಗಯ್ಯ, ಕೆ.ಎಂ. ಚಂದ್ರೇಗೌಡ, ಡಾ. ರಶ್ಮಿ ಕಿಶೋರ್, ಡಾ. ಸವಿತಾ ಮೋಹನ್, ಡಾ. ಕನಕಲಕ್ಷ್ಮಿ ಗೋಪಾಲ್ ಆಯೋಜನೆ: ಸಾಯಿ ಆರ್ಟ್ ಇಂಟರ್‌ನ್ಯಾಷನಲ್ ಸಂಸ್ಥೆ, ಸ್ಥಳ: ಮಲ್ಲೇಶ್ವರದ ಚೌಡಯ್ಯ ಸ್ಮಾರಕ ಭವನ, ಸಂಜೆ 4.30



**'ಕ್ಯಾಲೊರಿ' ದಿ ಬ್ರೇಕ್ ಡೌನ್ ಕಾರ್ಯಕ್ರಮ ಉದ್ಘಾಟನೆ:** ಆಯೋಜನೆ: ಸ್ಪೈನ್ಸ್ ಗ್ಯಾಲರಿ, ಸ್ಥಳ: ಸ್ಪೈನ್ಸ್ ಗ್ಯಾಲರಿ, ಗಂಗಾನಗರ, ಸಂಜೆ 5

ನಟಿ ಬಿ. ಸರೋಜಾದೇವಿ ನೆನಪಲ್ಲಿ ಒಂದು ಸಂಗೀತ ಸಂಜೆ: ಆಯೋಜನೆ: ಸೃಜನ ಲಲಿತಕಲಾ ವೇದಿಕೆ. ಸ್ಥಳ: 'ಶುಕ್ರ ಸಭಾಂಗಣ' ಮಲ್ಲೇಶ್ವರ 15ನೇ ಕ್ರಾಸ್, ಸಂಜೆ 5

**ನುಲಿಯ ಚಂದಯ್ಯ ಜಯಂತಿ:** ಉದ್ಘಾಟನೆ: ಮುಖ್ಯಮಂತ್ರಿ ಸಿದ್ಧರಾಮಯ್ಯ. ಅಧ್ಯಕ್ಷತೆ: ಉದಯ ಬಿ.ಗರುಡಾಚಾರ್. ಉಪಸ್ಥಿತಿ: ಶಿವರಾಜ ಎಸ್.ತಂಗಡಗಿ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 6

ವಚನ ಶ್ರಾವಣ–2025: ಆಯೋಜನೆ: ವಚನ ಜ್ಯೋತಿ ಬಳಗ. ಅಧ್ಯಕ್ಷತೆ: ಎಸ್. ಪಿನಾಕಪಾಣಿ, ಅತಿಥಿ: ಅನಿಲ್ ಹರಕುಡೆ. ಸ್ಥಳ: ಕ್ಲಬ್‌ಹೌಸ್, ಪ್ರೆಸ್ಟೀಜ್ ಜಿಂದಾಲ್ ಸಿಟಿ. ಸಂಜೆ 6.30

**'ನಾಯಿ ಮತ್ತು ಚಪ್ಪಲಿ' ನಾಟಕ ಪ್ರದರ್ಶನ:** ರಚನೆ: ಮನೋಜ್ ಎಂ., ಸಂತೋಷ್ ಗಡಾದ್, ನಿರ್ದೇಶನ: ಆಕಾಶ್ ನಾಗ್ ಮತ್ತು ಗಿರೀಶ್ ಆಲಾಜೆ. ಸ್ಥಳ: ಕಲಾಗ್ರಾಮ, ಮಲ್ಲತಹಳ್ಳಿ, ಸಂಜೆ 7

ಎಚ್.ಡುಂಡಿರಾಜ್ ರವರ 'ಪುಕ್ಕಟೆ ಸಲಹೆ' ಹಾಸ್ಯ ನಾಟಕ: ಆಯೋಜನೆ: ವಿಶ್ವಪಥ ಕಲಾ ಸಂಗಮ ಹವ್ಯಾಸಿ ರಂಗ ತಂಡ, ಸ್ಥಳ: ಸಿ.ಅಶ್ವಥ್ ಕಲಾ ಭವನ, ಎನ್.ಆರ್.ಕಾಲೋನಿ, ಬಸವನಗುಡಿ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಅಭಿಮಾನ್ ಸ್ಟುಡಿಯೊದಲ್ಲಿದ್ದ ಸಮಾಧಿ ತೆರವು: ಬಿಗುವಿನ ವಾತಾವರಣ

# ಕಣ್ಣೀರು ಹಾಕಿದ ವಿಷ್ಣು ಅಭಿಮಾನಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರಹಳ್ಳಿ–ಕೆಂಗೇರಿ ರಸ್ತೆಯಲ್ಲಿರುವ ಅಭಿಮಾನ್ ಸ್ಟುಡಿಯೊದಲ್ಲಿದ್ದ ನಟ ವಿಷ್ಣುವರ್ಧನ್ ಅವರ ಸಮಾಧಿಯನ್ನು ತೆರವು ಮಾಡಿರುವ ಕ್ರಮವನ್ನು ಖಂಡಿಸಿ ವಿಷ್ಣುವರ್ಧನ್ ಅಭಿಮಾನಿಗಳು ಶುಕ್ರವಾರ ಮಧ್ಯಾಹ್ನ ಪ್ರತಿಭಟನೆ ನಡೆಸಿದರು. ಸಮಾಧಿ ತೆರವು ಮಾಡಿರುವ ಕ್ರಮ ಖಂಡಿಸಿ ಅಭಿಮಾನಿಗಳು ಕಣ್ಣೀರು ಹಾಕಿದರು.

ಪ್ರತಿಭಟನಕಾರರನ್ನು ಪೊಲೀಸರು ವಶಕ್ಕೆ ಪಡೆದುಕೊಂಡು ಬಿಡುಗಡೆ ಮಾಡಿದರು. ಸ್ಥಳದಲ್ಲಿ ಬಿಗುವಿನ ವಾತಾವರಣವಿದ್ದು, ಹೆಚ್ಚಿನ ಬಂದೋಬಸ್ತ್ ಕಲ್ಪಿಸಲಾಗಿದೆ.

‘ವಿಷ್ಣುವರ್ಧನ್ ಅವರ ಅಂತ್ಯಸಂಸ್ಕಾರವನ್ನು 2009ರಲ್ಲಿ ಅಭಿಮಾನ್ ಸ್ಟುಡಿಯೊದಲ್ಲಿ ನೆರವೇರಿಸಲಾಗಿತ್ತು. ಸಮಾಧಿ ಸ್ಥಳದಲ್ಲಿ ಸಣ್ಣ ಗೋಪುರ ಇತ್ತು. ಇಲ್ಲಿಯೇ ಸ್ಮಾರಕ ನಿರ್ಮಿಸಬೇಕೆಂದು ನಮ್ಮ ಸಂಘಟನೆ ಏಳು ವರ್ಷಗಳ ಹಿಂದೆ ನ್ಯಾಯಾಲಯದ ಮೆಟ್ಟಿಲೇರಿತ್ತು. ಆದರೆ, ಸರ್ಕಾರವಾಗಲೀ, ವಿಷ್ಣುವರ್ಧನ್ ಕುಟುಂಬದವರಾಗಲೀ ಈ ಬಗ್ಗೆ ಆಸಕ್ತಿ ತೋರಿಸಲಿಲ್ಲ. ಹೀಗಾಗಿ, ಆರು ತಿಂಗಳ ಹಿಂದೆ ಹೈಕೋರ್ಟ್ ಪ್ರಕರಣವನ್ನು ವಜಾಗೊಳಿಸಿತ್ತು. ಅದರ ಮೇರೆಗೆ ಬಾಲಣ್ಣ ಕುಟುಂಬದವರು ಈಗ ಸಮಾಧಿ ಗೋಪುರವನ್ನು ನೆಲಸಮ ಗೊಳಿಸಿದ್ದಾರೆ’ ಎಂದೂ ವಿಷ್ಣುಸೇನಾ ಸಮಿತಿ ಅಧ್ಯಕ್ಷ ವೀರಕಪುತ್ರ ಶ್ರೀನಿವಾಸ್

ಅಭಿಮಾನ್ ಸ್ಟುಡಿಯೊ ಆವರಣದಲ್ಲಿದ್ದ ವಿಷ್ಣುವರ್ಧನ್ ಅವರ ಸಮಾಧಿ ನೆಲಸಮಕ್ಕೂ ಮೊದಲು ಹಾಗೂ ನೆಲಸಮದ ನಂತರದ ದೃಶ್ಯ

ತಿಳಿಸಿದ್ದಾರೆ.

‘ಅಭಿಮಾನ್ ಸ್ಟುಡಿಯೊದಲ್ಲಿದ್ದ ನಟ ವಿಷ್ಣುವರ್ಧನ್ ಅವರ ಸಮಾಧಿಯ ಜಾಗವನ್ನು ಉಳಿಸಿ ಕೊಡುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದರು. ಮತ್ತೊಮ್ಮೆ ಚಲನಚಿತ್ರ ವಾಣಿಜ್ಯ ಮಂಡಳಿ ನಿಯೋಗ ಅವರನ್ನು ಭೇಟಿ ಮಾಡುವುದಿತ್ತು. ಈ ವಿಚಾರ ತಿಳಿದು ಬಾಲಣ್ಣ ಕುಟುಂಬದವರು ರಾತ್ರೋರಾತ್ರಿ ಸಮಾಧಿ ನೆಲಸಮ ಮಾಡಿದ್ದಾರೆ’ ಎಂದು ಶ್ರೀನಿವಾಸ್ ದೂರಿದ್ದಾರೆ.

‘ವಿಷ್ಣು ಕುಟುಂಬದವರು ಈಗಾಗಲೇ ಮೈಸೂರಿನಲ್ಲಿ ಸ್ಮಾರಕ ನಿರ್ಮಿಸಿದ್ದಾರೆ. ಆದರೆ, ಅಭಿಮಾನಿಗಳೆಲ್ಲ ಸೇರಿ ಬೆಂಗಳೂರಿನಲ್ಲಿ ಬೇರೆ ಜಾಗದಲ್ಲಿ ವಿಷ್ಣು ಸ್ಮಾರಕ ನಿರ್ಮಿಸುತ್ತೇವೆ’ ಎಂದು ಹೇಳಿದರು.

## ಸಮಾಧಿ ಜಾಗವನ್ನಾಷ್ಟದರೂ ನೀಡಿ

ಸಮಾಧಿ ಜಾಗವನ್ನು ಸರ್ಕಾರದ ನಿಗದಿತ ಬೆಲೆಗೆ ಖರೀದಿಸಲು ನಾನು ಕೇಳಿದ್ದೆ. ಸಮಾಧಿ ಕಟ್ಟಿದ್ದಷ್ಟು ಜಾಗವನ್ನಾದರೂ ಬಾಲಣ್ಣ ಕುಟುಂಬದವರು ನೀಡಲಿ.

**ಕೆ.ಮಂಜು,** ಸಿನಿಮಾ ನಿರ್ಮಾಪಕ

## ಪರಿಶೀಲಿಸಿ ಮುಂದಿನ ಹೆಜ್ಜೆ

ಪ್ರಕರಣ ನ್ಯಾಯಾಲಯದಲ್ಲಿ ಇತ್ತು. ಈಗಲೇ ಪ್ರತಿಕ್ರಿಯಿಸುವುದಿಲ್ಲ. ಕುಟುಂಬದವರ ಆಶಯದಂತೆ ಸರ್ಕಾರವು ಮೈಸೂರಿನಲ್ಲಿ ಸ್ಮಾರಕ ನಿರ್ಮಿಸಿದೆ.

**ಎಂ.ನರಸಿಂಹಲು, ಅಧ್ಯಕ್ಷ,** ಚಲನಚಿತ್ರ ವಾಣಿಜ್ಯ ಮಂಡಳಿ

# ಭೂಮಿಕಾ

ಮಹಿಳೆಯರ ಆಪ್ತ ಸಂಗಾತಿ

ಸಿಮು ದಾಸ್

ವರ್ಷಾ ಉಮಾಪತಿ

ಭಾರತ ಅಂಧ ಮಹಿಳಾ ಕ್ರಿಕೆಟ್ ತಂಡದ ಆಟಗಾರ್ತಿಯರ ಯಶೋಗಾಥೆಯನ್ನು ತಂಡವೊಂದು ಡಾಕ್ಯುಮೆಂಟರಿ ರೂಪದಲ್ಲಿ ಹಿಡಿದಿಟ್ಟಿದೆ. ಅನುಕೂಲಗಳಿದ್ದರಷ್ಟೇ ಸಾಧನೆ ಎಂದುಕೊಂಡವರ ಕಣ್ತೆರೆಸಲು ಸಜ್ಜಾಗಿದೆ 'ದೇಖ್ ಲೇ ಇಂಡಿಯಾ'.

# ಕಣ್ತೆರೆಸುವ ಅಂಧಗಾತಿಯರು

• ಗಿರೀಶ ದೊಡ್ಡಮನಿ

ಅಸ್ಸಾಂ ಹುಡುಗಿ ಸಿಮು ದಾಸ್‌ಗೆ ಹುಟ್ಟಿದಾಗಲೇ ಅಂಧತ್ವ. ಈ ಸುದ್ದಿ ತಿಳಿದ ಅಪ್ಪ ಕುಟುಂಬವನ್ನೇ ತೊರೆದುಹೋದ. ಮನೆಯಲ್ಲಿ ಕಡುಬಡತನ. ಸಿಮುಗೆ ಅದಾಗಲೇ ಒಬ್ಬ ಅಂಗವಿಕಲ ಅಣ್ಣನೂ ಇದ್ದ. ಅನಾರೋಗ್ಯದಿಂದ ಬಳಲುತ್ತಿದ್ದ ಅಮ್ಮ, ಕೂಲಿ ಮಾಡಿ ಮಕ್ಕಳನ್ನು ಸಲಹಿದರು. ಆದರೆ ಕನಸಿಗೆ ಬಡತನ, ಕುರುಡುತನ ಯಾವುದೂ ಇಲ್ಲವಲ್ಲ. ಹಾಗಾಗಿಯೇ ಸಿಮು ಮನದಲ್ಲಿ ಕ್ರಿಕೆಟ್ ಆಟಗಾರ್ತಿಯಾಗುವ ಕನಸು ಚಿಗುರೊಡೆಯಿತು. ಶಾಲೆ, ಹೊಲ ಎಲ್ಲೆಂದರಲ್ಲಿ ಕೈಯನ್ನೇ ಕ್ರಿಕೆಟ್ ಬ್ಯಾಟ್‌ನಂತೆ ಬೀಸುತ್ತಿದ್ದ ಈ ಹುಡುಗಿಯನ್ನು ಕಂಡ ಸ್ವಯಂ ಸೇವಾ ಸಂಸ್ಥೆಯೊಂದು ತರಬೇತಿಗೆ ವ್ಯವಸ್ಥೆ ಕಲ್ಪಿಸಿತು. ಇದು ಸಿಮು ಜೀವನಕ್ಕೆ ಹೊಸ ತಿರುವು ನೀಡಿತು. ಆಕೆ ಈಗ ಭಾರತ ಅಂಧ ಮಹಿಳಾ ಕ್ರಿಕೆಟ್ ತಂಡದ ಪ್ರಮುಖ ಬ್ಯಾಟರ್. ಎರಡು ವರ್ಷಗಳ ಹಿಂದೆ ಇಂಗ್ಲೆಂಡ್‌ನ ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಅಂಧರ ಕ್ರೀಡಾ ಫೆಡರೇಷನ್‌ನ (ಐಬಿಎಸ್‌ಎ) ವಿಶ್ವ ಕ್ರೀಡಾಕೂಟದ ಮಹಿಳಾ ಕ್ರಿಕೆಟ್‌ನಲ್ಲಿ ಭಾರತವು ಚಿನ್ನದ ಪದಕ ಜಯಿಸುವಲ್ಲಿ ಸಿಮು ಪಾತ್ರ ಮಹತ್ವದ್ದಾಗಿತ್ತು. ಅದರಲ್ಲೂ ಫೈನಲ್ ಪಂದ್ಯದಲ್ಲಿ ವಿಜಯದ ಹೊಡೆತ ಬಾರಿಸಿದ್ದೇ ಈ ಸಿಮು.

• ಒಡಿಶಾದ ಗ್ರಾಮವೊಂದರ ಪದ್ಮಿನಿಗೆ ಬಾಲ್ಯದಲ್ಲಿ ಭಾಗಶಃ ದೃಷ್ಟಿದೋಷ ಇತ್ತು. ಅದೊಂದು ದಿನ ಊರಿಗೆ ಬಂದಿದ್ದ ಮಿನಿ ಲಾರಿಯೊಂದು ಮರಳಿ ಹೋಗುವಾಗ ಮಕ್ಕಳೂ ಅದರ ಹಿಂದೆ ಓಡತೊಡಗಿದರು. ಕೆಲವರಂತೂ ಚಲಿಸುತ್ತಿದ್ದ ವಾಹನವನ್ನೇ ಹತ್ತಿ ಸಂಭ್ರಮಿಸುತ್ತಿದ್ದರು. ಪದ್ಮಿನಿ ಸಹ ಗಾಡಿ ಹತ್ತಲು ಪ್ರಯತ್ನಿಸಿದಾಗ ವಾಹನದ ಒಂದು ಬದಿಗೆ ತಲೆ ಬಡಿಯಿತು. ಬವಳಿ ಬಂದು ಬಿದ್ದ ಹುಡುಗಿಗೆ ಎಚ್ಚರವಾದಾಗ ಜಗವೆಲ್ಲ ಕತ್ತಲಾಗಿತ್ತು. ಸಂಪೂರ್ಣ ಅಂಧತ್ವ ಆವರಿಸಿಕೊಂಡಿತ್ತು.

• ಆಂಧ್ರಪ್ರದೇಶದ ರಂಗ ಸಿಂಗಪುಡು ಗ್ರಾಮದ ಕೂಲಿ ಕಾರ್ಮಿಕ ದಂಪತಿಗೆ ಐವರು ಮಕ್ಕಳು. ಅವರಲ್ಲಿ ಇಬ್ಬರು ಹೆಣ್ಣುಮಕ್ಕಳು ಮತ್ತು ಒಬ್ಬ ಗಂಡುಮಗ ಅಂಧರು. ಅವರಲ್ಲಿ ಒಬ್ಬಾಕೆ ವಿ.ರಾವಣ್ಣಿ. ಯಾರಿಗೂ ಹೊರೆಯಾಗಬಾರದು, ಕಷ್ಟಪಟ್ಟು ಸಂಸಾರ ನಿಭಾಯಿಸುತ್ತಿರುವ ಅಪ್ಪನಿಗೆ ಆಸರೆಯಾಗಿ ನಿಲ್ಲಬೇಕು, ನೌಕರಿ ಪಡೆಯಬೇಕು ಎಂಬ ದೃಢನಿಶ್ಚಯವೇ ರಾವಣ್ಣಿಯನ್ನು ಕ್ರಿಕೆಟ್‌ನತ್ತ ಸೆಳೆಯಿತು.

ಇನ್ನು ಇವರೆಲ್ಲರೂ ಆಡಿದ ಭಾರತ ತಂಡದ ನಾಯಕಿ, ಚಿತ್ರದುರ್ಗ ಜಿಲ್ಲೆಯ ವರ್ಷಾ ಉಮಾಪತಿ ಅವರದ್ದು ಮತ್ತೊಂದು ಬಗೆಯ ಕಥೆ. ಬಾಲ್ಯದಿಂದಲೂ ಭಾಗಶಃ ದೃಷ್ಟಿದೋಷ ಇತ್ತಾದರೂ ಸೈಕಲ್ ಓಡಿಸುವ, ಆಟವಾಡುವ ಆಕೆಯ ಬಯಕೆಯನ್ನು ಕುಂದಿಸಲು ಅದಕ್ಕೆ ಸಾಧ್ಯವಾಗಲಿಲ್ಲ. ಆದರೆ ನಿಧಾನವಾಗಿ ದೃಷ್ಟಿ ಕುಂದುತ್ತಾ ಬಂದು, 16ರ ಹರೆಯದಲ್ಲಿ ಸಂಪೂರ್ಣ ಅಂಧತ್ವ ಆವರಿಸಿತು. ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲೂ ಕಷ್ಟವಾಯಿತು. ಆದರೂ ಆಕೆ ಛಲ ಬಿಡಲಿಲ್ಲ. ಚಿಕ್ಕಪ್ಪ, ಚಿಕ್ಕಮ್ಮನ ಸಹಾಯದಿಂದ ಬೆಂಗಳೂರಿನಲ್ಲಿ ಓದಿನ ಜೊತೆಗೆ ಕ್ರಿಕೆಟ್ ಆಟಗಾರ್ತಿಯಾಗಿಯೂ ಬೆಳೆದರು.

ಅಂದು ಇಂಗ್ಲೆಂಡ್‌ನಲ್ಲಿ ವರ್ಷಾ ಅವರೊಂದಿಗೆ ತ್ರಿವರ್ಣ ಧ್ವಜ ಹಿಡಿದು ಸಂಭ್ರಮಿಸಿದ್ದ ತಂಡದಲ್ಲಿ ಭಾಗಶಃ ಅಂಧತ್ವದಿಂದ ಬಳಲುತ್ತಿರುವ ಸಾಂದ್ರಾ ಡೇವಿಸ್, ಬಸಂತಿ ಹನ್ಸಡಾ, ಸಿಮ್ರನ್‌ಜೀತ್ ಕೌರ್, ಸುನೀತಾ, ಸುಷ್ಮಾ ಪಟೇಲ್, ಎಂ.ಸತ್ಯವತಿ, ಫೂಲಾ ಸರೆನ್, ಝಿಲಿ ಬರುವಾ, ಗಂಗಾ ಸಂಭಾಜಿ ಕದಂ, ಗೀತಾ ಮಹತೊ, ಎನ್.ಆರ್.ಕಾವ್ಯ, ಗಂಗವ್ವ ಹರಿಜನ ಕೂಡ ಇದ್ದರು. ಈ ಎಲ್ಲ ಹುಡುಗಿಯರದು ಕೌಟುಂಬಿಕ, ಸಾಮಾಜಿಕ, ಆರ್ಥಿಕ ಮತ್ತು ಪ್ರಾದೇಶಿಕ ವೈವಿಧ್ಯವಷ್ಟೇ ಅಲ್ಲ ಇವರಿಗಿರುವ ಸವಾಲುಗಳು ಸಹ ಭಿನ್ನ. ಆದರೂ ಇವರೆಲ್ಲರನ್ನೂ ಒಂದು ತಂಡವಾಗಿ ರೂಪಿಸಿದ್ದು ಕೂಡ ಇನ್ನೊಂದು ಛಲದ ಅಧ್ಯಾಯವೇ ಸರಿ.

ಸಾಮಾನ್ಯ ಆಟಗಾರರ ಕ್ರಿಕೆಟ್ ತರಬೇತಿಗೂ ಅಂಧ ಆಟಗಾರರ ತರಬೇತಿಗೂ ಅಜಗಜಾಂತರವಿದೆ. ಗಿಲಿ ಗಿಲಿ ಸದ್ದು ಹೊರಡಿಸುತ್ತಾ ಬರುವ ಚೆಂಡಿನ ಜಾಡು ಹಿಡಿದು ಬ್ಯಾಟ್ ಬೀಸುವ ಅಂಧ ಆಟಗಾರರನ್ನು ನೋಡಿದಾಗ ಅಚ್ಚರಿಯಾಗುತ್ತದೆ. ಆದರೆ ಅವರನ್ನು ಆ ಮಟ್ಟಕ್ಕೆ ಸಜ್ಜುಗೊಳಿಸುವ ಪ್ರಕ್ರಿಯೆ ಮಾತ್ರ ಕಡುಕಠಿಣ ಸಾಹಸವೇ ಸರಿ. ಭಾರತ ಅಂಧ ಮಹಿಳೆಯರ ಕ್ರಿಕೆಟ್ ತಂಡದ ಮುಖ್ಯ ಕೋಚ್ ಆಗಿದ್ದ ಕೃತಿಕಾ ಚಾರ್ವಿ, ಮ್ಯಾನೇಜರ್ ಶಿಖಾ ಶೆಟ್ಟಿ ಹಾಗೂ ನೆರವು ಸಿಬ್ಬಂದಿ ಈ ಸವಾಲನ್ನು ಗೆದ್ದು ನಿಂತರು. ಕಡಿಮೆ ಅವಧಿಯಲ್ಲೇ ಉನ್ನತ ಸಾಧನೆ ಮಾಡುವ ಮಟ್ಟಕ್ಕೆ ತಂಡವನ್ನು ರೂಪಿಸಿದರು.

ಆ ತಂಡದ ಹುಡುಗಿಯರ ಈ ಎಲ್ಲ ಸಾಧನೆ, ಕೋಚಿಂಗ್ ಸಾಹಸಗಳನ್ನು ಇದೀಗ 'ದೇಖ್ ಲೇ ಇಂಡಿಯಾ' ಎಂಬ ಸಾಕ್ಷ್ಯಚಿತ್ರವೊಂದು ಮನೋಜ್ಞವಾಗಿ ಕಟ್ಟಿಕೊಟ್ಟಿದೆ. ಇದೇ 22ರಿಂದ 27ರವರೆಗೆ ತಿರುವನಂತಪುರದಲ್ಲಿ ನಡೆಯಲಿರುವ 'ಅಂತರರಾಷ್ಟ್ರೀಯ ಸಾಕ್ಷ್ಯಚಿತ್ರ ಮತ್ತು ಕಿರುಚಿತ್ರಗಳ ಹಬ್ಬ'ದಲ್ಲಿ (ಐಡಿಎಸ್‌ಎಫ್‌ಎಫ್‌ಕೆ) ಚಿತ್ರವು ಪ್ರದರ್ಶನಗೊಳ್ಳಲಿದೆ. ನಂತರ ಅದು ಓಟಿಟಿಗೂ ಬರಲಿದೆ.

ಪದ್ಮಿನಿ

## ಅಂಧತ್ವದ 3 ಬಗೆ

**ಬಿ1**– ಪೂರ್ಣ ಅಂಧತ್ವ ಇರುವ ಆಟಗಾರ್ತಿಯರು

**ಬಿ2**– ಸುಮಾರು 2 ಮೀಟರ್ ದೂರದವರೆಗೆ ನೋಡಬಲ್ಲವರು

**ಬಿ3**– 6ರಿಂದ 8 ಮೀಟರ್‌ವರೆಗೆ ದೃಷ್ಟಿ ಹಾಯಿಸಬಲ್ಲವರು

ನಿಯಮದ ಪ್ರಕಾರ, ಈ ಮೂರು ಬಗೆಯ ಆಟಗಾರ್ತಿಯರೂ ತಂಡದಲ್ಲಿ ಇರಬೇಕು. ಭಾಗಶಃ ಅಂಧತ್ವ ಇರುವವರು ಪೂರ್ಣ ಅಂಧರಿಗೆ ಸಹಾಯ ಮಾಡುತ್ತಾ ಪರಸ್ಪರ ತಂಡವಾಗಿ ರೂಪುಗೊಳ್ಳುವುದು, ತಮಗೇ ಅರಿವಿಲ್ಲದೆ ಪರಸ್ಪರ ಉತ್ತಮ ಸ್ನೇಹಿತರಾಗಿ, ಜೀವನ ಮತ್ತು ವ್ಯಕ್ತಿತ್ವವನ್ನು ಕ್ರಿಕೆಟ್ ಮೂಲಕ ಕಟ್ಟಿಕೊಳ್ಳುವ ಬಗೆ ಆಪ್ತವಾದುದು.

ಶಾಂತಿ ಮೋಹನ್

## ಸಾಕಾರವಾಯಿತು ಸಾಕ್ಷ್ಯಚಿತ್ರ

ಮುಕುಂದಮೂರ್ತಿ

**'ದೇಖ್ ಲೇ ಇಂಡಿಯಾ'** ಸಾಕ್ಷ್ಯಚಿತ್ರವನ್ನು ಬೆಂಗಳೂರಿನ ಸಾಫ್ಟ್‌ವೇರ್ ಎಂಜಿನಿಯರ್ ಮುಕುಂದಮೂರ್ತಿ ಮತ್ತು ಮುಂಬೈನ ಚಿತ್ರ ನಿರ್ಮಾಪಕಿ ಶಾಂತಿ ಮೋಹನ್ ನಿರ್ಮಿಸಿದ್ದಾರೆ.

'ಪ್ರತಿಯೊಂದರಲ್ಲೂ ನಾವು ತಾರತಮ್ಯ ಮಾಡುತ್ತೇವೆ, ಬಣ್ಣ, ಗಾತ್ರದಂತಹ ಕಾರಣಗಳಿಗಾಗಿ ಮನುಷ್ಯರನ್ನು ಜರಿಯುತ್ತೇವೆ. ನಾವು ಹೀಗೆಲ್ಲಾ ಮಾಡುತ್ತಿರುವುದು ನಮಗೆ ಅವನ್ನೆಲ್ಲಾ ನೋಡಲು ಸಾಧ್ಯವಿರುವುದರಿಂದ ತಾನೇ. ಆದರೆ ದೃಷ್ಟಿಯೇ ಇಲ್ಲದವರು ಜಗತ್ತನ್ನು ಹೇಗೆ ನೋಡಬಹುದು? ಅವರ ಮನದಲ್ಲಿ ತರತಮದ ಭಾವವಾದರೂ ಹೇಗೆ ಬರಲು ಸಾಧ್ಯ ಎಂಬ ಯೋಚನೆ ಬಂತು. ಆಗ, ಅಂಧರ ಜಗತ್ತಿನ ಮೇಲೆ ಬೆಳಕು ಚೆಲ್ಲುವ ಸಾಕ್ಷ್ಯಚಿತ್ರವೊಂದನ್ನು ನಿರ್ಮಿಸಬೇಕು ಎನಿಸಿತು. ವಿವಿಧ ಕ್ಷೇತ್ರಗಳಲ್ಲಿನ ಅಂಧರ ಕುರಿತು ಅಧ್ಯಯನ ಮಾಡುತ್ತಾ ಸಾಗಿದೆ. ಕೊನೆಗೆ ನನ್ನನ್ನು ಗಟ್ಟಿಯಾಗಿ ಸೆಳೆದಿದ್ದು ಅಂಧ ಹುಡುಗಿಯರ ಕ್ರಿಕೆಟ್ ತಂಡ' ಎಂದು ಮುಕುಂದಮೂರ್ತಿ ಹೇಳುತ್ತಾರೆ.

'ಈ ಹುಡುಗಿಯರ ಸಾಧನೆಯನ್ನು ನೋಡಿ ನಿಬ್ಬೆರಗಾದೆ. ಅದರಲ್ಲೂ ಹಳ್ಳಿಗಾಡಿನ ಬಡ ಕುಟುಂಬಗಳಿಂದ ಬಂದಿರುವವರು ಇವರು. ಸಾಮಾನ್ಯ ಹೆಣ್ಣುಮಕ್ಕಳೇ ಜೀವನದಲ್ಲಿ ಸಾಧನೆ ಮಾಡಲು ಹತ್ತಾರು ಸವಾಲುಗಳನ್ನು ಎದುರಿಸಬೇಕು. ಅಂತಹುದರಲ್ಲಿ ಇವರು ಎಷ್ಟು ಕಷ್ಟ ಅನುಭವಿಸಬೇಕಾಗಬಹುದು ಎಂಬ ಯೋಚನೆ ಇನ್ನಿಲ್ಲದಂತೆ ಕಾಡಿತು. ಅದರ ನಡುವೆಯೂ ಇವರಲ್ಲಿ ಇರುವ ಛಲ ನನ್ನ ಮನಸ್ಸನ್ನು ಮುಟ್ಟಿತು. ಅಲ್ಲಿಂದ ಶುರುವಾಯಿತು ನಮ್ಮ ಪಯಣ' ಎನ್ನುತ್ತಾರೆ.

ಬೆಂಗಳೂರಿನ ಸಮರ್ಥನಂ ಟ್ರಸ್ಟ್ ಮತ್ತು ಕ್ರಿಕೆಟ್ ಅಸೋಸಿಯೇಷನ್ ಫಾರ್ ಬ್ಲೈಂಡ್ (ಸಿಎಬಿಐ) ಸಂಸ್ಥಾಪಕ ಹಾಗೂ ಸಂಚಾಲಕ ಮಹಾಂತೇಶ್ ಕಿವುಡಸಣ್ಣವರ ಅವರಿಗೆ ಮುಕುಂದ ತಮ್ಮ ಯೋಜನೆಯನ್ನು ವಿವರಿಸಿದರು. ಆಗ ಮಹಾಂತೇಶ್, ಬರ್ಮಿಂಗ್‌ಹ್ಯಾಂನಲ್ಲಿ ನಡೆಯಲಿರುವ ವಿಶ್ವಕಪ್ ಟೂರ್ನಿಗೆ ತಮ್ಮ ತಂಡ ತೆರಳುತ್ತಿದ್ದು, ಆ ಸಾಧನೆಯನ್ನು ಆಧರಿಸಿ ಸಾಕ್ಷ್ಯಚಿತ್ರ ಮಾಡಬಹುದು ಎಂದು ಸಲಹೆಯಿತ್ತರು.

'ನಾನು ಅತ್ಯಂತ ಸಣ್ಣ ಬಜೆಟ್‌ನಲ್ಲಿ ಚಿಕ್ಕ ಸಾಕ್ಷ್ಯಚಿತ್ರ ಮಾಡಲು ಯೋಜಿಸಿದ್ದೆ. ಶಾಂತಿ ಮೋಹನ್ ನನ್ನ ಜೊತೆಗೂಡಿದರು. ಸಿನಿಮಾಟೊಗ್ರಾಫರ್‌ಗಳಾದ ಖುಷಿ ಹಾಗೂ ಸುಪ್ರಿಯಾ ಅವರೂ ಕೈಜೋಡಿಸಿದರು. ಎಲ್ಲರೂ ಸೇರಿ ಕ್ರಿಕೆಟ್ ತಂಡದೊಂದಿಗೆ ಟೂರ್ನಿ ನಡೆಯಲಿದ್ದ ಸ್ಥಳಕ್ಕೆ ತೆರಳಿದೆವು. ಅಲ್ಲಿ ಪಂದ್ಯಗಳು, ಆಟಗಾರ್ತಿಯರ ಕ್ರೀಡಾಭ್ಯಾಸ ಎಲ್ಲವನ್ನೂ ಚಿತ್ರೀಕರಿಸಿದೆವು'.

'ಎಲ್ಲ ಮುಗಿದು ಎಡಿಟಿಂಗ್‌ಗೆ ಮುಂಬೈನ 'ಸೋಲ್ ಪ್ರೊಡಕ್ಷನ್' ಎಂಬ ವಿಡಿಯೊ ಪ್ರೊಡಕ್ಷನ್ ಸಂಸ್ಥೆಗೆ ಹೋಗಿದ್ದೆವು. ಅದು 'ಕಪಿಲ್ ಶೋ'ದಂತಹ ದೊಡ್ಡ ಕಾರ್ಯಕ್ರಮದ ದೃಶ್ಯಗಳ ಎಡಿಟಿಂಗ್ ಮಾಡುತ್ತದೆ. ನಮ್ಮ ಡಾಕ್ಯುಮೆಂಟರಿ ನೋಡಿದ ಸಂಸ್ಥೆಯು ಬಹಳ ಪ್ರೇರಣೆಗೊಂಡಿತು. ಇನ್ನಷ್ಟು ದೊಡ್ಡ ಮಟ್ಟದಲ್ಲಿ ಈ ಚಿತ್ರವನ್ನು ಸಿದ್ಧಗೊಳಿಸಲು ಉತ್ಸಾಹ ತೋರಿತು' ಎಂದು ಮುಕುಂದ ಸ್ಮರಿಸಿದರು.

ಆನಂತರ ಎಲ್ಲ ಆಟಗಾರ್ತಿಯರ ಊರುಗಳಿಗೆ ತೆರಳಿ, ಅವರ ಮನೆ, ಬೆಳೆದುಬಂದ ಪರಿಸರವನ್ನು ಚಿತ್ರೀಕರಿಸಿಕೊಂಡು ಬರಲಾಯಿತು. 70 ನಿಮಿಷಗಳ ಈ ಡಾಕ್ಯುಮೆಂಟರಿಯ ಪ್ರೀಮಿಯರ್ ಶೋವನ್ನು ಬೆಂಗಳೂರಿನ ಸಮರ್ಥನಂ ಆರ್ಟ್ ಗ್ಯಾಲರಿಯಲ್ಲಿ ಆಯ್ದ ಪ್ರೇಕ್ಷಕರೆದುರು ಇತ್ತೀಚೆಗೆ ಆಯೋಜಿಸಲಾಗಿತ್ತು. ಅದನ್ನು ನೋಡಿದ ಹಲವರ ಕಂಗಳು ಜಿನುಗಿದವು.

'ಹಾಡು, ಸಂಗೀತ ಎಲ್ಲವೂ ಇರುವುದು ನಮ್ಮ ಡಾಕ್ಯುಮೆಂಟರಿಯ ವಿಶೇಷ. ಆದ್ದರಿಂದ ಏಕತಾನತೆ ಕಾಡುವುದಿಲ್ಲ. 'ಚಕ್ ದೇ ಇಂಡಿಯಾ' ಎಂಬ ಬಾಲಿವುಡ್ ಹಿಟ್ ಸಿನಿಮಾ ಮಾದರಿಯಲ್ಲಿಯೇ ಇದಕ್ಕೆ ಹೆಸರಿಟ್ಟಿದ್ದೇವೆ. ಆ ಸಿನಿಮಾದಂತೆ ಇದು ಕೂಡ ಹೆಣ್ಣುಮಕ್ಕಳಿಗಷ್ಟೇ ಅಲ್ಲ, ಬಾಳಿನಲ್ಲಿ ಹಲವು ಸವಾಲುಗಳನ್ನು ಎದುರಿಸುವ ಎಲ್ಲರಿಗೂ ಸ್ಫೂರ್ತಿಯಾಗಲಿದೆ' ಎನ್ನುವ ವಿಶ್ವಾಸ ಹೊಂದಿದ್ದಾರೆ ಮುಕುಂದ.

# ಉಪವಾಸ ಹೇಗಿದ್ದರೆ ಸೂಕ್ತ?

ಕಾಳಜಿ



ಡಾ. ವಿನಾಯಕ ಹೆಬ್ಬಾರ್

**ಶ್ರಾವಣ ಮಾಸವೆಂದರೆ** ಸಾಲು ಸಾಲು ಹಬ್ಬಗಳು. ಮನೆ ಮಂದಿಯ ಶ್ರೇಯಸ್ಸಿಗಾಗಿ ಇಷ್ಟದೇವರಿಗೆ ಉಪವಾಸ ವ್ರತ ಕೈಗೊಳ್ಳುವ ಹೆಣ್ಣುಮಕ್ಕಳು ಆರೋಗ್ಯದ ಕಡೆಗೂ ಗಮನಹರಿಸುವುದು ಉತ್ತಮ. ಮನೆ, ಕುಟುಂಬ, ಮಕ್ಕಳು, ಕಚೇರಿ ಹೀಗೆ ಎಲ್ಲವನ್ನೂ ನಿಭಾಯಿಸಿಕೊಂಡೇ ಒಂದು ದಿನದ ನಿಟ್ಟುಪವಾಸ ಇರುವ ಹೆಣ್ಣುಮಕ್ಕಳ ಆರೋಗ್ಯದಲ್ಲಿ ಏರುಪೇರಾಗುವುದು ಸಹಜ. ಹಾಗಾಗಿ, ಉಪವಾಸ ಕೈಗೊಳ್ಳುವಾಗ ಏನೆಲ್ಲಾ ಕ್ರಮಗಳನ್ನು ಅನುಸರಿಸಬೇಕು ಎಂಬ ಬಗ್ಗೆ ಆಯುರ್ವೇದ ತಜ್ಞ ಡಾ. ವಿನಾಯಕ ಹೆಬ್ಬಾರ್ ಅವರೊಂದಿಗೆ ನಡೆಸಿದ ಪ್ರಶ್ನೋತ್ತರ ಹೀಗಿದೆ:

**ಉಪವಾಸ ಹೇಗಿರಬೇಕು?**

ಉಪವಾಸ ಎನ್ನುವುದು ಹೊರೆಯಾಗಬಾರದು. ನಮ್ಮ ನಂಬಿಕೆಗಳಿಗೂ ಧಕ್ಕೆಯಾಗದ ಹಾಗೆ, ದೇಹಕ್ಕೂ ಮನಸ್ಸಿಗೂ ಸದಾ ಹಿತವೆನಿಸುವ ಹಾಗೆ ಉಪವಾಸ ಮಾಡಬೇಕು. ಉಪವಾಸ ಮಾಡಿದ ನಂತರ ದೇಹವು ಪುನಶ್ಚೇತನಗೊಂಡು ಮತ್ತಷ್ಟು ಶಕ್ತಿಯನ್ನು ಪಡೆಯುವಂತೆ ಆಗಬೇಕು. ದೇಹವು ಕ್ರಿಯಾಶೀಲವಾಗಿ ಇರಲು ನಾವು ಮಾಡುವ ಉಪವಾಸ ನೆರವಾಗಬೇಕು.

**ಉಪವಾಸದ ವಿಧಾನ ಹೇಗಿರಬೇಕು?**

ಉಪವಾಸವೆಂದರೆ ಅನ್ನ ಬಿಟ್ಟು ಉಳಿದದ್ದೆಲ್ಲವನ್ನೂ ತಿನ್ನುವುದಲ್ಲ ಅಥವಾ ಆರೋಗ್ಯದ ವಿಚಾರದಲ್ಲಿ ದೇಹ ಸೂಚಿಸುವ ಕೆಲವು ಲಕ್ಷಣಗಳನ್ನೂ ಲಕ್ಷಿಸದೆ, ಏನನ್ನೂ ತಿನ್ನದೆ ಇರುವುದೂ ಅಲ್ಲ. ಎಲ್ಲಿಯವರೆಗೆ ಉಪವಾಸ ಇರಲು ಸಾಧ್ಯವಾಗುತ್ತದೋ ಅಲ್ಲಿಯವರೆಗೂ ಇರಬಹುದು. ನಂತರ ಫಲಾಹಾರ, ಎಳನೀರು, ಸಣ್ಣ ಪ್ರಮಾಣದಲ್ಲಿ ಹಣ್ಣುಗಳನ್ನು ಸೇವಿಸುವುದು ಸೂಕ್ತ.

**ಶ್ರಾವಣಮಾಸದ ಉಪವಾಸ ಹೇಗಿದ್ದರೆ ಚೆನ್ನ?**

ಉಪವಾಸ ಅಂದಾಕ್ಷಣ ಮಾನಸಿಕವಾಗಿ ಸಿದ್ಧರಾಗಿರುತ್ತೇವೆ. ಇದರಿಂದ, ಹಸಿವೆಯ ಮೇಲೆ ಹಿಡಿತ ಸಾಧಿಸಲು ಸಾಧ್ಯವಾಗುತ್ತದೆ. ಆದರೂ ಹಸಿವೆಯಾಗುತ್ತಿದೆ, ತಡೆಯಲು ಸಾಧ್ಯವೇ ಆಗುತ್ತಿಲ್ಲ ಅನ್ನಿಸಿದರೆ ಎಳನೀರು ಕುಡಿಯಿರಿ. ಸುಲಭವಾಗಿ ಜೀರ್ಣವಾಗುವ ಪಪ್ಪಾಯ, ದಾಳಿಂಬೆ, ಸೇಬಿನಂತಹ ಹಣ್ಣುಗಳನ್ನು ಸೇವಿಸಬಹುದು. ದೇಹಕ್ಕೆ ಹಸಿವೆಯೇ ಆಗುತ್ತಿಲ್ಲ, ಆರಾಮಾಗಿ ಇರಬಲ್ಲೆ ಎನ್ನಿಸುವವರು ಹಾಗೇ ಉಳಿಯಬಹುದು. ಯಾವುದೇ ಆರೋಗ್ಯ ಸಮಸ್ಯೆ ಇಲ್ಲದೇ ಇದ್ದರೆ ಒಂದು ದಿನದ ಉಪವಾಸದಿಂದ ಏನೂ ತೊಂದರೆಯಾಗದು.

**ಯಾರೆಲ್ಲ ಉಪವಾಸ ಮಾಡಲು ಶಕ್ತರು?**

ಎಲ್ಲರೂ ಮಾಡಬಾರದು. ಸಾಮಾನ್ಯವಾಗಿ ತುಂಬಾ ಗ್ಯಾಸ್ಟ್ರಿಕ್ ಸಮಸ್ಯೆ ಇರುವವರು, ದೀರ್ಘಕಾಲದ ಕಾಯಿಲೆಯಿಂದ ಬಳಲುತ್ತಿರುವವರು, ಚಿಕ್ಕಮಕ್ಕಳು, ಅಶಕ್ತರು ( ಕೆಲವರು 80ರ ಇಳಿವಯಸ್ಸಿನಲ್ಲಿಯೂ ಕ್ರಿಯಾಶೀಲರಾಗಿರುತ್ತಾರೆ, ಇನ್ನು ಕೆಲವರು 60ರ ವಯಸ್ಸಿನಲ್ಲಿಯೇ ನಿಶ್ಶಕ್ತರಾಗಿರುತ್ತಾರೆ) ಗರ್ಭಿಣಿಯರು, ಎದೆಹಾಲುಣಿಸುವ ತಾಯಂದಿರು ಉಪವಾಸದಿಂದ ದೂರ ಉಳಿಯುವುದು ಒಳ್ಳೆಯದು. ಯಾರೇ ಆದರೂ ಹಸಿವೆ ಆಗುತ್ತಿದ್ದರೆ ಬಲವಂತದಿಂದ ಉಪವಾಸ ಮಾಡುವುದು ದೇಹಕ್ಕೆ ಒಳ್ಳೆಯದಲ್ಲ.

**ಈಗೀಗ ಬಿ.ಪಿ., ಮಧುಮೇಹ, ಗ್ಯಾಸ್ಟ್ರಿಕ್‌ನಂಥ ಸಮಸ್ಯೆಗಳು ಸಾಮಾನ್ಯ. ಅಂಥವರು ಯಾವ ವಿಧಾನ ಅನುಸರಿಸಿದರೆ ಉತ್ತಮ?**

ಬಿ.ಪಿ. ನಿಯಂತ್ರಣದಲ್ಲಿದ್ದರೆ ಉಪವಾಸ ಮಾಡಬಹುದು. ಆದರೆ, ಬಿ.ಪಿ. ಮಾತ್ರೆಯನ್ನು ಕಡ್ಡಾಯವಾಗಿ ತೆಗೆದುಕೊಳ್ಳಬೇಕು. ಉಪವಾಸವಿದ್ದೇನೆ, ಮಾತ್ರೆ ತೆಗೆದುಕೊಳ್ಳುವುದಿಲ್ಲ ಎಂದೆಲ್ಲ ಅಂದುಕೊಳ್ಳಬಾರದು. ಎಳನೀರು ಸೇವಿಸಿಯಾದರೂ ಸರಿ ಮಾತ್ರೆ ತೆಗೆದುಕೊಳ್ಳಬೇಕು. ಮಧುಮೇಹ ಇದ್ದು ಇನ್ಸುಲಿನ್ ತೆಗೆದುಕೊಳ್ಳುವವರು ಅಥವಾ ಮಧುಮೇಹ ತುಂಬಾ ಚೆನ್ನಾಗಿ ನಿಯಂತ್ರಣದಲ್ಲಿ ಇರುವವರೂ ತುಂಬಾ ಹೊತ್ತು ಉಪವಾಸ ಮಾಡುವುದು ಒಳ್ಳೆಯದಲ್ಲ.

ಉಪವಾಸ ಎಂಬುದು ಎಂದಿಗೂ ಹಿಂಸೆ ಎನಿಸಬಾರದು. ಹೊಟ್ಟೆ ಉರಿಯುತ್ತಿದ್ದರೆ, ಸಂಕಟ ಎನಿಸಿದರೆ ಉಪವಾಸವನ್ನು ಕೈಬಿಡುವುದು ಒಳ್ಳೆಯದು. ಉಪವಾಸ ಇದ್ದೇನೆ ಎನ್ನುವ ಕಾರಣಕ್ಕೆ ಇಂಥ ತೊಂದರೆಗಳನ್ನೆಲ್ಲ ಸಹಿಸಿಕೊಂಡು ದೇಹದ ಮೇಲೆ ಒತ್ತಡ ಹೇರಬೇಡಿ.

# ಅಡುಗೆ ಅಹಲ್ಯಾಬಾಯಿ ಚಪ್ಪರಿಸುತ್ತದೆ ಬಾಯಿ

ರಸಾಸ್ವಾದ

**'ಅಡುಗೆ...** ಅದೊಂದು ಕಲೆ, ಪ್ರೀತಿ, ಶ್ರದ್ಧೆ, ಸದ್ಭಾವನೆ... ಸೇವೆಗಾಗಿ ನಾಲ್ಕು ಜನರಿಗೆ ಊಟಕ್ಕಿಡುವೆ. ಹದವರಿತು ಅಡುಗೆ ಮಾಡಿದರೆ ಎಲ್ಲರಿಗೂ ರುಚಿಸುತ್ತೆ. ನನ್ನ ಅಡುಗೆ ರುಚಿಯ ಸೊಗಡು ಒಬ್ಬರ ಬಾಯಿಂದ ಮತ್ತೊಬ್ಬರಿಗೆ ಹರಡಿ ಈಗ ಸಾಗರದಾಚೆಗೂ ಹೋಗಿದೆ' ಎಂದು ಮುಗುಳ್ನಗುತ್ತ ಮಾತಿಗಿಳಿದ ಅಹಲ್ಯಾಬಾಯಿ, 48 ವರ್ಷಗಳಿಂದ ತಮ್ಮ ಕೈರುಚಿಯನ್ನು ಜನರಿಗೆ ಉಣಬಡಿಸುತ್ತಿದ್ದಾರೆ.

ಅಹಲ್ಯಾಬಾಯಿ ಕೇಟರಿಂಗ್‌ನಲ್ಲಿ ತಯಾರಾಗುವ ಸಾಂಪ್ರದಾಯಿಕ ಅಡುಗೆಗಳು ಸುತ್ತಮುತ್ತಲ ನಿವಾಸಿಗಳನ್ನಲ್ಲದೆ, ಯೂಟ್ಯೂಬ್ ಮೂಲಕ ನಾಡಿನ, ಹೊರನಾಡಿನ ಪಾಕಪ್ರಿಯರನ್ನೂ ಸೆಳೆದಿವೆ. ಬೆಂಗಳೂರಿನ ಶ್ರೀರಾಂಪುರಕ್ಕೆ ಬಂದರೆ ಸಾಕು, ವೀರಾಂಜನೇಯ ದೇವಸ್ಥಾನದ ಸಮೀಪವಿರುವ ಅಹಲ್ಯಾಬಾಯಿ ಕೇಟರಿಂಗ್‌ಗೆ ಯಾವುದೇ ಮಾರ್ಗಸೂಚಿ ಫಲಕ ಇಲ್ಲದೆಯೂ ಸುಲಭವಾಗಿ ತಲುಪಬಹುದು. ದಾರಿಹೋಕರೇ ದಾರಿ ತೋರುತ್ತಾರೆ. ಅಷ್ಟರಮಟ್ಟಿಗೆ ಜನಪ್ರಿಯರಾಗಿರುವ, 72ರ ವಯಸ್ಸಿನಲ್ಲೂ ತುಂಬು ಉತ್ಸಾಹ, ಜೀವನಪ್ರೀತಿಯಿಂದ ರಸಪಾಕ ತಯಾರಿಸುವ ಅಹಲ್ಯಾಬಾಯಿ ಅವರ ಅಡುಗೆಗಳು ಎಂತಹವರ ಬಾಯಿಯಲ್ಲೂ ರುಚಿಮೊಗ್ಗುಗಳನ್ನು ಅರಳಿಸುತ್ತವೆ. ಒತ್ತಡದ ಜೀವನಶೈಲಿಯಲ್ಲಿ ಸಾಂಪ್ರದಾಯಿಕ ಅಡುಗೆಗಳನ್ನೇ ಮರೆತಿದ್ದ ಬಹುತೇಕರಿಗೆ ಮತ್ತೆ ಅವುಗಳ ರುಚಿ ಹತ್ತಿಸಿದ್ದಾರೆ ಅವರು.

50 ವರ್ಷಗಳ ಹಿಂದೆ ದೇವಸ್ಥಾನದ ಪ್ರಸಾದ, ಸಣ್ಣಪುಟ್ಟ ಕಾರ್ಯಕ್ರಮಗಳಿಗೆ ಊಟ ತಯಾರಿಸಿಕೊಡುತ್ತಿದ್ದ ಅಹಲ್ಯಾಬಾಯಿ ತಮ್ಮ ಕೈರುಚಿಯಿಂದಲೇ ಮನೆಮಾತಾದವರು. ಪ್ರಚಾರ ಬಯಸದೆ, ಕೇಳಿದವರಿಗೆ ಶ್ರದ್ಧೆಯಿಂದ ಅಡುಗೆ ಮಾಡಿಕೊಡುತ್ತಿದ್ದ ಅವರು, ಇಂದು ದಿನಕ್ಕೆ 40ರಿಂದ 50 ಜನರಿಗೆ ಉಪಾಹಾರ, ಮಧ್ಯಾಹ್ನ ಹಾಗೂ ರಾತ್ರಿ ಊಟ ತಯಾರಿಸಿಕೊಡುತ್ತಾರೆ. ಅವರ 'ಶುದ್ಧ ಆಹಾರ', 'ಮನೆ ಅಡುಗೆ'ಯನ್ನು ಸುತ್ತಮುತ್ತಲಿನ ಹಲವು ಕಚೇರಿಗಳ ಉದ್ಯೋಗಿಗಳು ನೆಚ್ಚಿಕೊಂಡಿದ್ದಾರೆ. ಇದಲ್ಲದೇ ಚಕ್ಕುಲಿ, ಕೋಡುಬಳೆ, ಕಜ್ಜಾಯ, ನಿಪ್ಪಟ್ಟು, ವಾಂಗಿಬಾತ್ ಪುಡಿ, ಬಿಸಿಬೇಳೆಬಾತ್ ಪುಡಿ, ರಸಂ ಪುಡಿ, ಪುಳಿಯೋಗರೆ ಪುಡಿಯಂತಹವು ವಿದೇಶಕ್ಕೂ ರವಾನೆಯಾಗುತ್ತವೆ.

ಸೋಡಾ, ಕೃತಕ ಬಣ್ಣಗಳಿಗೆ ಅವರ ಅಡುಗೆ ಮನೆಯಲ್ಲಿ ಸ್ಥಳವೇ ಇಲ್ಲ. ಈರುಳ್ಳಿ, ಬೆಳ್ಳುಳ್ಳಿ ಸಹ ವರ್ಜ್ಯ. ಪಾಕ ತಯಾರಿಯಲ್ಲಿ ತುಪ್ಪ, ಒಣಹಣ್ಣುಗಳನ್ನು ಹೇರಳವಾಗಿ ಬಳಸುವ ಅಹಲ್ಯಾ 'ಅದರಲ್ಲೇ ಅಡಗಿದೆ ಆರೋಗ್ಯದ ಗುಟ್ಟು' ಎನ್ನುತ್ತಾರೆ. ಮೂರ್ನಾಲ್ಕು ವರ್ಷಗಳಿಂದೀಚೆಗೆ 'ಮನೆ ಮನೆ ರಸದೂಟ' ಯೂಟ್ಯೂಬ್ ಚಾನೆಲ್ ಮೂಲಕ ಅವರ ರಸಪಾಕದ ರೆಸಿಪಿಗಳು ಬಹುಜನರಿಗೆ ತಲುಪಿವೆ. ತಮ್ಮ ಅಜ್ಜಿಯ ಕಾಲದ ರೆಸಿಪಿಗಳನ್ನೂ ಸವಿವರವಾಗಿ, ಕಣ್ಣಳತೆಯಲ್ಲಿಯೇ ಹೇಳಿಕೊಡುವ ಚಾಕಚಕ್ಯತೆ ಅವರದು.

10ನೇ ವಯಸ್ಸಿನಿಂದಲೇ ಅವರ ತಾಯಿ ಸುಶೀಲಾಬಾಯಿ ವಿವಿಧ ರೀತಿಯ ಸಾಂಬಾರ್, ತೊವ್ವೆ, ಸರಳ ಸಿಹಿತಿಂಡಿಗಳನ್ನು ತಯಾರಿಸುವುದನ್ನು ಅವರಿಗೆ ಹೇಳಿಕೊಡುತ್ತಿದ್ದರಂತೆ. 'ತಾಯಿ ನನಗೆ ಬರೀ ಸ್ಫೂರ್ತಿಯಲ್ಲ, ಬದಲಿಗೆ ಅಡುಗೆಯ ಶಿಕ್ಷಣ ನೀಡಿದವರು, ಮಾರ್ಗದರ್ಶನ ಮಾಡಿದವರು' ಎಂದು ನೆನಪುಗಳನ್ನು ಮೆಲುಕು ಹಾಕುತ್ತಾರೆ. 'ಎಲ್ಲರೂ ಮನೆಯಲ್ಲೇ ಅಡುಗೆ ಮಾಡಿಕೊಳ್ಳಿ. ಈಗೇನಿದ್ದರೂ ಆರೋಗ್ಯವೇ ಆಸ್ತಿ ಎಂಬಂತಾಗಿದೆ. ಎಲ್ಲ ಇದ್ದರೂ ಆರೋಗ್ಯ ಸರಿ ಇರುವುದಿಲ್ಲ. ನಾವು ಸೇವಿಸುವ ಆಹಾರದಲ್ಲೇ ಆರೋಗ್ಯದ ಗುಟ್ಟು ಅಡಗಿದೆ' ಎನ್ನುತ್ತಾರೆ.

ಪೂರಿ ಕರಿದು ಮಾಡುವ ಮೋಹನ ಲಾಡು, ಅಕ್ಕಿ- ಬೆಲ್ಲದ ಹಾಲ್‌ಬಾಯ್, ಒತ್ತುಶ್ಯಾವಿಗೆ, ಅಪ್ಪಿ ಪಾಯಸ, ಅಂಟಿನ ಉಂಡೆ, ಸಕ್ಕರೆ ಹೋಳಿಗೆ, ಬಗೆಬಗೆಯ ಚಟ್ನಿಪುಡಿ, ಹಿತಕಿದ ಅವರೆಬೇಳೆ ಸಾರು, ಬಿಸಿ ಅನ್ನ-ತುಪ್ಪದೊಂದಿಗೆ ಸವಿಯಲು ಮೆಂತೆಹಿಟ್ಟು, ಬಾಳೆಹಣ್ಣು- ರವೆಯಿಂದ ತಯಾರಿಸುವ ಸಪಾದ ಭಕ್ಷ್ಯ (ಸತ್ಯನಾರಾಯಣ ಪ್ರಸಾದ), ಮಸಾಲೆ ಸಬ್ಬಕ್ಕಿ ಇಡ್ಲಿ... ಹೀಗೆ ಅವರ ಹಲವಾರು ರೆಸಿಪಿಗಳ ದೃಶ್ಯಗಳು ಪಾಕಪ್ರಿಯರ ಜಿಹ್ವಾಚಾಪಲ್ಯವನ್ನು ಹೆಚ್ಚಿಸಿವೆ. ದಸರಾ, ದೀಪಾವಳಿ ಸೇರಿದಂತೆ ವಿವಿಧ ಹಬ್ಬಗಳ ಸಮಯದಲ್ಲಿ ಅವರ ಸಾಂಪ್ರದಾಯಿಕ ಅಡುಗೆಗಳಿಗೆ ಬಲು ಬೇಡಿಕೆ.

ಸುಮಾ ಬಿ.

## ಅನುಭವದ ಕಿವಿಮಾತು

1. ಮೈಸೂರುಪಾಕ್ ಮಿಶ್ರಣವನ್ನು ಒಲೆಯ ಮೇಲೆ ಬೆರೆಸಿ ಮಾಡುವಾಗ ಗುಳ್ಳೆಗಳು ಮೇಲೆದ್ದ ತಕ್ಷಣ ತುಪ್ಪ ಸವರಿದ ತಟ್ಟೆಯಲ್ಲಿ ಹರಡಬೇಕು. ಒಂದು ನಿಮಿಷ ಆಚೀಚೆ ಕಣ್ಣು ಮಿಟುಕಿಸಿದರೂ ಹದ ತಪ್ಪುತ್ತದೆ, ಪಾಕ ಗಟ್ಟಿಯಾಗುತ್ತದೆ.
2. ಮಾವಿನ ಗೊಜ್ಜಿಗೆ ರುಚಿ ಹೆಚ್ಚುವುದು ಉದ್ದಿನಬೇಳೆ, ಕೆಂಪು ಮೆಣಸಿನಕಾಯಿ, ತೆಂಗಿನಕಾಯಿ ಪೇಸ್ಟ್‌ನಿಂದಲೇ. ಇವುಗಳಲ್ಲಿ ಒಂದು ತಪ್ಪಿದರೂ ರುಚಿ ಕೆಡುತ್ತದೆ.
3. ಚಟ್ನಿಪುಡಿಗೆ ಹುಣಸೆಹಣ್ಣನ್ನು ಎಣ್ಣೆಯಲ್ಲಿ ಕರಿದು ಹಾಕಬೇಕು. ಹಾಗೆಯೇ ಹಾಕಿದರೆ ಪುಡಿಯ ಜೊತೆ ಹೊಂದಿಕೊಳ್ಳುವುದಿಲ್ಲ. ಹುಳಿ ಅಂಶ ಅಲ್ಲಲ್ಲಿ ಬಾಯಿಗೆ ಸಿಗುತ್ತದೆ. ಕರಿದು ಹಾಕಿದಾಗ ಕಾಳುಗಳೊಂದಿಗೆ ಹದವಾಗಿ ಬೆರೆಯುತ್ತದೆ.

## ಮರಾಠಿ ಶೈಲಿಯ ಗುಲ್ಪಾವಟೆ ಸವಿಯಿರಿ

ಗೋಧಿಹಿಟ್ಟು, ಬೆಲ್ಲದಿಂದ ಮಾಡುವ ಆರೋಗ್ಯಕರ ಸಿಹಿ ಉಂಡೆ ಗುಲ್ಪಾವಟೆ, ಮಕ್ಕಳಾದಿಯಾಗಿ ಎಲ್ಲರನ್ನೂ ಸೆಳೆಯುತ್ತದೆ. ಮರಾಠಿಗರು ಹೆಚ್ಚಾಗಿ ತಯಾರಿಸುವ ಈ ಸಿಹಿ ತಿನಿಸಿಗೆ ಬೆಲ್ಲದ ಪಾಕ ಹಿಡಿಯಬೇಕೆಂಬ ಗೋಜಿಲ್ಲ. ಸುಲಭವಾಗಿ, ಕಡಿಮೆ ಪದಾರ್ಥ ಬಳಸಿ ಗುಲ್ಪಾವಟೆ ತಯಾರಿಸುವುದನ್ನು ಹೇಳಿಕೊಟ್ಟಿದ್ದಾರೆ ಅಹಲ್ಯಾಬಾಯಿ.

**ಬೇಕಾಗುವ ಸಾಮಗ್ರಿ:** ಗೋಧಿಹಿಟ್ಟು, ಚಿರೋಟಿ ರವೆ, ಒಣಕೊಬ್ಬರಿ, ಬೆಲ್ಲ, ತುಪ್ಪ (ಈ ಎಲ್ಲವೂ ಸಮಪ್ರಮಾಣದಲ್ಲಿ ಒಂದೊಂದು ಕಪ್), ರುಚಿಗೆ ಏಲಕ್ಕಿ ಪುಡಿ ಹಾಗೂ ತುಪ್ಪದಲ್ಲಿ ಹುರಿದ ಗೋಡಂಬಿ.

**ಹೀಗೆ ಮಾಡಿ:** ಚಿರೋಟಿ ರವೆ ಹಾಗೂ ಗೋಧಿಹಿಟ್ಟನ್ನು ಪ್ರತ್ಯೇಕವಾಗಿ ಹೊಂಬಣ್ಣ ಬರುವವರೆಗೆ ಹುರಿದುಕೊಳ್ಳಬೇಕು. ನಂತರ ಒಂದು ಬಾಣಲೆಗೆ ಬೆಲ್ಲ, ಸ್ವಲ್ಪ ನೀರು ಹಾಕಿ ಕರಗಿಸಿಕೊಂಡು ಅದಕ್ಕೆ ಚಿರೋಟಿ ರವೆ ಹಾಕಿ ಮಿಕ್ಸ್ ಮಾಡಿ ಬೇಯಲು ಬಿಡಿ. ಬಳಿಕ ಒಂದು ಬಟ್ಟಲು ತುಪ್ಪ ಹಾಕಿ ಕೈಯಾಡಿಸುತ್ತ ಒಣಕೊಬ್ಬರಿ, ಗೋಧಿಹಿಟ್ಟು ಹಾಕಿ ಚೆನ್ನಾಗಿ ಬೆರೆಸಿಕೊಳ್ಳಬೇಕು. ಬಾಣಲೆಯನ್ನು ಕೆಳಗಿಳಿಸಿ ಏಲಕ್ಕಿ ಪುಡಿ, ಹುರಿದಿಟ್ಟ ಗೋಡಂಬಿ ಹಾಕಿ ಬೆರೆಸಿ. ಈ ಮಿಶ್ರಣ ಸ್ವಲ್ಪ ತಣ್ಣಗಾದ ಬಳಿಕ ಉಂಡೆ ಕಟ್ಟಬೇಕು.

ಅವಲಕ್ಕಿ ಆಂಬೊಡೆಯೊಂದಿಗೆ ಅಹಲ್ಯಾಬಾಯಿ

'ಕೃಷಿಕಲಾ' ಸಿದ್ಧಪಡಿಸಿರುವ ಬೀಜದ ರಾಖಿ

# ಬಾಂಧವ್ಯದ 'ಬೀಜ'

ಕೌಶಲ

• ಕೃಷ್ಣಿ ಶಿರೂರ

**ಸಹೋದರತ್ವದ** ಬಾಂಧವ್ಯ ಬೆಸೆಯುವ 'ರಕ್ಷಾಬಂಧನ'ದ ಸಂದರ್ಭದಲ್ಲಿ, ಹಲವು ನಮೂನೆಯ ರಾಖಿಗಳು ಕಣ್ಮನ ಸೆಳೆಯುತ್ತವೆ. ವರ್ಷವರ್ಷವೂ ರೂಪ ಬದಲಿಸಿಕೊಂಡು ವೈವಿಧ್ಯ ಸಾರುವ ರಾಖಿಗಳಲ್ಲಿ ಹೆಚ್ಚಿನವು ಪ್ಲಾಸ್ಟಿಕ್‌ಮಯ ಆಗಿರುತ್ತವೆ. ಆದರೆ ಈ ಬಾರಿ ನೀವು ಕೊಳ್ಳುವ ರಾಖಿಗೊಂದು ಅರ್ಥ ಕಲ್ಪಿಸಿಕೊಟ್ಟಿದೆ ಮೈಸೂರಿನ 'ಕೃಷಿಕಲಾ' ಸಂಸ್ಥೆ.

ಬಳಸಿ ಬಿಸಾಡುವ ತರಕಾರಿ, ಹಣ್ಣಿನ ಬೀಜಗಳಿಂದ ರಾಖಿ ತಯಾರಿಸುವ ಮೂಲಕ ಹಬ್ಬವನ್ನು ಪರಿಸರಸ್ನೇಹಿ ಆಗಿಸಲು ಅದು ಮುಂದಾಗಿದೆ. ಕಾಡುಹಣ್ಣಿನ ಬೀಜಗಳೂ ಜೊತೆಗೂಡಿದ ರಾಖಿಗಳು ಹೊಸತನ ಸಾರುತ್ತಿವೆ.

ಬೇಲಿಯ ಸಂದಿ-ಗೊಂದಿಗಳಲ್ಲಿ ಬೆಳೆಯುವ ಗುಲಗಂಜಿ, ಕುಂಬಳ, ಹೀರೆ, ಅಂಟವಾಳ, ರುದ್ರಾಕ್ಷಿ, ತುಪ್ಪದ ಹೀರೆಕಾಯಿ, ಅವರೆ, ಔಡಲ, ಸೀತಾಫಲದ ಬೀಜಗಳು ರಾಖಿಯ ರೂಪದಲ್ಲಿ ಪರಿಸರ ಪ್ರಜ್ಞೆಯ ರೂವಾರಿಗಳಾಗಿ ಅಣ್ಣ-ತಮ್ಮಂದಿರ ಮುಂಗೈಗಳಲ್ಲಿ ನಲಿಯಲಿವೆ. ಪ್ರಕೃತಿದತ್ತ ಬಣ್ಣ, ವಿನ್ಯಾಸದ ಬೀಜಗಳಿಗೆ ಮಾಂತ್ರಿಕ ಸ್ಪರ್ಶ ನೀಡಿ, ಅವು ಇನ್ನಷ್ಟು ಆಕರ್ಷಕವಾಗುವಂತೆ ಮಾಡಿದ್ದಾರೆ ಕೃಷಿಕಲಾದ ಸಂಸ್ಥಾಪಕಿ ಸೀಮಾ ಪ್ರಸಾದ್.

ತಮ್ಮ ಈ ಆಲೋಚನೆಯನ್ನು ಕಾರ್ಯರೂಪಕ್ಕೆ ಇಳಿಸಲು ಅವರು ಬಳಸಿಕೊಂಡದ್ದು ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ನೀರಲಗಿಯ ಮಹಿಳೆಯರನ್ನು. ದೂರದ ನೀರಲಗಿಯನ್ನು ಅವರು ಆಯ್ದುಕೊಳ್ಳುವುದಕ್ಕೂ ಒಂದು ಕಾರಣವಿದೆ. ಮೈಸೂರಿನ ಸಹಜ ಸಮೃದ್ಧ ಸಂಸ್ಥೆಯು ಕುಂದಗೋಳದಲ್ಲಿ ರಾಗಿ ತಳಿಗಳ ಸಂರಕ್ಷಣಾ ಕಾರ್ಯದಲ್ಲಿ ನಿರತವಾಗಿದೆ. ಈ ಸಂಸ್ಥೆಯ ಬೆಂಬಲದೊಂದಿಗೆ, ಗ್ರಾಮೀಣ ಮಹಿಳೆಯರಿಗೆ ಜೀವನೋಪಾಯ ಕಲ್ಪಿಸುವ ದಿಸೆಯಲ್ಲಿ ಕೃಷಿಕಲಾ ಈಗಾಗಲೇ ಅಲ್ಲಿ ಕಾರ್ಯನಿರತವಾಗಿದೆ. ನೀರಲಗಿಯು ಹಳ್ಳಿಯಾಗಿರುವುದರಿಂದ ಅಲ್ಲಿ ಕಾಡಿನ ಬೀಜಗಳ ಸಂಗ್ರಹಕ್ಕೂ ಯಥೇಚ್ಛ ಅವಕಾಶಗಳಿವೆ. ಹೀಗಾಗಿ, ರಾಖಿ ತಯಾರಿಕೆಗೆ ಕೃಷಿಕಲಾ ಅಲ್ಲಿಯೇ ಘಟಕವೊಂದನ್ನು ತೆರೆದಿದೆ.

ರಾಖಿ ಸಿದ್ಧಪಡಿಸಲು ಅಗತ್ಯವಾದ ಬೀಜ, ದಾರ ಹಾಗೂ ರಂಧ್ರ ಕೊರೆಯುವ ಯಂತ್ರವನ್ನು ಪೂರೈಸಿ, ಬೀಜವನ್ನು ದಾರಕ್ಕೆ ಪೋಣಿಸಿ ಸುಂದರವಾಗಿಸಿದ ಒಂದು ರಾಖಿಗೆ ಕೃಷಿಕಲಾದಿಂದ ₹ 15 ನೀಡಲಾಗುತ್ತಿದೆ. ಇದರಿಂದ ಹಳ್ಳಿಮನೆಯ ಮಹಿಳೆಯರಿಗೆ ಕೈಗೊಂದು ಕೆಲಸ ಸಿಕ್ಕಿ, ಸ್ವಾವಲಂಬನೆಗೆ ದಾರಿಯಾಗಿದೆ. 'ಒಂದು ರಾಖಿಗೆ 6ರಿಂದ 10 ಬೀಜಗಳನ್ನು ಬಳಸಲಾಗುತ್ತಿದೆ. ಜೊತೆಗೆ ಮಣಿಗಳನ್ನೂ ಸೇರಿಸಿ ಸುಂದರಗೊಳಿಸಲಾಗುತ್ತದೆ. ಈ ವರ್ಷ ಈವರೆಗೆ 500 ರಾಖಿಗಳನ್ನು ಸಿದ್ಧಪಡಿಸಿರುವೆ' ಎಂದು ಖುಷಿಯಿಂದ ಹೇಳುತ್ತಾರೆ ನೀರಲಗಿಯ ರೇಖಾ.

ಕೌಶಲ ಪ್ರದರ್ಶನಕ್ಕೂ ಇಲ್ಲಿ ಬಹಳಷ್ಟು ಅವಕಾಶವಿದೆ. ಹೀಗೆ ಬೀಜದ ರಾಖಿಯು ಬಾಂಧವ್ಯ ಬೆಸುಗೆಯ ಬೀಜ ಕುಡಿಯೊಡೆಯಲು ಸಹ ನೆರವಾಗಿದೆ.

## ಸಂರಕ್ಷಣೆ–ಸ್ವಾವಲಂಬನೆ

2018ರಲ್ಲಿ ಸಹಜ ಸಮೃದ್ಧ ಸಂಸ್ಥೆಯ ಬೆಂಬಲದೊಂದಿಗೆ ಆರಂಭವಾದ ಸಂಸ್ಥೆ ಕೃಷಿಕಲಾ. ಸಾಂಪ್ರದಾಯಿಕ ತಳಿಗಳನ್ನು ಉಳಿಸುವುದರೊಂದಿಗೆ ಅವುಗಳಿಗೆ ಹೊಸ ರೂಪ ನೀಡಲು ಇದು ಶ್ರಮಿಸುತ್ತಿದೆ. ವಿನಾಶದ ಅಂಚಿನಲ್ಲಿರುವ 45 ಸೋರೆ ತಳಿಗಳನ್ನು ಸಂರಕ್ಷಿಸುವ ಕಾರ್ಯದಲ್ಲಿ ಮುಂದಾಳತ್ವ ವಹಿಸಿದೆ. ಸೋರೆ ಬುರುಡೆಗಳನ್ನು ಬಳಸಿ, ವಿಭಿನ್ನ ಕಲಾಕೃತಿಗಳನ್ನಾಗಿಸಿ ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಗ್ರಾಮೀಣ ಮಹಿಳೆಯರಿಗೆ ಜೀವನೋಪಾಯ ಕಲ್ಪಿಸಿಕೊಟ್ಟಿದ್ದಕ್ಕಾಗಿ ಕೃಷಿಕಲಾಕ್ಕೆ ದೆಹಲಿಯ ಸಮಾಜ ಕಲ್ಯಾಣ ಸಂಸ್ಥೆಯಾದ ಎಂ3ಎಂ ಪ್ರತಿಷ್ಠಾನದ ಪ್ರತಿಷ್ಠಿತ ತ್ರಿವೇಣಿ ಪ್ರಶಸ್ತಿಯೂ ಲಭಿಸಿದೆ. ಪ್ರಶಸ್ತಿಯು ₹ 7 ಲಕ್ಷ ರೂಪಾಯಿ ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿದೆ.

'ಮುಂದಿನ ದಿನಗಳಲ್ಲಿ ಬೀಜಗಳನ್ನು ಬಳಸಿ ಮ್ಯಾಚಿಂಗ್ ಆಭರಣಗಳನ್ನು ತಯಾರಿಸುವ ಯೋಜನೆಯಿದೆ' ಎನ್ನುತ್ತಾರೆ ಸೀಮಾ ಪ್ರಸಾದ್. ಬೀಜಗಳನ್ನು ಸಂರಕ್ಷಿಸುವುದರೊಂದಿಗೆ ಗ್ರಾಮೀಣ ಮಹಿಳೆಯರ ಬದುಕಿಗೆ ಸ್ವಾವಲಂಬನೆ ಒದಗಿಸುವುದು ಕೃಷಿಕಲಾದ ಉದ್ದೇಶವಾಗಿದೆ.

# ‘ಹೆಣ್ಣು ದಿಟ್ಟವಾಗಿ ಬರೆದರೆ ಅನುಮಾನದ ಕಣ್ಣು’

## ಬುಕ್ ಬ್ರಹ್ಮ ಸಾಹಿತ್ಯ ಉತ್ಸವ–2025
## ಸ್ತ್ರೀ ಎಂದರೆ ಅಷ್ಟೇ ಸಾಕೇ: ಮಹಿಳಾ ಬರಹ ಕುರಿತ ಗೋಷ್ಠಿ

● ಸುಕೃತ ಎಸ್.

ಬೆಂಗಳೂರು: ಹೆಣ್ಣು ಏನನ್ನು ಬರೆಯಬೇಕು? ಆಕೆ ರಚಿಸುವ ಸಾಹಿತ್ಯದ ಕಥಾವಸ್ತು ಏನಾಗಿರಬೇಕು ಮತ್ತು ಏನಾಗಿರಬಾರದು? ಲೈಂಗಿಕತೆ ಅಥವಾ ಪ್ರಣಯದ ಕುರಿತು ಬರೆದರೆ ಅದು ಆಕೆಯ ಸ್ವಂತ ಅನುಭವವೇ ಆಗಿರಬೇಕು ಎನ್ನುವ ಸಮಾಜ. ತನ್ನ ದೇಹದ ಅಂಗಗಳ ಕುರಿತು ಬರೆದರೆ, ಇವಳು ‘ಅಂಥವಳೇ’ ಇರಬೇಕು ಎನ್ನುವ ಫೇಸ್‌ಬುಕ್ ದಾಳಿಗಳು...

ಮಹಿಳಾ ಸಾಹಿತ್ಯ ಮತ್ತು ಸಾಹಿತ್ಯ ಸೃಷ್ಟಿಸುವ ಮಹಿಳೆಯ ಕುರಿತು ಇಂಥ ಹಲವು ಆಯಾಮದ ಚರ್ಚೆಗೆ ಬುಕ್‌ಬ್ರಹ್ಮ ಸಾಹಿತ್ಯ ಉತ್ಸವದ ‘ಅಂಗಳ’ ವೇದಿಕೆಯಲ್ಲಿ ನಡೆದ ‘ಸ್ತ್ರೀ ಎಂದರೆ ಅಷ್ಟೇ ಸಾಕೆ?: ಮಹಿಳಾ ಬರಹ’ ಎನ್ನುವ ಗೋಷ್ಠಿ ಸಾಕ್ಷಿಯಾಯಿತು. ಚರ್ಚೆಯಲ್ಲಿ ಭಾಗವಹಿಸಿದ್ದ ಲೇಖಕಿಯರಾದ ಹೇಮಾ ಪಟ್ಟಣಶೆಟ್ಟಿ, ಪದ್ಮಿನಿ ನಾಗರಾಜು, ಶಾಂತಿ ಅಪ್ಪಣ್ಣ ಅವರು ತಮ್ಮ ಅನುಭವಗಳನ್ನು, ಅಭಿಪ್ರಾಯಗಳನ್ನು ಹಂಚಿಕೊಂಡರು.

‘ಲೇಖಕನೊಬ್ಬ ತನ್ನ ಸಾಹಿತ್ಯದಲ್ಲಿ ಬರೆಯುವ ಪ್ರಣಯ ಹಾಗೂ ಲೈಂಗಿಕತೆಯ ವಿವರಗಳು ಆತನ ಕಲೆಗಾರಿಕೆ ಎನ್ನಲಾಗುತ್ತದೆ. ಆದರೆ, ಇಂಥದ್ದನ್ನು ಹೆಣ್ಣೊಬ್ಬಳು ಬರೆಯಬಾರದು ಎಂದು ಈ ಸಮಾಜ ಬಯಸುತ್ತದೆ. ಒಂದು ವೇಳೆ ಇಂಥ ಸಾಹಿತ್ಯವನ್ನು ಹೆಣ್ಣೊಬ್ಬಳು ಬರೆದಳು ಎಂದಾದರೆ ಆ ಸಾಹಿತ್ಯವನ್ನು ಓದಬಾರದು ಎನ್ನಲಾಗುತ್ತದೆ’ ಎಂದು ಲೇಖಕಿಯರಾದ ಪದ್ಮಿನಿ ಮತ್ತು ಚರ್ಚೆಯ ಸಮನ್ವಯಕಾರರಾಗಿದ್ದ ಕುಸುಮಾ ಆಯರಹಳ್ಳಿ ಹೇಳಿದರು.

ಸಮಾರಂಭವೊಂದರಲ್ಲಿ ಕವಯಿತ್ರಿ ಮಮತಾ ಜಿ. ಸಾಗರ ಅವರು ವಾಚಿಸಿದ ಕವನ ಮತ್ತು ಅದರ ಸುತ್ತ ಇತ್ತೀಚೆಗೆ ಹುಟ್ಟಿಕೊಂಡ ವಿವಾದದ ಕುರಿತು ಲೇಖಕಿ ಹೇಮಾ ಪ್ರಸ್ತಾಪಿಸಿದರು. ‘ನಿಸ್ಸಂಕೋಚವಾಗಿ ಅಥವಾ ದಿಟ್ಟವಾಗಿ ಬರೆಯುವ ಮಹಿಳೆಯರನ್ನು ಈ ಸಮಾಜವು ಅವಮಾನಿಸುತ್ತದೆ ಮತ್ತು ಕೆಟ್ಟ ದೃಷ್ಟಿಯಿಂದ ನೋಡುತ್ತದೆ. ಇದೇ ಮಾದರಿ ಗಂಡಸರು ಬರೆಯುವ ಸಾಹಿತ್ಯಕ್ಕೆ ಅನ್ವಯಿಸುವುದಿಲ್ಲ’ ಎಂದು ಸಭೆಯಲ್ಲಿ ಆಕ್ರೋಶ ವ್ಯಕ್ತವಾಯಿತು.

ಗೋಷ್ಠಿಯಲ್ಲಿ ಲೇಖಕಿಯರಾದ ಶಾಂತಿ ಅಪ್ಪಣ್ಣ (ಎಡದಿಂದ) ಹೇಮಾ ಪಟ್ಟಣಶೆಟ್ಟಿ, ಪದ್ಮಿನಿ ನಾಗರಾಜು, ಕುಸುಮಾ ಆಯರಹಳ್ಳಿ ಭಾಗಹಿಸಿದ್ದರು – ಪ್ರಜಾವಾಣಿ ಚಿತ್ರ

### ‘ನಿಮ್ಮ ಅನುಭವನಾ?’

ನಾನು ‘ಪಯಣ’ ಅಂತ ಒಂದು ಕಥೆ ಬರೆದಿದ್ದೆ. ಅದರಲ್ಲಿ ರಾತ್ರಿ ವೇಳೆ ರೈಲಿನಲ್ಲಿ ಪ್ರಯಾಣಿಸುವ ವೇಳೆ ಹೆಣ್ಣೊಬ್ಬಳು ಪುರುಷನೊಂದಿಗೆ ಬರ್ಥ್ ಅನ್ನು ಹಂಚಿಕೊಳ್ಳುವ ಪ್ರಸಂಗ ಬರುತ್ತದೆ. ಈ ಕಥೆ ಓದಿದ ಹಲವರು ನನ್ನ ಬಳಿ ಬಂದು, ಇದು ನಿಮ್ಮ ಸ್ವಂತ ಅನುಭವವೇ ಎಂದು ಕೇಳಿದ್ದರು

**ಶಾಂತಿ ಅಪ್ಪಣ್ಣ,** ಲೇಖಕಿ

### ‘ಯಾಕ್ರೀ ಹಿಂಗೆಲ್ಲಾ ಬರೀತೀರಾ?’

ನಾನು ಬರೆದ ‘ಉರಿವ ಬೆಂಕಿಗೆ ಮೈಯೆಲ್ಲಾ ಬಾಯಿ’ ಎನ್ನುವ ಕಥಾ ಸಂಕಲನದಲ್ಲಿ ಒಂದು ಕಥೆ ಇದೆ. ಅದರಲ್ಲಿ ಹೆಣ್ಣೊಬ್ಬಳು ತನ್ನ ಗಂಡನನ್ನು ಬಿಟ್ಟು ಬೇರೆಯವನಿಂದ ಮಗು ಪಡೆದುಕೊಳ್ಳಲು ನಿರ್ಧರಿಸುತ್ತಾಳೆ. ಈ ಕಥೆಯ ಕುರಿತು ಆನ್‌ಲೈನ್ ಕಾರ್ಯಕ್ರಮವೊಂದರಲ್ಲಿ ಚರ್ಚೆ ನಡೆಯುತ್ತಿತ್ತು. ಆಗ ಖ್ಯಾತ ವಿಮರ್ಶಕರೊಬ್ಬರು ಪ್ರತಿಕ್ರಿಯಿಸಿ, ‘ಯಾಕ್ರೀ ಮಹಿಳೆಯರು ಹಿಂಗೆಲ್ಲ ಬರೀತೀರಾ?’ ಅಂತ ಕೇಳಿದರು.

**ಪದ್ಮಿನಿ ನಾಗರಾಜು,** ಲೇಖಕಿ



ರಕ್ಷಾಬಂಧನವನ್ನು ಆಚರಿಸಲಾಗುತ್ತಿದೆ !

### ಹಸ್ತಾಕ್ಷರ, ಮುಖಾಮುಖಿ

ಈ ಬಾರಿ ಲೇಖಕರ ಹಸ್ತಾಕ್ಷರ ಪಡೆಯಲು ಹಾಗೂ ಅವರ ಜತೆಗೆ ಸಂವಾದ ನಡೆಸಲು ಪ್ರತ್ಯೇಕ ವೇದಿಕೆಯನ್ನು ನಿರ್ಮಿಸಲಾಗಿತ್ತು. ಇಲ್ಲಿ ಆಪ್ತ ಮಾತುಕತೆಯೂ ನಡೆಯಿತು. ಪುಸ್ತಕಕ್ಕೆ ಹಸ್ತಾಕ್ಷರ ಪಡೆದ ಸಾಹಿತ್ಯ ಪ್ರೇಮಿಗಳು, ಅವರ ಜತೆಗೆ ಫೋಟೊಗಳನ್ನೂ ಕ್ಲಿಕ್ಕಿಸಿಕೊಂಡರು.

ವಿವೇಕ ಶಾನಭಾಗ, ಜಯಂತ ಕಾಯ್ಕಿಣಿ, ದೀಪಾ ಭಾಸ್ತಿ, ಪ್ರತಿಭಾ ನಂದಕುಮಾರ್, ರವಿ ಮಂತ್ರಿ, ರೂಪಾ ಪೈ, ವೋಲ್ಗಾ, ಎಂ.ಎಸ್. ಆಶಾದೇವಿ, ಕುಂ. ವೀರಭದ್ರಪ್ಪ, ಸುಗತ ಶ್ರೀನಿವಾಸರಾಜು, ಬಿ. ಜಯಮೋಹನ್ ಮತ್ತು ವಿಶ್ವಾಸ್ ಪಾಟೀಲ್ ಅವರು ಸಾಹಿತ್ಯಾಸಕ್ತರಿಗೆ ಮುಖಾಮುಖಿಯಾದರು. ಈ ವೇಳೆ ಪ್ರೇಕ್ಷಕರು ಅವರಿಗೆ ಕೆಲ ಪ್ರಶ್ನೆಗಳನ್ನೂ ಕೇಳಿ, ಸಂದೇಹ ಬಗೆಹರಿಸಿಕೊಂಡರು.

# ಎಐ ನಿಯಂತ್ರಿಸುವವರು ಯಾರು?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನವು ಉದ್ಯೋಗವನ್ನು ಕಸಿದುಕೊಳ್ಳಲಿದೆಯೇ, ಈ ತಂತ್ರಜ್ಞಾನ ನಮ್ಮನ್ನು ನಿಯಂತ್ರಿಸುತ್ತಿದ್ದೆಯೇ ಎಂಬ ಕಳವಳ ಒಂದೆಡೆಯಾದರೆ, ಸಿನಿಮಾ, ಶಿಕ್ಷಣ ಸೇರಿ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಕಾರ್ಯಗಳನ್ನು ಸುಲಭಗೊಳಿಸಿರುವ ಬಗ್ಗೆ ಮೆಚ್ಚುಗೆ.

ಹೀಗೆ ಎಐ ಬಳಕೆಯ ಅನುಕೂಲ ಹಾಗೂ ಅನಾನುಕೂಲದ ಬಗ್ಗೆ ಚರ್ಚೆಗೆ ವೇದಿಕೆಯಾದದ್ದು ‘ಬುಕ್ ಬ್ರಹ್ಮ ಸಾಹಿತ್ಯ ಉತ್ಸವ’ದ ‘ಎಐಯ ಅನಾವರಣ: ಸಾಧನ, ಮಾಯಾವಿ, ಸರ್ವಾಧಿಕಾರಿ’ ಗೋಷ್ಠಿ.

ಎಐ ನಿಯಂತ್ರಿಸುವವರು ಯಾರೆಂಬ ಪ್ರಶ್ನೆಯೊಂದಿಗೆ ಆರಂಭವಾದ ಈ ಚರ್ಚೆಯಲ್ಲಿ, ಈ ತಂತ್ರಜ್ಞಾನದ ಅತಿಯಾದ ಅವಲಂಬನೆ ಬಗ್ಗೆ ಕಳವಳ ವ್ಯಕ್ತಪಡಿಸಿದ ಪ್ರಕಾಶಕಿ ಶ್ರೀಜಾ ವಿ.ಎನ್., ‘ಎಐ ಬಳಕೆಗೆ ಸಂಬಂಧಿಸಿದಂತೆ ಪ್ರಾರಂಭಿಕ ಹಂತ ಮೀರಿ ಮುಂದೆ ಬಂದಿದ್ದೇವೆ. ಎಐ ಅನ್ನು ನಾವು ತರಬೇತಿ ಮಾಡುತ್ತಿದ್ದೇವೆಯೇ ಅಥವಾ ನಮ್ಮನ್ನೇ ಎಐ ತರಬೇತಿ ಮಾಡುತ್ತಿದೆಯೇ ಎಂಬ ಜಿಜ್ಞಾಸೆಯಿದೆ’ ಎಂದು ಅಭಿಪ್ರಾಯಪಟ್ಟರು.

ಈ ತಂತ್ರಜ್ಞಾನದ ಅನುಕೂಲದ ಬಗ್ಗೆ ವಿವರಿಸಿದ ಚಲನಚಿತ್ರ ನಿರ್ದೇಶಕ ಹೇಮಂತ್ ರಾವ್, ‘ಎಐ ಸಿನಿಮಾ ಚಿತ್ರೀಕರಣವನ್ನು ಸುಲಭ ಮಾಡಿದ್ದು, ಯಾರು ಬೇಕಾದರೂ ಚಿತ್ರೀಕರಣ ಮಾಡಲು ಸಾಧ್ಯವಾಗುತ್ತಿದೆ. ಘಟನೆಗಳನ್ನು ಮರು ಸೃಷ್ಟಿಸಲು ಈ ತಂತ್ರಜ್ಞಾನ ಸಹಕಾರಿಯಾಗಿದೆ ಎಂದರು.

ವಿದ್ಯಾರ್ಥಿನಿಯೂ ಆಗಿರುವ ಕವಯಿತ್ರಿ ಪಲಕ್ ಶರ್ಮಾ, ‘ಚಾಟ್‌ಜಿಪಿಟಿಯಿಂದ ಹಿಡಿದು ಡೀಪ್‌ಸೀಕ್‌ವರೆಗೂ ಹರಡಿರುವ ಸಾವಿರಾರು ಎಐ (ಕೃತಕ ಬುದ್ಧಿಮತ್ತೆ) ಟೂಲ್‌ಗಳು, ಅಂತರ್ಜಾಲದ ಬಳಕೆಯಲ್ಲಿ ಕ್ರಾಂತಿಕಾರಕ ಬದಲಾವಣೆ ತಂದಿವೆ. ಅಗತ್ಯಕ್ಕೆ ಅನುಗುಣವಾಗಿ ಈ ತಂತ್ರಜ್ಞಾನವನ್ನು ಬಳಿಸಿಕೊಳ್ಳಬೇಕು’ ಎಂದ ಅವರು, ಎಐ ನೆರವಿನಿಂದ ರಚಿಸಿದ ಕವಿತೆಯನ್ನೂ ವಾಚಿಸಿದರು.

ಗೋಷ್ಠಿ ನಿರ್ವಹಿಸಿದ ಲೇಖಕಿ ಪ್ರತಿಭಾ ನಂದಕುಮಾರ್ ಅವರು, ಉದ್ಯೋಗ ನಷ್ಟದ ಬಗ್ಗೆ ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ವಿಷಯ ತಜ್ಞರು, ಕರಡು ತಿದ್ದುವಿಕೆಯಂತಹ ಉದ್ಯೋಗವನ್ನು ಈ ತಂತ್ರಜ್ಞಾನ ಕಸಿದುಕೊಳ್ಳಬಹುದು ಎಂದರು.

ಲಕ್ಷ್ಮಿ ಚಂದ್ರಶೇಖರ್ ಅವರು ‘ಸಿಂಗಾರವ್ವ’ ಏಕವ್ಯಕ್ತಿ ಪ್ರದರ್ಶನ ಪ್ರಸ್ತುತಪಡಿಸಿದರು

### ಇಂದು ಹಲವು ಕಾರ್ಯಕ್ರಮ

ಉತ್ಸವದ ಎರಡನೇ ದಿನವಾದ ಶನಿವಾರ ಕೂಡ ಎಂಟು ವೇದಿಕೆಗಳಲ್ಲಿ ವಿವಿಧ ಕಾರ್ಯಕ್ರಮಗಳು ನಡೆಯಲಿವೆ. ವಿವಿಧ ವಿಷಯಗಳ ಮೇಲೆ ಸಾಹಿತ್ಯ ಗೋಷ್ಠಿಗಳನ್ನು ಹಮ್ಮಿಕೊಂಡಿದ್ದು, ಸಾಹಿತ್ಯ ಕ್ಷೇತ್ರದ ಪ್ರಮುಖರು ಪಾಲ್ಗೊಳ್ಳಲಿದ್ದಾರೆ. ಬೆಳಿಗ್ಗೆ 8.30ಕ್ಕೆ ಪ್ರವೀಣ್ ಗೋಡ್ಖಿಂಡಿ ಮತ್ತು ಕಿರಣ್ ಗೋಡ್ಖಿಂಡಿ ಅವರಿಂದ ‘ಮುಂಜಾವಿನ ರಾಗ’ ಕಾರ್ಯಕ್ರಮ ನಡೆಯಲಿದೆ. ಮಧ್ಯಾಹ್ನ 2ಕ್ಕೆ ಮಾನಸಿ ಪ್ರಸಾದ್ ಮತ್ತು ತಂಡದಿಂದ ‘ನದಿ ಮತ್ತು ಮಳೆಯ ಹಾಡು’ ಹಾಗೂ ಸಂಜೆ 6.30ಕ್ಕೆ ಟಿ.ಎಂ. ಕೃಷ್ಣ ಅವರಿಂದ ಶಾಸ್ತ್ರೀಯ ಗಾಯನ ಹಮ್ಮಿಕೊಳ್ಳಲಾಗಿದೆ.

# ಮಲೆಯಾಳಕ್ಕೆ ಬದಲು ಕನ್ನಡ ಕೃತಿಗೆ ‘ಬುಕರ್’ ಬಂದಿದ್ದು ಹೇಗೆ?: ಲೇಖಕರ ಜಿಜ್ಞಾಸೆ

● ಉಮೇಶ್ ಭಟ್ಟ ಪಿ. ಎಚ್

ಬೆಂಗಳೂರು: ಲೇಖಕಿ ಬಾನು ಮುಷ್ತಾಕ್ ಅವರ ಕೃತಿಗೆ ಬುಕರ್ ಪ್ರಶಸ್ತಿ ಬಂದಿದ್ದಾದರೂ ಹೇಗೆ, ಮಲೆಯಾಳ ಕೃತಿ ಬಿಟ್ಟು ಕನ್ನಡದ ಪುಸ್ತಕ ಅಂತರಾಷ್ಟ್ರೀಯ ಮಟ್ಟದಲ್ಲಿ ಹೇಗೆ ಮಾನ್ಯತೆ ಗಳಿಸಿತು, ಸಾಹಿತ್ಯಕ್ಕಿಂತ ಪ್ರಕಾಶಕರ ಪ್ರಭಾವ, ಮಾರುಕಟ್ಟೆ ಮೌಲ್ಯವೇ ಹೆಚ್ಚು ಶಕ್ತಿ ಶಾಲಿಯೇ. ಲೇಖಕರು ಪ್ರಶಸ್ತಿ ಪಡೆಯಲೆಂದೇ ಸಾಹಿತ್ಯ ರಚಿಸುತ್ತಾರೆಯೇ?

ಬಾನು ಮುಷ್ತಾಕ್

ಇಂತಹ ಚರ್ಚೆಗಳಿಗೆ ವೇದಿಕೆಯಾಗಿದ್ದು–ನಗರದಲ್ಲಿ ಶುಕ್ರವಾರ ಆರಂಭವಾದ ಮೂರು ದಿನಗಳ ಬುಕ್ ಬ್ರಹ್ಮ ಸಾಹಿತ್ಯ ಸಂಗಮದ ಮೊದಲ ಗೋಷ್ಠಿ. ‘ಎದೆಯ ಹಣತೆ’ ಕೃತಿಯ ಲೇಖಕಿ ಹಾಗೂ ಬುಕರ್ ಪ್ರಶಸ್ತಿ ಪುರಸ್ಕೃತ ಸಾಹಿತಿ ಬಾನು ಮುಷ್ತಾಕ್, ಅನುವಾದಕಿ ದೀಪಾ ಭಾಸ್ತಿ, ಕಾನಿಷ್ಕ ಗುಪ್ತ, ಮೌತುಷಿ ಮುಖರ್ಜಿ ಅವರು ‘ಬುಕರ್ ಪ್ರಶಸ್ತಿಯಾಚೆ–ಯಾನದ ಹಿಂದೆ ಕಥೆಗಳು, ಭಾರತದ ಕಥೆಗಳ ಭವಿಷ್ಯ’ ಎನ್ನುವ ಕುರಿತು ಚರ್ಚೆಯಲ್ಲಿ ಭಾಗಿಯಾದರು. ಶ್ವೇತಾ ಎರಂ ಗೋಷ್ಠಿ ನಿರ್ವಹಿಸಿದರು.

‘ಎದೆಯ ಹಣತೆ’ಯನ್ನು ದೀಪಾ ಅವರಿಗೆ ನೀಡಿದಾಗ ಇದು ಅಂತರಾಷ್ಟ್ರೀಯ ಮಟ್ಟದ ಗಮನ ಸೆಳೆಯುತ್ತದೆ ಎಂದುಕೊಂಡಿರಲಿಲ್ಲ. ಲಾಂಗ್ ಲಿಸ್ಟ್ ನಂತರ ಶಾರ್ಟ್‌ಲಿಸ್ಟ್‌ನಲ್ಲೂ ನಮ್ಮ ಕೃತಿ ಬಂದಾಗ ಆಶ್ಚರ್ಯವೂ ಆಯಿತು. ಅಂತಿಮವಾಗಿ ಪ್ರಶಸ್ತಿ ಪಡೆಯಿತು. ಸಾಹಿತ್ಯ ಪ್ರಮುಖವಾದರೂ ಕೃತಿಯ ಹಿಂದಿನ ಅಂಶಗಳು, ಪ್ರಕಾಶಕರ ಪ್ರಯತ್ನಗಳು ಕೂಡ ಪ್ರಶಸ್ತಿ ತರುವಲ್ಲಿ ಪ್ರೇರೇಪಿಸುತ್ತವೆ ಎಂದು ಬಾನು ಮುಷ್ತಾಕ್ ಒಪ್ಪಿಕೊಂಡರು.

ಇದಕ್ಕೆ ದನಿಗೂಡಿಸಿದ ಲೇಖಕ ಕಾನಿಷ್ಕ ಗುಪ್ತ, ಪ್ರತಿ ಭಾಷೆಗೂ ತನ್ನದೇ ಆದ ಶಕ್ತಿ ಇದ್ದೇ ಇರುತ್ತದೆ. ವಿಶೇಷವಾಗಿ ಮಲೆಯಾಳದ ಹಲವು ಕೃತಿಗಳು ಇಂಗ್ಲಿಷ್‌ಗೆ ಅನುವಾದಗೊಳ್ಳುತ್ತವೆ. ಇಂಗ್ಲಿಷ್‌ನಿಂದಲೂ ಮಲೆಯಾಳಗೆ ಅನುವಾದ ಮಾಡಲಾಗುತ್ತದೆ. ಭಾಷಾಂತರದ ಕಾರಣಕ್ಕೆ ಮಲೆಯಾಳ ಕೃತಿಗಳ ಓದುಗರು ವಿಶ್ವವ್ಯಾಪ್ತಿ ಇದ್ದಾರೆ. ಬ್ರಿಟನ್‌ನಲ್ಲಿನ ಪ್ರಕಾಶಕರು ಕೃತಿಗಳನ್ನು ಆಯ್ಕೆ ಮಾಡುಕೊಳ್ಳುವಾಗಲೇ ಕೃತಿಯ ಮಹತ್ವವನ್ನು ತಿಳಿದುಕೊಂಡೇ ಬಲ ತುಂಬುತ್ತಾರೆ. ಭಾರತೀಯ ಭಾಷೆಯಲ್ಲೂ ಬುಕರ್‌ನಷ್ಟೇ ಮಹತ್ವ ಇರುವ ಪ್ರಶಸ್ತಿಗಳು ಬೇಕು’ ಎಂದು ಇದರ ಹಿಂದಿರುವ ಅಂಶಗಳನ್ನು ವಿಶ್ಲೇಷಿಸಿದರು.

ಅನುವಾದಕಿ ದೀಪಾ ಭಾಸ್ತಿ, ‘ಯಾವುದೇ ಪ್ರಶಸ್ತಿ ಬರುತ್ತದೆ ಎಂದು ಎದೆಯ ಹಣತೆ ಕೃತಿಯನ್ನು ಅನುವಾದ ಮಾಡಲಿಲ್ಲ. ಅಂತಹ ಉದ್ದೇಶವೂ ಇರಲಿಲ್ಲ. ಸತ್ವಯುತವಾದ ಕೃತಿಗೆ ಇಂಗ್ಲಿಷ್ ಮೂಲಕ ಶಕ್ತಿ ತುಂಬುವ ಕೆಲಸ ಆಯಿತು. ಎಲ್ಲವನ್ನೂ ಮೀರಿ ಪ್ರಶಸ್ತಿ ಕನ್ನಡಕ್ಕೆ ಬಂದಿತು’ ಎಂದು ಸಮರ್ಥಿಸಿಕೊಂಡರು.

### ನಾಟಕ ವಹಿವಾಟು ವಾರ್ಷಿಕ ₹100 ಕೋಟಿ

ಕರ್ನಾಟಕದಲ್ಲಿ ವೃತ್ತಿ ರಂಗಭೂಮಿ ಎಷ್ಟು ಪ್ರಬಲವಾಗಿ ಬೇರೂರಿದೆ ಎಂದರೆ ವಾರ್ಷಿಕ ₹100 ಕೋಟಿ ವಹಿವಾಟು ನಾಟಕಗಳ ಮೂಲಕ ನಡೆಯುತ್ತದೆ. ಅಂದರೆ ವರ್ಷಕ್ಕೆ 16 ಸಾವಿರದಿಂದ 18 ಸಾವಿರ ನಾಟಕಗಳು ಪ್ರದರ್ಶನಗೊಳ್ಳುತ್ತವೆ. ಸರ್ಕಾರ ವೃತ್ತಿ ರಂಗಭೂಮಿಯನ್ನು ಉತ್ತೇಜಿಸಬೇಕು ಎಂದು ದಾವಣಗೆರೆ ವೃತ್ತಿ ರಂಗಭೂಮಿ ರಂಗಾಯಣದ ನಿರ್ದೇಶಕ ಮಲ್ಲಿಕಾರ್ಜುನ ಕಡಕೊಳ ಹೇಳಿದರು.

ಏಣಗಿ ಬಾಳಪ್ಪ ಅವರ ಕುರಿತಾಗಿ ಗಣೇಶ ಅಮೀನಗಡ ರಚಿಸಿರುವ ‘ಬಣ್ಣದ ಬದುಕಿನ ಚಿನ್ನದ ದಿನಗಳು’ ಕೃತಿಯ 11ನೇ ಮುದ್ರಣದ ಪ್ರತಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು. ಕರ್ನಾಟಕದ ಉತ್ತರ ಹಾಗೂ ದಕ್ಷಿಣ ಭಾಗಗಳಲ್ಲಿ ಈಗಲೂ ಹಳ್ಳಿಗಳಲ್ಲಿ ಜಾತ್ರೆ, ಉತ್ಸವ ಸಂದರ್ಭದಲ್ಲಿ ನಾಟಕಗಳು ನಡೆಯುತ್ತವೆ. ಒಂದು ನಾಟಕಕ್ಕೆ ಕನಿಷ್ಠ ₹5 ಲಕ್ಷ ಖರ್ಚು ಮಾಡಲಾಗುತ್ತದೆ ಎಂದರು.

## ಜಿಹ್ವೇಶ್ವರ ಜಯಂತಿ ಆಚರಣೆ

**ಬೆಂಗಳೂರು:** ಸಂಯುಕ್ತ ಸ್ವಕುಳಸಾಳಿ ಸಂಘದ ಆಶ್ರಯದಲ್ಲಿ ಸ್ವಕುಳಸಾಳಿ ಸಮಾಜದ ಮೂಲಪುರುಷ 'ಶ್ರೀಜಿಹ್ವೇಶ್ವರ ಜಯಂತಿ'ಯನ್ನು ನಗರದಲ್ಲಿ ಆಚರಿಸಲಾಯಿತು. ವಕೀಲ ಮಲ್ಲೇಶ್ವರದ ಬಸವರಾಜನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಲೇಖಕ ಸುಬ್ರಮಣ್ಯ ಕೆಂಡೋಳೆ ಅವರು ಮರಾಠಿಯಿಂದ ಕನ್ನಡಕ್ಕೆ ಅನುವಾದಿಸಿರುವ ಜಿಹ್ವೇಶ್ವರ ಕುರಿತ 'ಮೂಲಸ್ತಂಭ ಸಾಳೀ ಮಹಾತ್ಮ ಪುರಾಣ' ಗ್ರಂಥವನ್ನು ಮಾಜಿ ಶಾಸಕ ಎಂ.ಡಿ.ಲಕ್ಷ್ಮೀನಾರಾಯಣ ಜನಾರ್ಪಣೆ ಮಾಡಿದರು. ಸೂರ್ಯನಾರಾಯಣ ಸರೋದೆ, ಡಾ.ನಾಗೇಶ್ ಚಿಲ್ಲಾಳ್, ಗೋಪಾಲ ಕ್ಷೀರಸಾಗರ, ಹರಿದಾಸ ಬಜಾರೆ, ನರಹರಿ ಕೆಂಡೋಳೆ, ಮಲ್ಲಿಕಾರ್ಜುನ ಧೋತ್ರೆ, ಅಮರನಾಥ ಹಾಲುಬಾಯಿ, ಸದಾನಂದ ಸಿಂಗಾಡೆ, ಮೋಹನ್ ಟೋಣಪೆ, ವಿಶ್ವಮೂರ್ತಿ ಸರೋದೆ, ಗೀತಾ ಗಣೇಶ ಅವರನ್ನು ಗೌರವಿಸಲಾಯಿತು.

**IN THE COURT OF THE VIII ADDL. CITY CVIL AND SESSION JUDGE AT, BENGALURU (CCH-15)**
**O.S.No.8248 /2022**

**BETWEEN: SMT.MUNIMARAMMA** W/o Chamaiah Aged about 70 years Residing at # 02, hejala Colony, Hejala, Ramanagaram, Ramanagara district-562 109 **PLAINTIFF**

**AND:**

**SRI.H.G.HANUMAIAH AND OTHERS. DEFENDANTS**

**SUMMONS/NOTICE UNDER ORDER5 RULE 20 OF CPC TO DEFENDENT No. 5 to 7, 14, 17, 18, 31 to 33**

1. **SMT. C.JAYAMMA,** 2nd W/o H.G.Hanumaiah, Aged about 69 years - **Defendant No.5.**
2. **SMT. PRABAVATHI.S,** W/o Late Shivakumar, Aged about 41 years - **Defendant No.6a.**
3. SRI. SRINIVAS .S, S/o Shivakumar, Aged about 21 years - **Defendant No.6b.**
4. **SRI. TEJAS KUMAR.S,** S/o Shivakumar, Aged about 19 years - **Defendant No.6c.**
5. **SRI. KIRAN KUMAR.H,** S/o H.G.Hanumaiah, Aged about 38 years - **Defendant No.7.** All Defendant No. 5, 6a, 6b, 6c, 7 are R/at, No. 145, 2nd Main Road,5th phase ,1st stage west of chord Road, Mahaganapathi nagar, Rajajinagar, Bengaluru-560010.
6. **SMT.PUTTARAJAMMA,** W/o K.Kempaiah, Aged about 62 years, R/at, No.27, M-line, CAR Police Quarters, Mysore Road, Bengaluru-560018 **Defendant No.14**
7. **SRI., B.S.RAMAKRISHNA,** S/o Sannegowda, Aged about 43 years, R/at, No.677, Pipe line Road, Mattikere, Bengaluru-560054. **Defendant No.17**
8. **SMT.SUJATHA,** W/o H.Raju, D/o Basavanna, Aged about 60 years, R/at, No.31, 2nd mainroad, Kalyana Nagara, Mudalapalya, Nagarabhavi mainroad, Siddarthanagar,Bangalore-72-**Defendant No.18.**
9. **SRI, L.NAGARAJU,** S/o Lakshminarayana, Aged about 49 years, R/at, Babanna layout, Mallasandra, T.Dasarahalli, Bengaluru-560057 **Defendant No.31.**
10. **SMT. HEMAVATHI,** W/o S.Venkateshavaran, Aged about 51 years, R/at, No.A37, BHEL Township, Malleshvaram, Bengaluru-560003 **Defendant No.32.**
11. **SRI.T.SANNAPA,** S/o Late Thimmarayappa, Aged about 49 years, R/at, No.32, 6uh Cross, Bagalakunte, Nagasandra Post, Bengaluru 560073 - **Defendant No.33**

Whereas the plaintiff has instituted a civil suit against the defendants for seeking partition and declaration in respect of below mentioned schedule properties. You are hereby summoned to appear before this Hon'bje qourt in person or through at 11 O' Clock in the Counsel on forenoon to answer the claim and you are directed to produce all the documents on that day upon which you intend, in support of your defence. Take Notice that, in default of your appearance on day before mentioned, in above case will be heard and determined in your absence.

**SUIT SCHEDULE PROPERTIES**

**SCHEDULE A-PROPERTIES**

**ITEM No.1:** All piece and parcel of the property in bearing Municipal No.35 in PID No.09-28-35 Measuring East west 24 feet North to South 29 feet totally Measuring 696 square feet, situated at 18th Main A' bock, Subramanyanagar, BBMP, Bengalure-560086 bounded on: **East by**: Property belongs to Muniyappa. **West by**: Property belongs to Venkatappa. **North by**: Property belongs to Maddura hithalu. **South by**: Property belongs to Bylappa.

**ITEM No.2:** All piece and parcel of the property in bearing B.D.A allotment .No. 145, Municipal No. 145 in PID No.20 36-145 Measuring East west 28 feet North to South 39 feet totally Measuring 1092 square feet, situated at Ward No.20 BBMP, 5h phase ,1 stage west of chord Road, Mahaganapathi nagar, Rajajinagar, Bengaluru-560010n bounded on: **East by**: Property No. 144. **West by**: Property No. 146. **North by**: Road. **South by**: Property No. 150.

**ITEM No.3:** All piece and parcel of the property in bearing Municipal No.422 in PID No.14-74-422 Measuring East west 55 feet North to South 40 feet totally Measuring 2200 square feet, situated at Ward No.20 BBMP, Basaveshwaranagar 2nd Stage, West of chord Road, Bangalore-560086 bounded on: **East by**: Site No. 402 and 403, **West by**: 5h main road, **North by**: Site No. 423, **South by**: Site No. 421

**ITEM No.4:** All piece and parcel of the property in bearing Municipal No.A1 and A2 Katha No.398 and 408, Measuring East west 60 feet North to South 46 feet totally Measuring 2760 square feet, situated at near Ullalu main road, ,BBMP, Bengalure-560086 bounded on: **East by**: Site No.A21 and A22, **West by**: 40 feet road, **North by**: Site No.A3 **South by**: Private Property.

**SCHEDULE -B PROPERTIES**

**ITEM No.5:** All piece and parcel of the property in bearing Sy.No.36/3, Measuring 17 guntas, situated at near Doddabidarakallu village, Yeshewanatpura Bengaluru north taluk bounded on: **East by**: Property of the same Sy. No, **West by**: Government halla, **North by**: Property of the same Sy.No and Property belongs to Venkatappa and others, **South by**: Property of the same Sy. Number.

**ITEM No. 5(a):** All piece and parcel of the property in bearing Assessment No.36/3, Site No.29, Katha No.255, Measuring East west 30 feet North to South 40 feet totally Measuring 1200 square feet, situated at near Doddabidarakallu village, Yeshewanatpura Bengaluru north taluk bounded on: **East by**: Site No.30, **West by**: Site No.28, **North by**: 25 feet Road, **South by**: Site No.38.

**ITEM No. 5(b):** All piece and parcel of the property in bearing Assessment No.36/3, Site No.39, Measuring East to west 30 feet North to South 40 feet totally Measuring 1200 square feet, situated at near Doddabidarakallu village, Yeshewanatpura Bengaluru north taluk bounded on: **East by**: Site No.38, **West by**: Site No.40, **North by**: Site No.28, **South by**: Road.

**ITEM No.5(c):** All piece and parcel of the property in bearing Assessment No.36/3, 36/4, 36/6 Site No.54, Measuring East to west 30 feet North to South 40 feet totally Measuring 1200 square feet, situated at near Doddabidarakallu village, Yeshewanatpura Bengaluru north taluk bounded on: **East by**: Road, **West by**: Site No.53, **North by**: Road, **South by**: Site No.65.

**ITEM No.6** All piece and parcel of the property in bearing Sy.No.36/4, , Measuring 25 guntas, situated at near Doddabidarakallu village, Yeshewanatpura Bengaluru north taluk bounded on: **East by**: Property of the same Sy. No **West by**: Land belongs to Chikka venkatappa, **North by**: Bandi road, **South by**: Property of the same Sy. No.

**ITEM No.6(a):** All piece and parcel of the property in bearing Assessment No.36/4, Site No.38, Katah No.112, Measuring East west 30 feet North to South 40 feet totally Measuring 1200 square feet, situated at near Doddabidarakallu village, Yeshewanatpura Bengaluru north taluk bounded on: **East by**: Site No.37, **West by**: Site No.39, **North by**: Site No.29, **South by**: 25 feet Road

**ITEM No.6(b):** All piece and parcel of the property in bearing Assessment No.36/4, Site No.28, Katah No.75, Measuring East west 30 feet North to South 40 feet totally Measuring 1200 square feet, situated at near Yeshewanatpura Doddabidarakallu village, Bengaluru north taluk bounded on: **East by**: Site No.29, **West by**: Site No.27, **North by**: Road, **South by**: Site No.39.

**ITEM No.6(c):** All that piece and parcel of the property in bearing site No.75, situated at Doddabidarakallu, Maruthi Layout, Bangalore-73, khatha No.36/4 measuring East to West 71+30/2 feet North to Soutlh 30+50/2 feet totally measuring 2020 square feet, bounded on, **East by**: Site No.76, **West by**: Site No. 74 **North by**: Road **South by**: Property belongs to H. Jagadeesh.

**ITEM No.6(d):** All that piece and parcel of the immovable residential property in bearing site No.48 formed in Sy.No. 36/4,6 Katha No. 48/36/4,6, Doddabidarak llu village, Yeshewanatpura hobli, Bengaluru north taluk, Bengalore Measuring East west 30 feet North to South 40 feet totally Measuring 1200 square feet, bounded on: **East by**: Site No.49, **West by**: Site No.47, **North by**: 25 Feet Road, **South by**: Site No.71.

**ITEM No.6(e):** All that piece and parcel of the immovable residential property in bearing site No.46 formed in Sy.No. 36/4,6 Katha No. 46/36/4,6, Doddabidarakallu village, Yeshewanatpura hobli, Bengaluru north taluk, Bengalore Measuring East west 25 feet North to South 40 feet totally Measuring 1000 square feet, bounded on: **East by**: Site No.47, **West by**: Private property, **North by**: 25 Feet Road, **South by**: Site No.73.

**ITEM No.7:** All that piece and parcel of the property in bearing Sy .No 36/6 Measuring 3 guntas, situated at Doddabidarakallu village, Yashwanthapura hobli, Bengaluru north taluk, Bengalore. bounded on. **East by**: Property of the same Sy. No **West by**: Government halla **North by**: Land belongs to Venktahanumaiah, **South by**: Government halla,

**ITEM No.7(a):** All that piece and parcel of the property in bearing Assessment No.36/4 and 36/6 in Form No. B, Khatha No. 6973, Site No.73, situated at Ward No.40.B.B.M.P. Yashwanthapura hobli, Bengalore north taluk, Bengalore. Measuring East to west northern side 59 Feet, Southern side 18 Feet, north to south eastern side 40 feet, Western side 49 Feet, totally Measuring 1713 square feet, bounded on. **East by**: Site No.72 **West by**: Private property **North by**: Site No.46, **South by**: Road,

**ITEM No.7(b):** All that piece and parcel of the property in bearing Assesment No.36/4 and 36/6 in Form No B, Khatha No 6974, Site No.74, situated at Ward No.40.B.B.M.P. Yashwanthapura hobli, Bengalore north taluk, Bengalore. Measuring East to west northern side 40 Feet, Southern side 56 Feet, north to south Eastern side 30 feet, Western side 00-0 Feet, totally Measuring 720 square feet, bounded on. **East by**: Site No.75, **West by**: Private property, **North by**: Road, **South by**: Private property,

**SCHEDULE-C PROPERTIES**

**ITEM No.8:** All that piece and parcel of the property in bearing Sy. No. 32/13, situated at Kurubarakarenahalli Village, Bidadi hobli, Ramanagara taluk, Ramanagar district, measuring 4 acre 38 guntas include 5 guntas A and B karab, bounded on, **East by**: Sy No.75 belongs to Kadariah, Sy No.14 belongs to Mr. Ravichandran, **West by**: Sy. No.30 belongs to Mr. Munirangagiah, Mr. Ramadasaiah and Mr. Kempasidaiah **North by**: Sy No.32/12 belongs to Mrs. Lakshmamma **South by**: Sy No.72 belongs to Mr. Rachappa

**ITEM No.9:** All that piece and parcel of the property in bearing Sy. No. 75 (75/P1), measuring 2 acre, situated at Kurubarakarenahalli Village, Bidadi hobli, Ramanagara taluk, Ramanagar district, bounded on, **East by**: Government forest, **West by**: Sy No.36 **North by**: Government forest **South by**: Government Road.

**ITEM No. 10:** All that piece and parcel of the property in bearing old Sy. No.74 new Sy. No.74/1, measuring 1 acre 34 guntas situated at Kurubarakarenahalli Village, Bidadi hobli, Ramanagara taluk, Ramanagar district, bounded on, **East by**: Road, **West by**: Sy No.32/13 belongs to H.G.hanumaiah **North by**: Road, **South by**: Sy No.74/2 land belongs to Mr.R.Ravichandran

**ITEM No. 11:** All that piece and parcel of the property in bearing Sy No.25/1, 37 guntas situated at Kurubarakarenahalli Village, Bidadi hobli, Ramanagara taluk, Ramanagar district, bounded on **East by**: Land Belongs to Siddalingaiah, **West by**: Land Belongs to Somalamma, **North by**: Land Belongs to Muniraju, **South by**: Land Belongs to Lingaraju,

**ITEM No. 12:** All that piece and parcel of the property in bearing Sy. No.25/4, 2 acre 17 Guntas including 8 guntas Karab situated at Kurubarakarenahalli Village, Bidadi hobli, Ramanagara taluk, Ramanagar district, bounded on, **East by**: Land Belongs to Ramamuthaiah, **West by**: Government gundu topu, **North by**: Land Belongs to Lingamma, **South by**: Land Belongs to Lingamma and Lingaramma

**ITEM No. 13:** All that piece and parcel of the property in bearing Sy. No.25/1, 36 guntas out of 2 Acre 32 Guntas situated at Kurubarakarenahalli Village, Bidadi hobli, Ramanagara taluk, Ramanagar district, bounded on, **East by**: Land Belongs to Galappa, **West by**: Land Belongs to Mulasarathi, **North by**: Land Belongs to Mulasarathi, **South by**: Sy No.25/3

**ITEM No. 14:** All that piece and parcel of the property in bearing Sy. No.25/3, measuring 1 Acre 4 guntas situated at Kurubarakarenahalli Village, Bidadi hobli, Ramanagara taluk, Ramanagar district, bounded on, **East by**: Government gomala land, **West by** Land belongs to Mulasarathi, **North by**: Land Belongs to Galappa, **South by**: Land belongs to Mulasarathi

**ITEM No. 15:** Al that piece and parcel of the property in bearing Sy. No.25/5, measuring 33 guntas situated at Kurubarakarenahalli Village, Bidadi hobli, Ramanagara taluk, Ramanagar district bounded on **East by**: Land belongs to Mulasarathi, **West by**: Land belongs to Ramaiah **North by**: Land belongs to Mulasarathi, **South by**: Land belongs to Lingarajamma.

**SCHEDULE- D PROPERTIES**

**ITEM No. 16:** All that piece and parcel of the property being an undeveloped residentially converted land in bearing old Sy.No. 38/4 New Sy. No.38/7, measuring 1 acre 5 guntas situated at Heijala Village, Bidadi hobli, Ramanagara taluk, Ramanagar district (converted vide official memorandum dated 23.05.2016 No.ALN(R)/ CR/ 137-2015-16 issued by deputy commissioner Ramanagara District , bounded on **East by**: Land belongs to H.M. Shanakarappa, **West by**: Land belongs to Rangaiah, **North by**: Land belongs to Munilingaiah, **South by**: Sy.No. 40/2.

**ITEM No.17:** All that piece and parcel of the property being an undeveloped residentially converted land in bearing Sy.No. 40/3 , measuring 1 acre situated at Hejjala Village, Bidadi hobli, Ramanagara taluk, Ramanagar district( converted vide official memorandum dated 23.05.2016 No.ALN(R)/CR/137 2015-16 issued by deputy commissioner Ramanagara District, bounded on; **East by**: Land belongs to Galihanumaiah, **West by**: Railway Road, **North by**: Land belongs to Lakshmamma, **South by**: Land belongs to M.S.Lokanath Naidu

**ITEM No.18:** All that piece and parcel of the property being an undeveloped residentially converted land in bearing old Sy.No. 38/5 New Sy.No.38/8, measuring 1 acre 4 guntas situated at Hejala Village, Bidadi hobli, Ramanagara taluk, Ramanagar district( converted vide official memorandun dated 23.05.2016 No.ALN(R)/CR/ 137-2015-16 issued by deputy commissioner Ramanagara District , bounded on **East by**: Land belongs to Marithimmakka, **West by**: Land belongs to Ranagaiah, **North by**: Land belongs to shankarappa, **South by**: Land belongs to Galihanumaiah.

**ITEM No.19:** All that piece and parcel of the property bearing old Sy.No. 40 New Sy.No.40/2, measuring 2 acre 22 guntas situated at Hejala Village, Bidadi hobli, Ramanagara taluk, Ramanagar District, bounded on **East by**: Road, **West by**: Railway Road, **North by**: Land belongs to Mishinu Chikkathimmaiah, **South by**: Land belongs to Lokesh.

**SCHEDULE- E PROPERTIES**

**ITEM No.20:** All that piece and parcel of the property bearing Sy.No. 96, Eastern side measuring 38.5 guntas out of 3 acre 35 guntas situated at Bannikuppe Village, Bidadi hobli, Ramanagara taluk, Ramanagar District, bounded on- **East by**: Land belongs to Galappa, **West by**: land belongs to Galihanumaiah remaining property of the same Survey Number, **North by**: land belongs to Galihanumaiah remaining property of the same Survey Number, **South by**: land belongs to Galihanumaiah remaining property of the same Survey Number Lokesh.

**ITEM No.21:** All that piece and parcel of the property bearing Sy.No. 96, Western side measuring 38.5 guntas out of 3 acre 35 guntas situated at Bannikuppe Village, Bidadi hobli, Ramanagara taluk, Ramanagar District, bounded on **East by**: land belongs to Galihanumaiah remaining property of the same Survey Number, **West by**: land belongs to Jadenahalli Kullaiah and Chikka haleranagaih, **North by**: land belongs to Galihanumaiah remaining property of the same Survey Number, **South by**: land belongs to Galihanumaiah remaining property of the same Survey Number Lokesh

**ITEM No.22:** All that piece and parcel of the property bearing Sy.No. 96 Northern side measuring 39 guntas out of 3 acre 35 guntas situated at Bannikuppe Village, Bidadi hobli, Ramanagara taluk, Ramanagar District, bounded on, **East by**: land belongs to Galihanumaiah remaining property of the same Survey Number, **West by**: land belongs to Chikkaranagaih **North by**: land belongs to Dodda Narasimhaiah, **South by**: land belongs to Galihanumaiah remainingProperty of the same Survey Number.

**ITEM No.23:** All that piece and parcel of the property bearing Sy.No. 96, Southern side measuring 39 guntas out of 3 acre 35 guntas situated at Bannikuppe Village, Bidadi hobli, Ramanagara taluk, Ramanagar District, bounded on, **East by**: land belongs to Ugraiah and Revanna **West by**: land belongs to Jadenhali Kullaiah and Rangaswamiah, **North by**: land belongs to Galihanumaiah remaining Property of the same Survey Number, **South by**: land belongs to Jadenhalli Kullaiah.

**ITEM No.24:** All that piece and parcel of the property bearing Sy.No. 160, measuring 4 acre 17 guntas including 16 gunta poot Karab situated at Bannikuppe Village, Bidadi hobli, Ramanagara taluk, Ramanagar District, bounded on: **East by**: land belongs to Chikkanarasimahaiah **West by**: land belongs to Revanna, **North by**: land belongs to Narasimhaiah and Chikkanarasimhaiah, **South by**: land belongs to Galappa.

**SCHEDULE- F PROPERTIES**

**ITEM No.25:** All that piece arnd parcel of the property in bearing Gramatana site No.11, Kaneshmari No.32/11,PID No. 150300701900500040 sites formed under Vasathi Yojana by the government in Sy No.94, Measuring East to west northern side 30 Feet(9.144 meter), north to south 55 feet, (16.764 meter), totally Measuring 1650 square feet (153.29 square meter) situated at Jyothinagar, Vajarahalli dakale presently in the limits of Nelamangala Municipal council, Bangalore Rural district, bounded on. **East by**: Site No. 12, **West by**: Site No. 10, **North by**: Vacant Site, **South by**: Road,

Given under my hand and the seal of the court on this 2nd Day of August 2025.

**BY ODER OF COURT**
**SENIOR SHERISTEDAR, CITY CIVIL COURT BENGALURU**

ADVOCATE FOR PLAINTIFF: **NAVAYUGA LAW ASSOCIATES**, ADVOCATES No. 106/E, 16th main, Ground Floor, Vijayanagar, Bengaluru-560040

# ಹರಿದುಬಂದ ಜನಸಾಗರ, ಸಂಚಾರ ದಟ್ಟಣೆ

## ಕುರ್ಚಿಗಳು ಭರ್ತಿ, ರಸ್ತೆಯಲ್ಲೇ ನಿಂತು ಭಾಷಣ ಆಲಿಸಿದ ಜನ
## • ಪ್ರಧಾನಿ ನರೇಂದ್ರ ಮೋದಿ ರಾಜೀನಾಮೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕಳೆದ ಲೋಕಸಭಾ ಚುನಾವಣೆಯಲ್ಲಿ ಮತ ಕಳವು ಆಗಿದೆ ಎಂದು ಆರೋಪಿಸಿ ನಗರದಲ್ಲಿ ಕಾಂಗ್ರೆಸ್ ಪಕ್ಷ ಶುಕ್ರವಾರ ಆಯೋಜಿಸಿದ್ದ ಬೃಹತ್ ಸಮಾವೇಶಕ್ಕೆ ಭಾರಿ ಜನಸಾಗರ ಕಂಡು ಬಂತು. ಕಿಕ್ಕಿರಿದು ಸೇರಿದ್ದ ಜನರು ಕಾಂಗ್ರೆಸ್ ಪರ ಘೋಷಣೆ ಕೂಗಿ ಸಂಭ್ರಮಿಸಿದರು. ರಸ್ತೆಗಳಲ್ಲಿ ಕಾಂಗ್ರೆಸ್ ಬಾವುಟಗಳು, ರಾಹುಲ್ ಗಾಂಧಿ ಕಟೌಟ್‌ಗಳು ರಾರಾಜಿಸಿದವು. ಕಾರ್ಯಕರ್ತರಲ್ಲಿ ಎಲ್ಲೇ ಮೀರಿದ ಸಂಭ್ರಮ ಕಂಡುಬಂತು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಆಯೋಜಿಸಿದ್ದ ಸಮಾವೇಶಕ್ಕೆ ನಗರ ಮಾತ್ರವಲ್ಲದೇ ಹೊರ ಜಿಲ್ಲೆಗಳಿಂದಲೂ ಬಸ್, ಕಾರು ಹಾಗೂ ಇನ್ನಿತರ ವಾಹನಗಳಲ್ಲಿ ಮುಖಂಡರು, ಕಾರ್ಯಕರ್ತರು ಹುರುಪಿನಿಂದಲೇ ಬಂದಿದ್ದರು. ಹತ್ತು ಸಾವಿರ ಜನರಿಗೆ ಆಸನ ವ್ಯವಸ್ಥೆ ಮಾಡಲಾಗಿತ್ತು. ನಿರೀಕ್ಷೆಗಿಂತ ಹೆಚ್ಚು ಜನ ಸೇರಿದ್ದರಿಂದ ಆಸನಗಳಿಗೆ ಪರದಾಡಿದರು. ಹಲವರು ರಸ್ತೆಯಲ್ಲಿ, ಮರದ ಕೆಳಗೆ ನಿಂತುಕೊಂಡೇ ಭಾಷಣ ಆಲಿಸಿದರು.

ರಾಹುಲ್ ಗಾಂಧಿ ಹಾಗೂ ಸಿದ್ದರಾಮಯ್ಯ ಅವರು ವೇದಿಕೆಗೆ ಬರುತ್ತಿದ್ದಂತೆಯೇ ಕಾರ್ಯಕರ್ತರು ಸಿಳ್ಳೆ, ಚಪ್ಪಾಳೆ ತಟ್ಟಿ ಸಂಭ್ರಮಿಸಿದರು.

ಸ್ವಾತಂತ್ರ್ಯ ಉದ್ಯಾನದ ಸುತ್ತಮುತ್ತಲ ರಸ್ತೆಗಳಲ್ಲಿ ಜನಸಾಗರದಿಂದ ಕಿಕ್ಕಿರಿದು ದ್ದವು. ತಡವಾಗಿ ಬಂದವರು ವೇದಿಕೆ ಕಡೆಗೆ ತೆರಳಲು ಯತ್ನಿಸಿದರು. ಪೊಲೀಸರು ಮುಖ್ಯಗೇಟ್ ಬಂದ್ ಮಾಡಿದ್ದರಿಂದ ಅರಮನೆ ರಸ್ತೆ ಹಾಗೂ ಶೇಷಾದ್ರಿ ರಸ್ತೆಯಲ್ಲೇ ಜನರು ನಿಂತಿದ್ದರು. ವೇದಿಕೆ ಕಾರ್ಯಕ್ರಮ ಮುಗಿಯುತ್ತ ಬಂದರೂ ದೂರದ ಊರಿನಿಂದ ಜನರು ಬರುತ್ತಲೇ ಇದ್ದರು.

ಗಾಂಧಿನಗರ, ದಾಸರಹಳ್ಳಿ, ಶಾಂತಿನಗರ, ಚಾಮರಾಜಪೇಟೆ, ಬ್ಯಾಟರಾಯನಪುರ, ಶಿವಾಜಿ ನಗರ, ವಿಜಯನಗರ, ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರಗಳ ಮುಖಂಡರ ನೇತೃತ್ವದಲ್ಲಿ ಜನರು ಮೆರವಣಿಗೆಯಲ್ಲಿ ಬಂದರು.

'ಬಿಜೆಪಿಗೆ ಧಿಕ್ಕಾರ, ನರೇಂದ್ರ ಮೋದಿಗೆ ಧಿಕ್ಕಾರ' ಎಂದು ಕೂಗಿದರು. ಮತ ಕಳ್ಳತನ ಮೂಲಕ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿರುವ ನರೇಂದ್ರ ಮೋದಿ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಸೇರಿದಂತೆ ಹಲವು ನಾಯಕರ ಭಾವಚಿತ್ರ ಹಿಡಿದು ಕಾರ್ಯಕರ್ತರು ಜಯಘೋಷ ಮೊಳಗಿಸಿದರು. ಕಾಂಗ್ರೆಸ್ ಧ್ವಜಗಳು ರಾರಾಜಿಸುತ್ತಿದ್ದವು.

ಗಾಂಧಿ ನಗರ ಸರ್ಕಲ್, ಅರಮನೆ ರಸ್ತೆ, ಶೇಷಾದ್ರಿ ರಸ್ತೆ, ಸೆಂಟ್ರಲ್ ಕಾಲೇಜು, ಮೈಸೂರು ಬ್ಯಾಂಕ್ ವೃತ್ತ ಸುತ್ತಮುತ್ತ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಜಮಾಯಿಸಿದ್ದರು. ಇದರಿಂದ ದಟ್ಟಣೆ ಸಮಸ್ಯೆ ಉಂಟಾಗಿತ್ತು. ಸಮಾವೇಶ ಮುಗಿದ ನಂತರ ಎಲ್ಲ ವಾಹನಗಳು ಒಮ್ಮೆಗೇ ಹೊರ ಹೋಗಲು ಮುಂದಾಗಿದ್ದರಿಂದ ಸಚಿವರಾದಿಯಾಗಿ ಎಲ್ಲರ ವಾಹನಗಳು ಅರ್ಧ ಗಂಟೆಗೂ ಹೆಚ್ಚು ಕಾಯುವಂತಾಯಿತು.

ನಗರದಲ್ಲಿ ವಾಹನಗಳ ದಟ್ಟಣೆ ಜೊತೆಗೆ ಜನದಟ್ಟಣೆ ತೀವ್ರವಾಗಿತ್ತು. ವಾಹನಗಳು ಹಾಗೂ ಜನರನ್ನು ನಿಯಂತ್ರಿಸಲು ಪೊಲೀಸರು ಹರಸಾಹಸ ಪಟ್ಟರು.

ಸಮಾವೇಶಗಳಿಗೆ ಜನರನ್ನು ಕರೆತರಲು ಆಯೋಜಕರು ವಾಹನ, ಊಟ, ಕುಡಿಯುವ ನೀರು ವ್ಯವಸ್ಥೆ ಮಾಡಿದ್ದರು. ಮೆಟ್ರೊದಲ್ಲಿ ಪ್ರಯಾಣಿಸಲು ಪೇಪರ್ ಟಿಕೆಟ್ ನೀಡಲಾಗಿತ್ತು. ವೇದಿಕೆಯ ಸುತ್ತಮುತ್ತಲಿನ ರಸ್ತೆಗಳಲ್ಲಿ ಖಾಸಗಿ ವಾಹನಗಳ ಓಡಾಟಕ್ಕೆ ಪೊಲೀಸರು ನಿರ್ಬಂಧ ವಿಧಿಸಿ, ಪರ್ಯಾಯ ವ್ಯವಸ್ಥೆ ಮಾಡಿದ್ದರು.

ನಗರದಲ್ಲಿ ಕಾಂಗ್ರೆಸ್ ಪಕ್ಷ ಆಯೋಜಿಸಿದ್ದ ಸಮಾವೇಶದ ಹಿನ್ನೆಲೆಯಲ್ಲಿ ಮುಖ್ಯ ಚುನಾವಣಾಧಿಕಾರಿ ಕಚೇರಿಗೆ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.
ಚಿತ್ರ: ಕಿಶೋರ್ ಕುಮಾರ್ ಬೋಳಾರ್

### ಪೊಲೀಸ್ ಭದ್ರತೆ

ಸ್ವಾತಂತ್ರ್ಯ ಉದ್ಯಾನದ ಸುತ್ತಮುತ್ತಲೂ ಭದ್ರತೆಗಾಗಿ ಆರು ಸಾವಿರ ಪೊಲೀಸರನ್ನು ನಿಯೋಜಿಸಿ, ಸ್ಥಳದಲ್ಲಿ ತಾತ್ಕಾಲಿಕ ಕಂಟ್ರೋಲ್ ರೂಮ್ ತೆರೆಯಲಾಗಿತ್ತು. ಲೋಹ ಶೋಧ ಯಂತ್ರ ಮೂಲಕ ತಪಾಸಣೆ ಮಾಡಿ ಒಳಗೆ ಬಿಡಲಾಯಿತು. 500ಕ್ಕೂ ಅಧಿಕ ಪೊಲೀಸರು ಭದ್ರತೆಗಾಗಿ ನಿಯೋಜನೆಗೊಂಡಿದ್ದರು.

ಸಮಾವೇಶದಲ್ಲಿ ಪಾಲ್ಗೊಂಡಿದ್ದ ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು   ಪ್ರಜಾವಾಣಿ ಚಿತ್ರ

## ಚುನಾವಣಾ ಆಯೋಗದಿಂದ ಸ್ಥಳ ಪರಿಶೀಲನೆ?

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಹದೇವಪುರ ವಿಧಾನ ಸಭಾ ಕ್ಷೇತ್ರದ ಕೆಲವು ಸಣ್ಣ ಮನೆಗಳಲ್ಲಿ ಹತ್ತಾರು ಮಂದಿ ಮತದಾರರು ನೋಂದಣಿ ಮಾಡಿಕೊಂಡಿದ್ದ ವಿಳಾಸಗಳಿಗೆ ಸರ್ಕಾರದ ಕೆಲ ಅಧಿಕಾರಿಗಳು ಶುಕ್ರವಾರ ಭೇಟಿ ನೀಡಿ ಪರಿಶೀಲಿಸಿದ್ದಾರೆ.

ಮಹದೇವಪುರದ ಮುನಿರೆಡ್ಡಿ ಗಾರ್ಡನ್‌ನ 35ನೇ ನಂಬರ್ ಮನೆ, ತುಳಸಿ ಟಾಕೀಸ್ ಹಿಂಬದಿ ರಸ್ತೆಯ ಮನೆ ಮತ್ತು 153 ಬೈರಿ ಕ್ಲಬ್‌ಗೆ ಅಧಿಕಾರಿಗಳು ಭೇಟಿ ನೀಡಿದ್ದಾರೆ. ಇದು ಚುನಾವಣಾ ಆಯೋಗದ ಅಧಿಕೃತ ಆದೇಶದ ಮೇರೆಗೆ ನಡೆದ ಪರಿಶೀಲನೆಯೇ ಎಂಬುದು ದೃಢಪಟ್ಟಿಲ್ಲ.

'ಈ ವಿಳಾಸದಲ್ಲಿ ನೋಂದಾಯಿಸಿದ ಒಬ್ಬ ಮತದಾರರೂ ಸ್ಥಳದಲ್ಲಿಲ್ಲ' ಎಂದು ಮೂಲಗಳು ಖಚಿತಪಡಿಸಿವೆ.

ಮುನಿರೆಡ್ಡಿ ಗಾರ್ಡನ್‌ನ 35ನೇ ನಂಬರ್‌ನ ಮನೆಯಲ್ಲಿ 80 ಮಂದಿ ಮತದಾರರು ನೋಂದಾಯಿಸಿದ್ದು, ಒಬ್ಬರೂ ಆ ಮನೆಯಲ್ಲಿ ಇಲ್ಲ. ಅದೇ ಬೀದಿಯಲ್ಲಿ 30ಕ್ಕೂ ಹೆಚ್ಚು ಮನೆಗಳನ್ನು ಬಾಡಿಗೆಗೆ ನೀಡಿರುವ ಜಯರಾಮ್ ಎಂಬುವವರು, 'ಈ 80ರಲ್ಲಿ ಒಬ್ಬರಿಗೂ ನಾನು ಮನೆ ಬಾಡಿಗೆಗೆ ನೀಡಿಲ್ಲ. ಅವರನ್ನು ಇಲ್ಲಿ ನೋಡಿಯೇ ಇಲ್ಲ' ಎಂದಿದ್ದಾರೆ.

ಇನ್ನು 153 ಬೈರಿ ಕ್ಲಬ್‌ನ ವಿಳಾಸದಲ್ಲಿ ನೋಂದಣಿಯಾಗಿರುವ ಮತದಾರರ ಬಗ್ಗೆ ವಿಚಾರಿಸಿದಾಗ ಅದರ ಮಾಲೀಕರು, 'ಜನವರಿಯಲ್ಲಿ ಮ್ಯಾನೇಜ್‌ಮೆಂಟ್ ಬದಲಾಗಿದೆ. ಈ ವಿಳಾಸದಲ್ಲಿ ನೋಂದಣಿಯಾಗಿರುವ 68 ಮಂದಿಯಲ್ಲಿ ಯಾರೊಬ್ಬರೂ ಈಗ ಇಲ್ಲಿ ಕೆಲಸ ಮಾಡುತ್ತಿಲ್ಲ' ಎಂದಿದ್ದಾರೆ.

ತುಳಸಿ ಟಾಕೀಸ್ ಹಿಂಬದಿ ರಸ್ತೆಯ ಮನೆಯಲ್ಲಿ 46 ಮಂದಿ ಮತದಾರರು ನೋಂದಣಿ ಮಾಡಿದ್ದು, ಅವರಲ್ಲಿ ಯಾರೊಬ್ಬರೂ ಅಲ್ಲಿ ಇಲ್ಲ ಎಂಬುದು ತಿಳಿದುಬಂದಿದೆ.

ಪರಿಶೀಲನೆ ಬಗ್ಗೆ ವಿಚಾರಿಸಿದಾಗ ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ್, 'ಪರಿಶೀಲನೆ ನಡೆಸುವಂತೆ ಚುನಾವಣಾ ಆಯೋಗದಿಂದ ನಮಗೆ ಯಾವುದೇ ನಿರ್ದೇಶನ ಬಂದಿಲ್ಲ' ಎಂದರು.

ಚುನಾವಣಾ ಆಯೋಗದ ಕಚೇರಿ ಸಂಖ್ಯೆಗೆ ಕರೆ ಮಾಡಿದಾಗ ಸ್ವೀಕರಿಸಲಿಲ್ಲ.

## 'ಪ್ರಮಾಣಪತ್ರ ಸಲ್ಲಿಸದೇ ರಾಹುಲ್ ಪಲಾಯನ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ರಾಹುಲ್ ಗಾಂಧಿ ತಮ್ಮ ವೈಫಲ್ಯ ಮುಚ್ಚಿಕೊಳ್ಳಲು ಸಾಂವಿಧಾನಿಕ ಸಂಸ್ಥೆಗಳ ಮೇಲೆ ಆರೋಪ ಮಾಡಿ ಪ್ರಜಾತಂತ್ರ ವ್ಯವಸ್ಥೆ ನಿಷ್ಕ್ರಿಯಗೊಳಿಸಲು ಹೊರಟಿದ್ದಾರೆ. ತಮ್ಮ ಆರೋಪಗಳಿಗೆ ಪೂರಕವಾಗಿ ಚುನಾವಣಾ ಆಯೋಗಕ್ಕೆ ಪ್ರಮಾಣಪತ್ರ ಸಲ್ಲಿಸದೇ ಪಲಾಯನ ಮಾಡಿದ್ದಾರೆ' ಎಂದು ಸಂಸದ ಬಸವರಾಜ ಬೊಮ್ಮಾಯಿ ಆರೋಪಿಸಿದ್ದಾರೆ.



ಬಸವರಾಜ ಬೊಮ್ಮಾಯಿ

'ಚುನಾವಣಾ ಆಯೋಗ ಯಾವ ರೀತಿ ಕೆಲಸ ಮಾಡುತ್ತದೆ. ಜನಪ್ರತಿನಿಧಿ ಕಾಯ್ದೆ ಏನು ಹೇಳುತ್ತದೆ ಎನ್ನುವ ಜ್ಞಾನ ರಾಹುಲ್‌ಗಾಂಧಿಗೆ ಇದೆಯೋ ಇಲ್ಲವೊ ಗೊತ್ತಿಲ್ಲ. ಆದರೆ ಸುಳ್ಳನ್ನು ಸತ್ಯ ಮಾಡಲು ಹೊರಟಿದ್ದಾರೆ' ಎಂದು ಸುದ್ದಿಗಾರರ ಜತೆ ಮಾತನಾಡಿ ತಿಳಿಸಿದರು.

ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಮೂರು ಬಾರಿ ಸೋತಿದ್ದರಿಂದ ರಾಹುಲ್ ನಾಯಕತ್ವದ ಬಗ್ಗೆ ಕಾಂಗ್ರೆಸ್‌ನಲ್ಲಿ ಅಪಸ್ವರ ಇದೆ. ಅದನ್ನು ಮರೆಮಾಚಲು ಚುನಾವಣಾ ಆಯೋಗದ ವಿರುದ್ಧ ಮಿಥ್ಯಾರೋಪ ಮಾಡುತ್ತಿದ್ದಾರೆ' ಎಂದರು.

'ಕಳೆದ ವಿಧಾನಸಭಾ ಚುನಾವಣೆಯಲ್ಲಿ 136 ಸ್ಥಾನಗಳನ್ನು ಗೆಲ್ಲುತ್ತೇವೆ ಎಂದು ಡಿ.ಕೆ.ಶಿವಕುಮಾರ್ ಮೊದಲೇ ಹೇಳಿದ್ದರು. ಅದರ ಬಗ್ಗೆ ಗುಮಾನಿ ಎದ್ದಿತ್ತು. ಹಾಗಿದ್ದರೆ ಅವರು ಗೋಲ್‌ಮಾಲ್ ಮಾಡಿದ್ದಾರಾ? ಮಹದೇವಪುರದಲ್ಲಿ ಒಂದು ಲಕ್ಷ ಮತದಾರರು ಹೆಚ್ಚಳವಾಗಿದ್ದಾರೆ. ಅವರಲ್ಲಿ ಎಷ್ಟು ಜನ ಯಾರಿಗೆ ಮತ ಹಾಕಿದ್ದಾರೆ ಎಂದು ಯಾರಿಗಾದರೂ ಗೊತ್ತಿದೆಯಾ' ಎಂದು ಬೊಮ್ಮಾಯಿ ಪ್ರಶ್ನಿಸಿದರು.

'ಚುನಾವಣಾ ಆಯೋಗವು ಪ್ರತಿ ಬೂತ್‌ನಲ್ಲಿ ಏಜೆಂಟ್ 1, ಏಜೆಂಟ್ 2 ಎಂದು ಎಲ್ಲ ಪಕ್ಷದವರನ್ನೂ ನೇಮಿಸುತ್ತದೆ. ಅವರನ್ನು ಮುಂದಿಟ್ಟುಕೊಂಡೇ ಮತದಾರರ ಪಟ್ಟಿ ಸಿದ್ಧಪಡಿಸುತ್ತಾರೆ. ಆಗ ಕಾಂಗ್ರೆಸ್ ಏಜೆಂಟರು ಇರಲಿಲ್ಲವಾ? ಚುನಾವಣಾ ಆಯೋಗ ರಾಹುಲ್‌ಗಾಂಧಿ ಅವರಿಗೆ ಈ ಪ್ರಶ್ನೆಯನ್ನು ಕೇಳಿತ್ತು. ಸತ್ಯ ಬೇಕಿಲ್ಲದ ರಾಹುಲ್ ಹಿಟ್ ಅಂಡ್ ರನ್ ಮಾಡುತ್ತಿದ್ದಾರೆ. ಪ್ರಜಾತಂತ್ರಕ್ಕೆ ಅಪಾಯಕಾರಿ ಆಟ ಆಡುತ್ತಿದ್ದಾರೆ' ಎಂದು ದೂರಿದರು.

### 'ಮತದಾರರಿಗೆ ರಾಹುಲ್ ಅಪಮಾನ'

'ಮಹದೇವಪುರ ಕ್ಷೇತ್ರದಲ್ಲಿ 'ಮತಕಳ್ಳತನ' ನಡೆದಿದೆ ಎಂದು ಆರೋಪ ಮಾಡುವ ಮೂಲಕ ರಾಹುಲ್ ಗಾಂಧಿ ಅವರು 'ಅಪಕ್ವತೆ' ಪ್ರದರ್ಶಿಸಿದ್ದಾರೆ. ಅವರ ಆರೋಪಗಳೆಲ್ಲವೂ ಹಸಿ ಸುಳ್ಳು ಎಂದು ಸಾಬೀತಾಗಿದೆ' ಎಂದು ಮಾಜಿ ಸಚಿವ ಅರವಿಂದ ಲಿಂಬಾವಳಿ ಹೇಳಿದರು.

ರಾಹುಲ್ ಪ್ರಸ್ತಾಪಿಸಿದ್ದ ಪ್ರಕರಣಗಳ ಆರೋಪಕ್ಕೆ ಸಂಬಂಧಿಸಿದಂತೆ ಮತದಾರರ ಪಟ್ಟಿ, ಬೂತ್ ಏಜೆಂಟರ ಪಟ್ಟಿ, ಕೆಲವು ವ್ಯಕ್ತಿಗಳು ಮತ ಚಲಾಯಿಸಿದ ದಾಖಲೆಗಳ ಸಮೇತ ಅವರು ಸುದ್ದಿಗೋಷ್ಠಿಯಲ್ಲಿ ವಿವರ ನೀಡಿದರು.

ಗುರುಕಿರಾಟ್ ಸಿಂಗ್ ಎಂಬುವರ ಹೆಸರು ಮತದಾರರ ಪಟ್ಟಿಯಲ್ಲಿ ನಾಲ್ಕು ಕಡೆ ಇದೆ ಎಂದು ಹೇಳಿದ್ದಾರೆ. ಇವರ ಮಾಹಿತಿ ಪರಿಶೀಲಿಸಿದಾಗ ನಾಲ್ಕು ಬಾರಿ ಮತದಾರರ ಪಟ್ಟಿಗೆ ಸೇರಿಸಲು ಅವರು ಪ್ರಯತ್ನಿಸಿದ್ದರು. ನಾಲ್ಕು ಬಾರಿ ತಿರಸ್ಕೃತವಾಗಿತ್ತು. ಮತದಾರರ ಪಟ್ಟಿ ಬಂದಾಗ ನಾಲ್ಕು ಕಡೆಯೂ ಅವರ ಹೆಸರಿತ್ತು. ಅದರ ಬೆನ್ನಲ್ಲೇ ಮೂರು ಕಡೆ ಹೆಸರು ತೆಗೆದುಹಾಕಲು ಫಾರಂ 7 ಕೊಟ್ಟಿದ್ದರ ಪ್ರತಿಯನ್ನು ಅವರು ಪ್ರದರ್ಶಿಸಿದರು. ಬೂತ್ ನಂಬರ್ 513 ರಲ್ಲಿ ಮಾತ್ರ ಒಂದೇ ಕಡೆ ಅವರು ಮತದಾನ ಮಾಡಿದ್ದಾರೆ ಎಂದು, ಬೂತ್ ಏಜೆಂಟ್ ಗುರುತು ಹಾಕಿದ್ದ ಪ್ರತಿಯನ್ನು ಲಿಂಬಾವಳಿ ತೋರಿಸಿದರು.

ಬಲ್ಕ್ ಮತದಾರರ ವಿಷಯವನ್ನು ಪ್ರಸ್ತಾಪಿಸಿದ ಅವರು, 'ರಾಹುಲ್ ಗಾಂಧಿ ಹೇಳಿದ ನಿರ್ದಿಷ್ಟ ಬೂತ್‌ನಲ್ಲಿ ಒಂದು ಕೊಠಡಿ ಪರಿಶೀಲಿಸಿದೆ. ಆದರೆ, ಅಲ್ಲಿ 80 ಜನರ ಮತದಾರರ ಹೆಸರು ಇರುವುದು ನಿಜ. ಆದರೆ ಅದು ಕೊಠಡಿಯಲ್ಲ, ಅದೊಂದು ಡಾರ್ಮೆಟ್ರಿಯಾಗಿದ್ದು, 80ರಲ್ಲಿ 6 ಜನ ಮಾತ್ರ ನಮಗೆ ಸಿಕ್ಕಿದರು. ಅವರೆಲ್ಲ ವಲಸೆ ಕಾರ್ಮಿಕರಾಗಿದ್ದಾರೆ' ಎಂದು ಹೇಳಿದರು.

## ಆಯೋಗಕ್ಕೆ ಕಾಂಗ್ರೆಸ್ ದೂರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಮಹದೇವಪುರ ವಿಧಾನ ಸಭಾ ಕ್ಷೇತ್ರ ಸೇರಿದಂತೆ ರಾಜ್ಯದ ವಿವಿಧ ಕಡೆ ಚುನಾವಣಾ ಆಯೋಗದಿಂದಲೇ ಮತ ಅಕ್ರಮ ನಡೆದಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಕಾಂಗ್ರೆಸ್ ಮುಖಂಡರ ನಿಯೋಗವು ರಾಜ್ಯ ಮುಖ್ಯ ಚುನಾವಣಾಧಿಕಾರಿ ವಿ. ಅನ್ಬುಕುಮಾರ್ ಅವರಿಗೆ ಶುಕ್ರವಾರ ದೂರು ಸಲ್ಲಿಸಿತು.

ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್, ಶಾಸಕ ಎನ್.ಎ. ಹ್ಯಾರಿಸ್, ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ ಅವರು ನಿಯೋಗದಲ್ಲಿದ್ದರು.

ನಂತರ ಮಾತನಾಡಿದ ಡಿ.ಕೆ. ಶಿವಕುಮಾರ್, 'ಇಡೀ ರಾಜ್ಯದಲ್ಲಿ ಮತದಾರರ ಪಟ್ಟಿಯಲ್ಲಿನ ಅಕ್ರಮದ ಪರಿಶೀಲನೆ ಮಾಡಲು ಚುನಾವಣಾ ಆಯೋಗಕ್ಕೆ ಮನವಿ ಮಾಡಿದ್ದೇವೆ' ಎಂದರು.

'ರಾಜ್ಯದ ಕೆಲವು ಭಾಗಗಳಲ್ಲಿ ಮತದಾರರ ಪಟ್ಟಿಯಲ್ಲಿ ಅನ್ಯಾಯವಾಗಿದೆ. ಈ ಅಕ್ರಮವನ್ನು ಪತ್ತೆ ಹಚ್ಚಿ, ಚುನಾವಣಾ ಅಧಿಕಾರಿ, ಬಿಎಲ್‌ಒ ಸೇರಿದಂತೆ ಯಾರೇ ಭಾಗಿ ಆಗಿದ್ದರೂ ಕ್ರಮ ತೆಗೆದುಕೊಳ್ಳಬೇಕು ಎಂದು ಮನವಿಯಲ್ಲಿ ಒತ್ತಾಯಿಸಿದ್ದೇವೆ. ಮಹದೇವಪುರ ಮತ್ತು ಗಾಂಧಿನಗರ ಕ್ಷೇತ್ರದಲ್ಲಿ ನಡೆದ ಮತ ಕಳ್ಳತನದ ವಿವರ ಸಲ್ಲಿಸಿಲ್ಲ' ಎಂದರು.

'ಒಂದೇ ಮತದಾರರ ಹೆಸರನ್ನು ಐದು ಕಡೆ ಸೇರಿಸುವುದು, ಮನೆ ವಿಳಾಸ ಇಲ್ಲದೆ ಮತಪಟ್ಟಿಯಲ್ಲಿ ಹೆಸರು ಸೇರಿಸುವುದು, ಖಾಲಿ ನಿವೇಶನಗಳ ವಿಳಾಸದಲ್ಲಿ ನಕಲಿ ಮತ ಸೇರಿಸುವುದು, ಮತಗಳನ್ನು ಪಕ್ಕದ ಬೂತ್‌ಗಳಿಗೆ ವರ್ಗಾಯಿಸಿ ಅಕ್ರಮ ಎಸಗಿರುವುದಕ್ಕೆ ಸಾಕಷ್ಟು ದಾಖಲೆಗಳಿವೆ. ಹೀಗಾಗಿ ನಾವು ಆಯೋಗಕ್ಕೆ 8-10 ಅಂಶಗಳಿಗೆ ಸಂಬಂಧಿಸಿದ ಮನವಿ ಸಲ್ಲಿಸಿದ್ದೇವೆ. ಮತದಾರರ ಪಟ್ಟಿಯ ಡಿಜಿಟಲ್ ಮಾದರಿ ಸೇರಿದಂತೆ ನಮಗೆ ಯಾವ ರೀತಿ ಮಾಹಿತಿ ಬೇಕೆಂದು ಆಯೋಗಕ್ಕೆ ಕೇಳಿದ್ದೇವೆ' ಎಂದೂ ಹೇಳಿದರು.

'ಮನವಿಯ ಕುರಿತು ಪರಿಶೀಲನೆ ಆರಂಭಿಸಿರುವುದಾಗಿ ಚುನಾವಣಾಧಿಕಾರಿ ಅನ್ಬುಕುಮಾರ್ ತಿಳಿಸಿದ್ದಾರೆ' ಎಂದೂ ಹೇಳಿದರು.

## PUBLIC NOTICE

NOTICE is hereby given to the public that we are investigating the right, title, interest, benefits, entitlements of whatsoever nature of the respective owners of lands situated at Rajaghatta Village, Kasaba Hobli, Doddaballapura Taluk, Bengaluru Rural District which are more particularly described in the Schedule hereunder written and hereinafter collectively referred to as the **"Schedule Property".** Our client **("Client")** is desirous of entering into a sale transaction of the Schedule Property with the respective owners of the Schedule Property who have represented to our Client that they are the absolute owners of their respective extents in the Schedule Property with rights of alienation over the same.

ALL persons including an individual, a Hindu Undivided Family, a company, banks, financial institution(s), non- banking financial institution(s), a firm, an association of persons or a body of individuals whether incorporated or not, lenders and/or creditors having any objection, claim, right, title and/or interest in respect of Schedule Property or any part or portion thereof by way of sale, memorandum of understanding, exchange, mortgage, pledge, charge, gift, trust, inheritance, bequest, succession, family arrangement, grant, possession, lease, sub-lease tenancy, sub-tenancy, maintenance easement, license, bequeath, share, assignment, lien, attachment, development rights, covenant, settlement right of way, lis pendens, reservation, agreement, FSI consumption, development rights, order/decree/judgement of court or any liability or commitment or otherwise or demand of any nature whatsoever are hereby requested to inform the same in writing, supported with the original documents, to the undersigned having their office at 6/12, Gurappa Avenue, Primrose Road Bengaluru 560 025 within a period of 15 (Fifteen) days from the date of publication of this notice, failing which, the claim or claims, if any, of such person or persons shall be considered to have been waived and/or abandoned and our Client would be at liberty to proceed with the sale transaction in connection with the Schedule Property.

**SCHEDULE PROPERTY**

| Sl No | Sy No. | Extent | | Boundaries | | | | Present owner's name |
|---|---|---|---|---|---|---|---|---|
| | | Acres | Guntas | East By | West By | North By | South By | |
| RAJAGHATTA VILLAGE, DODDABALLAPURA TALUKA, BENGALURU RURAL | | | | | | | | |
| 1. | 179/3 | 1 | 33 | Krishnappa's Land | C R Nataraj's Land | Prasad M V's Land | Tank bed of Shivapura Lake | Ramanjanappa |
| 2 | 180 | 4 | 12 | Late Manjunath and Children's Land, Ramanjanappa's land | Hanumaiah and Children's Land | Late Rajanna's Land, Cart Track leading from Nandi hill Road to Survey no.180 | Tank bed of Shivapura Lake | C R Nataraj |
| 3. | 182/2 | 0 | 10 | C R Nataraj's Land | Remaining Land of 182/2 | Land belongs to: Nirmala Thangaraj, Asumptha Ramani. Maria Swarna Thangaraj | Hanumaiah and Children's Land | i. Dayanand H<br>ii. Jayalakshmamma |
| 4. | 183/3<br>183/4 | 1 | 27 | Rani Sathish's Land | Rathnamma's Land | Government Road, Temple | Hanumaiah and Children's Land | i. Nirmala Thangaraj<br>ii. Asumptha Ramani<br>iii. Maria Swarna Thangaraj |

**Mr. S T Prashantha Kumar,** Senior Partner
**Mr. B.C. Keerthi Kishore,** Practice Head
**Fox Mandal & Associates, Solicitors & Advocates,**
FM House, 6/12, Primrose Road, Bangalore – 560025, Karnataka, India
Phone: +91 80 2559 5911, e-mail : prashantha.kumar@foxmandal.in

Dated: 09/08/2025

## ಪರಿಷತ್‌ಗೆ ನಾಮನಿರ್ದೇಶನ: ರಾಹುಲ್ ಚರ್ಚೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪ್ರತಿಭಟನಾ ಸಮಾವೇಶಕ್ಕಾಗಿ ನಗರಕ್ಕೆ ಬಂದಿದ್ದ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು, ವಿಧಾನ ಪರಿಷತ್‌ನಲ್ಲಿ ಖಾಲಿ ಇರುವ ನಾಲ್ಕು ಸ್ಥಾನಗಳಿಗೆ ಅಭ್ಯರ್ಥಿಗಳ ನಾಮನಿರ್ದೇಶನಕ್ಕೆ ಪಟ್ಟಿ ಅಂತಿಮಗೊಳಿಸುವ ಬಗ್ಗೆ ಕಾಂಗ್ರೆಸ್ ನಾಯಕರ ಜತೆ ಚರ್ಚೆ ನಡೆಸಿದ್ದಾರೆ.

ಸಮಾವೇಶದ ಬಳಿಕ ರಾಹುಲ್ ಅವರು ಸದಾಶಿವನಗರದಲ್ಲಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸಕ್ಕೆ ತೆರಳಿದರು. ಖರ್ಗೆ ಜೊತೆ ರಾಹುಲ್ ಭೋಜನ ಸೇವಿಸಿದರು. ಈ ವೇಳೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಸಚಿವ ಪ್ರಿಯಾಂಕ್ ಖರ್ಗೆ ಕೂಡಾ ಇದ್ದರು.

ಬಳಿಕ ಖರ್ಗೆ ಜೊತೆ ತಾಜ್ ವೆಸ್ಟೆಂಡ್ ಹೋಟೆಲ್‌ಗೆ ತೆರಳಿದ ರಾಹುಲ್, ಅಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಜೊತೆ ಕೆಲಹೊತ್ತು ಸಭೆ ನಡೆಸಿದರು.

## 'ಒಳ ಮೀಸಲಾತಿ ವರದಿ ಸರಿ ಇಲ್ಲ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಒಳಮೀಸಲಾತಿಗೆ ಸಂಬಂಧಿಸಿದಂತೆ ನ್ಯಾ. ನಾಗಮೋಹನ ದಾಸ್ ನೇತೃತ್ವದ ಆಯೋಗ ಸಲ್ಲಿಸಿರುವ ವರದಿ ಕಗ್ಗಂಟಾಗಿ ಪರಿಣಮಿಸಿದೆ. ಅದರಲ್ಲಿ ಅನೇಕ ತಪ್ಪುಗಳಾಗಿದ್ದು, ಸರಿಪಡಿಸುವ ಮೂಲಕ ಎಲ್ಲರಿಗೂ ನ್ಯಾಯ ಒದಗಿಸಬೇಕು. ಈ ಸಂಬಂಧ ಎದ್ದಿರುವ ಕೂಗು ಸರಿ ಇದೆ ಎಂದು ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಡಿ.ಜಿ. ಸಾಗರ್ ತಿಳಿಸಿದರು.

**ಎಸ್‌ಸಿ/ಎಸ್‌ಟಿ ದಲಿತರ ಜ್ವಲಂತ ಸಮಸ್ಯೆಗಳು:** ಮೀಸಲಾತಿ ಏರಿಕೆ ರದ್ದು, ಪಿಟಿಸಿಎಲ್ ಕಾಯ್ದೆ ವಿರುದ್ಧ ಕೋರ್ಟ್ ತೀರ್ಪುಗಳು ಮತ್ತು ಪರಿಹಾರಗಳು- ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ಒಳ ಮೀಸಲಾತಿಗಾಗಿ ಸಮೀಕ್ಷೆ ನಡೆಸಲು 65 ಸಾವಿರ ಶಿಕ್ಷಕರನ್ನು ನಿಯೋಜಿಸುವ ಮೂಲಕ ಸರ್ಕಾರ ಒಳ್ಳೆಯ ಕೆಲಸ ಮಾಡಿತ್ತು. ಆದರೆ, ಅವರಿಗೆ ಸರಿಯಾದ ತರಬೇತಿ ಇಲ್ಲದೇ ಇರುವುದು, ಮೊಬೈಲ್ ಆ್ಯಪ್‌ಗಳ ಬಳಕೆ-ನೆಟ್‌ವರ್ಕ್ ಸಮಸ್ಯೆ ಇನ್ನಿತರ ಕಾರಣಗಳಿಂದ ಸಮೀಕ್ಷೆಯಲ್ಲಿ ವ್ಯತ್ಯಾಸಗಳಾಗಿವೆ ಎಂದು ಹೇಳಿದರು.

ಆದಿ ದ್ರಾವಿಡ (ಎಡಿ), ಆದಿ ಕರ್ನಾಟಕ (ಎಕೆ), ಆದಿ ಆಂಧ್ರ (ಎಎ) ಎಂಬುದು ಜಾತಿಗಳೇ ಅಲ್ಲ. ಎಸ್‌ಸಿಯಲ್ಲಿ 101 ಜಾತಿಗಳಲ್ಲ. 98 ಮಾತ್ರ ಇರುವುದು ಎಂದು ಹಿಂದೆ ಸರ್ಕಾರ, ಆಯೋಗ ಹೇಳಿತ್ತು. ಆದರೆ, ಈಗ ಒಳಮೀಸಲಾತಿ ಶಿಫಾರಸ್ಸಿನಲ್ಲಿ ಎಡಿ, ಎಕೆ, ಎಎ ಸಮುದಾಯಗಳು ಶೇ 4ರಷ್ಟಿದ್ದಾರೆ ಎಂದು ಹೇಳಿ, ಅವರಿಗೆ ಶೇ 1ರಷ್ಟು ಮೀಸಲಾತಿ ನೀಡಲು ಶಿಫಾರಸು ಮಾಡಿರುವುದು ವಿಪರ್ಯಾಸ ಎಂದರು.

ಜಾತಿಗಳನ್ನು ಒಡೆದು 'ಇ' ಗುಂಪು ಸೃಷ್ಟಿಸಿರುವುದು ಸರಿಯಲ್ಲ. ಸಾಮಾಜಿಕ ಹಿನ್ನೆಲೆಯನ್ನು ಗಮನಿಸದೇ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ 'ಇ' ಗುಂಪು ಸೃಷ್ಟಿಸಿದ್ದಾರೆ. ಇಷ್ಟಾಗಿಯೂ ಬೇಡ ಜಂಗಮರು 'ಇ' ಗುಂಪಿನಲ್ಲಿ ಇಲ್ಲ. ಅವರನ್ನು 'ಎ' ಗುಂಪಿಗೆ ಸೇರಿಸಲಾಗಿದೆ. ಸಾಮಾಜಿಕವಾಗಿ ಮುಂದುವರಿದಿರುವ ಜಾತಿಗಳ ಗುರುಗಳು ಅವರು. ಅವರನ್ನು ಆದ್ಯತೆಯ 'ಎ' ಗುಂಪಿಗೆ ಸೇರಿಸಿರುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ವಿಚಾರಸಂಕಿರಣದಲ್ಲಿ ವೆಂಕಟಯ್ಯ, ಅಣ್ಣಯ್ಯ, ಶ್ರೀಧರ್ ಕಲಿವೀರ, ಡಿ.ಜಿ.ಸಾಗರ್ ಅವರು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು – ಪ್ರಜಾವಾಣಿ ಚಿತ್ರ

ದಲಿತ ಸಂಘರ್ಷ ಸಮಿತಿಯ ರಾಜ್ಯ ನಾಯಕ ಶ್ರೀಧರ್ ಕಲಿವೀರ ಮಾತನಾಡಿ, 'ದಲಿತರು ಭೂಮಿಯನ್ನು ವಿವಿಧ ಕಾರಣದಿಂದ ಕಳೆದುಕೊಂಡಿರುವುದನ್ನು ಮರಳಿ ಪಡೆಯಬೇಕಿದ್ದರೆ ಪಿಟಿಸಿಎಲ್ (ಕೆಲವು ಜಮೀನುಗಳ ಪರಭಾರೆ ನಿಷೇಧ) ಕಾಯ್ದೆಗೆ ತಿದ್ದುಪಡಿ ಮಾಡಬೇಕು. ಸರ್ಕಾರದಲ್ಲಿರುವ ಮನುವಾದಿ ಅಧಿಕಾರಿಗಳು ಬೇಕೆಂದೇ 'ಕೆಲವು ಜಮೀನುಗಳ' ಎಂಬುದನ್ನು 'ಮಂಜೂರಾದ ಭೂಮಿ' ಎಂದು ದಾಖಲಿಸಿ ಅನ್ಯಾಯ ಮಾಡಿದ್ದಾರೆ. ಪರಭಾರೆ ನಿಷೇಧಿತ ಭೂಮಿ ಎಂದೇ ಅದನ್ನು ಮಾಡಬೇಕು' ಎಂದು ಆಗ್ರಹಿಸಿದರು.

ಅಂಬೇಡ್ಕರ್ ನೀಡಿರುವ ಮೀಸಲಾತಿಯನ್ನು ಬಳಸಿಕೊಂಡು ಉದ್ಯೋಗ ಪಡೆದವರಿಗೆ ಬಡ್ತಿಯಲ್ಲಿ ಅನ್ಯಾಯವಾಗಬಾರದು. ಅಲ್ಲಿಯೂ ಬಡ್ತಿ ಮೀಸಲಾತಿ ಕಾಯ್ದೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳಬೇಕು ಎಂದು ಒತ್ತಾಯಿಸಿದರು.

ಹೋರಾಟಗಾರ ಅಣ್ಣಯ್ಯ ಅಧ್ಯಕ್ಷತೆ ವಹಿಸಿದ್ದರು. ಎಸ್‌ಸಿಎಸ್‌ಪಿ-ಟಿಎಸ್‌ಪಿ ನೋಡಲ್ ಅಧಿಕಾರಿ ವೆಂಕಟಯ್ಯ ಉದ್ಘಾಟಿಸಿದರು. ಹೈಕೋರ್ಟ್ ವಕೀಲ ಬಿ.ಟಿ. ವೆಂಕಟೇಶ್, ಡಿಎಸ್‌ಎಸ್ ಬೆಂಗಳೂರು ವಿಭಾಗೀಯ ಸಂಚಾಲಕ ಮಂಜುನಾಥ್ ಅಣ್ಣಯ್ಯ, ಜೈಭೀಮ್ ಅಖಿಲ ಭಾರತ ದಲಿತ ಹೋರಾಟ ಸಮಿತಿ ರಾಜ್ಯ ಅಧ್ಯಕ್ಷ ಎಂ.ಎಂ. ರಾಜು, ವಿವಿಧ ಮುಖಂಡರು ಉಪಸ್ಥಿತರಿದ್ದರು.

# ಆನ್‌ಲೈನ್ ಆಟದ ವ್ಯಸನ: ಅಳಿಯನ ಕೊಲೆ

## ಪೊಲೀಸರಿಗೆ ಶರಣಾದ ಆರೋಪಿ, ಕೊಳೆತ ಸ್ಥಿತಿಯಲ್ಲಿ ಬಾಲಕನ ಮೃತದೇಹ ಪತ್ತೆ

ಪ್ರಜಾವಾಣಿ ವಾರ್ತೆ

ನಾಗಪ್ರಸಾದ್

**ಬೆಂಗಳೂರು:** ಆನ್‌ಲೈನ್ ಆಟದ ವ್ಯಸನಿಯಾಗಿದ್ದ ಸಹೋದರಿಯ ಪುತ್ರನನ್ನು ಮಾವ ಕೊಲೆ ಮಾಡಿದ ಘಟನೆ ವಾಯವ್ಯ ಉಪ ವಿಭಾಗದ ಸೋಲ ದೇವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಕುಂಬಾರಹಳ್ಳಿಯ ವಿನಾಯಕ ಬಡಾವಣೆಯಲ್ಲಿ ನಡೆದಿದ್ದು, ಆರೋಪಿಯು ಪೊಲೀಸರಿಗೆ ಶರಣಾಗಿದ್ದಾನೆ.

ಅಮೋಘ ಕೀರ್ತಿ (14) ಕೊಲೆಯಾದ ಬಾಲಕ. ಕೃತ್ಯ ನಡೆದ ನಾಲ್ಕು ದಿನಗಳ ಬಳಿಕ ಆರೋಪಿ ನಾಗಪ್ರಸಾದ್ (50) ಎಂಬಾತ ಪೊಲೀಸರಿಗೆ ಶರಣಾಗಿದ್ದಾನೆ.

‘ಶಿಲ್ಪಾ ಅವರ ಪುತ್ರ ಅಮೋಘ ಕೀರ್ತಿ ತನ್ನ ಮಾವ, ಆರೋಪಿ ನಾಗಪ್ರಸಾದ್ ಮನೆಯಲ್ಲಿ ಎಂಟು ತಿಂಗಳಿಂದ ನೆಲಸಿದ್ದ. ಮನೆಯಲ್ಲಿದ್ದಾಗ ಆನ್‌ಲೈನ್‌ನಲ್ಲಿ ‘ಫ್ರೀಫೈರ್’ ಆಟವಾಡುತ್ತಿದ್ದ. ಆನ್‌ಲೈನ್ ಆಟದ ವ್ಯಸನಿಯಾಗಿದ್ದ. ಆನ್‌ಲೈನ್‌ನಲ್ಲಿ ಆಟವಾಡದಂತೆ ನಾಗಪ್ರಸಾದ್ ಪದೇ ಪದೇ ಹೇಳುತ್ತಿದ್ದ. ಅಲ್ಲದೇ ಮಾವನ ಬಳಿ ಅಮೋಘ ಕೀರ್ತಿ ಹಣವನ್ನೂ ಕೇಳುತ್ತಿದ್ದ. ಸಹೋದರಿಯ ಪುತ್ರನ ವರ್ತನೆಯಿಂದ ಆರೋಪಿ ಬೇಸರಗೊಂಡಿದ್ದ. ಸೋಮವಾರ ಬೆಳಿಗ್ಗೆ ನಿದ್ರೆಯಲ್ಲಿದ್ದ ಬಾಲಕನ ಕತ್ತು ಸೀಳಿ ಕೊಲೆ ಮಾಡಿ ಪರಾರಿಯಾಗಿದ್ದ’ ಎಂದು ಮೂಲಗಳು ತಿಳಿಸಿವೆ.

**ಆತ್ಮಹತ್ಯೆಗೆ ಯತ್ನ:** ‘ಕೃತ್ಯ ಎಸಗಿದ ಬಳಿಕ ಆತಂಕಕ್ಕೆ ಒಳಗಾದ ನಾಗಪ್ರಸಾದ್ ತಾನೂ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾಗಿದ್ದ. ನಂತರ, ಆತ್ಮಹತ್ಯೆ ಆಲೋಚನೆ ಬಿಟ್ಟು ಮೆಜೆಸ್ಟಿಕ್‌ಗೆ ತೆರಳಿ ಅಲ್ಲಿಂದ ಬೇರೆ ರಾಜ್ಯಕ್ಕೆ ಪರಾರಿಯಾಗಲು ಮುಂದಾಗಿದ್ದ. ಪ್ರಯಾಣಕ್ಕೆ ಹಣವಿಲ್ಲದೇ ಮೆಜೆಸ್ಟಿಕ್‌ನಲ್ಲೇ ನಾಲ್ಕು ದಿನ ಕಾಲ ಕಳೆದಿದ್ದ. ನಂತರ, ಸೋಲದೇವನಹಳ್ಳಿ ಪೊಲೀಸ್ ಠಾಣೆಗೆ ಬಂದು ಶರಣಾಗಿದ್ದ’ ಎಂದು ಮೂಲಗಳು ತಿಳಿಸಿವೆ.

‘ಆನ್‌ಲೈನ್‌ನಲ್ಲಿ ಆಟವಾಡುತ್ತಿದ್ದ ಪುತ್ರನಿಗೆ ಬುದ್ಧಿಮಾತು ಹೇಳುವಂತೆ ಸಹೋದರಿ ತಿಳಿಸಿದ್ದಳು. ಪುತ್ರನನ್ನು ನನ್ನ ಮನೆಗೆ ತಂದು ಬಿಟ್ಟಿದ್ದಳು. ಎಷ್ಟು ಬುದ್ಧಿಮಾತು ಹೇಳಿದರೂ ಅಮೋಘ ಕೀರ್ತಿ ಕೇಳುತ್ತಿರಲಿಲ್ಲ. ವರ್ತನೆ ಬದಲಾವಣೆ ಮಾಡಿಕೊಂಡಿರಲಿಲ್ಲ. ಸೋಮವಾರ ಬೆಳಿಗ್ಗೆ ಕುತ್ತಿಗೆ ಕೊಯ್ದು ಕೊಲೆ ಮಾಡಿದ್ದೇನೆ ಎಂಬುದಾಗಿ ಆರೋಪಿ ವಿಚಾರಣೆ ವೇಳೆ ತಿಳಿಸಿದ್ದಾನೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಕೊಳೆತ ಸ್ಥಿತಿಯಲ್ಲಿ ಬಾಲಕನ ಮೃತದೇಹ ಮನೆಯಲ್ಲಿ ಪತ್ತೆಯಾಗಿತ್ತು. ಮರಣೋತ್ತರ ಪರೀಕ್ಷೆಯ ಪ್ರಕ್ರಿಯೆ ನಡೆಸಿ ಮೃತದೇಹವನ್ನು ಕುಟುಂಬದವರಿಗೆ ಹಸ್ತಾಂತರ ಮಾಡಲಾಗಿದೆ. ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಪರಪ್ಪನ ಅಗ್ರಹಾರ ಜೈಲಿಗೆ ಕಳುಹಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

## ವೆಬ್‌ಸಿರೀಸ್ ನೋಡಿ ವಿದ್ಯಾರ್ಥಿ ಆತ್ಮಹತ್ಯೆ?

ಬನಶಂಕರಿ ಮೂರನೇ ಹಂತದ ಬನಗಿರಿನಗರದಲ್ಲಿ ಏಳನೇ ತರಗತಿಯ ವಿದ್ಯಾರ್ಥಿ ಗಾಂಧಾರ್ ಆತ್ಮಹತ್ಯೆ ಪ್ರಕರಣದ ತನಿಖೆ ನಡೆಸುತ್ತಿರುವ ಚನ್ನಮ್ಮನ ಕೆರೆ ಅಚ್ಚುಕಟ್ಟು ಠಾಣೆಯ ಪೊಲೀಸರಿಗೆ ಅಚ್ಚರಿಯ ಅಂಶಗಳು ಗೊತ್ತಾಗಿವೆ.

ಸಂಗೀತಗಾರ ಗಣೇಶ್ ಪ್ರಸಾದ್ ಮತ್ತು ಜನಪದ ಗಾಯಕಿ ಸವಿತಾ (ಸವಿತಕ್ಕ) ಅವರ ಎರಡನೇ ಪುತ್ರ ಗಾಂಧಾರ್ ಭಾನುವಾರ ರಾತ್ರಿ ಮರಣಪತ್ರ ಬರೆದಿಟ್ಟು ತಮ್ಮ ಮನೆಯ ರೂಮ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದ.

ಆರಂಭದಲ್ಲಿ ಬಾಲಕನ ಆತ್ಮಹತ್ಯೆಗೆ ನಿಖರ ಕಾರಣ ತಿಳಿದುಬಂದಿರಲಿಲ್ಲ. ಆದರೆ, ಇದೀಗ ಸಿ.ಕೆ ಅಚ್ಚುಕಟ್ಟು ಪೊಲೀಸರು ಪ್ರಾಥಮಿಕ ತನಿಖೆಯಲ್ಲಿ ಬಾಲಕನ ಸಾವಿಗೆ ಜಪಾನ್‌ನ ವೆಬ್ ಸಿರೀಸ್ ಕಾರಣವಾಗಿರಬಹುದು ಎಂದು ಶಂಕಿಸಿದ್ದಾರೆ. ಆತನ ರೂಮ್‌ನಲ್ಲಿ ವೆಬ್‌ಸಿರೀಸ್ ಪಾತ್ರದ ಚಿತ್ರ ಬರೆದಿದ್ದ ಎಂದು ಮೂಲಗಳು ತಿಳಿಸಿವೆ.

ಮನೆಯಲ್ಲಿ ಒಂಟಿಯಾಗಿ ಇದ್ದಾಗ ಗಾಂಧಾರ್, ಜಪಾನ್ ಮೂಲದ ‘ಡೆತ್‌ನೋಟ್’ ಎಂಬ ವೆಬ್‌ಸಿರೀಸ್ ನೋಡುತ್ತಿದ್ದ. ಅದನ್ನು ನೋಡಿ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದೆ.

ಬಾಲಕ ಬಳಸುತ್ತಿದ್ದ ಮೊಬೈಲ್ ಮತ್ತು ಪೋಷಕರನ್ನು ವಿಚಾರಣೆ ನಡೆಸಿ ಘಟನೆಯ ಸಂಬಂಧ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಮತ್ತೊಂದೆಡೆ, ಶಾಲೆಯಲ್ಲಿ ಬಾಲಕಿಯೊಬ್ಬಳನ್ನು ‘ಡುಮ್ಮಿ’ ಎಂದು ಗಾಂಧಾರ್ ಚುಡಾಯಿಸುತ್ತಿದ್ದ ವಿಚಾರವೂ ಗೊತ್ತಾಗಿದೆ. ಎಲ್ಲಾ ಆಯಾಮಗಳಲ್ಲಿಯೂ ತನಿಖೆ ನಡೆಸಲಾಗುತ್ತಿದೆ. ಗಾಂಧಾರ್ ಚುಡಾಯಿಸಿದ್ದನ್ನು ಆ ಬಾಲಕಿ ಸಹಜವಾಗಿಯೇ ತೆಗೆದುಕೊಂಡಿದ್ದಳು. ಈ ಸಂಬಂಧ ಆಕೆ ಶಾಲೆಯ ಆಡಳಿತ ಮಂಡಳಿಗೂ ಯಾವುದೇ ದೂರು ನೀಡಿರಲಿಲ್ಲ ಎಂದು ಪೊಲೀಸರು ಹೇಳಿದರು.

ಬಾಲಕನ ತಾಯಿ ಸವಿತಾ ಕಾರ್ಯಕ್ರಮ ನಿಮಿತ್ತ ಆಸ್ಟ್ರೇಲಿಯಾಗೆ ತೆರಳಿದ್ದರು. ತಂದೆ, ಅಣ್ಣನ ಜತೆ ಚೆನ್ನಾಗಿಯೇ ಇದ್ದ ಗಾಂಧಾರ್, ಭಾನುವಾರ ರಾತ್ರಿ ಊಟ ಮಾಡಿ ತನ್ನ ರೂಮ್‌ಗೆ ತೆರಳಿದ್ದ. ಸೋಮವಾರ ಬೆಳಿಗ್ಗೆ ಬಾಲಕನ ತಂದೆ ಆತನನ್ನು ಎಬ್ಬಿಸಲು ಹೋದಾಗ, ಗಿಟಾರ್‌ನ ತಂತಿಯಿಂದ ನೇಣು ಬಿಗಿದುಕೊಂಡು ಗಾಂಧಾರ್ ಆತ್ಮಹತ್ಯೆ ಮಾಡಿಕೊಂಡಿರುವುದು ಕಂಡುಬಂದಿತ್ತು.

**ಮರಣಪತ್ರದಲ್ಲಿ ಏನಿತ್ತು?:** ‘ಕೋಪವಿದ್ದರೆ ಕ್ಷಮೆ ಕೇಳುತ್ತೇನೆ. ತಪ್ಪುಗಳನ್ನು ದಯವಿಟ್ಟು ಕ್ಷಮಿಸಿ. 14 ವರ್ಷ ಬದುಕಿದ್ದು, ಅದರಲ್ಲೇ ತೃಪ್ತನಾಗಿದ್ದೇನೆ. ಸಂತೋಷದಿಂದ ಕಳೆದಿದ್ದೇನೆ. ಅದೇ ಸಾಕು. ಸ್ವರ್ಗದಲ್ಲಿ ನಾನು ಖುಷಿಯಾಗಿರುತ್ತೇನೆ. ನನ್ನ ಸ್ನೇಹಿತರನ್ನು ಪ್ರೀತಿಸುತ್ತಿದ್ದೆ ಎಂದು ಅವರಿಗೂ ತಿಳಿಸಿ. ಶಾಲಾ ಸ್ನೇಹಿತರಿಗೂ ಈ ಮಾತನ್ನು ಹೇಳಿ. ಐ ಮಿಸ್ ಯೂ ಆಲ್ – ಗುಡ್‌ಬೈ ಅಮ್ಮ’ ಎಂದು ಬರೆದಿದ್ದ ಮರಣಪತ್ರವು ರೂಮ್‌ನಲ್ಲಿ ಸಿಕ್ಕಿತ್ತು. ಬಾಲಕ ಬರೆದಿದ್ದ ಮರಣಪತ್ರವನ್ನು ವಶಕ್ಕೆ ಪಡೆದು ಪರಿಶೀಲನೆ ನಡೆಸಲಾಗಿದೆ ಎಂದು ಪೊಲೀಸರು ಹೇಳಿದರು.

# ‘ಕಿರುಕುಳ ನೀಡಲು ಕೇಸು’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿಪಕ್ಷದ ನಾಯಕರಿಗೆ ಕಿರುಕುಳ ನೀಡಲು ಸರ್ಕಾರ ಪೊಲೀಸರನ್ನು ಬಳಸುತ್ತಿದೆ. ಚಾಲಕ ಬಾಬು ಆತ್ಮಹತ್ಯೆ ಪ್ರಕರಣದಲ್ಲಿ ಸಂಸದ ಡಾ.ಕೆ. ಸುಧಾಕರ್ ಪಾತ್ರ ಇಲ್ಲದಿದ್ದರೂ ಅವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ವಿಪಕ್ಷದ ನಾಯಕ ಆರ್.ಅಶೋಕ ದೂರಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಆತ್ಮಹತ್ಯೆ ಮಾಡಿಕೊಂಡ ಬಾಬು ಜತೆ ಸುಧಾಕರ್ ಅವರಿಗೆ ಆಪ್ತ ಸಂಬಂಧವೇನೂ ಇಲ್ಲ. ಈ ಪ್ರಕರಣದಲ್ಲಿ ಜಾತಿನಿಂದನೆ ಆರೋಪವೂ ಬರುವುದಿಲ್ಲ. ರಾಜಕೀಯ ದ್ವೇಷದಿಂದ ಎಫ್‌ಐಆರ್ ದಾಖಲಿಸಲಾಗಿದೆ’ ಎಂದರು.

**ಮಾಲೂರು ನಗರ ಯೋಜನಾ ಪ್ರಾಧಿಕಾರ**
**ಮಾಲೂರು,** ಮಾರುತಿ ಬಡಾವಣೆ 2ನೇ ಹಂತ, ಮಾಡ್ರನ್ ಶಾಲೆ ಹತ್ತಿರ, ತಿರುಮಲ ಕಲ್ಯಾಣ ಮಂಟಪ ರಸ್ತೆ, ಮಾಲೂರು–563 130, ಕೋಲಾರ ಜಿಲ್ಲೆ, ಕಛೇರಿ ದೂರವಾಣಿ ಸಂಖ್ಯೆ: 08151–299920,
Web Site: www.malur.tpa.gov.in,
Email: ms.malur.planning.authority@gmail.com
ಸಂಖ್ಯೆ:ಮಾ.ಯೋ.ಪ್ರಾ/ಟೆಂಡರ್ ಪ್ರಕಟಣೆ/2025–2026/656
ದಿನಾಂಕ:06.08.2025

**ಟೆಂಡರ್ ಪ್ರಕಟಣೆ**

ಮಾಲೂರು ಪ್ರಾಧಿಕಾರದ ಕಛೇರಿಯ ಇ–ಆಫೀಸ್ ಅನ್ನು ಅನುಷ್ಠಾನಗೊಳಿಸುವ ಸಂಬಂಧ Router ಅನ್ನು ಖರೀದಿ ಮಾಡುವ ಸಂಬಂಧ ಟೆಂಡರ್ ಅನ್ನು ದ್ವಿಲಕೋಟೆಯಲ್ಲಿ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳವರು ಈ ಕೆಳಗಿನ ನಿಬಂಧನೆಗಳಿಗನುಗುಣವಾಗಿ ಟೆಂಡರ್ ಸಲ್ಲಿಸಲು ಸೂಚಿಸಿದೆ.

**ಟೆಂಡರ್ ಸಲ್ಲಿಸುವ ಬಗ್ಗೆ ವಿವರ:**
(1) ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ: ಸಂಖ್ಯೆ:ಮಾ.ಯೋ.ಪ್ರಾ/ಟೆಂಡರ್/2025–2026/ ದಿನಾಂಕ: 06.08.2025
(2) ಟೆಂಡರ್‌ಗಾಗಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: **11.08.2025**
(3) ಟೆಂಡರ್‌ಗೆ ಇಟ್ಟ ಮೊತ್ತ: **1,50,000–00**
(4) ಟೆಂಡರ್ ಇ.ಎಂ.ಡಿ ಮೊತ್ತ: **8,000–00**
(5) ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **19.08.2025**
(6) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **20.08.2025**
(7) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **ತಾಂತ್ರಿಕವಾಗಿ ಅರ್ಹರಾದ ಗುತ್ತಿಗೆದಾರರಿಗೆ ತಿಳಿಸಲಾಗುವುದು.**
(8) ಟೆಂಡರ್ ತೆರೆಯುವ ಅಧಿಕಾರಿಗಳು: ಸದಸ್ಯ ಕಾರ್ಯದರ್ಶಿಗಳು, ಮಾಲೂರು ಯೋಜನಾ ಪ್ರಾಧಿಕಾರ, ಮಾಲೂರು
ಟೆಂಡರ್ ಫಾರಂ ಮತ್ತು ದಾಖಲೆಗಳನ್ನು ಈ ಕಛೇರಿಯ ಕಛೇರಿ ಕೆಲಸದ ಸಮಯದಲ್ಲಿ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/–
**ಸದಸ್ಯ ಕಾರ್ಯದರ್ಶಿ**
**ಮಾಲೂರು ಯೋಜನಾ ಪ್ರಾಧಿಕಾರ**
**ಮಾಲೂರು–563130**
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:225/ಕೆಎಸ್‌ಎಂಸಿಎ/2025–26

**ಹೂಡಿಕೆದಾರರ ಶಿಕ್ಷಣ ಮತ್ತು ಸುರಕ್ಷಾ ನಿಧಿ ಪ್ರಾಧಿಕಾರ, ನವದೆಹಲಿ ಇವರಲ್ಲಿ ಅಸಿಸ್ಟಂಟ್ ಜನರಲ್ ಮ್ಯಾನೇಜರ್ ನೇಮಕಾತಿ**

ಹೂಡಿಕೆದಾರರ ಶಿಕ್ಷಣ ಮತ್ತು ಸುರಕ್ಷಾ ನಿಧಿ ಪ್ರಾಧಿಕಾರ, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ, ಭಾರತ ಸರ್ಕಾರ, ನವದೆಹಲಿ ಇವರು, ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 125ರ ಅಡಿಯಲ್ಲಿನ ಸ್ಥಾಪನೆಗೊಂಡಿರವ ಒಂದು ಶಾಸನಬದ್ಧ ಅಂಗವಾಗಿರುವ, ಹೂಡಿಕೆದಾರರ ಶಿಕ್ಷಣ ಮತ್ತು ಸುರಕ್ಷಾ ನಿಧಿ ಪ್ರಾಧಿಕಾರದಲ್ಲಿನ ಒಂದು (01) ಅಸಿಸ್ಟಂಟ್ ಜನರಲ್ ಮ್ಯಾನೇಜರ್ (ಲೆವೆಲ್–10) ಹುದ್ದೆಯನ್ನು ಡೆಪ್ಯುಟೇಶನ್ ಆಧಾರದಲ್ಲಿ ಭರ್ತಿ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಸದರಿ ಹುದ್ದೆಯು ದೆಹಲಿಯಲ್ಲಿ ಸ್ಥಿತಗೊಂಡಿರುತ್ತದೆ.
2. ಇದೊಂದು ಬಹಿರಂಗ ಖಾಲಿಹುದ್ದೆ ಸುತ್ತೋಲೆ ಆಗಿರುತ್ತದೆ. ಅರ್ಹ ಅಭ್ಯರ್ಥಿಗಳಿಂದ ಸಾಕಷ್ಟು ಪ್ರಮಾಣದ ಅರ್ಜಿಗಳು ಪ್ರಾಧಿಕಾರಕ್ಕೆ ಸಲ್ಲಿಕೆಯಾದ ಬಳಿಕ, ಅವುಗಳನ್ನು ಸಂದರ್ಶನ/ಆಯ್ಕೆಗೆ ಪರಿಗಣಿಸಲಾಗುತ್ತದೆ. ನಿರ್ದಿಷ್ಟ ನಮೂನೆಯ ಅರ್ಜಿಯನ್ನು ಸಂಪೂರ್ಣ ಭರ್ತಿ ಮಾಡಿ ಡೆಪ್ಯೂಟಿ ಜನರಲ್ ಮ್ಯಾನೇಜರ್ (ಅಡ್ಮಿನ್), ಐಇಪಿಎಫ್ ಪ್ರಾಧಿಕಾರ, ನೆಲಮಹಡಿ, ಜೀವನ್ ವಿಹಾರ್ ಬಿಲ್ಡಿಂಗ್, 3, ಪಾರ್ಲಿಮೆಂಟ್ ಸ್ಟ್ರೀಟ್, ನವದೆಹಲಿ – 100001 ವಿಳಾಸಕ್ಕೆ ಸಲ್ಲಿಸತಕ್ಕದ್ದು.
3. ಅರ್ಜಿ ನಮೂನೆಗಾಗಿ, ಅರ್ಹತಾ ಷರತ್ತುಗಳು, ಅಗತ್ಯ ವಿದ್ಯಾರ್ಹತೆ, ಇನ್ನಿತರೆ ವಿವರ ಹಾಗೂ ಸೇವಾ ಷರತ್ತು ಮತ್ತು ನಿಬಂಧನೆಗಳಿಗಾಗಿ, ದಯವಿಟ್ಟು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ **www.mca.gov.in** ಅಥವಾ **www.iepf.gov.in** ವೆಬ್‌ಸೈಟ್‌ಗೆ ಭೇಟಿ ಕೊಡಿ.
***ಮೇಲೆ ತಿಳಿಸಲಾಗಿರುವ ಖಾಲಿಹುದ್ದೆಗಳ ಸಂಖ್ಯೆ ತಾತ್ಕಾಲಿಕವಾಗಿರುತ್ತದೆ. ಈ ಸಂಖ್ಯೆಯು ನೇಮಕಾತಿ ಸಮಯದಲ್ಲಿ ಹೆಚ್ಚು ಕಡಿಮೆ ಆಗಬಹುದಾಗಿರುತ್ತದೆ.**
**CBC 07110/12/0004/2526**

ಇನ್‌ಸ್ಟಾಗ್ರಾಂ ಖಾತೆಯಲ್ಲಿ ಸಂದೇಶ ಕಳುಹಿಸಿ ಬೆದರಿಕೆ

# ನಟಿ ರಮ್ಯಾಗೆ ಬೆದರಿಕೆ: ಮತ್ತೊಬ್ಬ ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ರಮ್ಯಾ

**ಬೆಂಗಳೂರು:** ನಟಿ, ಮಾಜಿ ಸಂಸದೆ ರಮ್ಯಾ ಅವರಿಗೆ ಸಾಮಾಜಿಕ ಮಾಧ್ಯಮಗಳಲ್ಲಿ ಅಶ್ಲೀಲ ಸಂದೇಶ ಕಳುಹಿಸಿದ್ದ ಹಾಗೂ ಬೆದರಿಕೆ ಹಾಕಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೊಬ್ಬ ಆರೋಪಿಯನ್ನು ಸಿಸಿಬಿ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಕೆ.ಆರ್.ಪುರದ ನಿವಾಸಿ ಪ್ರಮೋದ್‌ಗೌಡ (20) ಬಂಧಿತ ಆರೋಪಿ. ಈ ಪ್ರಕರಣದಲ್ಲಿ ಪ್ರಮೋದ್‌ಗೌಡ ಮೊದಲ ಆರೋಪಿ.

ತನ್ನ ಸ್ನೇಹಿತನ ಮೊಬೈಲ್‌ನಿಂದ ಇನ್‌ಸ್ಟಾಗ್ರಾಂ ಖಾತೆ ತೆರೆದು ರಮ್ಯಾ ಅವರ ಇನ್‌ಸ್ಟಾಗ್ರಾಂ ಖಾತೆಗೆ ಅಶ್ಲೀಲ ಹಾಗೂ ಬೆದರಿಕೆ ಸಂದೇಶ ಕಳುಹಿಸಿದ್ದ. ಪ್ರಮೋದ್ ಗೌಡ– 87 ಎಂಬ ಖಾತೆಯಿಂದ ಸಂದೇಶ ಕಳುಹಿಸಿದ್ದ. ಗುರುವಾರ ರಾತ್ರಿ ಪ್ರಮೋದ್ ಗೌಡನನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ ಎಂದು ಸಿಸಿಬಿ ಪೊಲೀಸರು ಹೇಳಿದರು.

ಈ ಪ್ರಕರಣದಲ್ಲಿ ಇದುವರೆಗೂ ಭುವನ್‌ಗೌಡ, ರಾಜೇಶ್, ಟಿ.ಓಬಣ್ಣ, ಗಂಗಾಧರ ಹಾಗೂ ಕೊಪ್ಪಳದ ಮಂಜುನಾಥ್ ಎಂಬುವವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಬಂಧಿತರ ಸಂಖ್ಯೆ ಆರಕ್ಕೆ ಏರಿಕೆಯಾಗಿದೆ.

ನಟ ದರ್ಶನ್ ಅವರ ಅಭಿಮಾನಿಗಳು ಎಂದು ಹೇಳಿಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ಅಶ್ಲೀಲ ಹಾಗೂ ಅವಹೇಳನಕಾರಿ ಸಂದೇಶ ಕಳುಹಿಸಿ, ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಿ ರಮ್ಯಾ ಅವರು ಜುಲೈ 28ರಂದು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಅವರಿಗೆ ದೂರು ನೀಡಿದ್ದರು. ಆ ದೂರು ಆಧರಿಸಿ ಸೈಬರ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಪ್ರಕರಣ ವನ್ನು ಸಿಸಿಬಿಗೆ ವರ್ಗಾವಣೆ ಮಾಡಿದ್ದು, ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ.

‘43 ಖಾತೆಗಳಿಂದ ಬೆದರಿಕೆ ಸಂದೇಶಗಳು ಬಂದಿರುವುದಾಗಿ ಉಲ್ಲೇಖಿಸಿ ರಮ್ಯಾ ಅವರು ದೂರು ನೀಡಿದ್ದರು. ಉಳಿದ ಆರೋಪಿಗಳು ತಲೆಮರೆಸಿಕೊಂಡಿದ್ದು, ಅವರಿಗಾಗಿ ಹುಡುಕಾಟ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

# ಸ್ಟಿಲ್ಟ್ ಪಾರ್ಕಿಂಗ್‌ಗೆ ತೆರಿಗೆ ಅಕ್ರಮ: ಬಿಎನ್‌ಪಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಸೂಪರ್ ಬಿಲ್ಟ್ ಅಪ್ ಏರಿಯಾ’ ಎಂದು ಗುರುತಿಸಿ ಈಗಾಗಲೇ ತೆರಿಗೆ ಕಟ್ಟಿಸಿಕೊಂಡಿದ್ದರೂ, ಈಗ ಪಾರ್ಕಿಂಗ್ ಹೆಸರಲ್ಲಿ ಬಿಬಿಎಂಪಿಯವರು ಆಸ್ತಿ ತೆರಿಗೆ ನೋಟಿಸ್ ನೀಡುತ್ತಿರುವುದು ಅಕ್ರಮ ಎಂದು ಬೆಂಗಳೂರು ನವ ನಿರ್ಮಾಣ ಪಕ್ಷ (ಬಿಎನ್‌ಪಿ) ಟೀಕಿಸಿದೆ.

ಸ್ಟಿಲ್ಟ್ ಪಾರ್ಕಿಂಗ್ ಮತ್ತು ತೆರೆದ ಪಾರ್ಕಿಂಗ್ ಪ್ರದೇಶಗಳು ಕಟ್ಟಡದ ಸಾಮಾನ್ಯ ಪ್ರದೇಶಗಳ ಭಾಗವಾಗಿದ್ದು, ಅವನ್ನು ಮಾರಾಟ ಮಾಡಲು ಅಥವಾ ಪ್ರತ್ಯೇಕ ಘಟಕಗಳಾಗಿ ಪರಿಗಣಿಸಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ. ಪಾರ್ಕಿಂಗ್ ಸ್ಥಳಗಳು ನಿವಾಸಿಗಳ ಸಾಮಾನ್ಯ ಬಳಕೆಗೆ ಮೀಸಲಾಗಿವೆ. ಅವುಗಳನ್ನು ಫ್ಲ್ಯಾಟ್ ವೆಚ್ಚದಲ್ಲಿ ಸೇರಿಸುವಂತೆ ಹೇಳಿದೆ ಎಂದು ತಿಳಿಸಿದೆ.

ರೇರಾ ಕಾಯ್ದೆಯ ಸೆಕ್ಷನ್ 2(ಎನ್) ಕೂಡ ಸ್ಟಿಲ್ಟ್ ಮತ್ತು ತೆರೆದ ಪಾರ್ಕಿಂಗ್‌ಗಳನ್ನು ಸಾಮಾನ್ಯ ಪ್ರದೇಶಗಳ ಭಾಗವೆಂದು ವ್ಯಾಖ್ಯಾನಿಸಿದೆ ಎಂದು ಬಿಎನ್‌ಪಿ ಸಂಸ್ಥಾಪಕ ಶ್ರೀಕಾಂತ್ ನರಸಿಂಹನ್ ತಿಳಿಸಿದ್ದಾರೆ.

‘ಸುಪ್ರೀಂ ಕೋರ್ಟ್ ತೀರ್ಪುಗಳು ಮತ್ತು ರೇರಾ ಕಾಯ್ದೆಗಳನ್ನು ಉಲ್ಲಂಘಿಸಿ ಪಾಲಿಕೆ ನೀಡಿರುವ ನೋಟಿಸ್‌ಗಳನ್ನು ವಾಪಸ್ ಪಡೆಯಬೇಕು’ ಎಂದು ಬಿಎನ್‌ಪಿಯ ಮಹದೇವಪುರ ವಲಯದ ಮುಖಂಡ ವಿಷ್ಣುರೆಡ್ಡಿ ಆಗ್ರಹಿಸಿದರು.

‘ಬಿಬಿಎಂಪಿಯ ನೋಟಿಸ್‌ಗಳಿಗೆ ಪ್ರತಿಕ್ರಿಯಿಸಲು, ಮಾಲೀಕರಿಗೆ ನೆರವಾಗಲು ನಾವು ಪ್ರಯತ್ನಿಸುತ್ತಿದ್ದೇವೆ. ಆನ್‌ಲೈನ್‌ನಲ್ಲಿ ಪ್ರತಿಕ್ರಿಯಿಸಲು ಒದಗಿಸಲಾದ ಇ-ನ್ಯಾಯ ಸೈಟ್ ಕಾರ್ಯನಿರ್ವಹಿಸುತ್ತಿಲ್ಲ. ಅಧಿಕಾರಿಗಳು ನೇರವಾಗಿ ದೂರು ಸ್ವೀಕರಿಸಲು ನಿರಾಕರಿಸುತ್ತಿದ್ದಾರೆ’ ಎಂದು ವರ್ತೂರು ವಾರ್ಡ್ ನಾಯಕ ವೆಂಕಟಾಚಲಂ ಸುಬ್ರಮಣಿಯಂ ಮತ್ತು ಬಿಎನ್‌ಪಿ ನಾಯಕ ಎಚ್.ಎಲ್.ಎನ್. ಪ್ರಸಾದ್ ಆರೋಪಿಸಿದರು.

**PUBLIC NOTICE**

My client **Mrs. Krishna Sikka** wishes to inform/caution the General Public that Plot No. 53-A of Survey Numbers 280, 285, 286 and 383 of Bommasandar Village, Attibele Taluk, Bangalore-560099 formed by KIADB presently in the possession of M/s Sika Interplant Systems Limited represented by Shri Rajeev Sikka , is under dispute. The title of the said property is subject to legal adjudication as the sale deed appears to have been executed by irregular means. Hence, the general public are cautioned by way of this notice to not deal with the said misappropriated property. If anybody deals with the said KIADB property, it is at their own cost and risk and my client shall not be bound by it.

**Sd/- Samarth Prakash,** Advocate.
**M/s. Aryan Law,**
**Advocates and Solicitors,**
No. 2722, New Thippasandra Main Road, HAL 3rd stage,
Bangalore - 560 075.
Bangalore, Date : 08-08-2025

# ಶಿಕ್ಷಕರ ವರ್ಗಾವಣೆ: ಪರಿಷ್ಕೃತ ವೇಳಾಪಟ್ಟಿ ಪ್ರಕಟ

**ಬೆಂಗಳೂರು:** ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ 2025–26ನೇ ಸಾಲಿನ ವರ್ಗಾವಣೆಯ ಪರಿಷ್ಕೃತ ವೇಳಾಪಟ್ಟಿಯನ್ನು ಶಾಲಾ ಶಿಕ್ಷಣ ಇಲಾಖೆ ಬಿಡುಗಡೆ ಮಾಡಿದೆ.

ಪ್ರಕ್ರಿಯೆಯು ಆ. 8ರಿಂದ ಆರಂಭವಾಗಿ ಅ. 18ಕ್ಕೆ ಮುಕ್ತಾಯವಾಗಲಿದೆ. ಆ. 8ರಂದು ಖಾಲಿ ಹುದ್ದೆಗಳ ಪಟ್ಟಿ ಪ್ರಕಟ. ಆ.12ರಿಂದ ಸೆ. 6ರವರೆಗೆ ತಾಂತ್ರಿಕ ಸಹಾಯಕರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ವರ್ಗಾವಣೆ, 14ರಿಂದ ಸಾಮಾನ್ಯ ಕೋರಿಕೆ ವರ್ಗಾವಣೆ ಸೆ. 8ರವರೆಗೆ ಕೋರಿಕೆ ಮತ್ತು ಪರಸ್ಪರ ವರ್ಗಾವಣೆ, ಸೆ. 9ರಿಂದ ಜಿಲ್ಲಾ ಹಂತದ ವರ್ಗಾವಣೆ, ಸೆ. 19ರಿಂದ ಅ.4ರವರೆಗೆ ವಿಭಾಗೀಯ ಹಂತದ ವರ್ಗಾವಣೆ, ಅ. 4ರಿಂದ ಅ. 18ರವರೆಗೆ ಅಂತರ್ ವಿಭಾಗೀಯ ಹಂತದ ಶಿಕ್ಷಕರ ವರ್ಗಾವಣಾ ಪ್ರಕ್ರಿಯೆಗಳು ನಡೆಯಲಿವೆ.

ನಿಧನ ವಾರ್ತೆ

## ಗುರು ಸಿದ್ದಲಿಂಗ ಆರಾಧ್ಯ



**ಬೆಂಗಳೂರು:** ನಗರದ ಎಚ್‌ಎಎಲ್ ಸಮೀಪದ ಬಸವಪುರದ ಉಮಾಮಹೇಶ್ವರಿ ದೇವಾಲಯದ ಅರ್ಚಕರಾಗಿದ್ದ ಗುರು ಸಿದ್ದಲಿಂಗ ಆರಾಧ್ಯ (40) ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದಾರೆ.

ಮೃತರಿಗೆ ಪತ್ನಿ, ಪುತ್ರಿ, ತಂದೆ ತಾಯಿ ಹಾಗೂ ಸೋದರಿ ಇದ್ದಾರೆ. ಅಂತ್ಯಕ್ರಿಯೆ ತುಮಕೂರು ಜಿಲ್ಲೆಯ ಸಿರಾ ತಾಲ್ಲೂಕಿನ ರಾಮಲಿಂಗಾಪುರದಲ್ಲಿ ಗುರುವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕುಟುಂಬದವರು ಮೃತರ ಅಂಗಾಂಗಗಳನ್ನು ಮಣಿಪಾಲ ಆಸ್ಪತ್ರೆಗೆ ದಾನ ಮಾಡಿದ್ದಾರೆ. ಇತರರ ಸಂಕಷ್ಟಕ್ಕೆ ನೆರವಾಗುವ ಈ ಮಾನವೀಯ ಪ್ರತಿಸ್ಪಂದನೆಗೆ ಆಸ್ಪತ್ರೆಯ ಆಡಳಿತ ವರ್ಗ ಮೆಚ್ಚುಗೆ ವ್ಯಕ್ತಪಡಿಸಿದೆ.

**PM SHRI SCHOOL JAWAHAR NAVODAYA VIDYALAYA**
**BASHETTIHALLI, DODDABALLAPURA TALUK, BANGALORE RURAL DISTRICT**

**WALK –IN- INTERVIEW FOR THE ACADEMIC YEAR 2025-26**

Walk-in-interview for the below mentioned posts purely on part time basis at PM Shri School, Jawahar Navodaya Vidyalaya, Bashettihalli, Bangalore Rural District, Karnataka.

| SL. No. | Name of the post & Number of Vacancy | Nature Of Appointment & Remuneration | No. post vacant | QUALIFICATION | Date Of Interview |
|---|---|---|---|---|---|
| 1. | Yoga Trainer (One Post) | (Part time) Rs. 12,500 per Month | 1 | M.P. Ed. Or B.P. Ed with specialization or certification in Yoga. Post-Graduation in Yoga. One Year Diploma in Yoga from a recognized University/ Institute. Bachelor of Naturopathy and Yogic science. (BNYS). Teaching experience desirable. | 20.08.2025 (Wednesday) Reporting time: 10.30 AM |
| 2. | APPAREL | (Part time) Rs. 34,125/- per Month | 1 | Post-graduation in Textile and Clothing or relevant area from a recognized Institute/ University, with at least 1 year work/ teaching experience in Textile and Clothing | |
| 3 | Atal Tinkering Lab Facilitator | (Part time) Rs. 10,000/- per Month | 1 | Diploma in Computer Science/Information Technology OR Bachelor's Degree in Computer Application/ Science/InformationTechnology (BCA, B.Sc. Computer Science / Information Technology) OR Graduation with PGDCA OR DOEACC 'A' Level Certificate | |
| 4 | 3D drawing & Animation Trainer | Part time Rs.1250 per session | 1 | Bachelor in Fine Arts/ Science-Animation OR Bachelor of Engineering / Technology in Computer Science/Information Technology from AICTE approved Institute/ University. OR Bachelor's Degree with 2-year Diploma from reputed Institute with 2 years' of relevant experience OR M.Sc. Computer/ IT OR MCA/ DOEACC 'B' level | |
| 5 | Bharathanatyam Trainer | Part time Rs. 12,500 Per month | 1 | Post Graduate degree / Bachelor's Degree / Diploma / certificate course with specialization in concerned subject. Teaching experience desirable. | |
| 6 | Yakshagaana Trainer | Part time Rs.12,500 Per month | 1 | | |
| 7 | Keyboard Trainer | Part time Rs.12,500 Per month | 1 | | |
| 8 | Tabala Trainer | Part time Rs.12,500 Per month | 1 | | |
| 9 | Football Coach | Part time Rs.1250 per session | 1 | Post Graduatedegree / Bachelor's Degree / Diploma/certificate course with specialization in concerned subject. Coaching experience desirable. | 20.08.2025 (Wednesday) Reporting time: 10.30 AM |
| 10 | Handball Coach | Part time Rs.1250 per session | 1 | | |
| 11 | Basket Ball Coach | Part time Rs.1250 per session | 1 | | |

**Contact for any queries -**

**Sd/- Principal**
**Jawahar Navodaya Vidyalaya, Doddaballapur, Bashettihalli, Bangalore Rural Dist.**

**AXISCADES**

**AXISCADES Technologies Limited**

CIN : L72200KA1990PLC084435
Regd. Office : Block C, Second Floor, Kirloskar Business Park, Bengaluru - 560024, Karnataka, India
Website: www.axiscades.com | Email: info@axiscades.com | Tel : +91 80 4193 9000 | Fax : +91 80 4193 9099

**Statement of Unaudited Consolidated Financial Results for the Quarter Ended June 30, 2025**

(₹ in Lacs)

| Particulars | Quarter Ended | | | Year Ended |
|---|---|---|---|---|
| | 30 June 2025 (Unaudited) | 31 Mar. 2025 (Audited) | 30 June 2024 (Unaudited) | 31 Mar. 2025 (Audited) |
| Total income | 25,430.04 | 27,186.22 | 23,377.91 | 1,05,157.27 |
| EBITDA* | 3,406.17 | 3,745.38 | 3,129.69 | 14,244.49 |
| Finance Costs | 731.71 | 836.54 | 806.79 | 3,229.70 |
| Depreciation and Amortisation expense | 936.01 | 955.98 | 928.13 | 3,959.88 |
| Net Profit for the period (before tax, Exceptional and /or Extraordinary items) | 2,797.92 | 2,341.82 | 2,422.02 | 9,139.81 |
| Share in net loss of associate | (0.08) | (0.77) | (0.74) | (2.37) |
| Exceptional items, net | - | (199.28) | - | (385.87) |
| Net Profit / (Loss) for the period before tax (after Exceptional and / or Extraordinary items) | 2,797.84 | 2,141.77 | 2,421.28 | 8,751.57 |
| Net Profit / (Loss) for the period after tax (after Exceptional and / or Extraordinary items) | 2,086.00 | 3,149.61 | 1,677.23 | 7,528.40 |
| Total Comprehensive Income for the period [Comprising Profit/ (Loss) for the period (after tax) and Other Comprehensive Income (after tax)] | 1,849.44 | 2,878.38 | 1,645.11 | 7,202.80 |
| Equity Share Capital | 2,126.41 | 2,126.41 | 2,098.94 | 2,126.41 |
| Reserves (Excluding Revaluation Reserve) as shown in the Audited Balance Sheet of the previous year | - | - | - | 62,779.30 |
| Earnings Per Share (of Rs. 5/- each) (For continuing and discontinued operations) - | | | | |
| 1. Basic: | 4.88 | 7.24 | 4.07 | 17.76 |
| 2. Diluted: | 4.85 | 7.16 | 3.77 | 17.22 |

1. In terms of Regulation 33 of the SEBI (Listing Obligations and Disclosure Requirements) Regulations 2015, the aforesaid Statement of unaudited consolidated financial results for the quarter ended June 30, 2025 of AXISCADES Technologies Limited (the "Holding Company" or the "Company"), its subsidiaries (the Holding Company and its subsidiaries together hereinafter referred to as "the Group") and its associate has been reviewed by the Audit Committee and approved by the Board of Directors at their meeting held on August 7, 2025. The aforesaid unaudited consolidated financial results for the quarter ended June 30, 2025 have been reviewed by statutory auditors of the Company.
2. The unaudited consolidated financial results have been prepared in accordance with the recognition and measurement principles laid down in the applicable Indian Accounting Standards ("Ind AS") as prescribed under Section 133 of the Companies Act, 2013, as amended, read with relevant rules issued thereunder and in terms of Regulation 33 of the SEBI (Listing Obligations and Disclosure Requirements) Regulations, 2015, as amended from time to time.
3. The previous period / year figures have been regrouped / rearranged wherever necessary to conform with the current period presentation.
4. Additional information on Standalone Financial Results is as follows:

(₹ in Lacs)

| Particulars | Quarter Ended | | | Year Ended |
|---|---|---|---|---|
| | 30 June 2025 (Unaudited) | 31 Mar. 2025 (Audited) | 30 June 2024 (Unaudited) | 31 Mar. 2025 (Audited) |
| Total revenue (including other income ) | 10,896.59 | 10,184.05 | 10,633.43 | 41,210.99 |
| EBITDA* | 1,315.44 | 1,250.34 | 2,231.84 | 6,697.53 |
| Profit before tax | 725.32 | 286.67 | 1,929.97 | 3,117.52 |
| Profit after tax | 655.83 | 1,902.23 | 1,525.13 | 4,059.41 |
| Total comprehensive income | 278.37 | 1,785.56 | 1,518.83 | 3,813.24 |

* Excluding other income.

5. The above unaudited consolidated financial results of the Group are available on the Company's website (www.axiscades.com) and also on the website of BSE (www.bseindia.com) and NSE (www.nseindia.com), where the shares of the Company are listed.

For **AXISCADES Technologies Limited**
Sd/-
**Dr. Sampath Ravinarayanan**
Chairman

Place : Bengaluru
Dated : August 7, 2025

# ವರುಣ, ಶಿವಾಜಿನಗರದಲ್ಲೂ 'ಮತ ಕಳವು'

## ದಾಖಲೆ ಪ್ರದರ್ಶಿಸಿದ ಅರವಿಂದ ಲಿಂಬಾವಳಿ • ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಅಕ್ರಮ ನಡೆದಿಲ್ಲ: ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ರಾಹುಲ್ ಗಾಂಧಿ ಅವರ 'ಮತ ಕಳ್ಳತನ'ದ ತರ್ಕವನ್ನು ಅನ್ವಯಿಸುವುದೇ ಆದರೆ ವರುಣ, ಸಂಡೂರು, ಮಸ್ಕಿ, ಮಾನ್ವಿ, ಬಿಟಿಎಂ ಲೇಔಟ್, ಶಿವಾಜಿನಗರ, ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರಗಳಲ್ಲೂ 'ಮತ ಕಳ್ಳತನ' ಆಗಿದೆ' ಎಂದು ಹೇಳಿದ ಮಾಜಿ ಸಚಿವ ಅರವಿಂದ ಲಿಂಬಾವಳಿ, ಅದಕ್ಕೆ ಪೂರಕ ದಾಖಲೆಗಳನ್ನೂ ಪ್ರದರ್ಶಿಸಿದರು.

'ಆದರೆ, ನಾನು ರಾಹುಲ್ ಗಾಂಧಿಯಂತೆ ಬಾಲಿಶವಾಗಿ 'ಮತ ಕಳ್ಳತನ' ಎಂದು ಆರೋಪ ಮಾಡುವುದಿಲ್ಲ. ವಾಸ್ತವ ಚಿತ್ರಣವನ್ನು ಮುಂದಿಡುತ್ತಿದ್ದೇನೆ. ನೀವೇ ಮತದಾರರ ಪಟ್ಟಿಯನ್ನು ಪರಿಶೀಲಿಸಿ' ಎಂದು ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಹೇಳಿದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರತಿನಿಧಿಸುವ ವರುಣ ವಿಧಾನಸಭಾ ಕ್ಷೇತ್ರದಲ್ಲೂ ವಿಳಾಸವಿಲ್ಲದ ಮತದಾರರ ಸಂಖ್ಯೆ ಬಹಳಷ್ಟಿವೆ. ಇಲ್ಲಿ ಪಾರ್ಟ್ ನಂಬರ್ 8ರಲ್ಲಿ ಮತದಾರರ ಮನೆ ವಿಳಾಸ 000 ಎಂದು ಇದೆ. ಇಂತಹ ಮತದಾರರ ಪಟ್ಟಿಯ ಹಲವು



ದಾಖಲೆ ಪ್ರದರ್ಶಿಸಿದ ಅರವಿಂದ ಲಿಂಬಾವಳಿ

ಪುಟಗಳು ನನ್ನಲ್ಲಿ ಇವೆ. ಹಾಗಿದ್ದರೆ ಸಿದ್ದರಾಮಯ್ಯ ಅವರ ಕ್ಷೇತ್ರದಲ್ಲೂ ನಕಲಿ ಮತಗಳಿವೆಯೇ? ಇಂತಹ ಲೋಪಗಳನ್ನು ಹುಡುಕಲು ರಾಹುಲ್ ಗಾಂಧಿಯ ರೀತಿ ಆರು ತಿಂಗಳು ಬೇಕಿಲ್ಲ. ಕೇವಲ 24 ಗಂಟೆಯಲ್ಲಿ ಸಿದ್ಧಪಡಿಸಿದ್ದೇನೆ' ಎಂದು ಹೇಳಿದರು.

'ಸಂಡೂರಿನಲ್ಲೂ ಇದೇ ರೀತಿ ಆಗಿದೆ. ಪಾರ್ಟ್ ಸಂಖ್ಯೆ 6 ರಲ್ಲಿ 00 ಮನೆ ವಿಳಾಸ ಇರುವ ಸಂಖ್ಯೆಯ ಹಲವು ಮತದಾರರು ಇದ್ದಾರೆ. ಮಾನ್ವಿಯಲ್ಲಿ ಪಾರ್ಟ್ 6ರಲ್ಲಿ, ಮಸ್ಕಿಯ ಪಾರ್ಟ್ ಸಂಖ್ಯೆ 1ರಲ್ಲಿ ಇದೇ

> **ಮತದಾರರ ಪಟ್ಟಿ ತಯಾರಿಕೆಯಲ್ಲಿ ಪ್ರಧಾನಿ ಅಥವಾ ಬಿಜೆಪಿ ನಾಯಕರ ಪಾತ್ರ ಇರುತ್ತದೆಯೇ? ರಾಜ್ಯ ಸರ್ಕಾರದ ಅಧಿಕಾರಿಗಳೇ ಪಟ್ಟಿ ತಯಾರಿಸುತ್ತಾರೆ. ರಾಹುಲ್ ಅವರದು ಠುಸ್ ಪಟಾಕಿ**
> **ಆರ್.ಅಶೋಕ,** ವಿಧಾನಸಭೆ ವಿರೋಧ ಪಕ್ಷದ ನಾಯಕ

> **ದೇಶದ ವಿರೋಧ ಪಕ್ಷ ನಾಯಕ ರಾಹುಲ್ ಗಾಂಧಿ ಬಹುಶಃ ಒಬ್ಬ ಹುಡುಗಾಟದ ಹುಡುಗ. ಹೀಗೆ ಆಡುತ್ತಿದ್ದರೆ ಜನರು ನಿಮ್ಮನ್ನು ಪ್ರಬುದ್ಧ ನಾಯಕ ಎಂದು ಕರೆಯುವುದಿಲ್ಲ**
> **ಛಲವಾದಿ ನಾರಾಯಣಸ್ವಾಮಿ,** ವಿರೋಧ ಪಕ್ಷದ ನಾಯಕ, ವಿಧಾನಪರಿಷತ್ತು

ರೀತಿ ಇದೆ. ಹಾಗಿದ್ದರೆ ಇದು ಮತ ಕಳ್ಳತನ ಅಲ್ಲವೇ? ರಾಹುಲ್ ಗಾಂಧಿ ಸ್ವಲ್ಪ ಇಲ್ಲೂ 'ಗ್ರೌಂಡ್ ವರ್ಕ್' ಮಾಡಿ ಹೇಳಬೇಕಿತ್ತು' ಎಂದು ಹೇಳಿದರು.

ಬಿಟಿಎಂ ಲೇಔಟ್‌ನಲ್ಲಿ ಬಲ್ಕ್ ಮತದಾರರು ಇರುವ ಕೆಲವು ಕೊಠಡಿಗಳ ವಿಳಾಸ ನೀಡಿ, ಅದರ ದಾಖಲೆಗಳನ್ನೂ ಪ್ರದರ್ಶಿಸಿದ ಲಿಂಬಾವಳಿ, 'ಚಾಮರಾಜಪೇಟೆ, ಶಿವಾಜಿನಗರದಲ್ಲೂ ಡಬಲ್ ಎಂಟ್ರಿ ಆಗಿದೆ. ಆಯಿಷಾ ಬಾನು ಎಂಬುವರ ಹೆಸರು ಚಾಮರಾಜಪೇಟೆಯಲ್ಲಿ ಪಾರ್ಟ್ ಸಂಖ್ಯೆ 45 ಮತ್ತು 47ರಲ್ಲಿ ಎರಡು ಕಡೆಗಳಲ್ಲಿದೆ. ಶಿವಾಜಿನಗರದ ಪಾರ್ಟ್ ನಂಬರ್ 169, ಪಾರ್ಟ್ ನಂಬರ್ 11ರಲ್ಲಿ ರಹಮತ್ ಉಲ್ಲಾ ಎಂಬುವರ ಹೆಸರಿದೆ' ಎಂದು ಕ್ರಮಾಂಕದ ಜೊತೆಗೆ ಲಿಂಬಾವಳಿ ವಿವರಿಸಿದರು.

**ರಾಹುಲ್‌ಗೆ ಏಕೆ ಅಸಮಾಧಾನ?:** 'ಮಹದೇವಪುರ ಕ್ಷೇತ್ರದಲ್ಲಿ ಬಿಜೆಪಿಯ ಮತ ಗಳಿಕೆ ನಿರಂತರವಾಗಿ ಏರುಗತಿಯಲ್ಲಿದೆ. ಇದಕ್ಕೆ ರಾಹುಲ್‌ಗೆ ಅಸಮಾಧಾನ ಏಕೆ ಎಂಬುದು ಅರ್ಥ ಆಗುತ್ತಿಲ್ಲ. ಬೆಂಗಳೂರಿನಲ್ಲಿ ಅತಿ ಹೆಚ್ಚು ಜನ ವಲಸಿಗರು ವಾಸವಿರುವ ಮತ್ತು ಅತಿ ಹೆಚ್ಚು ತೆರಿಗೆ ಪಾವತಿ ಮಾಡುವ ಕ್ಷೇತ್ರ ನಮ್ಮದು' ಎಂದರು.

'ಮಹದೇವಪುರದಲ್ಲಿ ಚುನಾವಣಾ ಅಕ್ರಮಗಳು ನಡೆದಿಲ್ಲ. ನಮ್ಮ ಪಕ್ಷಕ್ಕೆ ಅಲ್ಲಿ ಸಹಜವಾದ ಬೆಳವಣಿಗೆ ಇದೆ. ಇಷ್ಟು ದಿನ ಇವಿಎಂ ಬೈಯ್ಯುತ್ತಿದ್ದರು. ಈಗ ಮತದಾರರ ಪಟ್ಟಿ ಹಿಡಿದುಕೊಂಡಿದ್ದಾರೆ' ಎಂದು ಟೀಕಿಸಿದರು.

### ನಾಲ್ಕೂ ಕ್ಷೇತ್ರಗಳಲ್ಲೂ ಬಿಜೆಪಿಗೆ ಮುನ್ನಡೆ ಇತ್ತು

'2024 ರ ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದಲ್ಲಿ ಏಳು ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಮುಂದಿತ್ತು ಎಂದು ರಾಹುಲ್ ಗಾಂಧಿ ಸುಳ್ಳು ಮಾಹಿತಿ ನೀಡಿದ್ದಾರೆ. ವಾಸ್ತವದಲ್ಲಿ ರಾಜಾಜಿನಗರ, ಗಾಂಧಿನಗರ, ಸಿ.ವಿ.ರಾಮನ್ ನಗರ ಮತ್ತು ಮಹದೇವಪುರ ಕ್ಷೇತ್ರಗಳಲ್ಲಿ ಬಿಜೆಪಿ ಮುಂದಿತ್ತು. ಈ ನಾಲ್ಕೂ ಕ್ಷೇತ್ರಗಳಿಂದ 32,707 ಮತಗಳ ಅಂತರದಿಂದ ಗೆದ್ದಿದ್ದೇವೆ' ಎಂದು ಅರವಿಂದ ಲಿಂಬಾವಳಿ ಹೇಳಿದರು.

'2019ರ ಚುನಾವಣೆಯಲ್ಲಿ ಪಿ.ಸಿ.ಮೋಹನ್ 69,974 ಮತಗಳ ಅಂತರದಿಂದ ಗೆದ್ದಿದ್ದರು. ಆಗ ಮಹದೇವಪುರದಲ್ಲಿ 72,559 ಮತಗಳ ಮುನ್ನಡೆ ಕೊಟ್ಟೆವು. ಈ ಬಾರಿ 1,14,046 ಮತಗಳ ಮುನ್ನಡೆ ಕೊಟ್ಟೆವು. ಮಹದೇವಪುರ ಬಿಜೆಪಿಯ ಭದ್ರಕೋಟೆ' ಎಂದು ಅವರು ತಿಳಿಸಿದರು.

### ಮೂರ್ಖರಂತೆ ಮಾತಾಡುತ್ತಿರುವ ಕಾಂಗ್ರೆಸಿಗರು: ವಿಜಯೇಂದ್ರ

'ರಾಹುಲ್ ಹೇಳಿಕೆ ನಂತರ ನಮ್ಮ ರಾಜ್ಯದಲ್ಲೂ ಕಾಂಗ್ರೆಸ್‌ನ ಹಿರಿಯ ನಾಯಕರು ಮೂರ್ಖರಂತೆ ಮಾತನಾಡುತ್ತಿದ್ದಾರೆ. ಲೋಕಸಭೆಯ ವಿಸರ್ಜನೆಗೆ ಒತ್ತಾಯಿಸುತ್ತಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಟೀಕಿಸಿದರು.

ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ 16 ಸ್ಥಾನಗಳನ್ನು ಗೆಲ್ಲುತ್ತದೆ ಎಂದು ಸಮೀಕ್ಷೆಗಳು ಹೇಳಿದ್ದವು ಎಂದು ರಾಹುಲ್ ತಿಳಿಸಿದ್ದಾರೆ. ಯಾವ ಸಮೀಕ್ಷೆಗಳೂ ಆ ರೀತಿ ಹೇಳಿಲ್ಲ. ಯಾರೋ ಮೂರ್ಖರು 16 ಸ್ಥಾನಗಳು ಗೆಲ್ಲಲಿದ್ದೇವೆ ಎಂದು ರಾಹುಲ್ ಗಾಂಧಿಗೆ ಹೇಳಿರಬಹುದು' ಎಂದು ವ್ಯಂಗ್ಯವಾಡಿದರು.

'2019ರಲ್ಲಿ ಬಿಜೆಪಿ 25 ಸ್ಥಾನಗಳನ್ನು ಗೆದ್ದಿತ್ತು. 2024ರಲ್ಲಿ ಕಡಿಮೆ ಆಗಿದೆ. ಹಾಗಿದ್ದರೆ ಅಕ್ರಮ ಆಗಿದೆ ಎಂದು ಬಿಜೆಪಿ ಹೇಳಬೇಕೆ' ಎಂದು ಪ್ರಶ್ನಿಸಿದರು.

## ದನ ಕಾಯುವ ಮಕ್ಕಳಂತೆ ರಾಹುಲ್ ಆರೋಪ: ಸೋಮಣ್ಣ

ಪ್ರಜಾವಾಣಿ ವಾರ್ತೆ

ವಿ.ಸೋಮಣ್ಣ

**ನವದೆಹಲಿ:** ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅಪ್ರಬುದ್ಧ ನಾಯಕ. ದನ ಕಾಯುವ ಮಕ್ಕಳ ರೀತಿಯಲ್ಲಿ ಅವರು ಆಪಾದನೆ ಮಾಡುತ್ತಿದ್ದಾರೆ ಎಂದು ಕೇಂದ್ರ ಸಚಿವ ವಿ.ಸೋಮಣ್ಣ ಟೀಕಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಜನರನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಲೋಕಸಭೆ ಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್ ಸರ್ಕಾರ ಇತ್ತು. ರಾಜ್ಯ ಸರ್ಕಾರದ ಅಧಿಕಾರಿಗಳನ್ನೇ ಚುನಾವಣಾ ಕೆಲಸಕ್ಕೆ ನಿಯೋಜಿಸಲಾಗಿತ್ತು. ಅನಗತ್ಯವಾಗಿ ಕೇಂದ್ರ ಸರ್ಕಾರದ ಮೇಲೆ ಆರೋಪಿಸುವುದು ತಪ್ಪು' ಎಂದರು.

'ರಾಜ್ಯದ ಆರ್ಥಿಕ ಸ್ಥಿತಿ ಅಧಃಪತನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಒಬ್ಬರೇ ಕಾರಣ ಅಲ್ಲ, ರಾಹುಲ್ ಗಾಂಧಿ ಕೂಡ ಕಾರಣ' ಎಂದು ಆರೋಪಿಸಿದರು.

### ಮತದಾರರ ಗುರುತಿನ ಚೀಟಿಗೆ ಆಧಾರ್ ಜೋಡಿಸಿ: ಎಚ್‌.ಡಿ.ಕುಮಾರಸ್ವಾಮಿ

ಮತಕಳ್ಳತನ ತಡೆಯಲು ಮತದಾರರ ಗುರುತಿನ ಚೀಟಿಗೆ ಆಧಾರ್ ಸಂಖ್ಯೆಯನ್ನು ಜೋಡಿಸುವುದೇ ಪರಿಹಾರ ಎಂದು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರು ಚುನಾವಣಾ ಆಯೋಗಕ್ಕೆ ಸಲಹೆ ಮಾಡಿದ್ದಾರೆ.

ಈ ಬಗ್ಗೆ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಮತಕಳ್ಳತನ ಎಂಬುದು ಕೆಲವರ ಕಪಟ ಕಥೆ. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಿರಿ ಎಂದು ಆಯೋಗಕ್ಕೆ ಸಲಹೆ ಮಾಡಿದ್ದಾರೆ.

ಸಾಂವಿಧಾನಿಕ ಸಂಸ್ಥೆಗಳ ಮೇಲೆ ಅಸತ್ಯದ ಆರೋಪದ ಮೂಲಕ ಅನುಮಾನದ ಪ್ರಯೋಜನ ಪಡೆಯುವ ಕಿಡಿಗೇಡಿ ಪಿತೂರಿಯಾಗಿದೆ. ಚುನಾವಣೆಯಲ್ಲಿ ಎಸಗಿದ ಪಾಪವನ್ನು ಸುಳ್ಳಿನಿಂದ ಮುಚ್ಚಿಕೊಳ್ಳುವ ಗೊಬೆಲ್ ರಾಜಕಾರಣವಾಗಿದೆ ಎಂದು ಅವರು ಆರೋಪ ಮಾಡಿದ್ದಾರೆ.

### ರಾಹುಲ್ ಪಲಾಯನ: ಜೋಶಿ ವ್ಯಂಗ್ಯ

ಪ್ರಲ್ಹಾದ ಜೋಶಿ

'ಮತಕಳ್ಳತನದ ಆರೋಪಗಳ ಬಗ್ಗೆ ಕಚೇರಿಗೆ ಬಂದು ಸ್ಪಷ್ಟನೆ ನೀಡುವಂತೆ ರಾಹುಲ್ ಗಾಂಧಿ ಅವರಿಗೆ ಚುನಾವಣಾ ಆಯೋಗ ಸೂಚಿಸಿತ್ತು. ಆದರೆ, ಅವರು ಕಚೇರಿಗೆ ತೆರಳದೆ ಪಲಾಯನ ಮಾಡಿದ್ದಾರೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ವ್ಯಂಗ್ಯವಾಡಿದರು.

ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಸ್ವಾತಂತ್ರ್ಯ ಉದ್ಯಾನದಿಂದ ಚುನಾವಣಾ ಆಯೋಗಕ್ಕೆ ಐದು ನಿಮಿಷಗಳಲ್ಲಿ ಹೋಗಬಹುದು. ಆದರೆ, ಅವರು ಆಯೋಗದ ಕಚೇರಿಗೆ ಹೋಗಿಲ್ಲ. ಇನ್ಯಾರನ್ನೋ ಕಳುಹಿಸಿದ್ದಾರೆ. ನಿಮ್ಮ ಆರೋಪಕ್ಕೆ ಆಧಾರ ಇಲ್ಲ ಎಂಬುದು ಇದರ ಅರ್ಥ' ಎಂದರು.

## 'ಮತದಾರರ ಪಟ್ಟಿ ತೆಗೆದ ಆಯೋಗ'

ಪ್ರಜಾವಾಣಿ ವಾರ್ತೆ

ಎಚ್‌.ಸಿ. ಮಹದೇವಪ್ಪ

**ಬೆಂಗಳೂರು:** 'ಮತ ಕಳ್ಳತನದ ಬಗ್ಗೆ ರಾಹುಲ್ ಗಾಂಧಿ ಅವರು ದಾಖಲೆ ಬಿಡುಗಡೆ ಮಾಡಿದ ಕೂಡಲೇ ಚುನಾವಣಾ ಆಯೋಗವು, ರಾಜ್ಯದ ಮತದಾರರ ಪಟ್ಟಿಯನ್ನು ತನ್ನ ಡೊಮೈನ್‌ನಿಂದ ತೆಗೆದುಹಾಕಿದೆ' ಎಂದು ಸಮಾಜ ಕಲ್ಯಾಣ ಸಚಿವ ಎಚ್‌.ಸಿ.ಮಹದೇವಪ್ಪ ಹೇಳಿದ್ದಾರೆ.

ಲೋಕಸಭಾ ಚುನಾವಣೆ ಯಲ್ಲಿ ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ 1 ಲಕ್ಷಕ್ಕೂ ಹೆಚ್ಚು ಮತಗಳನ್ನು ಕಳವು ಮಾಡಲಾಗಿದೆ ಎಂದು ರಾಹುಲ್ ಗಾಂಧಿ ಅವರು ಮಾಡಿರುವ ಆರೋಪದ ಬಗ್ಗೆ ಪ್ರತಿಕ್ರಿಯೆ ನೀಡಿರುವ ಅವರು, 'ಬಿಜೆಪಿಯವರ ಕರಾಳ ಮುಖ ಈಗ ಬಯಲಾಗಿದೆ. ಚುನಾವಣಾ ಆಯೋಗವನ್ನು ಬಿಜೆಪಿ ಬಳಸಿಕೊಳ್ಳುತ್ತಿದೆ ಎಂಬುದಕ್ಕೆ, ರಾಜ್ಯಗಳ ಮತದಾರರ ಪಟ್ಟಿಯನ್ನು ತೆಗೆದುಹಾಕಿರುವುದೇ ಸಾಕ್ಷಿ' ಎಂದಿದ್ದಾರೆ.

'ಒಬ್ಬರಿಗೆ ಒಂದು ಮತ ವ್ಯವಸ್ಥೆ ತರುವ ಮೂಲಕ ಬಾಬಾಸಾಹೇಬ ಅಂಬೇಡ್ಕರ್ ಅವರು ಎಲ್ಲರಿಗೂ ಆಡಳಿತದ ಗತಿ ನಿರ್ಧರಿಸುವ ಅಧಿಕಾರ ನೀಡಿದ್ದರು. ಈಗ ಬಿಜೆಪಿ ಒಬ್ಬರಿಗೆ ನಾಲ್ಕಾರು ಮತ ನೀಡುವ ಮೂಲಕ, ಜನಸಾಮಾನ್ಯರ ಈ ಅಧಿಕಾರವನ್ನು ಕಿತ್ತುಕೊಂಡಿದೆ' ಎಂದು ದೂರಿದ್ದಾರೆ.

## ದೇಶದಲ್ಲಿ ಒಳನುಸುಳುಕೋರರಿಗೆ ಮತದಾನದ ಹಕ್ಕು ಇಲ್ಲ: ಅಮಿತ್ ಶಾ

ಸೀತಾಮಡಿ (ಬಿಹಾರ), (ಪಿಟಿಐ): 'ಒಳನುಸುಳುಕೋರರಿಗೆ ಮತದಾನದ ಹಕ್ಕು ಇಲ್ಲ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶುಕ್ರವಾರ ಇಲ್ಲಿ ಹೇಳಿದರು.

ಜಿಲ್ಲೆಯ ಪುನೌರಾಧಾಮದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿ, ಕಾಂಗ್ರೆಸ್– ಆರ್‌ಜೆಡಿ ಮೈತ್ರಿಕೂಟದ ನಿಲುವಿನ ವಿರುದ್ಧ ಹರಿಹಾಯ್ದರು.

'ಮತದಾರರ ಪಟ್ಟಿಯಿಂದ ನುಸುಳುಕೋರರ ಹೆಸರುಗಳನ್ನು ತೆಗೆಯಲಾಗುತ್ತಿದೆ. ಅವರಿಗೆ ಮತ ಚಲಾಯಿಸುವ ಹಕ್ಕು ಇಲ್ಲ. ಆದರೆ, ನುಸುಳುಕೋರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆಯುತ್ತಿರುವುದರಿಂದಲೇ ಆರ್‌ಜೆಡಿ ಮತ್ತು ಕಾಂಗ್ರೆಸ್ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆಯನ್ನು ವಿರೋಧಿಸುತ್ತಿವೆ. ರಾಹುಲ್ ಗಾಂಧಿ ತಮ್ಮ ರಾಜಕೀಯ ಲಾಭಕ್ಕಾಗಿ ಎಸ್‌ಐಆರ್ ಅನ್ನು ಬಳಸಿಕೊಳ್ಳುತ್ತಿದ್ದಾರೆ' ಎಂದು ದೂರಿದರು.

ರಾಜ್ಯ ಚುನಾವಣಾ ಆಯೋಗದ ಜಾಲತಾಣದಲ್ಲಿಲ್ಲ ಮಾಹಿತಿ

# 2024ರ ಮತದಾರರ ಪಟ್ಟಿ ಕಾಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯ ಮುಖ್ಯ ಚುನಾವಣಾಧಿಕಾರಿಯ ಜಾಲತಾಣ ಮತ್ತು ಚುನಾವಣಾ ಆಯೋಗದ ಮತದಾರರ ಸೇವಾ ಪೋರ್ಟಲ್‌ನಲ್ಲಿ, ರಾಜ್ಯದ 2024ರ ಅವಧಿಯ ಮತದಾರರ ಪಟ್ಟಿಗಳೇ ಕಾಣಿಸುತ್ತಿಲ್ಲ.

2024ರ ಲೋಕಸಭಾ ಚುನಾವಣೆಯಲ್ಲಿ, ಮಹದೇವಪುರ ಕ್ಷೇತ್ರದಲ್ಲಿ 1 ಲಕ್ಷಕ್ಕಿಂತ ಹೆಚ್ಚು ಮತದಾರರನ್ನು ಅಕ್ರಮವಾಗಿ ಸೇರಿಸಲಾಗಿದೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಗುರುವಾರ ಆರೋಪಿಸಿದ್ದರು. ಈ ಆರೋಪದ ಬೆನ್ನಲ್ಲೇ ಚುನಾವಣಾ ಆಯೋಗವು ಮತದಾರರ ಪಟ್ಟಿಯನ್ನು ತೆಗೆದುಹಾಕಿದೆ ಎಂದೂ ಶುಕ್ರವಾರ ಆಪಾದಿಸಿದರು.

ಇದನ್ನು ಪರಿಶೀಲಿಸುವ ಸಲುವಾಗಿ ರಾಜ್ಯ ಮುಖ್ಯ ಚುನಾವಣಾಧಿಕಾರಿಯ ಅಧಿಕೃತ ಜಾಲತಾಣದಲ್ಲಿ ಮಹದೇವಪುರ ವಿಧಾನಸಭಾ ಕ್ಷೇತ್ರದ ಮತದಾರರ ಪಟ್ಟಿಯನ್ನು ಡೌನ್‌ಲೋಡ್ ಮಾಡಲು ಯತ್ನಿಸಲಾಯಿತು. ಆದರೆ ಯಾವುದೇ ಕಡತಗಳು ಡೌನ್‌ಲೋಡ್ ಆಗಲಿಲ್ಲ.

ಮತದಾರರ ಪಟ್ಟಿಯನ್ನು ಡೌನ್ ಲೋಡ್ ಮಾಡಲು ರಾಜ್ಯ, ಜಿಲ್ಲೆ, ವಿಧಾನಸಭಾ ಕ್ಷೇತ್ರ, ಪಾರ್ಟ್ ಸಂಖ್ಯೆ, ಮತದಾರರ ಪಟ್ಟಿಯ ವರ್ಷ ಮತ್ತು ಜಾಲತಾಣದಲ್ಲಿ ಗೋಚರಿಸುವ 'ಕ್ಯಾಪ್ಚಾ' ಕೋಡ್ ಅನ್ನು ತುಂಬಿಸಬೇಕು. ಈ ಎಲ್ಲ ವಿವರಗಳನ್ನು ಸರಿಯಾಗಿ ತುಂಬಿದ ನಂತರವೂ ಮತದಾರರ ಪಟ್ಟಿ ಡೌನ್‌ಲೋಡ್ ಆಗುತ್ತಿಲ್ಲ.

ಮಹದೇವಪುರ ವಿಧಾನಸಭಾ ಕ್ಷೇತ್ರದ ಮತದಾರರ ಪಟ್ಟಿ ಡೌನ್‌ಲೋಡ್ ಆಗುತ್ತಿಲ್ಲ. 'ವಾರ್ನಿಂಗ್, ಸಕ್ಸಸ್' ಎಂಬ ಸಂದೇಶ ಬಿತ್ತರವಾಗುತ್ತಿದೆ

ಮಹದೇವಪುರ ಕ್ಷೇತ್ರದ ಯಾವುದೇ ಪಾರ್ಟ್‌ನ ಮತದಾರರ ಪಟ್ಟಿ ಡೌನ್‌ಲೋಡ್‌ಗೆ ವಿವರಗಳನ್ನು ನಮೂದಿಸಿದರೆ, 'ವಾರ್ನಿಂಗ್ * ಸಕ್ಸಸ್' ಎಂಬ ಸಂದೇಶ ಬಿತ್ತರವಾಗುತ್ತದೆ. ಆದರೆ ಯಾವುದೇ ಕಡತ ಡೌನ್‌ಲೋಡ್ ಆಗುತ್ತಿಲ್ಲ.

ಬಿಟಿಎಂ ಬಡಾವಣೆ, ವರುಣ, ಚಾಮರಾಜ, ದಾಸರಹಳ್ಳಿ, ಗೋವಿಂದ ರಾಜನಗರ ಕ್ಷೇತ್ರಗಳ ವಿವರವನ್ನು ನಮೂದಿಸಿದಾಗಲೂ ಯಾವುದೇ ಕಡತ ಡೌನ್‌ಲೋಡ್ ಆಗುತ್ತಿಲ್ಲ. ಬದಲಿಗೆ, 'ಇನ್‌ವ್ಯಾಲಿಡ್ ಕ್ಯಾಪ್ಚಾ, ಎರರ್' ಎಂಬ ಸಂದೇಶಗಳು ಬರುತ್ತಿವೆ. ಸರಿಯಾದ ವಿವರಗಳನ್ನು ನಮೂದಿಸಿ ಹಲವು ಬಾರಿ ಯತ್ನಿಸಿದರೂ 'ಎರರ್' ಸಂದೇಶಗಳು ಬರುತ್ತಿವೆಯೇ ಹೊರತು, ಮತದಾರರ ಪಟ್ಟಿ ಡೌನ್‌ಲೋಡ್ ಆಗುತ್ತಿಲ್ಲ.

ಆದರೆ 2025ರ ಕರಡು, ಅಂತಿಮ ಮತ್ತು ಹೆಚ್ಚುವರಿ ಮತದಾರರ ಪಟ್ಟಿಗಳು ಯಾವುದೇ ಸಮಸ್ಯೆ ಇಲ್ಲದೆ ಡೌನ್‌ಲೋಡ್ ಆಗುತ್ತಿವೆ.

### ವೆಬ್‌ಸೈಟ್‌ಗಳು ಸ್ಥಗಿತವಾಗಿಲ್ಲ: ಆಯೋಗ

**ನವದೆಹಲಿ (ಪಿಟಿಐ):** ವಿವಿಧ ರಾಜ್ಯಗಳಲ್ಲಿನ ಚುನಾವಣಾ ಆಯೋಗದ ವೆಬ್‌ಸೈಟ್‌ಗಳು ಸ್ಥಗಿತವಾಗಿವೆ ಮತ್ತು ಅದರಲ್ಲಿನ ಮತದಾರರ ಪಟ್ಟಿಯನ್ನು ಅಳಿಸಿಹಾಕಲಾಗಿದೆ ಎಂಬ ಆರೋಪಗಳನ್ನು ಚುನಾವಣಾ ಆಯೋಗ ಶುಕ್ರವಾರ ನಿರಾಕರಿಸಿದೆ.

'ರಾಜ್ಯ ಮುಖ್ಯ ಚುನಾವಣಾಧಿಕಾರಿಗಳ ವೆಬ್‌ಸೈಟ್‌ಗಳಲ್ಲಿನ ಮತದಾರರ ಪಟ್ಟಿಯನ್ನು ತೆಗೆದುಹಾಕಿಲ್ಲ. ಯಾರೂ ಬೇಕಾದರೂ ಅದನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು' ಎಂದು ಆಯೋಗವು 'ಎಕ್ಸ್'ನಲ್ಲಿ ಸ್ಪಷ್ಟಪಡಿಸಿದೆ.

ಮತ ಕಳ್ಳತನದ ಬಗ್ಗೆ ಲೋಕಸಭೆಯ ವಿರೋಧಪಕ್ಷದ ನಾಯಕ ರಾಹುಲ್‌ಗಾಂಧಿ ಅವರು ಗುರುವಾರ ಪತ್ರಿಕಾಗೋಷ್ಠಿ ನಡೆಸಿದ ಬಳಿಕ ಆಯೋಗದ ವೆಬ್‌ಸೈಟ್‌ಗಳಲ್ಲಿನ ಮತದಾರರ ಪಟ್ಟಿಯನ್ನು ಅಳಿಸಿಹಾಕಲಾಗಿದೆ ಎಂದು ಹಲವರು ಆರೋಪಿಸಿದ್ದರು.

## ಚುನಾವಣಾ ಅಕ್ರಮದ ಡಿಎನ್‌ಎ ಇರುವುದು ಕಾಂಗ್ರೆಸ್‌ಗೆ: ಸಿ.ಟಿ.ರವಿ

ಪ್ರಜಾವಾಣಿ ವಾರ್ತೆ

ಸಿ.ಟಿ. ರವಿ

**ಚಿಕ್ಕಮಗಳೂರು:** 'ಮತ ಕಳವು ಆಗುವುದಿದ್ದರೆ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರ ಅಳಿಯ ಗೆಲ್ಲುತ್ತಿರಲಿಲ್ಲ. ಚುನಾವಣಾ ಅಕ್ರಮ ಸಾಬೀತಾಗಿರುವ ಡಿಎನ್‌ಎ ಇರುವುದು ಕಾಂಗ್ರೆಸ್ ಪಕ್ಷಕ್ಕೆ' ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಹೇಳಿದರು.

'ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆದಿರುವ 94 ಚುನಾವಣೆಗಳಲ್ಲಿ ಬೆರಳೆಣಿಕೆಯಷ್ಟು ಗೆದ್ದಿವೆ. ಕಾಂಗ್ರೆಸ್ ಗೆದ್ದರೆ ಪ್ರಜಾಪ್ರಭುತ್ವದ ಗೆಲುವು ಎನ್ನುವುದು, ಸೋತರೆ ಮತ ಕಳುವು ಎನ್ನುವುದು. ಇದು ಹುಚ್ಚಾಸ್ಪತ್ರೆ ರೋಗಿಯ ಮನಸ್ಥಿತಿ' ಎಂದು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

'ರಾಹುಲ್ ಗಾಂಧಿ ದಾರಿ ತಪ್ಪಿದ ನಾಯಕ. ಮೂರ್ಖ ನಾಯಕನನ್ನು ಮೂಢರಂತೆ ಆ ಪಕ್ಷದ ಇತರ ನಾಯಕರು ಹಿಂಬಾಲಿಸುತ್ತಿದ್ದಾರೆ. ಅವರು ಕಾಗೆ ಬಿಳಿ ಇದೆ ಎಂದರೆ ಹೌದು ಎಂದು ಸಿದ್ದರಾಮಯ್ಯ ಮತ್ತು ಮಲ್ಲಿಕಾರ್ಜುನ ಖರ್ಗೆ ಗೋಣಾಡಿಸುತ್ತಿದ್ದಾರೆ. ಇದು ಬುದ್ಧಿವಂತಿಕೆಯ ಲಕ್ಷಣವಲ್ಲ, ಬುದ್ಧಿವಂತಿಕೆಯನ್ನು ಒತ್ತೆ ಇಟ್ಟವರ ಲಕ್ಷಣ' ಎಂದು ದೂರಿದರು.

'ಸೈನಿಕರ ವಿರುದ್ಧ ಮಾತನಾಡಿ ನ್ಯಾಯಾಲಯದಿಂದ ಛೀಮಾರಿ ಹಾಕಿಸಿಕೊಂಡಿದ್ದಾರೆ. ಈಗ ಈ ಪ್ರಕರಣದಲ್ಲಿ ಮತ್ತೊಮ್ಮೆ ಛೀಮಾರಿ ಹಾಕಿಸಿಕೊಳ್ಳುವ ಸಾಧ್ಯತೆ ಇದೆ' ಎಂದು ಹೇಳಿದರು.

## 'ಸಹಿ ಹಾಕಿ, ಇಲ್ಲವೇ ಕ್ಷಮೆ ಕೇಳಿ'

ಪ್ರಜಾವಾಣಿ ವಾರ್ತೆ/ಪಿಟಿಐ

**ನವದೆಹಲಿ:** 'ಮತದಾರರ ಪಟ್ಟಿಗೆ ತಪ್ಪಾಗಿ ಹೆಸರು ಸೇರಿಸಲಾದ ಮತ್ತು ಪಟ್ಟಿಯಿಂದ ಕೈಬಿಡಲಾದ ಕುರಿತು ವಿಸ್ತೃತ ಮಾಹಿತಿಗಳನ್ನು ನಮ್ಮೊಂದಿಗೆ ಹಂಚಿಕೊಳ್ಳಿ. ನಿಮ್ಮ 'ಮತ ಕಳವು' ವಿಶ್ಲೇಷಣೆಯು ಸತ್ಯವಾಗಿದೆ ಎಂದು ನಿಮಗನ್ನಿಸಿದರೆ ಪ್ರಮಾಣ ಪತ್ರಕ್ಕೆ ಸಹಿ ಹಾಕಿ ಸಲ್ಲಿಸಿ. ಇಲ್ಲವಾದಲ್ಲಿ, ಇಂಥದ್ದೊಂದು 'ಅಸಂಬದ್ಧ ಆರೋಪ ಮಾಡಿದ್ದೇನೆ' ಎಂದು ದೇಶದ ಕ್ಷಮೆ ಕೇಳಿ' ಎಂದು ಚುನಾವಣಾ ಆಯೋಗವು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಸವಾಲೆಸೆದಿದೆ.

ಚುನಾವಣಾ ಆಯೋಗವು 'ಮತ ಕಳವು' ಮಾಡಿದೆ ಎಂದು ಆರೋಪಿಸಿ ರಾಹುಲ್ ಸುದ್ದಿಗೋಷ್ಠಿ ನಡೆಸಿದ್ದರು. ಬಳಿಕ ಶುಕ್ರವಾರ ಬೆಂಗಳೂರಿನಲ್ಲಿ ಪ್ರತಿಭಟಿಸಿ, ಮತ್ತೊಮ್ಮೆ ಆಯೋಗದ ಕುರಿತು ಆರೋಪ ಮಾಡಿದ್ದರು. ಇದೇ ವೇಳೆ ಆಯೋಗವು ರಾಹುಲ್ ಅವರಿಗೆ ಸಹಿ ಹಾಕುವಂತೆ ಮತ್ತೊಮ್ಮೆ ಹೇಳಿದೆ.

'ತಾನು ಮಾಡುತ್ತಿರುವ ಆರೋಪಗಳು ಸತ್ಯವಾಗಿವೆ ಎಂದು ಅನ್ನಿಸಿದರೆ, ಪ್ರಮಾಣ ಪತ್ರಕ್ಕೆ ಸಹಿ ಹಾಕುವುದಕ್ಕೆ ರಾಹುಲ್ ಅವರಿಗೆ ಯಾವುದೇ ಸಮಸ್ಯೆಯಾಗಬಾರದು. ಒಂದು ವೇಳೆ ಅವರು ಸಹಿ ಮಾಡುವುದಿಲ್ಲ ಎಂದಾದರೆ, ತಮ್ಮ ವಿಶ್ಲೇಷಣೆಯಲ್ಲಿ ಅವರಿಗೇ ನಂಬಿಕೆ ಇಲ್ಲ ಎಂದು ಅಂದುಕೊಳ್ಳಬೇಕಾಗುತ್ತದೆ. ರಾಹುಲ್ ಅವರ ಮುಂದೆ ಎರಡೇ ಆಯ್ಕೆಗಳಿವೆ' ಎಂದು ಆಯೋಗದ ಮೂಲಗಳು ಹೇಳಿವೆ.

'ತಾವು ಸಹಿ ಮಾಡಿದ ಪತ್ರವನ್ನು ರಾಹುಲ್ ಅವರು ನಮಗೆ ಯಾವಾಗಲೂ ನೀಡಿಲ್ಲ. ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯ ಕುರಿತು ಕಳೆದ ವರ್ಷ ಡಿಸೆಂಬರ್‌ನಲ್ಲಿ ರಾಹುಲ್ ಕೆಲವು ಪ್ರಶ್ನೆಗಳನ್ನು ಎತ್ತಿದ್ದರು. ಬಳಿಕ ಕಾಂಗ್ರೆಸ್‌ನ ವಕೀಲರೊಬ್ಬರು ನಮಗೆ ಪತ್ರವೊಂದನ್ನು ಬರೆದರು. ನಾವು ಅವರಿಗೆ 'ವಿಸ್ತೃತವಾದ ಪ್ರತಿಕ್ರಿಯೆ'ಯನ್ನು ನೀಡಿದ್ದೇವೆ. ಇದು ಆಯೋಗದ ವೆಬ್‌ಸೈಟ್‌ನಲ್ಲಿಯೂ ಇದೆ. ಆದರೂ ಆಯೋಗವು ಪ್ರತಿಕ್ರಿಯೆ ನೀಡಿಲ್ಲ ಎಂದು ರಾಹುಲ್ ಹೇಳುತ್ತಾರೆ' ಎಂದಿವೆ.

### 'ಡಿಜಿಟಲ್ ಸ್ವರೂಪದಲ್ಲಿ ಯಾಕಿಲ್ಲ?'

ಮತದಾರರ ಪಟ್ಟಿಯನ್ನು ಕಂಪ್ಯೂಟರ್ ಸ್ವಯಂ ಚಾಲಿತವಾಗಿ ಪರಿಶೀಲಿಸಬಹುದಾದ ಡಿಜಿಟಲ್ ಸ್ವರೂಪದಲ್ಲಿ ಯಾಕೆ ನೀಡುತ್ತಿಲ್ಲ. ಅದರ ಬದಲಿ ಪ್ರಮಾಣ ಪತ್ರಕ್ಕೆ ಸಹಿ ಹಾಕುವಂತೆ ಆಯೋಗ ಕೇಳುತ್ತಿದೆ. ನಾವು ಸಂಸತ್ತಿನಲ್ಲಿ ತೆಗೆದುಕೊಳ್ಳುವ ಪ್ರಮಾಣಕ್ಕಿಂತ ಇದು ದೊಡ್ಡದೇ?

**ಪ್ರಿಯಾಂಕಾ ಗಾಂಧಿ ವಾದ್ರಾ,** ವಯನಾಡ್ ಸಂಸದೆ

### 'ವಿಶ್ವಾಸಾರ್ಹತೆಗೆ ಧಕ್ಕೆ ತರಬೇಡಿ'

ನಮ್ಮ ಪ್ರಜಾಪ್ರಭುತ್ವವು ಬಹಳ ಅಮೂಲ್ಯವಾದುದು. ಅಸಮರ್ಥ, ಅಜಾಗರೂಕವಾದ ಮತ್ತು ಉದ್ದೇಶಪೂರ್ವಕ ತಿರುಚುವಿಕೆ ಮೂಲಕ ಇದರ ವಿಶ್ವಾಸಾರ್ಹತೆಗೆ ಧಕ್ಕೆ ತರಬೇಡಿ. ಆಯೋಗವು ತಕ್ಷಣವೇ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು

**ಶಶಿ ತರೂರ್,** ತಿರುವನಂತಪುರ ಸಂಸದ

### 'ತಾವು ಕೂತ ಕೊಂಬೆಯನ್ನು ತಾವೇ ಕತ್ತರಿಸಿಕೊಂಡಿದ್ದಾರೆ'

'ತನ್ನ ಬಳಿ ಇರುವ ಸಾಕ್ಷ್ಯಗಳನ್ನು ಪ್ರದರ್ಶಿಸಿದರೆ, ಅದು 'ಅಣು ಬಾಂಬ್'ನಂತಿರುತ್ತದೆ ಎಂದು ರಾಹುಲ್ ಗಾಂಧಿ ಹೇಳುತ್ತಿದ್ದರು. ಆದರೆ, ವ್ಯಕ್ತಿಯೊಬ್ಬರು ತಾವು ಕೂತ ಕೊಂಬೆಯನ್ನು ತಾವೇ ಕತ್ತರಿಸಿಕೊಂಡಂತೆ ರಾಹುಲ್ ಅವರ ಪ್ರಕರಣವಾಯಿತು' ಎಂದು ಕೇಂದ್ರ ಸಚಿವ ಭೂಪೇಂದ್ರ ಯಾದವ್ ಅವರು ಲೇವಡಿ ಮಾಡಿದರು.

'ಮಹಾರಾಷ್ಟ್ರದ ಮಾಢಾ, ನಾಗ್ಪುರ ಪಶ್ಚಿಮ, ನಾಗ್ಪುರ ಉತ್ತರ, ಮೋಹೋಲ್ ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳು ಗೆಲುವು ಸಾಧಿಸಿವೆ. ಈ ಎಲ್ಲ ಕ್ಷೇತ್ರಗಳಲ್ಲಿಯೂ ಮತದಾರರ ಸಂಖ್ಯೆ ಹೆಚ್ಚಳವಾಗಿವೆ. ರಾಹುಲ್ ಅವರ ವಿಶ್ಲೇಷಣೆಯು ಸುಳ್ಳು ಎನ್ನುವುದಕ್ಕೆ ಇದು ಒಂದೇ ಉದಾಹರಣೆ ಸಾಕು' ಎಂದರು.

## 'ಮತ ಕಳವು ತನಿಖೆ ಮಾಡಿ'

ಒಂದನೇ ಪುಟದಿಂದ...

'ಮತ ಕಳ್ಳತನ ಮಾಡಿ ಕೇಂದ್ರದಲ್ಲಿ ಬಿಜೆಪಿ ಅಧಿಕಾರ ಹಿಡಿದಿದೆ. ಮತದಾರರ ಪಟ್ಟಿ ಡಿಜಿಟಲ್ ರೂಪದಲ್ಲಿ ನಮಗೆ ಸಿಕ್ಕಿದರೆ ಕಳ್ಳ ಮತಗಳಿಂದ ಮೋದಿ ಈ ದೇಶದ ಪ್ರಧಾನಿ ಆಗಿದ್ದಾರೆ ಎಂಬುದನ್ನು ಸಾಬೀತುಪಡಿಸುತ್ತೇವೆ' ಎಂದು ರಾಹುಲ್ ಗುಡುಗಿದರು.

'ಇಲ್ಲಿ (ಕರ್ನಾಟಕದಲ್ಲಿ) ಒಂದು ಲೋಕಸಭಾ ಕ್ಷೇತ್ರವನ್ನು ಕಳವು ಮಾಡಲಾಗಿದೆ ಎಂದು ಪ್ರತಿಯೊಬ್ಬ ಅಧಿಕಾರಿ ಮತ್ತು ಚುನಾವಣಾ ಆಯುಕ್ತರು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕು. ಇದು ಕರ್ನಾಟಕದ ಜನರ ವಿರುದ್ಧದ ಅಪರಾಧ ಕೃತ್ಯ' ಎಂದರು.

'ಚುನಾವಣಾ ಆಯೋಗವು ಆಡಳಿತ ಪಕ್ಷದ ಪರ ಅಲ್ಲ, ಸಂವಿಧಾನಕ್ಕಾಗಿ ಕೆಲಸ ಮಾಡಬೇಕು. ಚುನಾವಣಾ ಆಯೋಗ 'ಒಬ್ಬ ವ್ಯಕ್ತಿ, ಒಂದು ಮತ' ಎಂಬ ಸಾಂವಿಧಾನಿಕ ಮೂಲಭೂತ ಕಲ್ಪನೆಯ ಮೇಲೆ ದಾಳಿ ಮಾಡುತ್ತಿದೆ. ಅದು ದೇಶದ ಬಡ ಜನರ ಮೇಲಿನ ದಾಳಿ. ಇದರಿಂದ ತಪ್ಪಿಸಿಕೊಳ್ಳಬಹುದು ಎಂದು ಚುನಾವಣಾ ಆಯೋಗದವರು ಭಾವಿಸುತ್ತಿದ್ದರೆ, ನಾವು ನಿಮ್ಮಲ್ಲಿ ಪ್ರತಿಯೊಬ್ಬರನ್ನು ಒಬ್ಬೊಬ್ಬರನ್ನಾಗಿ ಹಿಡಿಯುತ್ತೇವೆ. ಇದಕ್ಕೆ ಸ್ವಲ್ಪ ಸಮಯ ತೆಗೆದುಕೊಳ್ಳಬಹುದು. ನೀವು ಸಂವಿಧಾನದ ಮೇಲೆ ದಾಳಿ ಮಾಡಿದರೆ, ನಾವು ನಿಮ್ಮ ಮೇಲೆ ದಾಳಿ ಮಾಡುತ್ತೇವೆ' ಎಂದು ಆಕ್ರೋಶದಿಂದ ಹೇಳಿದರು.

'ಚುನಾವಣಾ ಆಯೋಗದ ಅಕ್ರಮಗಳನ್ನು ನಾವು ಬಹಿರಂಗಗೊಳಿಸಿದ ನಂತರ ಈ ದೇಶದ ಜನರು ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಶ್ನೆಗಳನ್ನು ಕೇಳಲು ಆರಂಭಿಸಿದರು. ಆದರೆ, ಈ ಆಯೋಗ ತನ್ನ ವೆಬ್‌ಸೈಟ್ ಅನ್ನೇ ಬಂದ್ ಮಾಡಿದೆ. ಬಿಹಾರದ ಮುಖ್ಯ ಚುನಾವಣಾಧಿಕಾರಿಯವರ ಕಚೇರಿಯ ವೆಬ್‌ಸೈಟ್ ಸೇರಿದಂತೆ ಹಲವು ರಾಜ್ಯಗಳಲ್ಲಿ ಮುಖ್ಯ ಚುನಾವಣಾಧಿಕಾರಿ ಕಚೇರಿಗಳ ವೆಬ್‌ಸೈಟ್‌ಗಳನ್ನು ಬಂದ್ ಮಾಡಲಾಗಿದೆ. ಚುನಾವಣಾ ಆಯೋಗದ ನಾಟಕ ಹೊರಗೆ ಬರುತ್ತದೆ, ಜನ ಪ್ರಶ್ನೆ ಮಾಡಲು ತೊಡಗುತ್ತಾರೆ ಎಂಬ ಭಯ ಆಯೋಗಕ್ಕೆ ಆವರಿಸಿದೆ' ಎಂದರು.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ, ಸಚಿವರು, ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ಸಂಸದರು ಇದ್ದರು.



ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಕೆಪಿಸಿಸಿ ಆಯೋಜಿಸಿದ್ದ 'ನಮ್ಮ ಮತ ನಮ್ಮ ಹಕ್ಕು ಸಂವಿಧಾನ ರಕ್ಷಿಸಿ ಪ್ರಜಾಪ್ರಭುತ್ವ ಉಳಿಸಿ' ಪ್ರತಿಭಟನಾ ಸಭೆಯಲ್ಲಿ ಕಾರ್ಯಕರ್ತರು ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

### ಸಿಇಸಿಗೆ 11ರಂದು ದೂರು– ಖರ್ಗೆ

'2024ರ ಚುನಾವಣೆಯನ್ನು ಮೋದಿ ಮತ್ತು ಕಂಪನಿ ಕಳ್ಳತನದಿಂದ ಗೆದ್ದಿದೆ. ಈ ಸರ್ಕಾರ ಬಹುಕಾಲ ಉಳಿಯುವುದಿಲ್ಲ. ಅವರ ಅಕ್ರಮವನ್ನು ಹೊರಗೆ ತಂದು ಜನರಿಂದ ಛೀಮಾರಿ ಹಾಕಿಸುತ್ತೇವೆ. ಕಳ್ಳತನದ ಸರ್ಕಾರಕ್ಕೆ ನೈತಿಕ ಬಲ ಇಲ್ಲ. ಅಧಿಕಾರದಲ್ಲಿ ಮುಂದುವರಿಯಲು ಹಕ್ಕಿಲ್ಲ. ಮೋದಿಯವರನ್ನು ಕೆಳಗಿಳಿಸುವುದಷ್ಟೇ ಅಲ್ಲ, ಅವರಿಗೆ ಬುದ್ಧಿ ಕಲಿಸಬೇಕು' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕರೆ ನೀಡಿದರು.

'ಎಲ್ಲ ಸಂಸದರು ಇದೇ 11ರಂದು ಕೇಂದ್ರ ಚುನಾವಣಾ ಆಯೋಗಕ್ಕೆ (ಸಿಇಸಿ) ತೆರಳಿ ದೂರು ನೀಡುತ್ತೇವೆ. ನಾವು ಒಂದಾಗಿದ್ದರೆ ಮಾತ್ರ ಮೋದಿಯವರ ಕಳ್ಳಾಟ ತಡೆಯಲು ಸಾಧ್ಯವೆಂಬ ಒಗ್ಗಟ್ಟಿನ ಸಂದೇಶವನ್ನು 'ಇಂಡಿಯಾ' ನಾಯಕರಿಗೆ ರವಾನಿಸಿದ್ದೇವೆ. ನಮ್ಮ ಮತ ಕಸಿದುಕೊಂಡ ನಂತರ ನಮ್ಮ ಅಸ್ತಿತ್ವವೇ ಇರುವುದಿಲ್ಲ. ಹೀಗಾಗಿ, 'ಕ್ವಿಟ್ ಇಂಡಿಯಾ' ಚಳವಳಿ ಮಾದರಿಯಲ್ಲಿ ಸಂವಿಧಾನ, ಪ್ರಜಾಪ್ರಭುತ್ವ ರಕ್ಷಣೆಗೆ ಹೋರಾಟ ಮಾಡುತ್ತೇವೆ' ಎಂದು ಹೇಳಿದರು.

'ಜೀವನದಲ್ಲಿ 12 ಚುನಾವಣೆ ಗೆದ್ದ ನಾನು, 2019ರಲ್ಲಿ ಮೊದಲ ಬಾರಿಗೆ ಸೋತಿದ್ದೆ. ಆಗಲೂ ಇದೇ ರೀತಿ ಅಕ್ರಮ ಮಾಡಿದ್ದರು. ಪ್ರತಿ ವಿಧಾನಸಭಾ ಕ್ಷೇತ್ರಗಳಲ್ಲಿ ನಕಲಿ ಮತದಾನ ಮಾಡಿ ನಮ್ಮನ್ನು ಗುರಿ ಮಾಡಿದ್ದರು. ಆದರೆ, ನಮಗೆ ಆಗ ಇದರ ಅರಿವಾಗಿರಲಿಲ್ಲ. ಈಗ ಎಲ್ಲವೂ ಬಯಲಿಗೆ ಬಂದಿದೆ. ರಾಹುಲ್ ಗಾಂಧಿಯವರ ಮಾರ್ಗದರ್ಶನದಲ್ಲಿ ಕಾಂಗ್ರೆಸ್ ಪಕ್ಷ ಬಹಳ ಸೂಕ್ಷ್ಮವಾಗಿ ಎಲ್ಲ ಅಕ್ರಮಗಳನ್ನು ಹೊರಗೆ ತಂದಿದೆ' ಎಂದು ಹೇಳಿದರು.

'ಮಹಾರಾಷ್ಟ್ರ, ಉತ್ತರ ಪ್ರದೇಶ, ರಾಜಸ್ಥಾನ, ಬಿಹಾರ ಹಾಗೂ ಮಧ್ಯಪ್ರದೇಶ ಸೇರಿ ಎಲ್ಲೆಡೆ ಮತದಾನದ ಹಕ್ಕನ್ನು ದುರ್ಬಳಕೆ ಮಾಡಿಕೊಂಡು, ನಕಲಿ ಮತದಾನದ ಮೂಲಕ ಮೋದಿ ಈ ದೇಶವನ್ನು ಆಳುತ್ತಿದ್ದಾರೆ. ಜನ ಮತ ನೀಡದಿದ್ದರೂ ಮೋದಿ ಮತ್ತು ಅಮಿತ್ ಶಾ ಅವರು ಮತ ಕಳ್ಳತನದ ಮೂಲಕ ಚುನಾವಣೆ ಗೆಲ್ಲಲು ಪ್ರಯತ್ನಿಸುತ್ತಾರೆ' ಎಂದು ತಿಳಿಸಿದರು.

### ಆಯೋಗಕ್ಕೆ ರಾಹುಲ್ ಸವಾಲ್...

ಒಂದನೇ ಪುಟದಿಂದ...

- ಕಾಂಗ್ರೆಸ್ ಕಾರ್ಯಕರ್ತರು ಯಾವುದೇ ಬೆಲೆ ತೆತ್ತಾದರೂ ಸಂವಿಧಾನವನ್ನು ರಕ್ಷಿಸುತ್ತಾರೆ
- 10 ವರ್ಷಗಳ ಮತದಾರರ ಪಟ್ಟಿಯನ್ನು ಡಿಜಿಟಲ್ ಸ್ವರೂಪದಲ್ಲಿ ಮತ್ತು ಮತದಾನದ ವಿಡಿಯೊ ದೃಶ್ಯಾವಳಿಗಳನ್ನು ಚುನಾವಣಾ ಆಯೋಗ ನೀಡದಿದ್ದರೆ, ಅದು ಮತ ಕಳ್ಳತನದ ಮೂಲಕ ಬಿಜೆಪಿಗೆ ಸಹಾಯ ಮಾಡುತ್ತಿದೆ ಎಂದರ್ಥ

ಸಂಸತ್ತಿನಲ್ಲಿ ಮುಂದುವರಿದ ಗದ್ದಲ: ಸದನದ ಬಾವಿಗಿಳಿದು ಪ್ರತಿಭಟನೆ

## ಚರ್ಚೆಗೆ ಪಟ್ಟು: ಕಲಾಪ ಮುಂದೂಡಿಕೆ

**ನವದೆಹಲಿ (ಪಿಟಿಐ):** 'ಮತ ಕಳ್ಳತನ' ಹಾಗೂ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಚರ್ಚೆಗೆ ಅವಕಾಶ ನೀಡಬೇಕು ಎಂದು ಒತ್ತಾಯಿಸಿ ವಿರೋಧ ಪಕ್ಷಗಳು ಶುಕ್ರವಾರವೂ ಪ್ರತಿಭಟಿಸಿದ್ದರಿಂದ, ಸಂಸತ್ತಿನ ಉಭಯ ಸದನಗಳ ಕಲಾಪವನ್ನು ಸೋಮವಾರಕ್ಕೆ ಮುಂದೂಡಲಾಯಿತು.

ಬೆಳಿಗ್ಗೆ 11 ಗಂಟೆಗೆ ಲೋಕಸಭೆಯ ಕಲಾಪ ಶುರುವಾಗುತ್ತಿದ್ದಂತೆ ಸ್ಪೀಕರ್ ಓಂ ಬಿರ್ಲಾ ಅವರು ಮಾಜಿ ರಾಜ್ಯಪಾಲ ಸತ್ಯಪಾಲ್ ಮಲಿಕ್ ಅವರಿಗೆ ಗೌರವ ನಮನ ಸಲ್ಲಿಸಿದರು.

ಬಳಿಕ, ವಿರೋಧ ಪಕ್ಷಗಳ ಸದಸ್ಯರು ಎಸ್‌ಐಆರ್ ಚರ್ಚೆಗೆ ಅವಕಾಶ ಕೊಡಬೇಕು ಎಂದು ಆಗ್ರಹಿಸಿ ಪ್ರತಿಭಟನೆ ನಡೆಸಿದರು. ಫಲಕ ಪ್ರದರ್ಶಿಸಿ, ಸದನದ ಬಾವಿಗಿಳಿದರು. ಇದರ ಮಧ್ಯೆಯೇ ಓಂ ಬಿರ್ಲಾ ಪ್ರಶ್ನೋತ್ತರ ಕಲಾಪ ಕೈಗೆತ್ತಿಕೊಂಡರು. 23 ನಿಮಿಷ ಸದನ ನಡೆಸಿದರು. ಈ ಅವಧಿಯಲ್ಲಿ ಐದು ಪ್ರಶ್ನೆ, ಪೂರಕ ಪ್ರಶ್ನೆಗಳನ್ನು ತೆಗೆದುಕೊಂಡರು. ಗದ್ದಲ ಹೆಚ್ಚಾಗಿದ್ದರಿಂದ ಸದನವನ್ನು ಮುಂದೂಡಿದರು.

ಸಂಸತ್‌ನ ಮಕರ ದ್ವಾರದ ಬಳಿ ಎಸ್‌ಐಆರ್ ವಿರುದ್ಧ 'ಇಂಡಿಯಾ' ಮೈತ್ರಿಕೂಟದ ಸಂಸದರು ಶುಕ್ರವಾರ ಪ್ರತಿಭಟಿಸಿದರು ಪಿಟಿಐ ಚಿತ್ರ

ಮಧ್ಯಾಹ್ನ 3 ಗಂಟೆಗೆ ಸದನವು ಮತ್ತೆ ಸಮಾವೇಶಗೊಳ್ಳುತ್ತಿದ್ದಂತೆ ಪ್ರತಿಪಕ್ಷಗಳ ಸಂಸದರು ಸ್ಪೀಕರ್ ಸ್ಥಾನದತ್ತ ತೆರಳಿ ಎಸ್‌ಐಆರ್ ಚರ್ಚೆಗೆ ಅವಕಾಶ ಕೊಡಬೇಕು ಎಂದು ಮೇಜು ತಟ್ಟಿ ಆಗ್ರಹಿಸಿದರು.

ಇದಕ್ಕೆ ಸ್ಪೀಕರ್ ಸ್ಥಾನದಲ್ಲಿದ್ದ ಕೃಷ್ಣ ಪ್ರಸಾದ್ ತೆನ್ನೆಟ್ಟಿ ಆಕ್ಷೇಪ ವ್ಯಕ್ತಪಡಿಸಿದರು. ವಿರೋಧ ಪಕ್ಷಗಳ ಗದ್ದಲ ಜೋರಾಗುತ್ತಿದ್ದಂತೆ ಕಲಾಪವನ್ನು ಮುಂದೂಡಿದರು.

'ಪ್ರತಿಪಕ್ಷಗಳು ಸದನದ ಸಮಯವನ್ನು ವ್ಯರ್ಥ ಮಾಡುತ್ತಿರುವುದು ದುರದೃಷ್ಟಕರ' ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಹೇಳಿದ್ದಾರೆ.

**ರಾಜ್ಯಸಭೆಯಲ್ಲಿ 'ಮತ ಕಳ್ಳತನ' ಪ್ರಸ್ತಾಪ:** ರಾಜ್ಯಸಭೆಯು ಬೆಳಿಗ್ಗೆ 11ಕ್ಕೆ ಸಮಾವೇಶಗೊಳ್ಳುತ್ತಿದ್ದಂತೆ ವಿರೋಧ ಪಕ್ಷಗಳ ಸದಸ್ಯರ ಪ್ರತಿಭಟನೆಯಿಂದ ಮುಂದೂಡಲ್ಪಟ್ಟಿತು.

ಮಧ್ಯಾಹ್ನ 12 ಗಂಟೆಗೆ ಮತ್ತೆ ಸಮಾವೇಶಗೊಳ್ಳುತ್ತಿದ್ದಂತೆ, ಸಭಾಪತಿ ಪೀಠದಲ್ಲಿದ್ದ ಘನಶ್ಯಾಮ್ ತಿವಾರಿ ಪ್ರಶ್ನೋತ್ತರ ಕೈಗೆತ್ತಿಕೊಳ್ಳಲು ಮುಂದಾದರು. ವಿಪಕ್ಷಗಳ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಕಾಂಗ್ರೆಸ್ ಸಂಸದ ಪ್ರಮೋದ್ ತಿವಾರಿ ಅವರು ಕರ್ನಾಟಕದ ಲೋಕಸಭಾ ಕ್ಷೇತ್ರದಲ್ಲಿ ನಡೆದಿದೆ ಎನ್ನಲಾದ 'ಮತ ಕಳ್ಳತನ'ದ ವಿಷಯವನ್ನು ಪ್ರಸ್ತಾಪಿಸಲು ಮುಂದಾದರು. ಸಭಾಪತಿ ಪೀಠದಲ್ಲಿದ್ದ ಘನಶ್ಯಾಮ್ ತಿವಾರಿ ಅವರು ತಿವಾರಿಗೆ ಮಾತನಾಡಲು ಅವಕಾಶವನ್ನೇ ಕೊಡಲಿಲ್ಲ.

# ಧರ್ಮಸ್ಥಳ: ಹೊಸ ಸ್ಥಳದಲ್ಲಿ ಶೋಧ

## ಗುರುತು ಮಾಡಿದ್ದ 'ನಂಬರ್ 13' ಬಿಟ್ಟು ಬೋಳಿಯಾರ್ ಕಾಡಿಗೆ ತೆರಳಿದ ಎಸ್‌ಐಟಿ ತಂಡ: ಶೋಧ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಧರ್ಮಸ್ಥಳ ಗ್ರಾಮದಲ್ಲಿ ಶವಗಳನ್ನು ಹೂತು ಹಾಕಲಾಗಿದೆ ಎಂಬ ದೂರಿಗೆ ಸಂಬಂಧಿಸಿ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ಬೋಳಿಯಾರ್ ಎಂಬಲ್ಲಿ ಪರಿಶೀಲನೆಗೆ ತೆರಳಿದಾಗ ಮುಖ್ಯ ರಸ್ತೆಯಲ್ಲಿ ಪೊಲೀಸರನ್ನು ನಿಯೋಜಿಸಲಾಗಿತ್ತು

**ಮಂಗಳೂರು:** ಧರ್ಮಸ್ಥಳ ಗ್ರಾಮದಲ್ಲಿ ಅಸಹಜವಾಗಿ ಸಾವಿಗೀಡಾದ ಶವಗಳನ್ನು ಹೂತು ಹಾಕಲಾಗಿದೆ ಎಂಬ ದೂರಿನ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ), ಧರ್ಮಸ್ಥಳ-ಸುಬ್ರಹ್ಮಣ್ಯ ರಸ್ತೆಯ ಬೋಳಿಯಾರ್ ಕಾಡಿನೊಳಗೆ ಶುಕ್ರವಾರ ಶೋಧ ನಡೆಸಿತು.

ಸಾಕ್ಷಿ ದೂರುದಾರ ಗುರುತಿಸಿದ್ದ 12 ಕಡೆ ಈವರೆಗೆ ಶೋಧ ನಡೆದಿತ್ತು, 13ನೇ ಜಾಗ ಧರ್ಮಸ್ಥಳದ ಕಿಂಡಿ ಅಣೆಕಟ್ಟೆ ಸಮೀಪವಿದೆ. ಅಲ್ಲಿ ನೆಲ ಅಗೆಯುವ ಕಾರ್ಯ ಕೈಬಿಡಲಾಗಿತ್ತು. ಅಲ್ಲಿ ಗ್ರೌಂಡ್ ಪೆನೆಟ್ರೇಟ್ ರೇಡಾರ್ (ಜಿಪಿಆರ್) ತಂತ್ರಜ್ಞಾನವನ್ನು ಬಳಸಿ ಶೋಧ ನಡೆಸುವ ಸಾಧ್ಯತೆ ಇದೆ.

ಎಸ್‌ಐಟಿ ತಂಡ ಶುಕ್ರವಾರ ಬೆಳಿಗ್ಗೆ ಸಾಕ್ಷಿ ದೂರುದಾರರ ಜೊತೆಗೂಡಿ ಧರ್ಮಸ್ಥಳದಿಂದ 3 ಕಿ.ಮೀ ದೂರದ ಬೋಳಿಯಾರ್ ಕಾಡಿನೊಳಗೆ ಹೋಯಿತು. ಕಾಡಿನೊಳಗೆ ಸುಮಾರು ಅರ್ಧ ಕಿಲೊಮೀಟರ್ ದೂರದಲ್ಲಿ ದೂರುದಾರ ಜಾಗ ತೋರಿಸಿದರು ಎನ್ನಲಾಗಿದೆ.

ಪುತ್ತೂರು ಉಪವಿಭಾಗಾಧಿಕಾರಿ ಸ್ಟೆಲ್ಲಾ ವರ್ಗೀಸ್, ಎಸ್‌ಐಟಿ ಎಸ್.ಪಿ ಜಿತೇಂದ್ರ ಕುಮಾರ್ ದಯಾಮ ಮತ್ತಿತರ ಅಧಿಕಾರಿಗಳ ಸಮ್ಮುಖದಲ್ಲಿ ಸಂಜೆಯವರೆಗೂ ಕಾರ್ಮಿಕರು ಭೂಮಿ ಅಗೆದರು. ಆದರೆ ಮೃತದೇಹಗಳ ಕುರುಹು ಪತ್ತೆಯಾಗಲಿಲ್ಲ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

### ಬಿಗಿ ಬಂದೋಬಸ್ತ್

ಧರ್ಮಸ್ಥಳದ ಪಾಂಗಾಳ ಮತ್ತು ಉಜಿರೆಯ ಬೆನಕ ಆಸ್ಪತ್ರೆ ಬಳಿ ಬುಧವಾರ ಎರಡು ಗುಂಪುಗಳ ನಡುವೆ ಘರ್ಷಣೆಯಾಗಿತ್ತು. ನಂತರ ಎಸ್‌ಐಟಿ ಕಾರ್ಯಾಚರಣೆಗೆ ಜಿಲ್ಲಾ ಪೊಲೀಸರು ಹೆಚ್ಚಿನ ಭದ್ರತೆ ಒದಗಿಸಿದ್ದು, ಶುಕ್ರವಾರ ಬೋಳಿಯಾರ್‌ನ ಕಾಡಿನೊಳಗೆ ತೆರಳುವಾಗಲೂ ಭಾರಿ ಭದ್ರತೆ ಇತ್ತು.

ಧರ್ಮಸ್ಥಳದಿಂದ ಮುಖ್ಯರಸ್ತೆಯಲ್ಲಿ ಅಂದಾಜು ಮೂರು ಕಿ.ಮೀ ದೂರದವರೆಗೆ ಸಾಗಿದ ಅಧಿಕಾರಿಗಳು ನಂತರ ಕಾಡಿನೊಳಗೆ ಪ್ರವೇಶಿಸಿದರು. ಆ ದಾರಿಯನ್ನು ಪ್ರವೇಶಿಸುವಲ್ಲಿ 'ಪೊಲೀಸ್ ಟೇಪ್' ಹಾಕಲಾಯಿತು. ಕಾರ್ಯಾಚರಣೆ ಮುಗಿಯುವವರೆಗೆ ಸಿಬ್ಬಂದಿ ಅಲ್ಲಿದ್ದರು.

## ಎಸ್‌ಐಟಿಗೆ ಠಾಣೆ ಸ್ಥಾನಮಾನ

**ಮಂಗಳೂರು:** ಧರ್ಮಸ್ಥಳದಲ್ಲಿ ಅಸಹಜ ಸಾವು ಕುರಿತ ಆರೋಪಗಳ ತನಿಖೆಗೆ ನೇಮಕವಾಗಿರುವ ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ಪೊಲೀಸ್ ಠಾಣೆಯ ಸ್ಥಾನಮಾನವನ್ನು ನೀಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ರಾಜ್ಯದ ಆಂತರಿಕ ಭದ್ರತಾ ವಿಭಾಗದ ಪೊಲೀಸ್ ಮಹಾನಿರ್ದೇಶಕ ಪ್ರಣವ್ ಮೊಹಾಂತಿ ಮುಖ್ಯಸ್ಥರಾಗಿರುವ ಎಸ್‌ಐಟಿಯಲ್ಲಿ ಈಗಿರುವ ಅಧಿಕಾರಿಗಳಲ್ಲೇ, ಪೊಲೀಸ್ ಇನ್‌ಸ್ಪೆಕ್ಟರ್ ಅಥವಾ ಅದಾಗಿಂತ ಮೇಲಿನ ದರ್ಜೆಯ ಅಧಿಕಾರಿ 'ಎಸ್‌ಐಟಿ ಠಾಣಾಧಿಕಾರಿ' ಆಗಲಿದ್ದಾರೆ.

ತಂಡಕ್ಕೆ ಈಗ ಬಿಎನ್‌ಎಸ್‌ಎಸ್ ಅಡಿ ತನಿಖಾ ಕ್ರಮಗಳನ್ನು ಅನುಸರಿಸಿ, ಸಂಬಂಧಪಟ್ಟ ಕೋರ್ಟ್‌ಗೆ ಅಂತಿಮ ವರದಿಯನ್ನು ಸಲ್ಲಿಸುವ ಅಧಿಕಾರ ನೀಡಲಾಗಿದೆ. ಎಸ್‌ಐಟಿಗೆ ಪೊಲೀಸ್ ಠಾಣೆಯ ಸ್ಥಾನಮಾನ ನೀಡಿದ್ದರಿಂದ ಈಗ ತನಿಖೆ ಸಂಬಂಧಿಸಿದಂತೆ ಬರುವ ದೂರು ದಾಖಲಿಸಿಕೊಳ್ಳುವ ಅಧಿಕಾರವು ಲಭಿಸಿದೆ. ಸದ್ಯ ಎಸ್‌ಐಟಿ ಬೆಳ್ತಂಗಡಿಯಲ್ಲಿ ಕಚೇರಿ ತೆರೆದಿದೆ. ಹೂತು ಹಾಕಲಾಗಿದೆ ಎನ್ನಲಾಗುವ ಶವಗಳ ಅವಶೇಷ ಹುಡುಕುವ ಕಾರ್ಯಾಚರಣೆಯನ್ನು ಜುಲೈ 29ರಿಂದ ಆರಂಭಿಸಿದೆ.

> ಧರ್ಮಸ್ಥಳದ ಬೆಳವಣಿಗೆ ಮತ್ತು ಇತ್ತೀಚಿನ ಗಲಾಟೆಗಳ ಹಿಂದೆ ನಗರ ನಕ್ಸಲರು ಮತ್ತು ಭಯೋತ್ಪಾದಕ ಕೃತ್ಯಗಳಲ್ಲಿ ಸಕ್ರಿಯರಾದವರ ನೆರಳಿದೆ. ಸರ್ಕಾರ ಎಚ್ಚರಿಕೆಯ ಹೆಜ್ಜೆ ಇಡಬೇಕು
> **ಆರಗ ಜ್ಞಾನೇಂದ್ರ,** ಶಾಸಕ

> ಕೋಟ್ಯಂತರ ಭಕ್ತರ ಶ್ರದ್ಧೆ–ನಂಬಿಕೆಯ ಸ್ಥಳವಾದ ಧರ್ಮಸ್ಥಳ ಪ್ರಕರಣದ ತನಿಖೆಯನ್ನು ಶೀಘ್ರ ಪೂರ್ಣಗೊಳಿಸಿ, ವರದಿ ಬಿಡುಗಡೆ ಮಾಡಬೇಕು
> **ಸಿ.ಎನ್. ಬಾಲಕೃಷ್ಣ,** ಶಾಸಕ

## 'ಕರಾವಳಿ ಜನರ ತಾಳ್ಮೆ ಪರೀಕ್ಷಿಸಬೇಡಿ'

**ಉಡುಪಿ/ಮಡಿಕೇರಿ:** 'ಧರ್ಮಸ್ಥಳದ ಮಂಜುನಾಥ ಸ್ವಾಮಿ ದೇವಾಲಯ ಹಾಗೂ ಹೆಗ್ಗಡೆ ಕುಟುಂಬಕ್ಕೆ ಕಳಂಕ ತರಲು ಸಂಚು ನಡೆಸುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿ 'ಧರ್ಮಸ್ಥಳ ಭಕ್ತಾಭಿಮಾನಿಗಳ ಬಳಗ'ವು ಶುಕ್ರವಾರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದೆ.

ಮಡಿಕೇರಿಯಲ್ಲೂ ಭಕ್ತಾಭಿಮಾನಿಗಳ ಬಳಗದ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ಉಡುಪಿಯಲ್ಲಿ ಜನಾಗ್ರಹ ಸಭೆಯಲ್ಲಿ ಮಾತನಾಡಿದ ಶಾಸಕ ಯಶ್‌ಪಾಲ್ ಸುವರ್ಣ, 'ಕೆಲವರು ಹಿಂದೂ ಸಮಾಜವನ್ನು ಒಡೆಯುವ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಸರಿಯಾದ ಉತ್ತರವನ್ನು ಕೊಡುತ್ತೇವೆ. ಕರಾವಳಿ ಜನರ ತಾಳ್ಮೆ ಪರೀಕ್ಷಿಸಬೇಡಿ' ಎಂದರು.

'ದಕ್ಷಿಣ ಕನ್ನಡ ಹಿಂದಿನ ಜಿಲ್ಲಾಧಿಕಾರಿ ಸಸಿಕಾಂತ್ ಸೆಂಥಿಲ್ ಚುನಾವಣೆ ವೇಳೆ ಹಿಂದೂ ಸಮಾಜ ಒಡೆಯುವ ಕೆಲಸ ಮಾಡಿದ್ದರು. ಸೆಂಥಿಲ್ ಅವರನ್ನು ತನಿಖೆಗೆ ಒಳಪಡಿಸಿ, ಸತ್ಯಾಂಶ ಹೊರತೆಗೆಯಬೇಕು' ಎಂದರು.

## ವಿಚಾರಣಾ ಕೋರ್ಟ್‌ಗೆ ಅರ್ಜಿ: ಸೂಚನೆ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಧರ್ಮಸ್ಥಳ ಪ್ರಕರಣದ ವರದಿ ಪ್ರಕಟಣೆ ನಿಷೇಧಕ್ಕೆ ಸಂಬಂಧಿಸಿ ವಿಚಾರಣಾ ಕೋರ್ಟ್‌ಗೆ ಅರ್ಜಿ ಸಲ್ಲಿಸಲು ಸುಪ್ರೀಂ ಕೋರ್ಟ್ ಶುಕ್ರವಾರ ಸೂಚಿಸಿದೆ.

ದೇವಾಲಯವನ್ನು ನಿರ್ವಹಿಸುತ್ತಿರುವ ಕುಟುಂಬವನ್ನು ಗುರಿಯಾಗಿಸಿ ಪ್ರಕಟಿಸಿರುವ ಮಾನಹಾನಿಕರ ವಿಷಯಗಳನ್ನು ತೆಗೆದು ಹಾಕಲು ನಿರ್ದೇಶನ ನೀಡಬೇಕೆಂದು ಕೋರಿ ಧರ್ಮಸ್ಥಳ ದೇವಾಲಯದ ಕಾರ್ಯದರ್ಶಿ ಡಿ. ಹರ್ಷೇಂದ್ರ ಕುಮಾರ್ ಅವರು ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ರಾಜೇಶ್ ಬಿಂದಾಲ್ ಮತ್ತು ಮನಮೋಹನ್ ಅವರ ಪೀಠವು ಅರ್ಜಿಯನ್ನು ಹೊಸದಾಗಿ ಪರಿಗಣಿಸಲು ವಿಚಾರಣಾ ಕೋರ್ಟ್‌ಗೆ ನಿರ್ದೇಶಿಸಿತು.

ಮಾಧ್ಯಮಗಳಿಗೆ ನಿರ್ಬಂಧ ವಿಧಿಸಬೇಕು ಎಂದು ಕೋರಿರುವುದಕ್ಕೆ ಪೀಠ ಅಸಮಾಧಾನ ವ್ಯಕ್ತಪಡಿಸಿತು. ಅತ್ಯಂತ ಅಪರೂಪದ ಪ್ರಕರಣಗಳಲ್ಲಿ ಮಾತ್ರ ಮಾಧ್ಯಮ ನಿರ್ಬಂಧ ಆದೇಶಗಳನ್ನು ನೀಡಲಾಗಿದೆ ಎಂದು ತಿಳಿಸಿತು. ಎಲ್ಲ ದಾಖಲೆಗಳನ್ನು ವಿಚಾರಣಾ ಕೋರ್ಟ್‌ಗೆ ಸಲ್ಲಿಸಲು ಪೀಠ ಸೂಚಿಸಿತು.

'ಇಂತಹ ಆದೇಶಗಳು ವಾಕ್ ಸ್ವಾತಂತ್ರ್ಯ ಹತ್ತಿಕ್ಕುತ್ತವೆ. ಈ ಪ್ರಕರಣದಲ್ಲಿ ಒಬ್ಬ ನೈರ್ಮಲ್ಯ ಕೆಲಸಗಾರ ಇದ್ದಾನೆ. ನಾವು ಮಾಧ್ಯಮ ನಿರ್ಬಂಧ ಹೇರಿದರೆ ಅವರ ಹೇಳಿಕೆಯನ್ನೂ ವರದಿ ಮಾಡಲು ಸಾಧ್ಯವಿಲ್ಲ. ನಾವು ಮುಕ್ತ ಸ್ವಾತಂತ್ರ್ಯದ ದೇಶದಲ್ಲಿ ವಾಸಿಸುತ್ತಿದ್ದೇವೆ' ಎಂದು ಪೀಠ ಅಭಿಪ್ರಾಯಪಟ್ಟಿತು.

ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಮುಕುಲ್ ರೊಹಟಗಿ, 'ಸ್ವೇಚ್ಛಾಚಾರದ ವರದಿಗೆ ತಡೆಯಾಜ್ಞೆ ನೀಡಬೇಕು. ಮಾಧ್ಯಮಗಳಿಗೆ ನಿರ್ಬಂಧ ವಿಧಿಸಿದ್ದನ್ನು ಪ್ರಶ್ನಿಸಿ ಒಬ್ಬರು ಹೈಕೋರ್ಟ್ ಮೊರೆ ಹೋಗುತ್ತಾರೆ. ಇದರಿಂದ, ಉಳಿದ 299 ಮಂದಿಗೂ ಅನುಕೂಲ ಆಗುತ್ತದೆ. ನ್ಯಾಯಾಲಯ ನಮಗೆ ಸ್ವಲ್ಪ ರಕ್ಷಣೆ ನೀಡಬೇಕು' ಎಂದು ಕೋರಿದರು.

'ವಿಚಾರಣಾ ಕೋರ್ಟ್ ಮುಂದೆ ಈ ವಿಷಯ ವಾದಿಸಿ. ನ್ಯಾಯಾಲಯವು ಸ್ವತಂತ್ರವಾಗಿ ಈ ಬಗ್ಗೆ ನಿರ್ಧರಿಸಬಹುದು' ಎಂದು ಪೀಠ ಹೇಳಿತು.

## ಯುಟ್ಯೂಬರ್ ಮೇಲೆ ಹಲ್ಲೆ ಖಂಡಿಸಿ ಪ್ರತಿಭಟನೆ

**ಬೆಳ್ತಂಗಡಿ:** ಯುಟ್ಯೂಬರ್‌ಗಳ ಮೇಲೆ ಧರ್ಮಸ್ಥಳದಲ್ಲಿ ನಡೆದ ಹಲ್ಲೆ ಖಂಡಿಸಿ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಬೆಳ್ತಂಗಡಿ ವಿಧಾನ ಸಭಾ ಸಮಿತಿಯಿಂದ ಶುಕ್ರವಾರ ಬೆಳ್ತಂಗಡಿ ತಾಲ್ಲೂಕು ಕಚೇರಿ ಮುಂಭಾಗದಲ್ಲಿ ಪ್ರತಿಭಟನಾ ಸಭೆ ನಡೆಯಿತು. 'ಎಸ್‌ಐಟಿ ತನಿಖೆ ಹಾದಿ ತಪ್ಪಿಸಲು ಹಲ್ಲೆ ನಡೆಸಲಾಗಿದೆ. ಆರೋಪಿಗಳನ್ನು ಬಂಧಿಸಬೇಕು' ಎಂದು ಒತ್ತಾಯಿಸಿದರು. ಪಕ್ಷದ ಗ್ರಾಮಾಂತರ ಜಿಲ್ಲಾ ಘಟಕದ ಅಧ್ಯಕ್ಷ ಅನ್ವರ್ ಸಾದತ್, ಬೆಳ್ತಂಗಡಿ ಕ್ಷೇತ್ರ ಸಮಿತಿ ಅಧ್ಯಕ್ಷ ಅಕ್ಬರ್ ಬೆಳ್ತಂಗಡಿ ಇತರರು ಪಾಲ್ಗೊಂಡಿದ್ದರು.


**ಆಯುಕ್ತರ ಕಛೇರಿ, ಮಹಾನಗರ ಪಾಲಿಕೆ, ಬಳ್ಳಾರಿ**
ದೂರವಾಣಿ ಸಂಖ್ಯೆ : 08392-273479 /278168 ಫ್ಯಾಕ್ಸ್ : 08392-273477
ವೆಬ್‌ಸೈಟ್ : www.bellarycity.gov.in ಇ-ಮೇಲ್: bellarycommissioner@yahoo.co.in
ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ-583101
ಸಂ:ಮನಪಾಬ/ಆಶಾ/ಜೆಟ್ಟಿಂಗ್ ಪೈಪ್/ಖರೀದಿ/ಪತ್ರಿಕಾ ಪ್ರಕಟಣೆ/ಕಾಲ್-2/2025-26 ದಿನಾಂಕ: .08.2025.

**ಟೆಂಡರ್ ಪ್ರಕಟಣೆ**
(ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಬಳ್ಳಾರಿ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಒಳಚರಂಡಿ ನಿರ್ವಹಣೆಗಾಗಿ ಬಳಸುವ ವಾಹನಗಳಿಗೆ ಅವಶ್ಯವಿರುವ 1 inch and ¾ inch ( 60 meter)Sewer Jetting Hose pipes with Adaptor and Nozzle ಗಳನ್ನು ಖರೀದಿಸಲು ನಿರ್ಧರಿಸಿದ್ದು, ಪ್ರಯುಕ್ತ ಅರ್ಹ ಏಜೆನ್ಸಿದಾರರು/ಸರಬರಾಜುದಾರರು ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ನಲ್ಲಿ ಟೆಂಡರ್ ಇಂಡೆಂಟ್ ಸಂಖ್ಯೆ: DMA/2025-26/IND5032-CAL-2 ಮೂಲಕ ಭಾಗವಹಿಸಲು ವಿವರಗಳನ್ನು ವೆಬ್‌ಸೈಟ್ https://Kppp.karnataka.gov.in ನಲ್ಲಿ ಪಡೆದುಕೊಳ್ಳಬಹುದು. ಟೆಂಡರ್ ಸಲ್ಲಿಸಲು 25/08/2025 ಸಂಜೆ 05 ಗಂಟೆಗೆ ಕೊನೆಯ ದಿನಾಂಕವಾಗಿರುತ್ತದೆ.

ಸಹಿ/- ಆಯುಕ್ತರು,
ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ.



**ಕರ್ನಾಟಕ ಗೃಹ ಮಂಡಳಿ**
3ನೇ ಮಹಡಿ, ಕಾವೇರಿ ಭವನ, ಬೆಂಗಳೂರು.
ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಬೇ.ಸ.ಪ್ರ/2025-26 ದಿನಾಂಕ: 30-07-2025

**ಬೇಡಿಕೆ ಸಮೀಕ್ಷೆ – ಸಾರ್ವಜನಿಕ ಪ್ರಕಟಣೆ**

ಕರ್ನಾಟಕ ಗೃಹ ಮಂಡಳಿಯು **ಬೆಂಗಳೂರು ದಕ್ಷಿಣ ಜಿಲ್ಲೆಯ ಕನಕಪುರ ತಾಲ್ಲೂಕು, ರಾಯಸಂದ್ರ ಗ್ರಾಮದಲ್ಲಿ ಅಭಿವೃದ್ಧಿಪಡಿಸಿರುವ ರಾಷ್ಟ್ರಕವಿ ಕುವೆಂಪು ವಸತಿ ಬಡಾವಣೆಯಲ್ಲಿ ಸುಸಜ್ಜಿತವಾದ ಎಲ್.ಐ.ಜಿ. ಮತ್ತು ಎಂ.ಐ.ಜಿ. ವರ್ಗದ ಮನೆಗಳ ನಿರ್ಮಾಣ ಯೋಜನೆ ಕೈಗೊಳ್ಳಲು ಉದ್ದೇಶಿಸಲಾಗಿದೆ.** ಆಸಕ್ತ ಸಾರ್ವಜನಿಕರು ಇ-ಪಾವತಿ ಮೂಲಕ ನೋಂದಣಿ ಶುಲ್ಕ ಹಾಗೂ ಆರಂಭಿಕ ಠೇವಣಿ ಹಣವನ್ನು ಪಾವತಿ ಮಾಡಿ **ದಿನಾಂಕ: 11.08.2025** ರಿಂದ ಅರ್ಜಿ ಸಲ್ಲಿಸಬಹುದಾಗಿದೆ. **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15-09-2025** ಆಗಿರುತ್ತದೆ.

ನೋಂದಣಿ ಶುಲ್ಕ / ಆರಂಭಿಕ ಠೇವಣಿ ವಿವರ ಕೆಳಕಂಡಂತಿರುತ್ತದೆ

| ಮನೆಗಳ ವರ್ಗ | ಉದ್ದೇಶಿತ ಮನೆಗಳು | ಅಂದಾಜು ವಿಸ್ತೀರ್ಣ | ನೋಂದಣಿ ಶುಲ್ಕ (ರೂ.ಗಳಲ್ಲಿ) | ಆರಂಭಿಕ ಠೇವಣಿ (ರೂ.ಗಳಲ್ಲಿ) | ಮನೆಯ ತಾತ್ಕಾಲಿಕ ಬೆಲೆ (ರೂ.ಗಳಲ್ಲಿ) |
|---|---|---|---|---|---|
| ಎಂ.ಐ.ಜಿ. | 46 | 176.52 ಚ.ಮೀ. (1900 ಚ.ಅಡಿ) | 1,500/- | 2,00,000/- | 95.00 ಲಕ್ಷ ಮೇಲ್ಪಟ್ಟು |
| ಎಲ್.ಐ.ಜಿ. | 10 | 141.00 ಚ.ಮೀ. (1518 ಚ.ಅಡಿ) | 1,500/- | 1,50,000/- | 80.00 ಲಕ್ಷ ಮೇಲ್ಪಟ್ಟು |

ವಸತಿ ಸಮುಚ್ಚಯದಲ್ಲಿ ಒದಗಿಸಲಾಗಿರುವ ಮೂಲ ಸೌಕರ್ಯಗಳು : ● ವಿಶಾಲವಾದ 3 ಬೆಡ್ ರೂಮಿನ ಡುಪ್ಲೆಕ್ಸ್ ಮನೆ. ● ಕುಡಿಯುವ ನೀರಿನ ಸೌಲಭ್ಯ. ● ಕಾರ್ ಪಾರ್ಕಿಂಗ್. ● ಸೋಲಾರ್ ಬಿಸಿ ನೀರಿನ ವ್ಯವಸ್ಥೆ. ● ಮಳೆ ನೀರು ಇಂಗುಗುಂಡಿ ವ್ಯವಸ್ಥೆ

ವಿಶೇಷತೆಗಳು: ● ಹಾರೋಹಳ್ಳಿ ಕೈಗಾರಿಕಾ ಪ್ರದೇಶದ ಹತ್ತಿರ ರಾಷ್ಟ್ರೀಯ ಹೆದ್ದಾರಿ-948ಕ್ಕೆ ಹೊಂದಿಕೊಂಡಿದೆ. ● ದಯಾನಂದ ಸಾಗರ್ ವೈದ್ಯಕೀಯ ಮಹಾವಿದ್ಯಾಲಯದ ಬಳಿ. ● ಜೈನ್ ಯೂನಿವರ್ಸಿಟಿ ಹತ್ತಿರ.

ನೋಂದಣಿ ಶುಲ್ಕ ಮತ್ತು ಆರಂಭಿಕ ಠೇವಣಿ ಹಣವನ್ನು ಇ-ಪಾವತಿ ಮೂಲಕ ಪಾವತಿಸಿ, ಆನ್‌ಲೈನ್ ಅರ್ಜಿ ಸಲ್ಲಿಸಲು ಹಾಗೂ ನಿಯಮ ಮತ್ತು ಷರತ್ತುಗಳ ಪೂರ್ಣ ವಿವರಗಳಿಗಾಗಿ ಮಂಡಳಿಯ ವೆಬ್‌ಸೈಟ್ https://www.khb.karnataka.gov.in ಸಂಪರ್ಕಿಸುವುದು.

ಸಹಿ/- ಗೃಹ ಆಯುಕ್ತರು
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು
DIPR/CP/YC/2258/2025-26



**ಕರ್ನಾಟಕ ಸರ್ಕಾರ**
**ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ.**
ಕಛೇರಿ ವಿಳಾಸ: ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರಕಾರ್ಯಾಲಯ, ಹೆಚ್.ಆರ್.ಜಿ. ವೃತ್ತ, ಬಳ್ಳಾರಿ-583101.
ದೂ.ಸಂ: 08392-273731, E-Mail: combudably@gmail.com. Web: www.bellary.uda.gov.in
NO: BUDA/BLY/Engg/MP/01/22-23/2025-26 DATE:05/08/2025

**ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)**

ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದಕೈಗೊಳ್ಳಲುಅನುಮೋದಿತ ಆಯವ್ಯಯದಂತೆ ಈ ಕೆಳಕಂಡ ಕಾಮಗಾರಿಗಳಿಗೆ ಐಟಂವಾರು ಟೆಂಡರ್ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಪಿ.ಡಬ್ಲ್ಯೂಡಿ ನೋಂದಾಯಿತ ಸಿವಿಲ್ ಕನ್ಸಲ್ಟೆಂಟ್ಸ್‌ರಿಗೆ ಟೆಂಡರ್‌ಅಹ್ವಾನಿಸಲಾಗಿದೆ. ಟೆಂಡರ್‌ನಲ್ಲಿನ ಹೆಚ್ಚಿನ ಮಾಹಿತಿಗಾಗಿ ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಅಥವಾ www.KPPP.karnataka.gov.in ವೆಬ್ ಸೈಟ್‌ನಲ್ಲಿ ಅಥವಾ ಈ ಕಛೇರಿಯ ದೂರವಾಣಿ ಸಂಖ್ಯೆ:08392-273731 ರವರಿಂದ ಪಡೆಯಬಹುದಾಗಿದೆ. ನಿಬಂಧನೆಗಳು 1)ಯಾವುದೇ ಕಾರಣಕ್ಕೂ ನಿಗಧಿಪಡಿಸಿದ ಕೊನೆಯ ದಿನಾಂಕದಂದು ಸಂಪರ್ಕಜಾಲ (ಅನ್‌ಲೈನ್)ಸಿಗದಿದ್ದರೆ ಈ ಕಛೇರಿ ಜವಾಬ್ದಾರಿಯಾಗಿರುವುದಿಲ್ಲ 2)ಯಾವುದೇ ಟೆಂಡರ್ ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರ ಅಯುಕ್ತರು, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ ಇವರು ಕಾಯ್ದಿರಿಸಿಕೊಂಡಿರುತ್ತಾರೆ ಹಾಗೂ ಇನ್ನುಳಿದ ಎಲ್ಲಾ ಷರತ್ತುಗಳು ಅನ್ವಯವಾಗುತ್ತದೆ.

**Details of Work:** 1.Preparation of Masterplan for Ballari Urban Development Area.BUDA/2025-26/SE0015(GIS Based) **Estimated Cost (Rs. in Lakhs):** 200.00.

**The Tender Events are as under:**a)Prebid Meeting: 20-08-2025 up to 16:30 Hrs. b).ಟೆಂಡರ್ ಆಕ್ಷೇಪಣೆ ಸಲ್ಲಿಸಲು (ಇ-ಪ್ರಕ್ಯೂರ್‌ಮೆಂಟ್‌ಮುಖಾಂತರ): 28.08.2025 up to 16:30 Hrs.. c).ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 03.09.2025 up to 16:30 Hrs.d). ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 04.09.2025 at 17:00 Hrs. e).ಆರ್ಥಿಕ ಬಿಡ್ ತೆರೆಯುವ ದಿನಾಂಕ: 12.09.2025 at 17:00 Hrs.

ಸಹಿ/- ಆಯುಕ್ತರು,
ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/348/ಕೆಎಸ್‌ಎಂಸಿಎ/2025-26



ಕರ್ನಾಟಕ ಸರ್ಕಾರ
**ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ**
**ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಬೀದರ.**
ನಂ: ಇಇ/ಎಂಐಡಿ/ಬೀದರ/ತಾ.ಶಾ-1,2&3/ಟೆಂಡರ್/2025-26/1394 ದಿನಾಂಕ: 07.08.2025

**ಕೆಪಿಪಿ-ಪ್ರೋಕ್ಯೂರಮೆಂಟ್ಸ ಟೆಂಡರ್ ಪ್ರಕಟಣೆ ಕರೆ-2**

1) ಕಾಮಗಾರಿಗಳ ವಿವರ. KPP -Portal ನಲ್ಲಿ ನಮೂದಿಸಿದಂತೆ. 2) ಕಾಮಗಾರಿಗಳ ಅಂದಾಜು ಮೊತ್ತ. : KPP -Portal ನಲ್ಲಿ ನಮೂದಿಸಿದಂತೆ. 3) ಗುತ್ತಿಗೆದಾರರ ಅರ್ಹತೆ ವಿವರ. KPP -Portal ನಲ್ಲಿ ನಮೂದಿಸಿದಂತೆ 4) ಕಾಮಗಾರಿಗಳ ಟೆಂಡರ ಮೊತ್ತದ ವಿವರ. KPP -Portal ನಲ್ಲಿ ನಮೂದಿಸಿದಂತೆ, 5) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ. KPP -Portal ನಲ್ಲಿ ನಮೂದಿಸಿದಂತೆ. 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ: ಕೆ.ಡಬ್ಲೂ -3 ಮಾತ್ರ **:13-08-2025 ರಂದು 17.00 ಗಂಟೆವರೆಗೆ,** 7) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ ಕೆ.ಡಬ್ಲೂ -3 ಮಾತ್ರ **:15-08-2025 ರಂದು 16.00 ಗಂಟೆ ವರೆಗೆ,** 8) ಟೆಂಡರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲೂ -3 ಮಾತ್ರ **:18-08-2025 ರಂದು 11.00 ಗಂಟೆಗೆ ಸಾಧ್ಯವಾದಲ್ಲಿ,** 9) ಟೆಂಡರ ಆರ್ಥಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲೂ -3 ಮಾತ್ರ **20-08-2025 ರಂದು 11.00 ಗಂಟೆಗೆ ಸಾಧ್ಯವಾದಲ್ಲಿ,** 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ ವಿಳಾಸ, ದೂರವಾಣಿ ಸಂಖ್ಯೆ. ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ಇಲಾಖೆ.ವಿಭಾಗ, ಬೀದರ. ದೂರವಾಣಿ ಸಂ:08482 232080, 11) ಅಂತರ್ಜಾಲ ತಾಣದ ವಿಳಾಸ.
KPP portal https://kppp.karnataka.gov.in

ಸಹಿ/- ಕಾರ್ಯ ನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಬೀದರ.
ವಾ.ಸಾ.ಸಂ.ಇ/ಬೀದರ/125/ಕೆ.ಎಸ್.ಎಂ.ಸಿ.&ಎ/2025-26



**ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ**
ನವನಗರ, ಹುಬ್ಬಳ್ಳಿ - 580025. ದೂರವಾಣಿ: 0836-2222392
ಇ-ಮೇಲ್: kslu.registrar@gmail.com ವೆಬ್‌ಸೈಟ್: www.kslu.karnataka.gov.in
ಸಂಖ್ಯೆ: ಕರಾಕಾವಿ/ಕು.ಸ/ಟೆ.ಪ್ರ/2025-26/1095 ದಿನಾಂಕ: 08-08-2025

**ಟೆಂಡರ್ ಪ್ರಕಟಣೆ**

ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ KW-1/2/3 ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು https://kppp.karnataka.gov.in ವೆಬ್‌ಸೈಟ್‌ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಕಾಮಗಾರಿಗಳ ವಿವರಗಳು ಈ ಕೆಳಗಿನಂತಿವೆ.

| ಕ್ರ. ಸಂ. | ಕಾಮಗಾರಿಯ ಹೆಸರು | ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) (ಜಿಎಸ್‌ಟಿ ಹೊರತುಪಡಿಸಿ) | ಇಎಮ್‌ಡಿ ಮೊತ್ತ (ರೂ. ಗಳಲ್ಲಿ) | ಮೀಸಲಾತಿ |
|---|---|---|---|---|
| 1 | KSLU/2025-26/BD/WORK_INDENT21 | 50.84 | 50,900/- | ಪ್ರವರ್ಗ-I |
| 2 | KSLU/2025-26/BD/WORK_INDENT22 | 22.72 | 50,000/- | ಸಾಮಾನ್ಯ (Others) |
| 3 | KSLU/2025-26/OW/WORK_INDENT23 | 14.89 | 18,700/- | ಪ್ರವರ್ಗ-II (A) |
| 4 | KSLU/2025-26/BD/WORK_INDENT24 | 25.41 | 25,500/- | ಪರಿಶಿಷ್ಟ ಜಾತಿ (SC) |
| 5 | KSLU/2025-26/OW/WORK_INDENT25 | 12.78 | 16,000/- | ಪರಿಶಿಷ್ಟ ಪಂಗಡ (ST) |
| 6 | KSLU/2025-26/OW/WORK_INDENT26 | 18.92 | 47,500/- | ಸಾಮಾನ್ಯ (Others) |
| 7 | KSLU/2025-26/BD/WORK_INDENT27 | 33.89 | 67,800/- | ಸಾಮಾನ್ಯ (Others) |

1) ಈ ಮೇಲ್ಕಂಡ ಟೆಂಡರ್‌ನಲ್ಲಿ ಭಾಗವಹಿಸುವ ಗುತ್ತಿಗೆದಾರರು ಕರ್ನಾಟಕ ಸರಕಾರದ ಇ-ಪ್ರೊಕ್ಯೂರ್‌ಮೆಂಟ್ https://kppp.karnataka.gov.in ವೆಬ್‌ಸೈಟ್‌ನಲ್ಲಿ ವಿವರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾದ ದಿನಾಂಕ: **08-08-2025 ರಂದು ಸಂಜೆ 4.00 ಗಂಟೆಯಿಂದ.** 2) ಆಕ್ಷೇಪಣೆ - ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ: **22-08-2025 ರಂದು ಸಂಜೆ 5.30 ಗಂಟೆವರೆಗೆ.** 3) ಬಿಡ್‌ನ್ನು ಸಲ್ಲಿಸಲು ಕೊನೆಯ ದಿನಾಂಕ: **25-08-2025 ರಂದು ಸಂಜೆ 4.30 ಗಂಟೆವರೆಗೆ.** 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **26-08-2025 ರಂದು ಸಂಜೆ 5.00 ಗಂಟೆಗೆ.** 5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **28-08-2025 ರಂದು ಸಂಜೆ 5.15 ಗಂಟೆಗೆ.**

ಮೇಲ್ಕಂಡ ಟೆಂಡರ್‌ನಲ್ಲಿ ಭಾಗವಹಿಸುವ ಗುತ್ತಿಗೆದಾರರು ಹೆಚ್ಚಿನ ವಿವರಗಳನ್ನು **ಸ್ಥಾನಿಕ ಅಭಿಯಂತರರು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ನವನಗರ, ಹುಬ್ಬಳ್ಳಿ ಈ ವಿಭಾಗದಿಂದ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ (ರಜೆ ದಿನಗಳನ್ನು ಹೊರತುಪಡಿಸಿ) ಪಡೆದುಕೊಳ್ಳಬಹುದು.**

ಸಹಿ/-
ಕುಲಸಚಿವರು
ವಾಸಾಸಂಇ/ಧಾರವಾಡ/526/ಅಡ್ವಟೋರ್/2025-26



ರಾಷ್ಟ್ರೀಯ ಆರೋಗ್ಯ ಅಭಿಯಾನ
**ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ**
ಆರೋಗ್ಯ ಸೌಧ, 1ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು - 560023.
ದೂರವಾಣಿ ಸಂಖ್ಯೆ: 080-23113584 ಇ-ಮೇಲ್: pdrch-hfws@karnataka.gov.in
No: NHM/SBC/NSCAEM/23/2024-2025 e-1552352 Date: 08-08-2025
Indent No: NHM/2025-26/IND0032/Call-2

**ಟೆಂಡರ್ ಅಧಿಸೂಚನೆ** (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ರಾಷ್ಟ್ರೀಯ ಆರೋಗ್ಯ ಅಭೀಯಾನವು (NHM) ಕಾರ್ಯಕ್ರಮಕ್ಕೆ ಅವಶ್ಯವಿರುವ **PROCUREMENT AND SUPPLY OF SICKLE CELL ANEMIA ID CARD UNDER NSCAEM-STATE BLOOD CELL (SBC)** ಗೆ ಮೂಲ ತಯಾರಕರು / ಅಧಿಕೃತ ಸರಬರಾಜುದಾರರು ಅಗತ್ಯ ದಾಖಲೆಯೊಂದಿಗೆ ಟೆಂಡರ್‌ನಲ್ಲಿ ಭಾಗವಹಿಸಲು ಪ್ರಸ್ತಾವನೆಯನ್ನು ಆಹ್ವಾನಿಸಲಾಗಿದೆ.

ಅರ್ಹತೆಯುಳ್ಳ ಟೆಂಡರ್‌ದಾರರು ಮೇಲ್ಕಂಡ ವಿಷಯದ ಬಗ್ಗೆ ವಿವರವಾದ ಮಾಹಿತಿಯನ್ನು ವೆಬ್‌ಸೈಟ್: **https://kppp.karnataka.gov.in** ನಲ್ಲಿ ಪಡೆಯಬಹುದಾಗಿದೆ. ಟೆಂಡರ್ ಡಾಕ್ಯೂಮೆಂಟ್‌ಗಳನ್ನು ದಿನಾಂಕ: **08-08-2025 ರ ನಂತರ** ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಟೆಂಡರ್‌ನ್ನು ಸ್ವೀಕರಿಸುವ ಕೊನೆಯ ದಿನಾಂಕ: **30-08-2025 ರ ಅಪರಾಹ್ನ 5.30 ಗಂಟೆಗೆ ಅಥವಾ ಮುಂಚಿತವಾಗಿ ಸಲ್ಲಿಸತಕ್ಕದ್ದು.**

ಹೆಚ್ಚಿನ ಮಾಹಿತಿಯನ್ನು ಕೆಳಸಹಿದಾರರ ಕಛೇರಿಯಿಂದ ಕೆಲಸದ ವೇಳೆಯಲ್ಲಿ **ಪೂರ್ವಾಹ್ನ 11.00 ಗಂಟೆಯಿಂದ ಅಪರಾಹ್ನ 4.00 ಗಂಟೆಯೊಳಗೆ** ಪಡೆಯಬಹುದಾಗಿರುತ್ತದೆ.

ಸಹಿ/-
ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್)
ವಾಸಾಸಂಇ/ವಾ.ಪ್ರ/2260/ಅಡ್ವಟೋರ್/2025-26



**ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ**
"ಜ್ಞಾನ ಸಂಗಮ", ಬೆಳಗಾವಿ - 590018, ಕರ್ನಾಟಕ
ಸಂಖ್ಯೆ:ವಿ.ತಾ.ವಿ./ಬೆ/ಸ್ಥಾ.ಅ./2025-26/ಐ.ಎಫ್.ಟಿ. ನಂ.69/2072 ದಿನಾಂಕ: 07-08-2025

**ಟೆಂಡರ್ ಪ್ರಕಟಣೆ**
(ದ್ವಿ-ಲಕೋಟೆ ಪದ್ಧತಿ) (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕುಲಸಚಿವರು, ವಿತಾವಿ, ಬೆಳಗಾವಿ ಇವರಿಂದ ನೋಂದಾಯಿತ ಫರ್ಮ/ ಏಜೆನ್ಸಿದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ಕೆ.ಡಬ್ಲ್ಯೂ. ರ ಪ್ರಕಾರ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಆಮಂತ್ರಿಸಲಾಗಿದೆ. ಕಾಮಗಾರಿಗಳ ಹೆಸರು: **1) ವಿತಾವಿಯ ಪ್ರಾದೇಶಿಕ ಕಛೇರಿ ಕಲಬುರಗಿಯಲ್ಲಿ ಗ್ರಂಥಾಲಯ, ಅತಿಥಿ ಗೃಹ, ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ವಸತಿ ನಿಲಯಗಳಲ್ಲಿ ವೈ-ಫೈ ನೆಟ್‌ವರ್ಕ್ ಸರಬರಾಜು ಮತ್ತು ಸ್ಥಾಪನೆ ಮಾಡುವ ಕಾಮಗಾರಿ ಮೊತ್ತ ರೂ. 61,10,000/- (ತೆರಿಗೆ ರಹಿತ). ಮತ್ತು 2) ವಿತಾವಿಯ ಪ್ರಾದೇಶಿಕ ಕಛೇರಿ ಕಲಬುರಗಿಯಲ್ಲಿ ಪ್ರವೇಶದ್ವಾರ, ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ವಸತಿ ನಿಲಯಗಳಲ್ಲಿ ಹೊರಾಂಗಣ ಮತ್ತು ಒಳಾಂಗಣ ಸಿಸಿಟಿವಿ ಕಣ್ಗಾವಲು ವ್ಯವಸ್ಥೆಯನ್ನು ಪೂರೈಸುವುದು, ಸ್ಥಾಪಿಸಿ ನಿಯೋಜಿಸುವ ಕಾಮಗಾರಿ ಮೊತ್ತ ರೂ. 50,80,842/- (ತೆರಿಗೆ ರಹಿತ).** ಇತರೆ ಮಾಹಿತಿಗಳನ್ನು ವೆಬ್‌ಸೈಟ್: **https://kppp.karnataka.gov.in** ಮೂಲಕ ದಿನಾಂಕ: **07-08-2025** ರಿಂದ ಪಡೆದುಕೊಳ್ಳಬಹುದು.

ಸಹಿ/- ಕುಲಸಚಿವರು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.
ವಾಸಾಸಂಇ/ಬೆಳಗಾವಿ/802/ಅಡ್ವಟೋರ್/2025-26



भारत सरकार/Government of India, अंतरिक्ष विभाग/Department of Space
**भारतीय अंतरिक्ष अनुसंधान संगठन/Indian Space Research Organisation**
**द्रव नोदन प्रणाली केंद्र /LIQUID PROPULSION SYSTEMS CENTRE**
वलियमला पी.ओ., तिरुवनंतपुरम/ VALIAMALA P.O., THIRUVANANTHAPURAM-695 547
विज्ञापन सं. एलपीएससी/01/2025 दिनांक 09.08.2025
Advertisement No. LPSC/01/2025 dated 09.08.2025

**वलियमला और बेंगलूरु में स्थित एल पी एस सी यूनिटों के लिए निम्नलिखित पदों के लिए आवेदन आमंत्रित किए जाते हैं**
**Applications are invited for the following posts in LPSC Units located at Valiamala and Bengaluru.**

| पद सं Post No. | अध्ययन का विषय Discipline | रिक्तियों की संख्या, तैनाती स्थान एवं आरक्षण के विवरण No. of Vacancies, Place of Posting & Reservation Details | | | अनिवार्य योग्यताएं तथा अनुभव Essential Qualifications and Experience |
|---|---|---|---|---|---|
| **पद का नाम : तकनीकी सहायक - स्तर 7 (वेतन मैट्रिक्स : ₹ 44,900/- - ₹ 1,42,400/-) Name of Post: Technical Assistant – Level 7 (Pay Matrix: ₹ 44,900/- - ₹ 1,42,400/-)** | | | | | |
| 792 | यांत्रिकी Mechanical | 11* | वलियमला Valiamala (08) | अना. /UR - 03<br>अ.पि.व/OBC - 03<br>अ.जा /SC - 01<br>आ.क.व/EWS- 01 | प्रथम श्रेणी के साथ यांत्रिकी इंजीनियरिंग में 3 वर्ष का डिप्लोमा। Three year Diploma in Mechanical Engineering with First Class. |
| | | | बेंगलूरु Bengaluru (03) | अना. /UR - 02<br>अ.जा. /SC - 01 | |
| | *11 पदों में से, 01 पद (क) से (ग) तक के पी डब्ल्यू बी डी–एमडी के लिए आरक्षित हैं। / Out of 11, 01 post is reserved for PWBD-MD, from (a) to (c) : (क/a) एलवी/LV, (ख/b) एचएच/HH, (ग/c) ओए/OA, ओएल/OL, ओएएल/OAL, डीडब्ल्यू/Dw, एलसी/LC, सीपी/CP, ओएच/OH | | | | |
| 793 | इलेक्ट्रॉनिक्स Electronics | 01 | वलियमला Valiamala (01) | अना./UR - 01 | प्रथम श्रेणी के साथ इलेक्ट्रॉनिक्स इंजीनियरिंग में 3 वर्ष का डिप्लोमा। Three year Diploma in Electronics Engineering with First Class. |
| **पद का नाम : उप अधिकारी - स्तर 6 (वेतन मैट्रिक्स : ₹ 35,400/- - ₹ 1,12,400/-) Name of Post: Sub Officer – Level 6 (Pay Matrix: ₹ 35,400/- - ₹ 1,12,400/-)** | | | | | |
| 794 | उप अधिकारी Sub Officer | 01 | वलियमला Valiamala (01) | अना./UR - 01 | ● 6 वर्षों के अनुभव के साथ लीडिंग फायरमैन/डीसीओ तथा उप अधिकारी का प्रमाणपत्र रखनेवाले/Leading Fireman/ DCOs with 6 years experience and possessing Sub-Officer's certificate या/ OR पीसीएम के साथ बी.एससी+उप अधिकारी का प्रमाणपत्र+उप अधिकारी के पाठ्यक्रम के उपरांत लीडिंग फायरमैन के रूप में कम-से-कम 2 वर्षों का अनुभव। /B.Sc with PCM + Sub Officer's Certificate + Min. 2 years experience as Leading Fireman after Sub-Officer's course. ● वैध भारी वाहन ड्राइविंग (एचवीडी) लाइसेंस होना चाहिए। Should possess valid Heavy Vehicle Driving (HVD) Licence. ● निधारित शारीरिक स्वस्थता एवं शारीरिक क्षमता परीक्षा मानकों को पूरा करना चाहिए। Should satisfy the prescribed physical fitness and Physical Efficiency Test (PET) standards. नोट:/Note: उप-अधिकारी का प्रमाण पत्र एनएफएससी, नागपुर या क्षेत्रीय अग्निशमन सेवा प्रशिक्षण केंद्र बेंगलुरु/ गोवा / लखनऊ/ दिल्ली / कोलकता/ भुवनेश्वर/ मुंबई / चेन्नै से होना चाहिए। The Sub-Officer's certificate shall be from NFSC, Nagpur or Regional Fire Service Training Centres, Bengaluru / Delhi / Lucknow / Goa / Kolkatta/ Bhuvaneshwar/ Mumbai / Chennai. |
| **पद का नाम : तकनीशियन 'बी'- स्तर 3 (वेतन मैट्रिक्स : ₹ 21,700/- - ₹ 69,100/-) Name of Post: Technician 'B' – Level 3 (Pay Matrix: ₹ 21,700/- - ₹ 69,100/-)** | | | | | |
| 795 | टर्नर/Turner | 01 | वलियमला Valiamala (01) | अना. /UR – 01 | एस एस एल सी/एस एस सी उत्तीर्ण + एन सी वी टी से टर्नर ट्रेड में आई टी आई/एन टी सी/एन ए सी SSLC/SSC pass + ITI/NTC/NAC in Turner Trade from NCVT |
| 796 | फिटर /Fitter | 04 | वलियमला Valiamala (02) | अ.पि.व. /OBC – 01<br>आ.क.व./EWS – 01 | एस एस एल सी/एस एस सी उत्तीर्ण + एन सी वी टी से फिटर ट्रेड में आई टी आई/एन टी सी/एन ए सी SSLC/SSC pass + ITI/NTC/ NAC in Fitter Trade from NCVT |
| | | | बेंगलूरु Bengaluru (02) | अना. /UR – 02* | |
| | * कुल 02 पदों में से, 01 पद पूर्वसैनिकों के लिए आरक्षित है। / *Out of 02 posts, 01 post is reserved for Ex-servicemen. | | | | |
| 797 | प्रशीतन एवं वातानुकूलन मेकैनिक Refrigeration & Air -Conditioning Mechanic | 01 | बेंगलूरु Bengaluru (01) | अना./UR – 01 | एस एस एल सी/एस एस सी उत्तीर्ण + एन सी वी टी से प्रशीतन एवं वातानुकूलन मेकैनिक ट्रेड में आई टी आई/ एन टी सी/ एन ए सी SSLC/SSC pass + ITI/NTC/NAC in Refrigeration & Air-Conditioning Mechanic Trade from NCVT |
| **पद का नाम: भारी वाहन चालक 'ए' –स्तर 2 ( वेतन मैट्रिक्स: ₹ 19,900/- - ₹ 63,200/-) Name of Post: Heavy Vehicle Driver 'A' – Level 2 (Pay Matrix: ₹ 19,900/- - ₹ 63,200/-)** | | | | | |
| 798 | भारी वाहन चालक 'ए' Heavy Vehicle Driver 'A' | 02 | वलियमला Valiamala (02) | अ.जा / SC – 01<br>आ.क.व./EWS – 01 | ●एस एस एल सी /एस एस सी/मैट्रिक/ 10वीं कक्षा उत्तीर्ण / Pass in SSLC/SSC/ Matric/10th Std. ● पाँच वर्षों का अनुभव, इनमें से भारी वाहन चालक ( भा.वा.चा.) के रूप में न्यूनतम 3 वर्ष का अनुभव तथा शेष अवधि में लघु मोटर वाहन के चालन का अनुभव / 5 years experience, out of which minimum 3 years as Heavy Vehicle Driver (HVD) and the balance period driving experience of Light Motor Vehicle. ● यदि साविधिक हो तो, अभ्यर्थी के पास वैध भा.वा.चा. का लाइसेंस एवं लोक सेवा बैज होना चाहिए / Must possess valid HVD licence and Public Service Badge, if statutory. |
| **पद का नाम: लघु वाहन चालक 'ए' – स्तर 2 ( वेतन मैट्रिक्स: ₹ 19,900/- - ₹ 63,200/-) Name of Post: Light Vehicle Driver 'A' – Level 2 (Pay Matrix: ₹ 19,900/- - ₹ 63,200/-)** | | | | | |
| 799 | लघु वाहन चालक 'ए' Light Vehicle Driver 'A' | 02 | वलियमला Valiamala (02) | अना./UR – 01<br>अ.पि.व. /OBC– 01 | ●एस एस एल सी/एस एस सी/मैट्रिक/10 वीं कक्षा उत्तीर्ण / Pass in SSLC/SSC/ Matric/10th Std. ●लघु वाहन चालक (ल.वा.चा.) के रूप में तीन वर्षों का अनुभव / 3 years experience as Light Vehicle Driver (LVD). ●अभ्यर्थी के पास वैध ल.वा.चा. का लाइसेंस होना चाहिए। / Must possess valid LVD licence |

[अना.- अनारक्षित/UR-Un-reserved, अ.पि.व. - अन्य पिछड़ा वर्ग /OBC- Other Backward Class, अ.जा.- अनुसूचित जाति/ SC- Scheduled Caste, आ.क.व.- आर्थिक रूप से कमज़ोर वर्ग/ EWS- Economically Weaker Section, पी डब्ल्यू बी डी-बेंचमार्क दिव्यांगता वाले व्यक्ति/PWBD – Persons With Benchmark Disabilities]. अधिकतम आयु सीमा 35 वर्ष (दिनांक 26.08.2025 तक) है। अ.पि.व., अ.जा., पी डब्ल्यू बी डी, भूतपूर्व सैनिक तथा अन्य श्रेणी के अभ्यर्थियों के लिए अधिकतम आयु सीमा में छूट भारत सरकार के आदेशों के अनुसार लागू होगी। **आवेदन ऑनलाइन माध्यम से ही स्वीकार किए जाएँगे।** इच्छुक अभ्यर्थी विस्तृत जानकारी एवं ऑनलाइन आवेदन प्रपत्र भरने हेतु वेबसाइट www.lpsc.gov.in पर जाएं। इस उद्देश्य हेतु ऑनलाइन भर्ती पोर्टल **दिनांक 12.08.2025 को 1400 बजे से 26.08.2025 को 1400 बजे तक** उपलब्ध रहेगा। Maximum Age limit (as on 26.08.2025) is 35 years. Relaxation in maximum age limit is applicable for OBC, SC, PWBD, Ex-servicemen and other categories as per Govt. of India orders. **Applications will be received ONLY THROUGH ON-LINE.** Interested candidates may visit the website www.lpsc.gov.in for detailed information and filling-up of on-line application form. For this purpose, the on-line recruitment portal will be available **from 1400 hrs. on 12.08.2025 to 1400 hrs. on 26.08.2025.**

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75
ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

# ಅಭಿಮತ

## ಸುಭಾಷಿತ

ಅಭಿಪ್ರಾಯ ಭೇದ ಎಂದರೆ ದ್ವೇಷವೆಂದಲ್ಲ. ಭಿನ್ನಾಭಿಪ್ರಾಯ ಇಲ್ಲದ ಇಬ್ಬರನ್ನು ನಾನು ನೋಡಿಯೇ ಇಲ್ಲ.

-ಮಹಾತ್ಮ ಗಾಂಧೀಜಿ

## ಸಂಪಾದಕೀಯ

# ನೈಜ ಭಾರತೀಯತೆಯ ಮಾನದಂಡ 'ಸುಪ್ರೀಂ' ಅಭಿಪ್ರಾಯ ದುರದೃಷ್ಟಕರ

**ಭಾರತಕ್ಕೆ** ಸೇರಿದ 2,000 ಚ.ಕಿ.ಮೀ ಭೂಮಿಯನ್ನು ಚೀನಾ ಆಕ್ರಮಿಸಿಕೊಂಡಿದೆ ಎಂದು 'ಭಾರತ್ ಜೋಡೊ' ಯಾತ್ರೆಯ ಸಂದರ್ಭದಲ್ಲಿ ಹೇಳಿಕೆ ನೀಡಿದ್ದ ರಾಹುಲ್ ಗಾಂಧಿ ಅವರ ಮೇಲೆ ಸುಪ್ರೀಂ ಕೋರ್ಟ್ ಮಾಡಿರುವ ಟೀಕೆ-ಟಿಪ್ಪಣಿ ದುರದೃಷ್ಟಕರ. ಓರ್ವ ನೈಜ ಭಾರತೀಯ ಇಂಥ ಹೇಳಿಕೆಗಳನ್ನು ನೀಡುವುದು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್‌ನ ವಿಭಾಗೀಯ ಪೀಠ ಹೇಳಿದೆ. ರಾಹುಲ್ ಗಾಂಧಿ ವಿರುದ್ಧ ನಡೆಯುತ್ತಿರುವ ಮಾನಹಾನಿ ಪ್ರಕರಣಕ್ಕೆ ತಡೆ ನೀಡಲು ನಿರಾಕರಿಸಿರುವ ಅಲಹಾಬಾದ್ ಹೈಕೋರ್ಟ್ ತೀರ್ಪು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ಸಂದರ್ಭದಲ್ಲಿ ನ್ಯಾಯಪೀಠ ಈ ಕಟು ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಭಾರತ ಹಾಗೂ ಚೀನಾ ಸೈನಿಕರ ನಡುವೆ 2020ರಲ್ಲಿ ನಡೆದ ಗಾಲ್ವಾನ್ ವ್ಯಾಲಿ ಸಂಘರ್ಷದ ಸಂದರ್ಭದಲ್ಲಿ ಚೀನಾದಿಂದ ಅತಿಕ್ರಮಣ ನಡೆದಿದೆ ಎಂದು ರಾಹುಲ್ ಗಾಂಧಿ ಹೇಳಿದ್ದರು. ಹೀಗೆ ಹೇಳುವ ಮೂಲಕ ಲೋಕಸಭೆಯ ವಿರೋಧ ಪಕ್ಷದ ನಾಯಕ ಸೇನೆಗೆ ಅವಮಾನ ಎಸಗಿದ್ದಾರೆ ಎಂದು ಪ್ರಕರಣ ದಾಖಲಿಸಲಾಗಿದೆ.

ಮಾನಹಾನಿ ಪ್ರಕರಣ ಹಾಗೂ ಹೈಕೋರ್ಟ್‌ನಲ್ಲಿ ನಡೆಯುತ್ತಿದ್ದ ವಿಚಾರಣೆಗೆ ತಡೆ ನೀಡಬೇಕೆಂದು ಸಲ್ಲಿಸಿದ್ದ ಮನವಿ, ನ್ಯಾಯಪೀಠದ ಮುಂದಿದ್ದ ವಿಷಯಗಳು. ಪ್ರಕರಣದ ವಿಷಯಗಳಿಗೂ ರಾಹುಲ್ ಗಾಂಧಿ ಅವರ ಭಾರತೀಯತೆಗೂ ಯಾವುದೇ ಸಂಬಂಧ ಇರಲಿಲ್ಲ. ಸಂಸತ್‌ನಲ್ಲಿ ಮಾತನಾಡುವ ಬದಲು ಸಾಮಾಜಿಕ ಮಾಧ್ಯಮದಲ್ಲಿ ಅವರು ಏಕೆ ಮಾತನಾಡಿದರು ಅಥವಾ ಜವಾಬ್ದಾರಿಯುತ ಸ್ಥಾನದಲ್ಲಿರುವ ಲೋಕಸಭೆಯ ವಿರೋಧ ಪಕ್ಷದ ನಾಯಕ ವಿವಾದಕ್ಕೆ ಕಾರಣವಾದ ಸಂಗತಿಯ ಬಗ್ಗೆ ಹೇಗೆ ಮಾತನಾಡ ಬಹುದಿತ್ತು ಎನ್ನುವ ವಿಷಯವೂ ನ್ಯಾಯಪೀಠದ ಮುಂದಿರಲಿಲ್ಲ. ಸುಪ್ರೀಂ ಕೋರ್ಟ್‌ನ ಕಾನೂನಿನ ಬಲವಿಲ್ಲದ ಟೀಕೆ-ಟಿಪ್ಪಣಿಯು ಅನಗತ್ಯ ಅಭಿಪ್ರಾಯಗಳನ್ನು ಸೃಷ್ಟಿಸಲು ಆಸ್ಪದ ಕಲ್ಪಿಸುವಂತಿವೆ. ನೈಜ ಭಾರತೀಯನೊಬ್ಬ ಹೀಗೆ ಮಾತನಾಡಲು ಸಾಧ್ಯವಿಲ್ಲ ಎನ್ನುವ ನ್ಯಾಯಪೀಠದ ಅಭಿಪ್ರಾಯ, ಹೀಗೆ ಹೇಳಿರುವ ವ್ಯಕ್ತಿ ಭಾರತೀಯನಲ್ಲ ಎಂದು ಸೂಚಿಸುವಂತಿದೆ. ಮಾನಹಾನಿ ಪ್ರಕರಣವೊಂದರ ಸಂದರ್ಭದಲ್ಲಿ ವ್ಯಕ್ತಿಯೊಬ್ಬರ ಭಾರತೀಯತೆ ಅಥವಾ ದೇಶಪ್ರೇಮದ ಬಗ್ಗೆ ನಿರ್ಣಯಿಸುವಂಥ ಮಾತುಗಳನ್ನಾಡುವುದು ನ್ಯಾಯಬದ್ಧ ಎಂದು ಹೇಳಲು ಸಾಧ್ಯವಿಲ್ಲ. ಅದರಲ್ಲೂ, ಆಡಳಿತ ಪಕ್ಷ ಮತ್ತು ಅದರ ಬೆಂಬಲಿಗರು ರಾಹುಲ್ ಗಾಂಧಿ ಅವರ ದೇಶಪ್ರೇಮವನ್ನು ಪ್ರಶ್ನಿಸುತ್ತಿರುವ ಸಂದರ್ಭದಲ್ಲಿ ಈ ಅಭಿಪ್ರಾಯ ವ್ಯಕ್ತವಾಗಿರುವುದು ಅತ್ಯಂತ ದುರದೃಷ್ಟಕರ.

ಮಾನಹಾನಿ ಪ್ರಕರಣವೊಂದರ ಸಂದರ್ಭದಲ್ಲಿ ರಾಹುಲ್ ಗಾಂಧಿ ಅವರ ದೇಶಪ್ರೇಮದ ಬಗ್ಗೆ ಸುಪ್ರೀಂ ಕೋರ್ಟ್ ಅಭಿಪ್ರಾಯ ವ್ಯಕ್ತಪಡಿಸಿರುವುದು ಅನಗತ್ಯ ಗೊಂದಲಗಳಿಗೆ ಕಾರಣ ಆಗುವಂತಿದೆ.

ಲೋಕಸಭೆಯ ವಿರೋಧ ಪಕ್ಷದ ನಾಯಕನ ಹೇಳಿಕೆ ಸೇನೆಯ ವಿರುದ್ಧವಾಗಿ ಇರಲಿಲ್ಲ. ಪಾಕಿಸ್ತಾನದ ಬಾಲಾಕೋಟ್ ಮೇಲೆ 2019ರಲ್ಲಿ ನಡೆದ 'ಸರ್ಜಿಕಲ್ ಸ್ಟ್ರೈಕ್' ಬಗ್ಗೆ ಪ್ರಶ್ನೆಗಳು ಎದುರಾಗಿದ್ದವು. 'ಆಪರೇಷನ್ ಸಿಂಧೂರ' ಹಾಗೂ ಬಹುಮುಖ್ಯವಾಗಿ, ಪಾಕಿಸ್ತಾನದೊಂದಿಗಿನ ಯುದ್ಧದಲ್ಲಿ ಭಾರತಕ್ಕಾದ ನಷ್ಟದ ಬಗ್ಗೆಯೂ ಪ್ರಶ್ನಿಸಲಾಗಿತ್ತು. ಗಾಲ್ವಾನ್ ಕಣಿವೆಗೆ ಸಂಬಂಧಿಸಿದ ಸಂಘರ್ಷದ ಸಮಯದಲ್ಲಿ ಸರ್ಕಾರದ ನಿಲುವು ಏನಾಗಿತ್ತು ಎನ್ನುವುದರ ಬಗ್ಗೆಯೂ ಪ್ರಶ್ನೆಗಳನ್ನು ಕೇಳಲಾಗಿದೆ. ಇವೆಲ್ಲವೂ ಸರ್ಕಾರವನ್ನು ಕೇಳಿರುವ ಪ್ರಶ್ನೆಗಳೇ ಹೊರತು, ದೇಶದ ಸಶಸ್ತ್ರ ಪಡೆಗಳಿಗೆ ಸಂಬಂಧಿಸಿದವಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಶ್ನಿಸುವ ಹಕ್ಕು ವಿರೋಧ ಪಕ್ಷಗಳಿಗಿದೆ. 'ನೈಜ ಭಾರತೀಯ'ತೆ ಎಂದು ಹೇಳುವ ಮೂಲಕ ಪ್ರಶ್ನೆ ಕೇಳುವುದನ್ನು ಹತ್ತಿಕ್ಕುವ ಪ್ರವೃತ್ತಿ ಸಮರ್ಥನೀಯವಲ್ಲ ಹಾಗೂ ಇವೆಲ್ಲ ನೈಜ ಭಾರತೀಯ ಕೇಳುವಂತಹ ಪ್ರಶ್ನೆಗಳೇ ಆಗಿವೆ. ರಾಹುಲ್ ಗಾಂಧಿ ತಮ್ಮ ಹೇಳಿಕೆಯನ್ನು ಸಂಸತ್‌ನಲ್ಲಿ ಏಕೆ ನೀಡಲಿಲ್ಲ ಎಂದು ಕೇಳುವುದು ಕೂಡ ಸರಿಯಲ್ಲ. ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಉನ್ನತ ರಾಷ್ಟ್ರೀಯ ನಾಯಕರು ಸಾಮಾಜಿಕ ಮಾಧ್ಯಮಗಳಲ್ಲಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ ಹಾಗೂ ಅದರಿಂದ ಅವರು ಯಾವುದೇ ತೊಂದರೆ ಎದುರಿಸಿಲ್ಲ. ರಾಹುಲ್ ಗಾಂಧಿ ಅವರ ರಕ್ಷಣೆಗೆ ಕೊನೆಗೂ ಒದಗಬೇಕಾದುದು ಅವರ ಸಂಸತ್ ಸದಸ್ಯತ್ವ ಅಥವಾ ಲೋಕಸಭೆಯ ವಿರೋಧ ಪಕ್ಷದ ನಾಯಕ ಸ್ಥಾನವಲ್ಲ; ಈ ದೇಶದ ಪ್ರಜೆಯಾಗಿ ಅವರು ಹೊಂದಿರುವ ಹಕ್ಕು.

### ಚಾವಡಿ

## ಅಪಾಯ ಯಾವುದು?

ದೇವರು, ಧರ್ಮ ಅಪಾಯದಲ್ಲಿದೆ ಎಂಬುದನ್ನು ಸಾರುವ ನಾಲಿಗೆಗಳಿಗೆ ಹೆಣ್ಣುಕುಲವೂ ಅಪಾಯದಲ್ಲಿ ಇರುವುದು ಕಾಣುವುದೇ ಇಲ್ಲ!

**ಅನಂತ ಕುಣಿಗಲ್,** ಲೇಖಕ- ಪ್ರಕಾಶಕ, ಫೇಸ್‌ಬುಕ್‌ನಿಂದ

### ಕಿಡಿನುಡಿ

ಚುನಾವಣಾ ಆಯೋಗದ ಮೇಲಿನ ಸುಳ್ಳಿನ ಸುರಿಮಳೆಯು ಜನತಂತ್ರಕ್ಕೆ ನೇಣು ಬಿಗಿಯುವ ಧೂರ್ತ ಹುನ್ನಾರವಾಗಿದೆ. ಅಮೃತಕಾಲದ ಪ್ರಜಾ ಪ್ರಭುತ್ವಕ್ಕೆ ವಿಷವಿಕ್ಕುವ ಘೋರ ಷಡ್ಯಂತ್ರವೂ ಆಗಿದೆ.

**ಎಚ್.ಡಿ. ಕುಮಾರಸ್ವಾಮಿ,** ಕೇಂದ್ರ ಬೃಹತ್ ಕೈಗಾರಿಕಾ ಸಚಿವ

## 25 ವರ್ಷಗಳ ಹಿಂದೆ

ಬುಧವಾರ, 9-8-2000

● **ಏಕೀಕರಣದ ಹರಿಕಾರ ಮುತ್ಸದ್ದಿ ಎಸ್ಸೆನ್ ಇನ್ನಿಲ್ಲ**

ಚಿತ್ರದುರ್ಗ, ಆಗಸ್ಟ್ 8- ಕರ್ನಾಟಕ ಏಕೀಕರಣದ ಹರಿಕಾರ ಎಂದೇ ಹೆಸರಾದ ಹಿರಿಯ ಮುತ್ಸದ್ದಿ, ಅಪ್ಪಟ ಗಾಂಧೀವಾದಿ, ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಇನ್ನಿಲ್ಲ.

ಚಿತ್ರದುರ್ಗದ ತಮ್ಮ ಮನೆ 'ವಿನಯ'ದಲ್ಲಿ ಕೆಲವು ದಿನಗಳಿಂದ ಸಾವು ಬದುಕಿನೊಂದಿಗೆ ಹೋರಾಟ ನಡೆಸಿದ್ದ ಈ ಹಿರಿಯ ಜೀವ, ಮಂಗಳವಾರ ರಾತ್ರಿ 10.30ರ ಹೊತ್ತಿಗೆ ಕೊನೆಯುಸಿರೆಳೆದರು. ಹೃದಯಾಘಾತದಿಂದ ತತ್ತರಿಸಿದ ಅವರನ್ನು ಉಳಿಸಿಕೊಳ್ಳಲು ವೈದ್ಯರು ದೊಡ್ಡ ಹೋರಾಟವನ್ನೇ ನಡೆಸಿದರೂ ಅದು ಪ್ರಯೋಜನಕ್ಕೆ ಬರಲಿಲ್ಲ.

● **ಹಿಜ್‌ಬುಲ್ ಕದನ ವಿರಾಮ ವಾಪಸ್**

ಇಸ್ಲಾಮಾಬಾದ್, ಆಗಸ್ಟ್ 8 (ಪಿಟಿಐ)- ಜಮ್ಮು ಮತ್ತು ಕಾಶ್ಮೀರದಲ್ಲಿ ಹಠಾತ್ತಾಗಿ ಘೋಷಿಸಿದ್ದ ಕದನ ವಿರಾಮವನ್ನು ಪಾಕಿಸ್ತಾನ ಮೂಲದ ಹಿಜ್‌ಬುಲ್ ಮುಜಾಹಿದ್ದೀನ್ ಉಗ್ರಗಾಮಿ ಸಂಘಟನೆ ಇಂದು ವಾಪಸು ಪಡೆಯಿತು.

ಕಾಶ್ಮೀರ ಸಮಸ್ಯೆಯನ್ನು ಬಗೆಹರಿಸುವ ಉದ್ದೇಶದಿಂದ ಪಾಕಿಸ್ತಾನವನ್ನೂ ಸೇರಿಸಿಕೊಂಡು ತ್ರಿಪಕ್ಷೀಯ ಮಾತುಕತೆಗೆ ಬರುವಂತೆ ನೀಡಿದ್ದ ಕರೆಗೆ, 'ಭಾರತ ಸಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತಪಡಿಸಲಿಲ್ಲ' ಎಂದು ಅದು ದೂಷಿಸಿದೆ.

## 75 ವರ್ಷಗಳ ಹಿಂದೆ

ಬುಧವಾರ, 9-8-1950

● **ಆಹಾರ ಪದಾರ್ಥಗಳ ಬೆಲೆ ಏರಿಸಿರುವುದಕ್ಕೆ ಪ್ರತಿಭಟನೆ**

ಬೆಂಗಳೂರು, ಆಗಸ್ಟ್ 8- ಸರ್ಕಾರ ಆಗಸ್ಟ್ 1ರಿಂದ ರೇಷನ್ ಪದಾರ್ಥಗಳ ಬೆಲೆಯನ್ನು ಹೆಚ್ಚಿಸಿ, ಅಕ್ಕಿ ಪಡಿತರ ಪ್ರಮಾಣದಲ್ಲಿ ಖೋತಾ ಮಾಡಿರುವುದನ್ನು ಪ್ರತಿಭಟಿಸಲು ನಗರದ ಸೋಷಲಿಸ್ಟ್ ಪಾರ್ಟಿಯ ಸದಸ್ಯರು, ಅಠಾರಾ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ಸುಮಾರು 500ಕ್ಕೂ ಮೇಲ್ಪಟ್ಟು ಸೋಷಲಿಸ್ಟ್ ಕಾರ್ಯಕರ್ತರು ಹಾಗೂ ಸಾರ್ವಜನಿಕರು, ಪ್ಲಕಾರ್ಡ್‌ಗಳನ್ನು ಹಿಡಿದುಕೊಂಡು, ಘೋಷಣೆಗಳನ್ನು ಮಾಡುತ್ತಾ ಬಳೇಪೇಟೆಯಿಂದ ಹೊರಟು ಅಠಾರಾ ಕಚೇರಿ ಬಳಿಗೆ ಮೆರವಣಿಗೆಯಲ್ಲಿ ಬಂದರು. ಕಬ್ಬನ್ ಪಾರ್ಕ್‌ನಲ್ಲಿ ಮುಂದಕ್ಕೆ ಹೋಗದಂತೆ ಪೊಲೀಸರು ಪ್ರದರ್ಶನಕಾರರನ್ನು ತಡೆದು, ಪ್ರತಿನಿಧಿಗಳು ಕಚೇರಿಗೆ ಹೋಗಿ ಆಹಾರ ಸಚಿವರನ್ನು ಭೇಟಿ ಮಾಡಲು ಅವಕಾಶವಿತ್ತರು.

● **ಬಿಹಾರ ಕ್ಷಾಮ ಪೀಡಿತ ಸ್ಥಳದ ಪರಿಹಾರಕ್ಕೆ ಅಷ್ಟಾಂಶ ಯೋಜನೆ**

ಪಟ್ನಾ, ಆಗಸ್ಟ್ 8- ಸೋಷಲಿಸ್ಟ್ ನಾಯಕ ಜೈಪ್ರಕಾಶ ನಾರಾಯಣರು ಬಿಹಾರದಲ್ಲಿ ಕ್ಷಾಮಪೀಡಿತ ಪ್ರದೇಶಗಳಲ್ಲಿನ ಆಹಾರ ಸಮಸ್ಯೆಯ ಪರಿಹಾರಕ್ಕಾಗಿ ಎಂಟು ಅಂಶಗಳ ಕಾರ್ಯಕ್ರಮವನ್ನು ಸೂಚಿಸಿ ಹೇಳಿಕೆಯೊಂದನ್ನಿತ್ತಿದ್ದಾರೆ. ಪೂರ್ಣಿಯಾ ಜಿಲ್ಲೆಗಳಲ್ಲಿ ನಿರಾಹಾರದಿಂದ ಆರು ಮಂದಿ ಮೃತರಾದರೆಂದು ಅಧಿಕಾರಿಗಳೇ ಒಪ್ಪಿಕೊಂಡಿದ್ದರು.

# ಕೆರೆಗಳ ಕತ್ತಿಗೆ ಸರ್ಕಾರದ ಕೈ?

### ವಿಶ್ಲೇಷಣೆ

**ಅಖಿಲೇಶ್ ಚಿಪ್ಪಳಿ**

> ಕೆರೆಗಳ ಸಂರಕ್ಷಿತ ಪ್ರದೇಶವನ್ನು ಕಡಿತಗೊಳಿಸುವ ಸರ್ಕಾರದ ನಿರ್ಧಾರ, ಜಲಮೂಲಗಳ ಸಂರಕ್ಷಣೆಗೆ ಧಕ್ಕೆ ತರುವಂತಹದ್ದು. ಸಂರಕ್ಷಿತ ಪ್ರದೇಶಕ್ಕೂ ಕೆರೆಗಳ ನೀರಿನ ಬಂಡವಾಳಕ್ಕೂ ಸಂಬಂಧವಿದೆ. ಕೆರೆಗಳ ಆವರಣವನ್ನು ಕಡಿಮೆ ಮಾಡುವುದರಿಂದ ಕೆರೆಗಳ ನೀರಿನ ಸಂಗ್ರಹ ಕಡಿಮೆಯಾಗುತ್ತದೆ ಹಾಗೂ ಆ ಪ್ರದೇಶದಲ್ಲಿ ಬದುಕು ಕಟ್ಟಿಕೊಂಡ ಜೀವವೈವಿಧ್ಯವೂ ಅಪಾಯಕ್ಕೆ ಸಿಲುಕಲಿದೆ.

**ಹಾ**ಸ್ಯಸಾಹಿತಿ ಬೀಚಿ, 'ಕಾನೂನು ಕತ್ತೆಯಿದ್ದಂತೆ' ಎಂದು ವ್ಯಂಗ್ಯವಾಡುತ್ತಿದ್ದರು. ಆ ವ್ಯಂಗ್ಯ ಇವತ್ತಿಗೂ ಪ್ರಸ್ತುತ ಎಂದರೆ ಕಾನೂನನ್ನು ತೆಗಳಿದಂತೇನೂ ಆಗುವುದಿಲ್ಲ. ಶಾಸಕಾಂಗದ ಹಸ್ತಕ್ಷೇಪ ಮತ್ತು ಕಾರ್ಯಾಂಗದ ಅದಕ್ಷತೆಯಿಂದಾಗಿ ಕಾನೂನು ಇಲ್ಲಿ ಅಕ್ಷರಶಃ ಕತ್ತೆಯಾಗಿದೆ ಎನ್ನುವುದಕ್ಕೆ ಸಾಕಷ್ಟು ಉದಾಹರಣೆಗಳಿವೆ.

ಶಿವಮೊಗ್ಗ ತಾಲ್ಲೂಕಿನ ಕಸಬಾ ಹೋಬಳಿಯ ನವುಲೆ ಗ್ರಾಮದ ಸರ್ವೆ ನಂಬರ್ 41ರಲ್ಲಿ 31 ಎಕರೆ 4 ಗುಂಟೆಯಷ್ಟು ದೊಡ್ಡದಾದ ಸರ್ಕಾರಿ ಕೆರೆಯೊಂದಿತ್ತು. ಕೆರೆಯ ಸಂರಕ್ಷಿತ ಪ್ರದೇಶ (ಬಫರ್ ಜೋನ್) ಒತ್ತುವರಿಯಾಯಿತು. ಕೆರೆಯಲ್ಲಿ ನೀರು ಸಂಗ್ರಹ ಕ್ರಮೇಣ ಕಡಿಮೆಯಾಗುತ್ತಾ ಹೋಯಿತು. 1994ರ ಹೊತ್ತಿಗೆ ಶಿವಮೊಗ್ಗ ನಗರಸಭೆಯವರಿಗೆ 'ಇದು ಜೀವಂತ ಕೆರೆಯಲ್ಲ' ಅನ್ನಿಸಿತು. ಬೇಸಿಗೆಯಲ್ಲಿ ಆಟದ ಮೈದಾನದಂತೆ ತೋರುವ ನವುಲೆ ಕೆರೆ ಮಳೆಗಾಲದಲ್ಲಿ ತುಂಬುತ್ತಿತ್ತು. 2002ರಲ್ಲಿ ಕರ್ನಾಟಕ ರಾಜ್ಯ ಕ್ರಿಕೆಟ್ ಅಕಾಡೆಮಿ (ಕೆಎಸ್‌ಸಿಎ) ಅಲ್ಲಿ ಕ್ರಿಕೆಟ್ ಸ್ಟೇಡಿಯಂ ಮಾಡಲು ಮುಂದಾಯಿತು. ಶಿವಮೊಗ್ಗ ಜಿಲ್ಲಾಡಳಿತ ಎಷ್ಟು ಅಸೂಕ್ಷ್ಮ ಆಗಿತ್ತೆಂದರೆ, ವಿರೋಧ ಮಾಡಿದವರ ಯಾವ ಮಾತನ್ನೂ ಕೇಳದೇ 'ಕೆಎಸ್‌ಸಿಎ'ಗೆ ಕೆರೆಯ 26 ಎಕರೆ ಭೂಮಿಯನ್ನು ಮೂವತ್ತು ವರ್ಷಗಳ ಗುತ್ತಿಗೆಗೆ ನೀಡಿತು.

ಮುಂದೆ ಆಗಿದ್ದೆಲ್ಲ ಕೆರೆ ಮುಚ್ಚುವ ಕೆಲಸ. ಗುಡ್ಡವನ್ನು ಕಡಿದು ಲೋಡುಗಟ್ಟಲೇ ಮಣ್ಣನ್ನು ತಂದು ಸುರಿಯಲಾಯಿತು; ಕೆರೆಯನ್ನು ಕ್ರೀಡಾಂಗಣ ಮಾಡಲಾಯಿತು. ಹಾಲಿ ಉಳಿದ 5 ಎಕರೆ ನಾಲ್ಕು ಗುಂಟೆ ಕೆರೆಯಲ್ಲಿ ಮಳೆಗಾಲದಲ್ಲಿ ಭರಪೂರ ನೀರು ತುಂಬಿದಾಗ ಸ್ಟೇಡಿಯಂ ಕೂಡ ಕೆರೆಯಂತಾಗುತ್ತದೆ. ಕೋಟ್ಯಂತರ ರೂಪಾಯಿ ಖರ್ಚು ಮಾಡಿ ನಿರ್ಮಿಸಿದ ಸ್ಟೇಡಿಯಂ ನೀರು ನಿಂತು ಹಾಳಾಗುತ್ತಿದೆ. ಇದಕ್ಕೊಂದು ಉಪಾಯವನ್ನು ಕೆಎಸ್‌ಸಿಎ ಕಂಡುಕೊಂಡಿದೆ: ಕೆರೆಯ ತಳಭಾಗದಲ್ಲಿ ದೊಡ್ಡದಾದ ಕಿಂಡಿ ಕೊರೆದು, ನೀರನ್ನು ರಾಜಕಾಲುವೆಗೆ ಬಿಡುವುದು.

'ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಮಸೂದೆ-2025'ರ ಮೂಲಕ, ಕೆರೆಗಳ ಸಂರಕ್ಷಿತ ಪ್ರದೇಶದ ವ್ಯಾಪ್ತಿಯನ್ನು 30 ಮೀಟರ್‌ನಿಂದ ಕೆರೆಗಳ ವ್ಯಾಪ್ತಿಯ ಆಧಾರದ ಮೇಲೆ ಕಡಿತಗೊಳಿಸಲು ರಾಜ್ಯ ಸರ್ಕಾರ ಮುಂದಾಗಿದೆ. ವಾಣಿಜ್ಯ, ಕೈಗಾರಿಕೆ ಮತ್ತು ಮನರಂಜನಾ ಚಟುವಟಿಕೆ ಗಳಿಗೆ ಕೆರೆಯ ಸಂರಕ್ಷಿತ ವಲಯದ ಸಮೀಪದಲ್ಲಿ ಅವಕಾಶ ಕಲ್ಪಿಸುವ ಉದ್ದೇಶ ಸರ್ಕಾರದ್ದು. ಈ ಕ್ರಮವು ಪಶ್ಚಿಮ ಘಟ್ಟಗಳು ಮತ್ತು ಮಲೆನಾಡಿನ ಕೆರೆಗಳಿಗೆ ಮರಣ ಶಾಸನವಾಗಲಿದೆ; ಪರಿಸರ ವಿನಾಶ, ಪ್ರವಾಹದ ಅಪಾಯ, ಜೀವಿವೈವಿಧ್ಯ ನಾಶಕ್ಕೆ ನೇರ ಕಾರಣವಾಗಲಿದೆ.

ಅಂಕಿ-ಅಂಶಗಳ ಪ್ರಕಾರ, 50 ವರ್ಷಗಳ ಹಿಂದೆ ಬೆಂಗಳೂರಿನಲ್ಲಿ 272 ಕೆರೆಗಳಿದ್ದವು. ಈಗ ಈ ಸಂಖ್ಯೆ 168ಕ್ಕೆ ಇಳಿದಿದೆ. ರಿಯಲ್ ಎಸ್ಟೇಟ್ ಮಾಫಿಯಾಗಳು ಮತ್ತವರ ಒತ್ತುವರಿಗೆ ಸಹಕರಿಸಿದ ಎಲ್ಲಾ ಸರ್ಕಾರಗಳು ಇದಕ್ಕೆ ನೇರ ಕಾರಣವಾಗಿವೆ.

'ರಾಷ್ಟ್ರೀಯ ಹಸಿರು ನ್ಯಾಯಮಂಡಳಿ'ಯು 2016ರಲ್ಲಿ, ಕೆರೆಗಳ ಸುತ್ತಲಿನ ಸಂರಕ್ಷಿತ ಪ್ರದೇಶವನ್ನು 75 ಮೀಟರ್‌ಗೆ ವಿಸ್ತರಿಸಿತ್ತು. ಇದನ್ನು ಒಪ್ಪದ ಕರ್ನಾಟಕ ಸರ್ಕಾರ ಆ ಆದೇಶವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿತ್ತು. ನ್ಯಾಯಮಂಡಳಿಯ ಆದೇಶವನ್ನು ತಡೆಹಿಡಿದ ಸುಪ್ರೀಂ ಕೋರ್ಟ್, ಕರ್ನಾಟಕ ಮುನಿಸಿಪಲ್ ಕಾಯ್ದೆ-1976, ಮಾಸ್ಟರ್ ಪ್ಲಾನ್ ಬೆಂಗಳೂರು-2015, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ-(ಕೆಟಿಸಿಡಿಎ) 2014ರಂತೆ ಕೆರೆಗಳ ಬಫರ್ ಜೋನ್ ನಿಗದಿ ಮಾಡುವಂತೆ ತಿಳಿಸಿತು. ಕೆಟಿಸಿಡಿಎ ಕಾಯ್ದೆಯಡಿ ಕೆರೆಗಳ ಬಫರ್ ಜೋನ್ 30 ಮೀಟರ್ ಎಂದು ನಮೂದಿಸಲಾಗಿದೆ.

ಅಭಿವೃದ್ಧಿ ಕೆಲಸಗಳಿಗೆ ಕೆರೆಗಳ ಸಂರಕ್ಷಿತ ಪ್ರದೇಶ ಹೆಚ್ಚಾಗಿರುವುದು ಅಡ್ಡಿ ಮಾಡುತ್ತಿದೆ ಎಂಬುದು ಸರ್ಕಾರದ ವಾದವಾಗಿತ್ತು. ಕೆರೆ ಸಂರಕ್ಷಿತ ಪ್ರದೇಶದ 30 ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಕಟ್ಟಡ ಕಟ್ಟುವಂತಿಲ್ಲ, ಪರಭಾರೆ ಮಾಡುವಂತಿಲ್ಲ ಎಂಬುದರ ಜೊತೆಗೆ, ಆ ಪ್ರದೇಶದಲ್ಲಿ ಸ್ಥಳೀಯ ಜಾತಿಯ ಗಿಡಗಳನ್ನು ನೆಟ್ಟು ಬೆಳೆಸಬೇಕು ಹಾಗೂ ಕೆರೆಯ ಹೂಳನ್ನು ತೆಗೆದು ನಿರ್ವಹಣೆ ಮಾಡಬೇಕು ಎಂಬ ಅಂಶಗಳು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ಆದೇಶದಲ್ಲಿತ್ತು.

ಭಾರತೀಯ ವಿಜ್ಞಾನ ಸಂಸ್ಥೆಯ ವರದಿ ಪ್ರಕಾರ, ಸಂರಕ್ಷಿತ ಪ್ರದೇಶವು ಕೆರೆಯ ನೀರಿನ ಧಾರಣಾ ಸಾಮರ್ಥ್ಯವನ್ನು ಹೆಚ್ಚಿಸುವುದಲ್ಲದೇ, ಪ್ರವಾಹ ನಿಯಂತ್ರಿಸಲು ಸಹಕಾರಿ. ಮಲೆನಾಡಿನ ಕೆರೆಗಳು ಸಾಮಾನ್ಯವಾಗಿ ಕಾಡುಗಳಿಂದ ಆವೃತವಾಗಿವೆ. ಈ ಕೆರೆಗಳ ಸುತ್ತಲಿನ ಸಂರಕ್ಷಿತ ಪ್ರದೇಶಗಳು ಸ್ಥಳೀಯ ಸಸ್ಯಗಳು, ವಿವಿಧ ಪ್ರಭೇದದ ಪಕ್ಷಿಗಳು, ಕೀಟಗಳು, ಉಭಯವಾಸಿಗಳು ಮತ್ತು ಸರೀಸೃಪಗಳಿಗೆ ಆಶ್ರಯ ನೀಡಿವೆ. ಸಂರಕ್ಷಿತ ಪ್ರದೇಶವನ್ನು ಕಡಿತಗೊಳಿಸುವುದರಿಂದ ಕೆರೆಯ ಆವಾಸದಲ್ಲಿನ ಜೀವವೈವಿಧ್ಯದ ಸುರಕ್ಷತೆಗೆ ಧಕ್ಕೆಯಾಗುತ್ತದೆ.

ಬೆಂಗಳೂರಿನ ಬೆಳ್ಳಂದೂರು ಕೆರೆಯ ಉದಾಹರಣೆ ಕಣ್ಣಮುಂದೆಯೇ ಇದೆ. ಕೆರೆಯ ಸುತ್ತಲಿನ ಸಂರಕ್ಷಿತ ಪ್ರದೇಶದ ಅತಿಕ್ರಮಣದಿಂದಾಗಿ, ಕೆರೆಯ ನೀರು ಸಂಗ್ರಹಣಾ ಸಾಮರ್ಥ್ಯವು ಗಣನೀಯವಾಗಿ ಕುಗ್ಗಿದೆ. ಮಲೆನಾಡಿನ ಕೆರೆಗಳಿಗೆ ಇಂತಹ ಗತಿಯಾದರೆ, ಮಲೆನಾಡು ಸೇರಿದಂತೆ ಬಯಲು ನಾಡಿನ ಜಲಭದ್ರತೆಗೂ ಅಪಾಯ ಉಂಟಾಗಲಿದೆ. ಪಶ್ಚಿಮಘಟ್ಟದ ಅನೇಕ ನದಿಗಳು ಬಯಲು ಸೀಮೆಗೆ ನೀರಿನ ಆಕರವಾಗಿವೆ. ಇಲ್ಲಿನ ಕೆರೆಗಳು ನದಿಗಳಿಗೆ ನೀರುಣಿಸುವ ಮೂಲಕ, ನದಿಯ ಜೀವಂತಿಕೆಗೆ ತಮ್ಮ ಕೊಡುಗೆ ನೀಡುತ್ತಿವೆ.

ಕೆರೆ ತೀರದ ಸಮೀಪದಲ್ಲಿ ನಿರ್ಮಾಣಕ್ಕೆ ಅವಕಾಶ ಕಲ್ಪಿಸುವುದರಿಂದ, ಭೂಮಿಯ ಮೌಲ್ಯವು ಗಗನಕ್ಕೇರುತ್ತದೆ; ಆ ಬೆಳವಣಿಗೆ ರಿಯಲ್ ಎಸ್ಟೇಟ್ ವ್ಯಾಪಾರಕ್ಕೆ ಹೆಚ್ಚು ಲಾಭ ತರಲಿದೆ. ಮಲೆನಾಡಿನ ಕೆರೆಗಳ ಸುತ್ತಲಿನ ಭೂಮಿಯು ಪ್ರವಾಸೋದ್ಯಮ ಮತ್ತು ವಾಣಿಜ್ಯ ಚಟುವಟಿಕೆಗಳಿಗೆ ಆಕರ್ಷಕವಾಗಿದೆ. ಆದರೆ, ಅಭಿವೃದ್ಧಿ ಚಟುವಟಿಕೆಗಳ ಹೆಸರಿನಲ್ಲಿ ಕೆರೆಗಳನ್ನು ನಾಶ ಮಾಡುವುದರಿಂದ ಸ್ಥಳೀಯ ಜನರಿಗೆ, ವಿಶೇಷವಾಗಿ ಕೃಷಿಯನ್ನು ಅವಲಂಬಿಸಿರುವವರಿಗೆ, ನೀರಿನ ಕೊರತೆ ಉಂಟಾಗುತ್ತದೆ ಮತ್ತು ಪರಿಸರ ಸಮತೋಲನದಲ್ಲೂ ಏರುಪೇರಾಗುತ್ತದೆ.

ಸಂರಕ್ಷಿತ ಪ್ರದೇಶದಲ್ಲಿ ಬಿದ್ದ ಮಳೆಯ ನೀರು ನೈಸರ್ಗಿಕವಾಗಿ ಗಿಡ-ಮರಗಳ, ದರಗೆಲೆಗಳ, ಹುಲ್ಲಿನ ಮೂಲಕ ಹರಿದು ಶುದ್ಧವಾಗಿ ಕೆರೆಯನ್ನು ಸೇರುತ್ತದೆ. ಸಂರಕ್ಷಿತ ಪ್ರದೇಶದ ಪೋಷಕಾಂಶಗಳು ಮೀನುಗಳಿಗೆ ಆಹಾರ ಮೂಲವಾಗುತ್ತವೆ. ಮೀನು ಆಹಾರ ಭದ್ರತೆಯ ಭಾಗವೂ ಹೌದು. ಗುಡ್ಡಗಳಲ್ಲಿ ಸಂಗ್ರಹವಾಗುವ ನೀರು, ಬೇಸಿಗೆಯಲ್ಲೂ ಕೆರೆಗಳ ನೀರು ಸಂಗ್ರಹಣೆಯನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಸಂರಕ್ಷಿತ ಪ್ರದೇಶದಲ್ಲಿ ಗುಡ್ಡದಿಂದ ಹರಿದು ಬರುವ ನೀರಿನ ಮಾರ್ಗದಲ್ಲಿ ಜಲಕಣ್ಣುಗಳು ಇರುತ್ತವೆ. ಸಂರಕ್ಷಿತ ಪ್ರದೇಶವನ್ನು ಕಡಿತ ಮಾಡುವುದರಿಂದ ಈ ಜಲಕಣ್ಣುಗಳು ಶಾಶ್ವತವಾಗಿ ಮುಚ್ಚಿಹೋಗುತ್ತವೆ. ಇದು ಕೆರೆಗಳ ಸಾಮೂಹಿಕ ಸಾವಿಗೆ ಕಾರಣವಾಗಲಿದೆ.

ಮಲೆನಾಡಿನಲ್ಲಿ ನೀರಾವರಿ ಉದ್ದೇಶಕ್ಕಾಗಿ ಯಾವುದೇ ಅಣೆಕಟ್ಟುಗಳಿಲ್ಲ. ಮಲೆನಾಡಿಗೆ ಜಲಭದ್ರತೆಯನ್ನು ನೀಡುವುದು ಅಸಂಖ್ಯ ಚಿಕ್ಕ ಚಿಕ್ಕ ಒರತೆಗಳ ಕೆರೆಗಳು. ಸಂರಕ್ಷಿತ ಪ್ರದೇಶ ಅಥವಾ ಹಸಿರು ಆವರಣ ಹೆಚ್ಚು ಇದ್ದಷ್ಟೂ ಕೆರೆಗಳ ಆರೋಗ್ಯ ಸಮತೋಲನದಲ್ಲಿರುತ್ತದೆ. ಕೆರೆ-ಕುಂಟೆ, ಕಲ್ಯಾಣಿ, ಗೋಕಟ್ಟೆಗಳು ಅತ್ಯಂತ ಪವಿತ್ರವಾದವು ಎನ್ನುವುದು ಮಲೆನಾಡಿನ ಜನರ ಭಾವನೆಯಾಗಿದೆ. ಮಲೆನಾಡಿನ ಕೆರೆಗಳನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಕಾನೂನಿಗೆ ತಿದ್ದುಪಡಿ ಮಾಡಬೇಕೇ ಹೊರತು, ಸಂರಕ್ಷಿತ ವಲಯದ ವ್ಯಾಪ್ತಿಯನ್ನು ಕಡಿಮೆ ಮಾಡುವ ಸರ್ಕಾರದ ನಿರ್ಧಾರ ಬಹಳ ತಪ್ಪು ಎಂದು ಕೆರೆ ತಜ್ಞ ಶಿವಾನಂದ ಕಳವೆ ಹೇಳುತ್ತಾರೆ.

ಸರ್ಕಾರ ಮಲೆನಾಡಿನ ಕೆರೆಗಳನ್ನು ಅಕ್ವೇರಿಯಂನಂತೆ ನೋಡಬಾರದು. ನಮಗೆ ಇಷ್ಟವಾಗುವ ಮೀನುಗಳನ್ನಷ್ಟೇ ಅಕ್ವೇರಿಯಂನಲ್ಲಿ ಸಾಕಿಕೊಳ್ಳುತ್ತೇವೆ. ಕೆರೆ ಎನ್ನುವ ನೈಸರ್ಗಿಕ ಅಕ್ವೇರಿಯಂ ಜೀವವೈವಿಧ್ಯದ ತೊಟ್ಟಿಲು. ಉಭಯಚರಿಗಳಾದ ಕಪ್ಪೆಗಳು ನೀರಿನಲ್ಲಿ ಜನಿಸುತ್ತವೆ. ವಿವಿಧ ಹಂತಗಳನ್ನು ದಾಟಿಕೊಂಡು ಮತ್ತೆ ಕಪ್ಪೆಗಳಾಗಿ ರೂಪಾಂತರಗೊಂಡು ನೀರಿನಿಂದ ಹೊರಗೆ ಹೋಗುತ್ತವೆ. ಕೆರೆಯ ಸಂರಕ್ಷಿತ ಪ್ರದೇಶದಲ್ಲಿರುವ ಹಸಿರು ಆವರಣದ ಕಾರಣಕ್ಕೆ ಕೆರೆಯ ಮೀನುಗಳಿಗೆ ಆಹಾರ ಸಿಗುತ್ತದೆ. ಮೀನುಗಳನ್ನು ಬೇಟೆಯಾಡುವ ಮಿಂಚುಳ್ಳಿಗೂ ಕೆರೆಯ ಆವರಣದಲ್ಲಿ ಗಿಡ-ಮರಗಳು ಇರಬೇಕು.

ರಿಯಲ್ ಎಸ್ಟೇಟ್ ಉದ್ಯಮಕ್ಕೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಸರ್ಕಾರ ಕೆರೆಗಳ ಹಿತಾಸಕ್ತಿಯನ್ನು ಬಲಿ ಕೊಡಲು ಮುಂದಾಗಿದೆ. ಸರ್ಕಾರದ ನಿರ್ಧಾರಕ್ಕೆ ಯಾವುದೇ ವೈಜ್ಞಾನಿಕ ಕಾರಣಗಳಿಲ್ಲ. ಬಯಲು ಸೀಮೆಯ ಕೆರೆಗಳ ರಚನೆ ಮತ್ತು ಅವುಗಳ ನೈಸರ್ಗಿಕ ರಚನೆಯ ಸ್ವರೂಪವೇ ಬೇರೆ. ಮಲೆನಾಡಿನ ಕೆರೆಗಳ ನೈಸರ್ಗಿಕ ರಚನೆಯೇ ಬೇರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರಗಳು ಈ ರೀತಿಯ ನಿರ್ಧಾರಗಳನ್ನು ತೆಗೆದುಕೊಳ್ಳುವ ಪೂರ್ವದಲ್ಲಿ, ಜಿಲ್ಲಾವಾರು ಸ್ಥಳೀಯ ತಜ್ಞರ ಜೊತೆ ಚರ್ಚೆ ನಡೆಸಬೇಕು. ಈ ವಿಷಯದಲ್ಲಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ನೇತೃತ್ವದ ಸಮಿತಿಯ ಶಿಫಾರಸುಗಳು ಏನು ಎನ್ನುವುದು ಸಾರ್ವಜನಿಕರಿಗೆ ತಿಳಿಯಬೇಕು.

## ವಾಚಕರ ವಾಣಿ

### ಬದುಕು ಮತ್ತು ಪ್ರಭುತ್ವದ ಕ್ರೌರ್ಯ

**ರಾಯಚೂರು** ಜಿಲ್ಲೆಯಲ್ಲಿ ವಿಷಪೂರಿತ ಚವಳೆಕಾಯಿ ಪಲ್ಯ ಸೇವಿಸಿ ತಂದೆ ಮತ್ತು ಇಬ್ಬರು ಪುತ್ರಿಯರು ಮೃತಪಟ್ಟಿದ್ದು ಮಾಧ್ಯಮಗಳಲ್ಲಿ ದೊಡ್ಡ ಸುದ್ದಿಯಾಗಿದೆ. ಇಂತಹ ಅಮಾನವೀಯ ಘಟನೆಗೆ ನೇರ ಕಾರಣ ಯಾರು? ಆಳುವ ವರ್ಗದ ಮತ್ತು ಅಧಿಕಾರಶಾಹಿಯ ನೇರ ನಿರ್ಲಕ್ಷ್ಯ ಎನ್ನಲು ಅಡ್ಡಿಯಿಲ್ಲ.

ಕೃಷಿ ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳ ನಿರ್ಲಕ್ಷ್ಯವು ಕ್ಷಮೆಗೆ ಅರ್ಹವಲ್ಲ. ಜನಸಾಮಾನ್ಯರ ಜೊತೆಗೆ ಇವರು ಆಡುವ ಆಟಕ್ಕೆ ಇನ್ನೆಷ್ಟು ಅಮಾಯಕರು ಬಲಿಯಾಗಬೇಕು? ಜಾಗತಿಕ ಮಟ್ಟದಲ್ಲಿ ನಿಷೇಧಿಸಲಾದ ಎಷ್ಟೋ ರಾಸಾಯನಿಕಗಳು 'ವಿಶ್ವಗುರು' ಭಾರತದಲ್ಲಿ ರಾಜಾರೋಷವಾಗಿ ಬಿಕರಿಯಾಗುತ್ತಿವೆ. ಕೃಷಿಯಲ್ಲಿ ಬಳಸುವ ರಾಸಾಯನಿಕಗಳ ಪರಿಣಾಮದಿಂದ ಪ್ರತಿವರ್ಷ ಜಗತ್ತಿನಲ್ಲಿ 3.55 ಲಕ್ಷ ಜನ ಸಾವಿನ ದವಡೆಗೆ ಸಿಲುಕುತ್ತಿದ್ದಾರೆ. ಅಂದರೆ, ಪ್ರತಿ ದಿನ ಸರಾಸರಿ ಒಂದು ಸಾವಿರ ಜನರು ಕಳೆ/ ಪೀಡೆನಾಶಕಗಳಿಗೆ ಬಲಿಯಾಗುತ್ತಿದ್ದಾರೆ. ಇಂತಹ ಪ್ರಕರಣಗಳ ವಿಚಾರಣೆ ನ್ಯಾಯಾಲಯದಲ್ಲಿ ನಡೆಯುತ್ತಲೇ ಇರುತ್ತದೆ. ಆದರೆ, ಸರ್ಕಾರದ ನೀತಿಗಳು ಕಾರ್ಪೊರೇಟ್ ಪರವಾಗಿ ಇರುವುದು ದುರದೃಷ್ಟಕರ. ರಾಸಾಯನಿಕ ಮುಕ್ತ ಬೇಸಾಯ ಪದ್ಧತಿಯೇ ಇದಕ್ಕೆ ಪರಿಹಾರ.

**ಶಿವಕುಮಾರ್ ಗುಳಘಟ್ಟ,** ಮಂಡ್ಯ

### ಆಸ್ತಿ ಭದ್ರತೆಗೆ ಹೊಸ ಅಧ್ಯಾಯ

**ನೋಂದಣಿ** ಇಲ್ಲದೇ ಜಿಪಿಎ (ಜನರಲ್ ಪವರ್ ಆಫ್ ಅಟಾರ್ನಿ) ಆಧಾರದಲ್ಲಿ ನಡೆಯುತ್ತಿದ್ದ ಆಸ್ತಿ ವ್ಯವಹಾರ ಹಾಗೂ ಜಿಪಿಎ ದುರ್ಬಳಕೆ ತಡೆಗಟ್ಟಲು, ರಾಜ್ಯ ಸರ್ಕಾರ ಕಾಯ್ದೆಗಳಿಗೆ ತಿದ್ದುಪಡಿ ತಂದಿರುವುದು ಸ್ವಾಗತಾರ್ಹ. ಇನ್ನು ಮುಂದೆ ಜಿಪಿಎ ಆಧಾರಿತ ಆಸ್ತಿ ವರ್ಗಾವಣೆ ವಹಿವಾಟಿಗೂ ನೋಂದಣಿ ಕಡ್ಡಾಯವಾಗಲಿದೆ.

ಹಿಂದುಳಿದ ರಾಯಚೂರು ಜಿಲ್ಲೆಯಲ್ಲಿ ನಕಲಿ ಪವರ್ ಆಫ್ ಅಟಾರ್ನಿ ಬಳಕೆ ಹೆಚ್ಚಾಗಿದೆ. ಹೊಸ ಕಾಯ್ದೆಗಳು, ನಕಲಿ ದಾಖಲೆಗಳೊಂದಿಗೆ ತಂತ್ರಗಾರಿಕೆ ಹಾಗೂ ಮಾಲೀಕತ್ವದ ಬಗ್ಗೆ ಉಂಟಾಗುವ ಗೊಂದಲಗಳಿಗೆ ತಿಲಾಂಜಲಿ ನೀಡಲಿವೆ. ಆದರೆ, ಕಾಯ್ದೆಯ ಪರಿಣಾಮದ ಬಗ್ಗೆ ಗ್ರಾಮೀಣ ಅನಕ್ಷರಸ್ಥರು ಅರ್ಥಮಾಡಿಕೊಳ್ಳುವುದು ಸುಲಭವಲ್ಲ. ಹಾಗಾಗಿ, ಸರ್ಕಾರವು ವ್ಯಾಪಕ ಅಭಿಯಾನ ಕೈಗೊಳ್ಳಬೇಕಿದೆ. ಆಗಷ್ಟೇ ಕಾಯ್ದೆಗಳ ಆಶಯ ಸಾಫಲ್ಯ ಕಾಣಲಿದೆ.

**ವಿಜಯಕುಮಾರ್ ಎಚ್.ಕೆ.,** ರಾಯಚೂರು

### ರಾಹುಲ್ ಆರೋಪ 'ಠುಸ್' ಆಗದಿರಲಿ

**ಲೋಕಸಭಾ** ಚುನಾವಣೆ- 2024ರ ವೇಳೆ ಬೆಂಗಳೂರಿನ ಮತ ಕ್ಷೇತ್ರದಲ್ಲಿ ಮತ ಕಳವು ನಡೆದಿದೆ. ಇದಕ್ಕೆ ಸ್ಪಷ್ಟ ಪುರಾವೆಗಳಿವೆ ಎಂದು ಲೋಕಸಭಾ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ. ಈ ಆರೋಪ ಪ್ರಜಾಪ್ರಭುತ್ವ ವ್ಯವಸ್ಥೆಗೆ ಎದುರಾಗಿರುವ ಅಗ್ನಿ ಪರೀಕ್ಷೆ. ಇದನ್ನು ಅಲ್ಲಗಳೆಯದ ಚುನಾವಣಾ ಆಯೋಗವು, ರಾಹುಲ್ ಅವರು ಘೋಷಣೆ ಮತ್ತು ಪ್ರತಿಜ್ಞಾ ಪತ್ರಕ್ಕೆ ಸಹಿ ಹಾಕಬೇಕು. ಆರೋಪ ಸುಳ್ಳಾದರೆ ಕಠಿಣ ಕ್ರಮ ಎದುರಿಸಬೇಕಾಗುತ್ತದೆ ಎಂದಿದೆ.

ರಾಹುಲ್ ಅವರು, ಪ್ರಜಾಪ್ರಭುತ್ವ ವ್ಯವಸ್ಥೆಯ ಬುಡವನ್ನೇ ಅಲ್ಲಾಡಿಸುವ ಆರೋಪ ಮಾಡಿದ್ದಾರೆ. ಅದು ಸತ್ಯ ಎಂದು ಪ್ರಮಾಣೀಕರಿಸುವ ಹೊಣೆಗಾರಿಕೆಯೂ ಅವರ ಮೇಲಿದೆ. ಆರೋಪಕ್ಕೆ ಪೂರಕವಾದ ದಾಖಲೆಗಳನ್ನು ಚುನಾವಣಾ ಆಯೋಗ ಅಥವಾ ನ್ಯಾಯಾಲಯಕ್ಕೆ ಸಲ್ಲಿಸಿ ಆರೋಪವು 'ಠುಸ್' ಆಗದಂತೆ ಎಚ್ಚರವಹಿಸಲಿ.

**ವಿರೇಶ ಬಂಗಾರಶೆಟ್ಟರ,** ಕುಷ್ಟಗಿ

### ಕಲಬುರಗಿ ಪ್ರಯಾಣಿಕರ ಸಮಸ್ಯೆ ಆಲಿಸಿ

**ಬೆಂಗಳೂರು**-ಬೆಳಗಾವಿ ನಡುವೆ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಸಂಚಾರ ಕೊನೆಗೂ ಶುರುವಾಗಲಿದೆ. ಕಲಬುರಗಿಯವರ ಸಂಕಟ ಇಷ್ಟೇ. ಬೆಳಗಾವಿ ವಂದೇ ಭಾರತ್ ರೈಲಿಗೆ ಬೆಂಗಳೂರು ಸಿಟಿ ನಿಲ್ದಾಣದಲ್ಲಿ ಪ್ಲಾಟ್‌ಫಾರಂ ಸರಾಗವಾಗಿ ಲಭಿಸುತ್ತದೆ. ಕಲಬುರಗಿ ವಂದೇ ಭಾರತ್ ರೈಲಿಗೆ ಪ್ಲಾಟ್‌ಫಾರಂ ಲಭ್ಯವಿಲ್ಲ ಎಂಬ ನೆಪವೊಡ್ಡಿ, ಎಸ್‌ಎಂವಿಟಿ ರೈಲು ನಿಲ್ದಾಣಕ್ಕೆ ಒಯ್ಯಲಾಗುತ್ತಿದೆ.

ಬೆಂಗಳೂರಿನ ಪೂರ್ವ ಭಾಗದ ಈ ನಿಲ್ದಾಣ ತಲುಪಲು ಅನನುಕೂಲವೇ ಜಾಸ್ತಿ. ರೈಲು ಸೇವೆ ಆರಂಭಗೊಂಡ 18 ತಿಂಗಳಾದರೂ ಕನಿಷ್ಠ ಬೆಂಗಳೂರು 'ದಂಡು' ನಿಲ್ದಾಣದವರೆಗಾದರೂ ಈ ರೈಲನ್ನು ವಿಸ್ತರಿಸುವ ಬಗ್ಗೆ ನೈರುತ್ಯ ರೈಲ್ವೆಯು ಗಮನಹರಿಸಿಲ್ಲ. ಕಲಬುರಗಿ ವಂದೇ ಭಾರತ್ ರೈಲಿನ ಅಧಿಸೂಚನೆಯಲ್ಲಿಯೇ ಇದರ ಉಲ್ಲೇಖವಿದೆ. ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರಾದರೂ ಈ ಬಗ್ಗೆ ಗಮನಹರಿಸುವರೇ?

**ಮುದ್ಗಲ್ ವೆಂಕಟೇಶ,** ಕಲಬುರಗಿ

### ಸೌಹಾರ್ದ ಕಣ್ಮರೆ; ಅಸಹನೆ ವಿಜೃಂಭಣೆ

**ಹಬ್ಬಗಳ** ಆಚರಣೆಯಿಂದಾಗಿ ಮನೆಗಳಲ್ಲಿ ಸಂತೋಷ, ಸೌಹಾರ್ದ ನೆಲಸುತ್ತಿದ್ದ ಕಾಲವೊಂದಿತ್ತು. ಪ್ರಸ್ತುತ ಹಬ್ಬಗಳು ಆಡಂಬರ ಪ್ರಧಾನವಾಗಿದ್ದು, ಮಹಿಳೆಯರಿಗೆ ಹೊರೆಯಾಗಿವೆ. ತೋರಿಕೆ ಮತ್ತು ಪ್ರಚಾರವು ಮಹಿಳೆಯರನ್ನು ಇನ್ನಿಲ್ಲದಂತೆ ಕಾಡುತ್ತಿದೆ.

ಮೊದಲೆಲ್ಲ ಹಬ್ಬಗಳಿಗಾಗಿ ಕಾದು ಹೊಸ ಬಟ್ಟೆ ತೊಟ್ಟು ಓಣಿ ಮಂದಿ; ಅಕ್ಕ-ತಂಗಿಯರು, ಅಣ್ಣ-ತಮ್ಮಂದಿರ ಜೊತೆಯಲ್ಲಿ ಆಟವಾಡುತ್ತಿದ್ದ ದಿನಗಳು ಮಾಯವಾಗಿವೆ. ಈಗ ಯಾವಾಗ ಬೇಕೊ ಆವಾಗ ಬಟ್ಟೆ ಖರೀದಿಸಿ ಬೇಕೆಂದಾಗ ಹಬ್ಬ ಆಚರಿಸುವ ಸ್ಥಿತಿಗೆ ತಲುಪಿದ್ದೇವೆ. ಈಗ 'ಅನ್‌ಲಿಮಿಟೆಡ್ ಆಫರ್' ಖರೀದಿ ಕಾಲ. ಅಂತೆಯೇ ಸಮಾಜದಲ್ಲಿ ತಿರಸ್ಕಾರ, ಅಸಹನೆ, ಅಸಹಿಷ್ಣುತೆ, ದ್ವೇಷವೂ ಮನ, ಮನೆಗಳಲ್ಲಿ 'ಅನ್‌ಲಿಮಿಟೆಡ್' ಆಗಿಯೇ ಹೊಗೆಯಾಡುತ್ತಿದೆ.

**ರೇಷ್ಮಾ ಗುಳೇದಗುಡ್ಡಾಕರ್,** ಕೊಟ್ಟೂರು

### ಚುರುಮುರಿ

## ನವರಂಗಿ ನಾಟಕ!

● ಬಿ.ಎನ್. ಮಲ್ಲೇಶ್

'ಲೇ ತೆಪರ, ಈ ರಾಜಕೀಯದಲ್ಲಿ ನವರಂಗಿ ನಾಟಕ ಅಂದ್ರೆ ಏನ್ಲೆ?' ಹರಟೆಕಟ್ಟೆಯಲ್ಲಿ ದುಬ್ಬೀರ ಕೇಳಿದ.

'ಅದಾ... ಮಾತಲ್ಲಿ ಕಲ್ ಕಲರ್ ಕಾಗೆ ಹಾರಿಸೋದು, ಈಗಿನ್ನೂ ಹೇಳಿದ್ದನ್ನ ಹೇಳೇ ಇಲ್ಲ ಅನ್ನೋದು, ಗೋಸುಂಬೆ ತರ ಬಣ್ಣ ಬದಲಾಯ್ಸೋದು, ಹೊತ್ ಬಂದಂಗೆ ಕೊಡೆ ಹಿಡಿಯೋದು... ಸಾಕಾ ಬೇಕಾ?' ತೆಪರೇಸಿ ನಕ್ಕ.

'ಅಲ್ಲ, ಬಣ್ಣ ಇರೋದೇ ಏಳಲ್ವಾ? ನವರಂಗಿ ಹೆಂಗೆ?'

'ರಾಜಕಾರಣಿಗಳಿಗೆ ಎರಡು ಜಾಸ್ತಿ ಇರ್ತಾವೆ ಕಣಲೆ, ನೀನೊಬ್ಬ...'

'ಈಗ ರಾಜಕೀಯ ಅನ್ನೋ ಪದಕ್ಕೆ ಅರ್ಥಾನೇ ಬದಲಾಗೇತಪ, ರಾಜಕೀಯ ಮಾಡ್ತಾನೆ ಅಂದ್ರೆ ಏನೋ ಕೆಟ್ಟದ್ದು ಮಾಡ್ತಾನೆ, ಟೋಪಿ ಹಾಕ್ತಾನೆ ಅಂತ ಆಗೋಗಿದೆ...' ಗುಡ್ಡೆ ನಕ್ಕ.

'ಕರೆಕ್ಟ್, ಈ ರಾಜಕೀಯದಾಗೂ ನಮು ನಮೂನಿ ಅದಾವೆ ಕಣಲೆ. ಬಣ ರಾಜಕೀಯ ಆತು, ಈಗ ಹಣ ರಾಜಕೀಯ ನಡೀತಾ ಐತಿ. ಟಿ.ವಿ ತುಂಬಾ ಬರೀ ಬುರುಡೆಗಳದ್ದೇ ಸುದ್ದಿ. ರಾತ್ರಿ ಕನಸಿನಾಗೆಲ್ಲ ಬರ್ತಾವಪ...' ದುಬ್ಬೀರ ತಲೆ ಕೊಡವಿದ.

'ಅಲ್ಲ, ಈ ರಾಜಕಾರಣಿಗಳು ಅಧಿಕಾರದಲ್ಲಿದ್ದಾಗ ಒಂದು, ಇಲ್ಲದಾಗ ಇನ್ನೊಂದು... ಅವರ ಮಾತು ಕೇಳ್ತಿದ್ರೆ ತಲಿ ಕೆಟ್ ಗೊಬ್ರ ಆಗ್ತತಿ. ರಾಜಕಾರಣ ಅನ್ನೋದು ಸುಳ್ಳಿನ ಸಂತಿ ಆಗೇತಿ ನೋಡ್ರಪ...' ಮಂಜಮ್ಮಗೆ ಸಿಟ್ಟು ಬಂತು.

'ಅದಿರ್ಲಿ, ಈಗ ಅದೇನೋ ನವೆಂಬರ್ ಕ್ರಾಂತಿಯಂತೆ? ಮೂವರು ಡಿಸಿಎಂ ಆಗ್ತಾರಂತೆ? ಸಂಪುಟಕ್ಕೆ ಸರ್ಜರಿ ಅಂತೆ?' ಕೊಟ್ರೇಶಿ ಪ್ರಶ್ನೆಯ ಮೇಲೆ ಪ್ರಶ್ನೆ ಕೇಳಿದ.

'ಅದು 'ಸು ಅಂಡ್ ಸೋ'ಗೆ ಬಿಟ್ಟದ್ದು' ಎಂದ ಗುಡ್ಡೆ.

'ಸು ಅಂಡ್ ಸೋ ನಾ? ಅಂದ್ರೆ?'

'ಸುರ್ಜೆವಾಲಾ ಅಂಡ್ ಸೋನಿಯಾ ಸನ್‌ಗೆ ಬಿಟ್ಟದ್ದು ಅಂದೆ. ಅರ್ಥ ಆಗ್ಲಿಲ್ವಾ? ರಾಹುಲ್ ಗಾಂಧಿಗೆ, ಹೈಕಮಾಂಡ್‌ಗೆ ಬಿಟ್ಟದ್ದು ಕಣಲೆ...'

'ಓ ಹಂಗಾ... ನಾನೆಲ್ಲೋ ಈ 'ಸು ಫ್ರಮ್ ಸೋ' ಸಿನಿಮಾದ ತರ ಇದೂ ಬೇರೇನೋ ಇರ್ಬೇಕು ಅನ್ಕಂಡಿದ್ದೆ' ಎಂದ ಕೊಟ್ರ.

ಎಲ್ಲರೂ ಗೊಳ್ಳಂತ ನಕ್ಕರು.

### ಸಂಗತ

# ಶಾಲಾ ಶಿಕ್ಷಣ: ಯಾಕೀ ಕುಸಿತ?

ಸಮಗ್ರ ಶಿಕ್ಷಣ ವ್ಯವಸ್ಥೆಯಲ್ಲಿ ಶಾಲಾ ಶಿಕ್ಷಣ ತಳಪಾಯ ಇದ್ದಂತೆ. ರಾಜ್ಯದಲ್ಲಿ ಆ ತಳಪಾಯವೇ ಅಭದ್ರವಾಗಿದೆ ಎಂದು ಸಮೀಕ್ಷೆಯೊಂದು ಹೇಳುತ್ತಿದೆ.

● ಎಚ್.ಬಿ. ಚಂದ್ರಶೇಖರ್

**ರಾಜ್ಯದ** ಶಾಲಾ ಶಿಕ್ಷಣದ ಗುಣಮಟ್ಟ ಹೇಗಿದೆ? ಎಲ್ಲವೂ ಸರಿಯಾಗಿಲ್ಲ ಎನ್ನುತ್ತಿದೆ ಒಂದು ರಾಷ್ಟ್ರೀಯ ಸಮೀಕ್ಷೆ. 'ಪರಾಖ್ ರಾಷ್ಟ್ರೀಯ ಸಮೀಕ್ಷೆ'ಯ ವರದಿ ಇತ್ತೀಚೆಗೆ ಪ್ರಕಟಗೊಂಡಿದ್ದು, ಶಾಲಾ ಶಿಕ್ಷಣದ ಗುಣಮಟ್ಟ ಕರ್ನಾಟಕದಲ್ಲಿ ನಿರೀಕ್ಷಿತ ಮಟ್ಟದಲ್ಲಿ ಇಲ್ಲದಿರುವುದನ್ನು ಗುರ್ತಿಸಿದೆ.

ರಾಜ್ಯದಲ್ಲಿನ ಶಾಲಾ ಶಿಕ್ಷಣದ ಕುಸಿತವನ್ನು ಸಮೀಕ್ಷೆ ಗುರ್ತಿಸಿರುವುದು ಇದು ಮೊದಲೇನಲ್ಲ. ಈ ಮೊದಲು, 'ರಾಷ್ಟ್ರೀಯ ಸಾಧನಾ ಸಮೀಕ್ಷೆ' ಹೆಸರಿನಲ್ಲಿ ನಡೆಯುತ್ತಿದ್ದ ಅಧ್ಯಯನಗಳೂ ಶಾಲಾ ಶಿಕ್ಷಣದ ಗುಣಮಟ್ಟ ಕುರಿತು ಕಳವಳಕಾರಿ ಮಾಹಿತಿ ನೀಡಿರುವುದಿದೆ. 2021ರ ನಂತರ ನಡೆದಿರುವ 'ರಾಷ್ಟ್ರೀಯ ಸಾಧನಾ ಸಮೀಕ್ಷೆ'ಗಳಲ್ಲಿ ರಾಜ್ಯದ ಸಾಧನೆಯ ಮಟ್ಟದಲ್ಲಿ ಕುಸಿತ ಆಗುತ್ತಲೇ ಇದೆ. ಪ್ರಸ್ತುತ, 2024ರಲ್ಲಿ ನಡೆಸಿದ ಸಮೀಕ್ಷೆಯ ವರದಿಯಲ್ಲಿ ರಾಜ್ಯದ ಸಾಧನೆಯ ಕುಸಿತ ತೀವ್ರ ಎನ್ನುವಷ್ಟು ಆಗಿರುವುದನ್ನು ಗಮನಿಸಬಹುದು.

ಪರಾಖ್ ರಾಷ್ಟ್ರೀಯ ಸಮೀಕ್ಷೆಯ ವರದಿಯು ಕೆಲವು ದಿನಗಳ ಹಿಂದಷ್ಟೇ ಬಿಡುಗಡೆಯಾಗಿದ್ದು, 'ಪರಾಖ್'ನ (parakh.ncert.gov.in/prs-reports-2024) ಜಾಲತಾಣದಲ್ಲಿ ಎಲ್ಲರ ಅವಲೋಕನಕ್ಕೆ ಲಭ್ಯವಿದೆ.

ಈ ಸಮೀಕ್ಷೆಯನ್ನು ದೇಶದ ಎಲ್ಲಾ ರಾಜ್ಯಗಳ ಆಯ್ದ ಶಾಲೆಗಳಲ್ಲಿ ನಡೆಸಲಾಗಿದೆ. 3, 6 ಹಾಗೂ 9ನೇ ತರಗತಿಗಳ ಆಯ್ದ ವಿದ್ಯಾರ್ಥಿಗಳನ್ನು ಸಮೀಕ್ಷೆಗೆ ಆಯ್ದುಕೊಳ್ಳಲಾಗಿದೆ. ವಿದ್ಯಾರ್ಥಿಗಳ ಸ್ಮರಣ ಶಕ್ತಿಯ ಬದಲಿಗೆ ಅವರ ಅನ್ವಯಿಕ ಸಾಮರ್ಥ್ಯವನ್ನು ಗುರ್ತಿಸುವುದು ಸಮೀಕ್ಷೆಯ ವಿಶೇಷ.

ಪಂಜಾಬ್, ಕೇರಳ, ಹಿಮಾಚಲ ಪ್ರದೇಶ, ರಾಜಸ್ಥಾನ, ಮಹಾರಾಷ್ಟ್ರ ಹಾಗೂ ಒಡಿಶಾ ರಾಜ್ಯಗಳು ಉತ್ತಮ ಸಾಧನೆಯನ್ನು ತೋರಿ, ಪರಾಖ್ ಸಮೀಕ್ಷೆಯಲ್ಲಿ 'ಟಾಪ್ 10' ಪಟ್ಟಿಯಲ್ಲಿವೆ. ಸಮೀಕ್ಷೆ ಕೈಗೊಂಡ ಮೂರೂ ತರಗತಿಗಳಲ್ಲಿ ಕಡಿಮೆ ಸಾಧನೆ ಮಾಡಿ, ಕೊನೆಯ ಹತ್ತು ರಾಜ್ಯಗಳ ಪಟ್ಟಿಯಲ್ಲಿ ಇರುವ ರಾಜ್ಯಗಳಲ್ಲಿ ಗುಜರಾತ್, ಮೇಘಾಲಯ, ಜಮ್ಮು ಮತ್ತು ಕಾಶ್ಮೀರ ಹಾಗೂ ಪುದುಚೇರಿ ಸೇರಿವೆ. ನಮ್ಮ ನೆರೆಯ ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳು 6 ಮತ್ತು 9ನೇ ತರಗತಿಗಳಲ್ಲಿ ಹಾಗೂ ಕರ್ನಾಟಕವು 9ನೇ ತರಗತಿಯಲ್ಲಿ ಕೊನೆಯ 10 ರಾಜ್ಯಗಳ ಪಟ್ಟಿಯಲ್ಲಿ ಸ್ಥಾನ ಪಡೆದಿವೆ.

ಅತ್ಯುತ್ತಮ ಸಾಧನೆ ತೋರಿದ ಹಾಗೂ ಕನಿಷ್ಠ ಸಾಧನೆ ತೋರಿದ 50 ಜಿಲ್ಲೆಗಳ ಪಟ್ಟಿಯನ್ನು ಸಮೀಕ್ಷೆಯಲ್ಲಿ ನೀಡಲಾಗಿದೆ. ಉತ್ತಮ ಸಾಧನೆ ತೋರಿದ ಜಿಲ್ಲೆಗಳ ಪಟ್ಟಿಯಲ್ಲಿ ರಾಜ್ಯದ ಯಾವುದೇ ಜಿಲ್ಲೆ ಸ್ಥಾನ ಪಡೆದಿಲ್ಲ.

ಪಂಜಾಬ್ ರಾಜ್ಯದಲ್ಲಿ 23 ಜಿಲ್ಲೆಗಳಿವೆ. ಅವುಗಳಲ್ಲಿ 20 ಜಿಲ್ಲೆಗಳು 3ನೇ ತರಗತಿಯಲ್ಲಿ, 16 ಜಿಲ್ಲೆಗಳು 6ನೇ ತರಗತಿಯಲ್ಲಿ ಹಾಗೂ 18 ಜಿಲ್ಲೆಗಳು 9ನೇ ತರಗತಿಯಲ್ಲಿ ದೇಶದ 'ಟಾಪ್ 50' ಜಿಲ್ಲೆಗಳ ಪಟ್ಟಿಯಲ್ಲಿವೆ. ನೆರೆಯ ಕೇರಳ ರಾಜ್ಯದ 3 ಜಿಲ್ಲೆಗಳು 3ನೇ ತರಗತಿಯಲ್ಲಿ, 10 ಜಿಲ್ಲೆಗಳು 6ನೇ ತರಗತಿಯಲ್ಲಿ ಹಾಗೂ 9 ಜಿಲ್ಲೆಗಳು 9ನೇ ತರಗತಿಯಲ್ಲಿ ದೇಶದ ಟಾಪ್ 50 ಜಿಲ್ಲೆಗಳ ಪಟ್ಟಿಯಲ್ಲಿ ಸ್ಥಾನ ಪಡೆಯಲು ಯಶಸ್ವಿಯಾಗಿವೆ.

ರಾಜ್ಯದ ಯಾವುದೇ ಜಿಲ್ಲೆಯು ಟಾಪ್ 50 ಜಿಲ್ಲೆಗಳ ಪಟ್ಟಿಯಲ್ಲಿ ಇಲ್ಲದಿದ್ದರೂ, ಕೊನೆಯ 50 ಜಿಲ್ಲೆಗಳಲ್ಲಿ ಕೆಲವು ಜಿಲ್ಲೆಗಳು ಸ್ಥಾನ ಪಡೆದಿವೆ. 3ನೇ ತರಗತಿಯಲ್ಲಿ ವಿಜಯಪುರ, 6ನೇ ತರಗತಿಯಲ್ಲಿ ಬಳ್ಳಾರಿ ಮತ್ತು ಬೀದರ್ ಹಾಗೂ 9ನೇ ತರಗತಿಯಲ್ಲಿ ಬೀದರ್, ಯಾದಗಿರಿ, ರಾಮನಗರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯು ದೇಶದ ಕೊನೆಯ ಜಿಲ್ಲೆಗಳ ಪಟ್ಟಿಯಲ್ಲಿ ಇವೆ. ರಾಜ್ಯದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಮುಂದುವರಿದ ಜಿಲ್ಲೆಗಳೆಂದೇ ಪ್ರಸಿದ್ಧಿ ಪಡೆದಿರುವ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳು ಈ ಸಮೀಕ್ಷೆಯ ಟಾಪ್ 50 ಜಿಲ್ಲೆಗಳ ಪಟ್ಟಿಯಲ್ಲಿ ಸ್ಥಾನ ಪಡೆದಿಲ್ಲ!

ಪಂಜಾಬ್ ರಾಜ್ಯವು ಸಾಮರ್ಥ್ಯ ಮತ್ತು ಕಲಿಕಾ ಫಲ ಆಧಾರಿತ ತರಗತಿ ಪ್ರಕ್ರಿಯೆಗೆ ವಿಶೇಷ ಒತ್ತು ನೀಡುತ್ತಿದೆ. ಮೌಲ್ಯಮಾಪನ ಪ್ರಕ್ರಿಯೆಗೆ ವಿಶೇಷ ಆದ್ಯತೆ ನೀಡುವುದರ ಜೊತೆಗೆ, ಅನೇಕ ಆಡಳಿತಾತ್ಮಕ ಮತ್ತು ಶೈಕ್ಷಣಿಕ ಸುಧಾರಣೆಗಳನ್ನು ಜಾರಿಗೊಳಿಸಿದೆ. ಅದೆಲ್ಲದರ ಫಲವಾಗಿ ಶಾಲಾ ಶಿಕ್ಷಣದಲ್ಲಿ ಪಂಜಾಬ್ ದೇಶದ ಗುರಿ ಸಾಧನೆ ಉತ್ತಮವಾಗಿದೆ. ಅಲ್ಲಿನ ಶೈಕ್ಷಣಿಕ ಸುಧಾರಣೆಗಳನ್ನು ಮಾದರಿಯ ರೂಪದಲ್ಲಿ ನಾವು ಗಮನಿಸಬಹುದಾಗಿದೆ.

ರಾಜ್ಯದಲ್ಲಿ ಶಾಲಾ ಶಿಕ್ಷಣದ ಗುಣಮಟ್ಟಕ್ಕೆ ಅನೇಕ ಕಾರಣಗಳಿರಬಹುದು. ಆ ಕಾರಣಗಳನ್ನು ಗುರ್ತಿಸುವ ಕೆಲಸ ಮೊದಲು ಆಗಬೇಕು. ನಂತರದ ಹಂತದಲ್ಲಿ ಚಿಕಿತ್ಸಾತ್ಮಕ ಕ್ರಮಗಳನ್ನು ಜಾರಿಗೊಳಿಸಿ, ಶಿಕ್ಷಣದ ಗುಣಮಟ್ಟವನ್ನು ಉತ್ತಮಗೊಳಿಸಬೇಕಾಗಿದೆ.

ಪೂರ್ಣಕಾಲಿಕ ಶಿಕ್ಷಕರ ನೇಮಕಾತಿಯನ್ನು ಮಾಡುವುದು ಶಿಕ್ಷಣದ ಗುಣಮಟ್ಟ ಉತ್ತಮಗೊಳಿಸುವ ನಿಟ್ಟಿನಲ್ಲಿ ಜರೂರಾಗಿ ಆಗಬೇಕಿರುವ ಕೆಲಸ. ಹಾಗೆಯೇ, ಶಿಕ್ಷಕರ ಬೋಧಕೇತರ ಕಾರ್ಯಗಳ ಹೊರೆ ಇಳಿಸುವುದೂ ಬಹಳ ಮುಖ್ಯ.

ಶಿಕ್ಷಕರನ್ನು ಪಠ್ಯೇತರ ಚಟುವಟಿಕೆಗಳಲ್ಲಿ ಹೆಚ್ಚು ತೊಡಗುವಂತೆ ಮಾಡಿ, ಶೈಕ್ಷಣಿಕ ಸುಧಾರಣೆ ನಿರೀಕ್ಷಿಸುವುದು ಸರಿಯಲ್ಲ, ಕಾರ್ಯಸಾಧುವೂ ಅಲ್ಲ. ಕಲಿಕಾ ಫಲ ಆಧಾರಿತ ತರಗತಿ ಪ್ರಕ್ರಿಯೆಯೂ ನಿರಂತರವಾಗಿ ನಡೆಯಬೇಕಾಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

# ಒಳಮೀಸಲು ವರದಿ: ಮತ್ತಷ್ಟು ಮಾಹಿತಿ


ನ್ಯಾ.ಎಚ್‌.ಎನ್‌.ನಾಗಮೋಹನದಾಸ್

ಪರಿಶಿಷ್ಟ ಜಾತಿ ಒಳಮೀಸಲಾತಿ ವರ್ಗೀಕರಣಕ್ಕೆ ಸಂಬಂಧಿಸಿದಂತೆ ನ್ಯಾ.ಎಚ್‌.ಎನ್‌.ನಾಗಮೋಹನದಾಸ್ ಅವರ ಆಯೋಗವು ಸರ್ಕಾರಕ್ಕೆ ವರದಿ ಸಲ್ಲಿಸಿದೆ. ರಾಜ್ಯದಲ್ಲಿರುವ ಪರಿಶಿಷ್ಟ ಜಾತಿಯಲ್ಲಿ 101 ಉಪಜಾತಿಗಳು ಇದ್ದು, ಅವುಗಳ ಒಟ್ಟು ಜನಸಂಖ್ಯೆ 1.07 ಕೋಟಿಗೂ ಹೆಚ್ಚಿದೆ. ಇವು ಭಿನ್ನರೂಪದ ಜಾತಿಗಳಾಗಿದ್ದು, ವಿವಿಧ ಪ್ರದೇಶಗಳಲ್ಲಿ ಹರಡಿ, ವಿವಿಧ ಹೆಸರು, ಕಸುಬು, ಪದ್ಧತಿಗಳೊಂದಿಗೆ ಜೀವಿಸುತ್ತಿವೆ. ಇವುಗಳ ನಡುವೆ ಒಳಮೀಸಲಾತಿ ಕಲ್ಪಿಸಲು ಅವುಗಳ ಜನಸಂಖ್ಯೆ, ಆರ್ಥಿಕ, ಸಾಮಾಜಿಕ ಸ್ಥಿತಿಗತಿ, ಸರ್ಕಾರಿ ಉದ್ಯೋಗಿಗಳ ಸಂಖ್ಯೆ ಸೇರಿದಂತೆ ಸಮಗ್ರ ದತ್ತಾಂಶ ಅಗತ್ಯವಾಗಿದೆ. ನ್ಯಾ.ನಾಗಮೋಹನದಾಸ್ ಆಯೋಗದ ವರದಿಯು ರಾಜ್ಯದ ಪರಿಶಿಷ್ಟ ಜಾತಿಗಳ ಸಮಗ್ರ ಮಾಹಿತಿಯನ್ನು ಸಂಗ್ರಹಿಸುವ ದಿಸೆಯಲ್ಲಿ ಪ್ರಯತ್ನ ನಡೆಸಿದೆ. ಹಾಗೆಯೇ ನ್ಯಾ.ಸದಾಶಿವ ಆಯೋಗದಲ್ಲಿನ ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಗೊಂದಲವನ್ನು ಬಗೆಹರಿಸುವ ಸಂಬಂಧ ಅಂಕಿಅಂಶ ಕಲೆಹಾಕಿ, ಸರ್ಕಾರಕ್ಕೆ ಶಿಫಾರಸು ಮಾಡಿದೆ. ರಾಜ್ಯದಲ್ಲಿ ಭಾರಿ ಚರ್ಚೆ ಹುಟ್ಟುಹಾಕಿದ್ದ ಬೇಡ ಜಂಗಮ, ಬುಡ್ಗ ಜಂಗಮ ಸಮಸ್ಯೆಗೂ ವರದಿಯಲ್ಲಿ ಪರಿಹಾರ ಸೂಚಿಸಲಾಗಿದೆ. ಸಚಿವ ಸಂಪುಟದಲ್ಲಿ ಚರ್ಚೆಯಾಗಿರುವ ವರದಿಯ ಮುಖ್ಯ ಅಂಶಗಳ ಬಗ್ಗೆ 'ಪ್ರಜಾವಾಣಿ'ಯಲ್ಲಿ ಈಗಾಗಲೇ ಹಲವು ವಿಶೇಷ ವರದಿಗಳು ಪ್ರಕಟವಾಗಿವೆ. ವರದಿಯ ಮತ್ತಷ್ಟು ಮುಖ್ಯ ಅಂಶಗಳ ಮಾಹಿತಿ ಇಲ್ಲಿದೆ

## ಆದಿ ದ್ರಾವಿಡ, ಆದಿ ಆಂಧ್ರ ಗೊಂದಲ

ಆದಿ ಕರ್ನಾಟಕ, ಆದಿ ಆಂಧ್ರ ಮತ್ತು ಆದಿ ದ್ರಾವಿಡ ಪದಗಳು ಎಸ್‌ಸಿ ಮೀಸಲಾತಿ ವರ್ಗೀಕರಣದಲ್ಲಿ ಭಾರಿ ಗೊಂದಲಕ್ಕೆ ಕಾರಣವಾಗಿವೆ. ಈ ವಿಚಾರದ ಬಗ್ಗೆ ನ್ಯಾ.ನಾಗಮೋಹನದಾಸ್ ಆಯೋಗದ ವರದಿ ಬೆಳಕು ಚೆಲ್ಲಿದೆ. ಕರ್ನಾಟಕದಲ್ಲಿ ಹೊಲೆಯ/ಮಾದಿಗ ಪದಗಳಿಗೆ ಬದಲಾಗಿ ಆದಿ ಕರ್ನಾಟಕ ಎಂದು ನಮೂದಿಸುವ ಪದ್ಧತಿ ಜಾರಿಗೆ ಬಂದಿದ್ದು 1921ರ ಜನಗಣತಿಯ ವೇಳೆ. ಅಂದಿನಿಂದಲೂ ಪರಿಶಿಷ್ಟ ಜಾತಿಗಳಲ್ಲಿ ತೆಲುಗು ಮಾತನಾಡುವವರು ಮತ್ತು ಇತರ ಕೆಲವರು ಆದಿ ಆಂಧ್ರ ಎಂದು ಬರೆಸಿದರೆ, ತಮಿಳು ಮಾತನಾಡುವವರು ಮತ್ತು ಇತರ ಕೆಲವರು ಆದಿ ದ್ರಾವಿಡ ಎಂದು, ಕನ್ನಡ ಮಾತನಾಡುವವರು ಮತ್ತು ಇತರ ಕೆಲವರು ಆದಿ ಕರ್ನಾಟಕ ಎಂದು ತಮ್ಮನ್ನು ಗುರುತಿಸಿಕೊಳ್ಳುತ್ತಿದ್ದಾರೆ. ಇವು ಹಲವು ಜಾತಿಗಳ ಗುಂಪುಗಳಾಗಿವೆ. ಹೀಗೆ ಗುರುತಿಸಿಕೊಳ್ಳುತ್ತಿರುವವರಲ್ಲಿ ಹೊಲೆಯರು, ಮಾದಿಗರು ಮತ್ತು ಇತರ ಕೆಲವು ಉಪಪಂಗಡಗಳ ಜನರು ಸೇರಿದ್ದಾರೆ.

ನ್ಯಾ.ಸದಾಶಿವ ಆಯೋಗದ ವರದಿಗಾಗಿ ಸಮೀಕ್ಷೆ ನಡೆಸುವ ವೇಳೆ (2011), ಈ ಗುಂಪುಗಳ ಜನರಿಗೆ ತಮ್ಮ ಒಳಜಾತಿಯನ್ನು ಸ್ಪಷ್ಟವಾಗಿ ನಮೂದಿಸಬೇಕೆಂದು ಸೂಚಿಸಲಾಗಿತ್ತು. ಆದರೂ, 24,22,864 ಮಂದಿ ತಮ್ಮ ಒಳಜಾತಿಯನ್ನು ನಮೂದಿಸದೇ ಈ ಗುಂಪುಗಳ ಹೆಸರನ್ನೇ ಹೇಳಿದ್ದರು. ಈ ಬಗ್ಗೆ ಸ್ಪಷ್ಟತೆ ಪಡೆಯಲು ನ್ಯಾ.ನಾಗಮೋಹನದಾಸ್ ಆಯೋಗವು ಸಮೀಕ್ಷೆ ನಡೆಸುವ ಸಂದರ್ಭದಲ್ಲಿ ಪ್ರಯತ್ನ ನಡೆಸಿದೆ. ಆದಿ ಆಂಧ್ರ, ಆದಿ ದ್ರಾವಿಡ ಮತ್ತು ಆದಿ ಕರ್ನಾಟಕ ಜನರು ಸಮೀಕ್ಷೆಯಲ್ಲಿ ತಮ್ಮ ಮೂಲ ಜಾತಿ/ಒಳಜಾತಿಯನ್ನು ನಮೂದಿಸಬೇಕೆಂದು ಸೂಚಿಸಲಾಗಿತ್ತು. ಆದರೆ, ಈ ಬಾರಿಯೂ 4,75,954 ಜನರು ತಮ್ಮ ಒಳಜಾತಿಯನ್ನು ನಮೂದಿಸದೇ ಗುಂಪುಗಳನ್ನೇ ಹೆಸರಿಸಿದ್ದಾರೆ. ಏಕೆ ಅವರು ತಮ್ಮ ನಿರ್ದಿಷ್ಟ ಜಾತಿ/ಉಪಜಾತಿ ಉಲ್ಲೇಖಿಸಿಲ್ಲ ಎನ್ನುವುದಕ್ಕೆ ಇರಬಹುದಾದ ಹಲವು ಕಾರಣಗಳನ್ನೂ ವರದಿಯಲ್ಲಿ ವಿವರಿಸಲಾಗಿದೆ.

ಹಾಗಾಗಿ ಈ ಮೂರು ಗುಂಪು/ಜಾತಿಗಳನ್ನು ಒಂದು ಪ್ರತ್ಯೇಕ ಪ್ರವರ್ಗವಾಗಿ ವಿಂಗಡಿಸಿ, ಅರ್ಹತೆಯ ಮೇರೆಗೆ ಮೀಸಲಾತಿ ಪ್ರಮಾಣವನ್ನು ನೀಡುವುದು ಸಮಂಜಸ ಎಂದು ಆಯೋಗವು ಅಭಿಪ್ರಾಯ ಪಟ್ಟಿದೆ.

**ಕರ್ನಾಟಕದಲ್ಲಿ ಎಸ್‌ಸಿ ಜನಸಂಖ್ಯೆ**

**1,07,01,982**
ಒಟ್ಟು ಜನಸಂಖ್ಯೆ

**53,65,014**
ಪುರುಷರು
50.12%

**53,33,273**
ಮಹಿಳೆಯರು
49.83%

**4,695**
ಲಿಂಗತ್ವ ಅಲ್ಪಸಂಖ್ಯಾತರು
0.04%

**ಪ್ರದೇಶವಾರು ಜನಸಂಖ್ಯೆ**

| ಪ್ರದೇಶ | ಜನಸಂಖ್ಯೆ (ಶೇಕಡ) | ಕುಟುಂಬಗಳು (ಶೇಕಡ) |
|---|---|---|
| ಗ್ರಾಮೀಣ | 81,15,365 (75.83) | 20,60,850 (75.63) |
| ನಗರ | 25,86,617 (24.17) | 6,63,918 (24.37) |

## ಬೇಡ ಜಂಗಮ: ಜನಸಂಖ್ಯೆಯಲ್ಲಿ ಕೃತಕ ಹೆಚ್ಚಳ

ಬೇಡ ಜಂಗಮ ಮತ್ತು ಬುಡ್ಗ ಜಂಗಮ ವಿವಾದಕ್ಕೂ ವರದಿಯಲ್ಲಿ ಪರಿಹಾರ ಸೂಚಿಸಲಾಗಿದೆ. 2011ರ ಜನಗಣತಿಯ ಪ್ರಕಾರ, ಬೇಡಜಂಗಮ ಮತ್ತು ಬುಡ್ಗ ಜಂಗಮ ಸಮುದಾಯಗಳ ಒಟ್ಟು ಜನಸಂಖ್ಯೆ 1,17,426. 2025ರ ಸಮೀಕ್ಷೆಯಲ್ಲಿ ಈ ಸಮುದಾಯಗಳ ಜನಸಂಖ್ಯೆ 3,22,049. 2011ರ ಜನಸಂಖ್ಯೆಗೆ ಹೋಲಿಸಿದರೆ ಶೇ 123ರಷ್ಟು ಹೆಚ್ಚಳವಾಗಿದೆ. ಭಾರತದ ಫಲವಂತಿಕೆ ದರದ (2.0) ಆಧಾರದಲ್ಲಿ ಲೆಕ್ಕ ಹಾಕಿದರೆ, ಕರ್ನಾಟಕದ ಬೇಡ ಜಂಗಮ ಮತ್ತು ಬುಡ್ಗ ಜಂಗಮ ಜನಸಂಖ್ಯೆ 1,44,387 ಇರಬೇಕು. ಅಂದರೆ, ಈ ಸಮುದಾಯಗಳ ಜನಸಂಖ್ಯೆಯ ಏರಿಕೆಯು ಕೃತಕವಾಗಿದೆ ಎಂದು ಆಯೋಗ ವರದಿಯಲ್ಲಿ ಹೇಳಿದೆ.

16 ಜಿಲ್ಲೆಗಳಲ್ಲಿ ಈ ಜಾತಿಗಳ ಜನಸಂಖ್ಯೆ ಕೃತಕವಾಗಿ ಏರಿದ್ದರೆ, ಉಳಿದ ಜಿಲ್ಲೆಗಳಲ್ಲಿ ಸ್ವಾಭಾವಿಕವಾಗಿಯೇ ಹೆಚ್ಚಳವಾಗಿದೆ ಎಂದು ಆಯೋಗವು ಅಭಿಪ್ರಾಯಪಟ್ಟಿದೆ. ಪರಿಶಿಷ್ಟ ಜಾತಿಗೆ ಸೇರದೇ ಇರುವವರು ಸುಳ್ಳು ಮಾಹಿತಿ ನೀಡಿ ಪಟ್ಟಿಗೆ ಸೇರ್ಪಡೆ ಆಗಿರುವುದೇ ಕೃತಕ ಹೆಚ್ಚಳಕ್ಕೆ ಕಾರಣ. ಬೇರೆ ಜಾತಿಯವರೂ ಬೇಡ ಜಂಗಮ ಎಂದು ಸುಳ್ಳು ಜಾತಿ ಪ್ರಮಾಣಪತ್ರಗಳನ್ನು ಸಲ್ಲಿಸಿದ್ದಾರೆ. ಈ ಸಂಬಂಧ ಕರ್ನಾಟಕ ಹೈಕೋರ್ಟ್‌ನ ವಿಭಾಗೀಯ ಪೀಠವು ರಾಜ್ಯ ಸರ್ಕಾರ ಮತ್ತು ರವೀಂದ್ರ ಸ್ವಾಮಿ ಪ್ರಕರಣದಲ್ಲಿ 'ಲಿಂಗಾಯತರಲ್ಲಿನ ಜಂಗಮರೇ ಬೇರೆ, ಬುಡ್ಗ ಅಥವಾ ಬೇಡ ಜಂಗಮರೇ ಬೇರೆ' ಎಂದು ತೀರ್ಪು ನೀಡಿದೆ. ಹೀಗಾಗಿ, ಬೇಡ ಮತ್ತು ಬುಡ್ಗ ಜಂಗಮರ 1,44,387 ಜನಸಂಖ್ಯೆಯನ್ನು ಮಾತ್ರ ಗಣನೆಗೆ ತೆಗೆದುಕೊಂಡು ಒಳಮೀಸಲಾತಿ ನೀಡಬೇಕಿದೆ ಎಂದು ವರದಿ ಸೂಚಿಸಿದೆ. ಜತೆಗೆ, ಬೇಡ ಜಂಗಮ ಮತ್ತು ಬುಡ್ಗ ಜಂಗಮರ ಕುಲಶಾಸ್ತ್ರೀಯ ಅಧ್ಯಯನ ನಡೆಸಿ, ಪರಿಶಿಷ್ಟ ಜಾತಿಗೆ ಸೇರಿದವರು ಯಾರು ಎನ್ನುವುದನ್ನು ಸ್ಪಷ್ಟಪಡಿಸಬೇಕು. ಇದರಿಂದ ಇತರೆ ಜಾತಿಯವರು ಸುಳ್ಳು ಜಾತಿ ಪ್ರಮಾಣಪತ್ರ ಸಲ್ಲಿಸಿ, ಮೀಸಲಾತಿ ದುರುಪಯೋಗಪಡಿಸಿಕೊಳ್ಳುವುದು ತಪ್ಪುತ್ತದೆ ಎಂದು ಆಯೋಗ ಅಭಿಪ್ರಾಯಪಟ್ಟಿದೆ.

## ಶಿಕ್ಷಣ: ನಾಲ್ಕು ಜಾತಿಗಳ ಮೇಲುಗೈ

ಪರಿಶಿಷ್ಟ ಜಾತಿಗಳ ಸಾಕ್ಷರತೆ ಪ್ರಮಾಣ ಉತ್ತಮವಾಗಿದೆ. 1.07 ಕೋಟಿಯಷ್ಟಿರುವ ಜನಸಂಖ್ಯೆಯಲ್ಲಿ 86.54 ಲಕ್ಷದಷ್ಟು ಜನರು ಅಕ್ಷರಸ್ಥರಾಗಿದ್ದಾರೆ. 2011ರ ಜನಗಣತಿಗೆ ಹೋಲಿಸಿದರೆ ಪರಿಶಿಷ್ಟ ಜಾತಿಯವರ ಸಾಕ್ಷರತಾ ಪ್ರಮಾಣದಲ್ಲಿ ಏರಿಕೆ ಕಂಡು ಬಂದಿದೆ. 101 ಜಾತಿಗಳಲ್ಲಿ 83 ಜಾತಿಗಳ ಸಾಕ್ಷರತಾ ಪ್ರಮಾಣ ಶೇ 80ಕ್ಕಿಂತ ಹೆಚ್ಚಿದೆ. ಈ ಜಾತಿಗಳ ಸಾಕ್ಷರತೆಯು ರಾಜ್ಯಮಟ್ಟದ ಸರಾಸರಿ ಸಾಕ್ಷರತಾ ಪ್ರಮಾಣಕ್ಕಿಂತಲೂ ಅಧಿಕವಾಗಿದೆ ಎಂದು ವರದಿ ಹೇಳಿದೆ.

ಪದವಿ ಪೂರ್ವ ಶಿಕ್ಷಣ, ಪದವಿ, ಸ್ನಾತಕೋತ್ತರ ಪದವಿ, ಎಂಜಿನಿಯರಿಂಗ್, ವೈದ್ಯಕೀಯ ಪದವಿ ಸೇರಿದಂತೆ ಉನ್ನತ ಶಿಕ್ಷಣ ಮತ್ತು ವೃತ್ತಿಪರ ಶಿಕ್ಷಣ ಪಡೆಯುತ್ತಿರುವವರಲ್ಲಿ ಬಂಜಾರ, ಭೋವಿ, ಹೊಲೆಯ ಮತ್ತು ಮಾದಿಗ ಜಾತಿಗಳಿಗೆ ಸೇರಿದವರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಉದಾಹರಣೆಗೆ, ಪದವಿ ಪೂರ್ವ ಶಿಕ್ಷಣ ಪಡೆದ ಈ ನಾಲ್ಕು ಜಾತಿಗಳ ಅಭ್ಯರ್ಥಿಗಳ ಪ್ರಮಾಣ ಶೇ 72.47ರಷ್ಟಿದ್ದರೆ, ಉಳಿದ 97 ಜಾತಿಗಳ ಅಭ್ಯರ್ಥಿಗಳ ಪ್ರಮಾಣ ಶೇ 27.53ರಷ್ಟು ಮಾತ್ರ. ಪದವಿ ಶಿಕ್ಷಣ ಪಡೆದ ಈ ನಾಲ್ಕು ಜಾತಿಯವರ ಪ್ರಮಾಣ ಶೇ 71ರಷ್ಟಿದೆ. ಉಳಿದ 97 ಜಾತಿಗಳ ಅಭ್ಯರ್ಥಿಗಳ ಪ್ರಮಾಣ ಶೇ 29. ವೈದ್ಯಕೀಯ ಪದವಿ ಪಡೆದ ನಾಲ್ಕು ಜಾತಿಗಳ ಅಭ್ಯರ್ಥಿಗಳ ಪ್ರಮಾಣ ಶೇ 69.67ರಷ್ಟಿದೆ. ಉಳಿದ 97 ಜಾತಿಗಳ ಅಭ್ಯರ್ಥಿಗಳ ಪ್ರಮಾಣ ಶೇ 30.43ರಷ್ಟು ಮಾತ್ರ.

ವಿದ್ಯಾರ್ಥಿ ನಿಲಯಗಳಿಗೆ ಪ್ರವೇಶ ಪಡೆಯುತ್ತಿರುವವರಲ್ಲೂ ಹೊಲೆಯ, ಮಾದಿಗ, ಬಂಜಾರ ಮತ್ತು ಭೋವಿ ಜಾತಿಗಳ ವಿದ್ಯಾರ್ಥಿಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಸರ್ಕಾರದ 'ವಿದ್ಯಾಸಿರಿ', 'ಪ್ರಬುದ್ಧ' ವಿದ್ಯಾರ್ಥಿ ವೇತನ ಕಾರ್ಯಕ್ರಮದ ಫಲಾನುಭವಿಗಳಲ್ಲಿ ಸಿಂಹಪಾಲನ್ನು ಈ ನಾಲ್ಕು ಜಾತಿಗೆ ಸೇರಿದವರು ಪಡೆದುಕೊಂಡಿದ್ದಾರೆ. ಇವರ ನಂತರದಲ್ಲಿ ಭಾಂಬಿ, ಛಲವಾದಿ, ಚೆನ್ನದಾಸರಿ, ಕೊರಚ, ಕೊರಮ, ಮಹಾರ್, ಮೋಗೆರ್, ಮುಂಡಾಲಾ, ಸಮಗಾರ ಮತ್ತು ಸಿಳ್ಳೇಕ್ಯಾತ ಜಾತಿಗೆ ಸೇರಿದ ವಿದ್ಯಾರ್ಥಿಗಳು ಈ ಯೋಜನೆಗಳ ಪ್ರಯೋಜನ ಪಡೆದುಕೊಂಡಿದ್ದಾರೆ ಎಂದು ವರದಿ ಹೇಳಿದೆ.

**ಸಾಕ್ಷರತೆ ಶೇ 90ಕ್ಕಿಂತ ಹೆಚ್ಚು ಇರುವ ಜಾತಿಗಳು:** ಆದಿ ಆಂಧ್ರ, ಆದಿ ದ್ರಾವಿಡ, ಅಗೇರ್, ಅರ್ವ ಮಾಲಾ, ಬೈರಾ, ಬಾಕುಡಾ, ಬಂಟ, ಬೇಡ/ಬುಡ್ಗ ಜಂಗಮ, ಚಾಂಡಾಳ, ಗೊಡ್ಡ, ಹಲ್‌ಸಾರ್, ಕಡೈಯನ್, ಕ್ಯಾಪ್‌ಮರೀಸ್, ಕುಟುಂಬನ್, ಲಿಂಗಾಡೇರ್, ಮಚಲಾ , ಮಾಲಾ ಹನ್ನಾಯ್, ಮಾಲಾಮಸ್ತಿ, ಮನ್ನೆ, ಮುಂಡಾಲಾ, ನಲ್ಕದಯಾ, ನಲ್‌ಕೆಯವಾ, ಪಂಬದ, ಪರವನ್, ಸಂಬನ್ ಮತ್ತು ವಲ್ಲುವನ್

**ಶೇ 80ರಿಂದ ಶೇ 90ರಷ್ಟು ಸಾಕ್ಷರತೆ ಹೊಂದಿರುವ ಜಾತಿಗಳು:** ಆದಿ ಕರ್ನಾಟಕ, ಅದಿಯಾ, ಅಜಿಲಾ, ಅನಾಮುಕ್, ಅರುಂಧತಿಯಾರ್, ಆರ್ಯಮಾಲಾ, ಬಾಕಡ, ಭಳಗಿ, ಬಂಡಿ, ಬಥಡಾ, ಬೆಲ್ಲಾ, ಭಾಂಬೀ, ಭಂಗಿ, ಭೋವಿ, ಚಕ್ಕಿಲಿಯನ್, ಛಲವಾದಿ, ಡೋರ್ ಕಕ್ಕಯ್ಯ, ಡೊಮ್‌ಡೊಂಬರ, ಎಲ್ಲಮ್ಮಲವಾರ್, ಗಂಟಿ ಚೋರ್ಸ್, ಹಲ್ಲರ್, ಹಸಲ, ಹೊಲರ್, ಹೊಲೆಯ, ಜಂಬುವುಲು, ಕೂಸ, ಕೊರಚ, ಕೊರಮ, ಕೋಟೆಗಾರ್, ಕುರುವನ್, ಮದರಿ, ಮಹಾರ್, ಮಹ್ಯಾವಂಶಿ, ಮೈಲಾ, ಮಾಲಾ, ಮಾಲಾದಾಸರಿ, ಮಾಲಾಜಂಗಮ, ಮಾಲಾಸಾಲೆ, ಮಾಂಗ್ ಮಾತಂಗ್, ಮಸ್ತಿ, ಮಾವಿಲನ್, ಮೋಗೆರ್, ಮುಕ್ರಿ, ನಾಡಿಯಾ ಹಾಡಿ, ನಯಾಡಿ, ಪಾಲೆ, ಪಲ್ಲನ್, ಪನ್ನಿಯಂಡಿ, ಪಂಚಮ, ಪರವನ್, ರಾನೆಯಾರ್, ಸಮಗಾರ, ಸಪಾರಿ, ಥೋಟಿ ಮತ್ತು ಟ್ರಿಗ್ಗರ್

**ಶೇ 70ರಿಂದ 80ರಷ್ಟು ಸಾಕ್ಷರತೆ ಹೊಂದಿರುವ ಜಾತಿಗಳು:** ಬಂಜಾರ, ಬಿಂಡ್ಲಾ, ಬ್ಯಾಗೆರಾ, ಚೆನ್ನದಾಸರಿ, ದಕ್ಕಲ್, ದಕ್ಕಲಿಗ, ಗೊಸಾನ್ನಿ, ಹಂದಿಜೋಗಿ, ಹೊಲೆಯ ದಾಸರಿ, ಕಲ್ಲಡಿ, ಕೊಲ್ಲುಪುಲ್ಲುವಂಡು, ಮಾದಿಗ, ಮಾಲಾಸನ್ಯಾಸಿ, ಮಾಂಗ್ ಗರುಡಿ, ಮೇಘವಾಲ್, ಸಿಳ್ಳೇಕ್ಯಾತಾಸ್, ಸುಡುಗಾಡು ಸಿದ್ಧ

**ಶೇ 60ಕ್ಕಿಂತ ಕಡಿಮೆ ಸಾಕ್ಷರತೆ ಹೊಂದಿರುವವರು:** ಗಾರೋಡಾ ಗಾರೋ, ಜಗ್ಗಲಿ ಮತ್ತು ಸಿಂದೊಳ್ಳು




## ರಾಜಕೀಯ: ಐದು ಜಾತಿಗಳಿಗೆ ಸಿಂಹಪಾಲು

101 ಒಳಜಾತಿಗಳಲ್ಲಿ ಹಲವು ಜಾತಿಗಳಿಗೆ ಇನ್ನೂ ರಾಜಕೀಯ ಪ್ರಾತಿನಿಧ್ಯ ಸಿಕ್ಕಿಲ್ಲ ಎಂದು ವರದಿ ಹೇಳಿದೆ. ಲೋಕಸಭೆ, ವಿಧಾನಸಭೆ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿಗಳಲ್ಲಿ ಮೀಸಲಾತಿಗೆ ಅನುಗುಣವಾಗಿ ಪರಿಶಿಷ್ಟ ಜಾತಿಗಳಿಗೆ ಸೇರಿದವರಿಗೆ ಪ್ರಾತಿನಿಧ್ಯ ಸಿಕ್ಕಿದೆ. ಗ್ರಾಮ ಪಂಚಾಯಿತಿ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಜಾತಿವಾರು ರಾಜಕೀಯ ಪ್ರಾತಿನಿಧ್ಯದ ವಿವರಗಳನ್ನು ಉಲ್ಲೇಖಿಸಲಾಗಿದೆ.

ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಪರಿಶಿಷ್ಟ ಜಾತಿಗೆ ಸೇರಿದ 21,917 ಸದಸ್ಯರಿದ್ದಾರೆ. ಆದರೆ, 101 ಒಳ ಜಾತಿಗಳ ಪೈಕಿ 41 ಜಾತಿಗಳಿಗೆ ಇಲ್ಲಿ ರಾಜಕೀಯ ಪ್ರಾತಿನಿಧ್ಯ ದೊರೆತಿಲ್ಲ. ಗ್ರಾಮ ಪಂಚಾಯಿತಿಗಳಲ್ಲಿ ಸಿಕ್ಕ ಪ್ರಾತಿನಿಧ್ಯದಲ್ಲಿ ಹೊಲೆಯರು ಮೊದಲ ಸ್ಥಾನದಲ್ಲಿದ್ದರೆ, ಮಾದಿಗರು ಎರಡನೇ ಸ್ಥಾನದಲ್ಲಿದ್ದಾರೆ. ಬಂಜಾರ ಸಮುದಾಯದವರು ಮೂರನೇ, ಆದಿ ಕರ್ನಾಟಕ ನಾಲ್ಕನೇ ಮತ್ತು ಭೋವಿಗಳು ಐದನೇ ಸ್ಥಾನದಲ್ಲಿದ್ದಾರೆ.

ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ಸದ್ಯ 52 ಮಂದಿ ಪರಿಶಿಷ್ಟ ಜಾತಿಗೆ ಸೇರಿದ ಸದಸ್ಯರಿದ್ದು, 101 ಒಳಜಾತಿಗಳಲ್ಲಿ 12 ಜಾತಿಗಳಿಗೆ ಮಾತ್ರ ರಾಜಕೀಯ ಪ್ರಾತಿನಿಧ್ಯ ಸಿಕ್ಕಿವೆ. ಇಲ್ಲೂ ಕ್ರಮವಾಗಿ ಮಾದಿಗ, ಭೋವಿ, ಹೊಲೆಯ, ಬಂಜಾರ ಮತ್ತು ಛಲವಾದಿ ಜಾತಿಗೆ ಸೇರಿದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ನಗರಸಭೆಗಳಲ್ಲಿ 82 ಒಳಜಾತಿಗಳಿಗೆ ಪ್ರಾತಿನಿಧ್ಯ ಸಿಕ್ಕಿಲ್ಲ. ಪುರಸಭೆಗಳಲ್ಲಿ 27 ಜಾತಿಗಳಿಗೆ ಸೇರಿದವರು ಮಾತ್ರ ಸದಸ್ಯರಾಗಿದ್ದಾರೆ. ಪಟ್ಟಣ ಪಂಚಾಯಿತಿಗಳಲ್ಲಿ 23 ಜಾತಿಗಳಿಗೆ ಸೇರಿದವರು ಮಾತ್ರ ಸದಸ್ಯರಾಗಿದ್ದಾರೆ.

ನಗರ ಸ್ಥಳೀಯ ಸಂಸ್ಥೆಗಳನ್ನು ಒಟ್ಟಾರೆಯಾಗಿ ಪರಿಗಣಿಸಿದಾಗ, 101 ಉಪ ಜಾತಿಗಳಲ್ಲಿ 60 ಜಾತಿಗಳಿಗೆ ಸೇರಿದವರಿಗೆ ರಾಜಕೀಯ ಪ್ರಾತಿನಿಧ್ಯ ಸಿಕ್ಕಿದೆ. 42 ಜಾತಿಗಳ ಜನರಿಗೆ ಪ್ರಾತಿನಿಧ್ಯ ಸಿಕ್ಕಿಲ್ಲ. 51 ಜಾತಿಗಳು ಕಡಿಮೆ ಪ್ರಾತಿನಿಧ್ಯ ಪಡೆದಿವೆ. ಹೊಲೆಯ, ಮಾದಿಗ, ಆದಿ ಕರ್ನಾಟಕ, ಬಂಜಾರ ಮತ್ತು ಭೋವಿ ಜಾತಿಗಳಿಗೆ ಸೇರಿದವರು ಅತಿ ಹೆಚ್ಚು ಪ್ರಾತಿನಿಧ್ಯ ಹೊಂದಿದ್ದಾರೆ.

42 ಜಾತಿಗಳಿಗೆ ರಾಜಕೀಯ ಪ್ರಾತಿನಿಧ್ಯ ಸಿಗದೇ ಇರಲು ಬಡತನ, ಅನಕ್ಷರತೆ, ಕಡಿಮೆ ಜನಸಂಖ್ಯೆ, ಸಂವಿಧಾನ, ಪ್ರಜಾಪ್ರಭುತ್ವ ಮತ್ತು ರಾಜಕೀಯದ ಬಗ್ಗೆ ತಿಳಿವಳಿಕೆ ಇಲ್ಲದಿರುವುದು ಮತ್ತು ಸಂಘಟನೆಗಳು ದುರ್ಬಲವಾಗಿರುವುದು ಕಾರಣವಾಗಿರಬಹುದು ಎಂದು ವರದಿ ಹೇಳಿದೆ.

## ಸ್ವಂತ ಮನೆ, ಗುಡಿಸಲು ವಾಸ

ರಾಜ್ಯದಲ್ಲಿ ಪರಿಶಿಷ್ಟ ಜಾತಿಗಳ ಕುಟುಂಬಗಳ ಪೈಕಿ ಸ್ವಂತ ವಾಸದ ಮನೆಯನ್ನು ಹೊಂದಿದವರ ಪ್ರಮಾಣ ಶೇ 79.10. ಗುಡಿಸಲಿನಲ್ಲಿ ವಾಸಿಸುತ್ತಿರುವ ಕುಟುಂಬಗಳ ಪ್ರಮಾಣ ಶೇ 18.69. ವಿವಿಧ ಜಾತಿಗಳಲ್ಲಿ ಈ ಪರಿಸ್ಥಿತಿಯು ಭಿನ್ನವಾಗಿದೆ. ಬಂಜಾರರಲ್ಲಿ ಸ್ವಂತ ವಾಸದ ಮನೆ ಹೊಂದಿದವರ ಪ್ರಮಾಣ ಶೇ 83.10. ಹೊಲೆಯರಲ್ಲಿ ಈ ಪ್ರಮಾಣವು ಶೇ 83.90 ಆಗಿದ್ದರೆ, ಮಾದಿಗರಲ್ಲಿ ಶೇ 80.11 ಆಗಿದೆ. ಆದರೆ, ಪರಿಶಿಷ್ಟ ಜಾತಿಗಳ ಪೈಕಿ ಸಣ್ಣ ಜಾತಿಗಳ ಪರಿಸ್ಥಿತಿ ಉತ್ತಮವಾಗಿಲ್ಲ. ಸಿಳ್ಳೇಕ್ಯಾತರಲ್ಲಿ ಸ್ವಂತ ಮನೆಯನ್ನು ಹೊಂದಿದವರ ಪ್ರಮಾಣ ಶೇ 73.19. ಸುಡುಗಾಡು ಸಿದ್ಧರಲ್ಲಿ ಈ ಪ್ರಮಾಣವು ಶೇ 66.82 ಆಗಿದ್ದರೆ, ಮಾಲ ಜಾತಿಯಲ್ಲಿ ಶೇ 61.98, ಚೆನ್ನದಾಸರಿ ಜಾತಿಯಲ್ಲಿ ಶೇ 75.64ರಷ್ಟಿದೆ.

ಬಂಜಾರ, ಭೋವಿ, ಹೊಲೆಯ ಮತ್ತು ಮಾದಿಗ ಜಾತಿಗಳಲ್ಲಿ ಗುಡಿಸಲಿನಲ್ಲಿ ವಾಸಿಸುವ ಕುಟುಂಬಗಳ ಸಂಖ್ಯೆ ಕಡಿಮೆ. ಈ ನಾಲ್ಕು ಜಾತಿಗಳಲ್ಲಿ ಗುಡಿಸಲು ವಾಸಿಗಳ ಸರಾಸರಿ ಪ್ರಮಾಣ ಶೇ 3ಕ್ಕಿಂತ ಕಡಿಮೆ. ಸಣ್ಣ ಜಾತಿಗಳಲ್ಲಿ ಗುಡಿಸಲಿನಲ್ಲಿ ವಾಸಿಸುವ ಜನರ ಸಂಖ್ಯೆ ಹೆಚ್ಚಾಗಿದೆ. ಸಿಳ್ಳೇಕ್ಯಾತ ಜಾತಿಯಲ್ಲಿ ಗುಡಿಸಲಿನಲ್ಲಿ ವಾಸಿಸುವವರ ಪ್ರಮಾಣ ಶೇ 32.73.

## ಒಳಜಾತಿಗಳ ನಡುವೆ ತಾರತಮ್ಯ

ಪರಿಶಿಷ್ಟ ಜಾತಿಯ ಅಡಿಯಲ್ಲಿ ಬರುವ ಒಳಜಾತಿಗಳು ಸಮಾನರೂಪದ ಜಾತಿಗಳಲ್ಲ. ಇವುಗಳ ನಡುವೆ ಭಿನ್ನರೂಪ ಇದೆ. ಪರಿಶಿಷ್ಟ ಜಾತಿಗಳ ಸ್ಪೃಶ್ಯರು, ಅಸ್ಪೃಶ್ಯರು ಮತ್ತು ಇತರರಿಗಿಂತ ಶ್ರೇಷ್ಠರೆಂದೂ ಉಳಿದವರು ಅವರಿಗಿಂತ ಕೆಳಗಿನವರೆಂದೂ ಪರಿಗಣಿಸಲಾಗುತ್ತಿದೆ ಎಂದು ವರದಿ ಹೇಳಿದೆ. ಅಲೆಮಾರಿಗಳನ್ನು ಅತ್ಯಂತ ಕೆಳಗಿನವರನ್ನಾಗಿ ನೋಡಲಾಗುತ್ತಿದೆ. ಹೊಲೆಯರಿಗಿಂತ ಮಾದಿಗರು ಕೆಳಗಿನವ-ರಾಗಿದ್ದರೆ, ದಕ್ಕಲರು ಮಾದಿಗರಿಗಿಂತ ಕೆಳಗಿನವರಾಗಿದ್ದಾರೆ.

ಪರಿಶಿಷ್ಟ ಜಾತಿಯಲ್ಲಿ ಬರುವ ಎಲ್ಲ ಜಾತಿಗಳೂ ಒಂದೇ ಕೇರಿಯಲ್ಲಿ ವಾಸ ಮಾಡುವುದಿಲ್ಲ. ಒಂದೇ ಬಾವಿಯಿಂದ ನೀರು ತೆಗೆಯುವುದಿಲ್ಲ. ಒಬ್ಬರ ಮನೆಯೊಳಗೆ ಮತ್ತೊಬ್ಬರಿಗೆ ಪ್ರವೇಶವಿಲ್ಲ. ಒಬ್ಬರು ಮಾಡಿದ ಅಡುಗೆಯನ್ನು ಮತ್ತೊಬ್ಬರು ತಿನ್ನುವುದಿಲ್ಲ. ಒಂದು ಉಪಜಾತಿ ಮತ್ತೊಂದು ಉಪಜಾತಿ ನಡುವೆ ಮದುವೆ ಸಂಬಂಧವಿಲ್ಲ. ಇದೇ ರೀತಿ ಜಾತಿ ಹಾಗೂ ಕಸುಬುಗಳೂ ನಿಗದಿಗೊಂಡಿವೆ. ಇವೆರಡೂ ವಂಶಪಾರಂಪರ್ಯ ಆಗಿದ್ದು, ಬದಲಾಯಿಸುವಂತಿಲ್ಲ. ಅವರು ಮಾಡುವ ಕಸುಬಿನ ಆಧಾರದಲ್ಲಿ ಅವರನ್ನು ಮೇಲುಕೀಳೆಂದು ಗುರುತಿಸಲಾಗುತ್ತಿದೆ. ಈ ಎಲ್ಲ ಉಪಜಾತಿಗಳಿಗೂ ಸಮಾನ ಅವಕಾಶಗಳನ್ನು ದೊರಕಿಸಿಕೊಡುವ ಅಗತ್ಯ ಅನಿವಾರ್ಯ ಇದ್ದು, ಈ ದಿಕ್ಕಿನಲ್ಲಿ ಒಳಮೀಸಲಾತಿಯು ಒಂದು ಸಣ್ಣ ಪ್ರಯತ್ನವಾಗಿದೆ ಎಂದು ವರದಿ ಉಲ್ಲೇಖಿಸಿದೆ.

## ಸರ್ಕಾರಿ ಉದ್ಯೋಗ: 12 ಜಾತಿಗಳಿಗಿಲ್ಲ ಪ್ರಾತಿನಿಧ್ಯ

ರಾಜ್ಯ ಸರ್ಕಾರದ 45 ಇಲಾಖೆಗಳಲ್ಲಿ 'ಎ' 'ಬಿ' 'ಸಿ' ಮತ್ತು 'ಡಿ' ಶ್ರೇಣಿಯ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿಗಳಿಗೆ ಸೇರಿದ 1.47 ಲಕ್ಷ ಮಂದಿ ಕೆಲಸ ಮಾಡುತ್ತಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದವರು ಗ್ರೂಪ್ 'ಸಿ' ಮತ್ತು 'ಡಿ'ಗಳಲ್ಲಿ ಅವರಿಗೆ ಮೀಸಲಿಟ್ಟ ಸ್ಥಾನಗಳಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದರೆ, ಗ್ರೂಪ್ 'ಎ' ಮತ್ತು 'ಬಿ' ಶ್ರೇಣಿಯ ಹುದ್ದೆಗಳಲ್ಲಿ ಈ ಸಮುದಾಯದವರು ಮೀಸಲು (ಕೋಟಾ) ಇಟ್ಟಿರುವಷ್ಟು ಪ್ರಮಾಣದಲ್ಲಿಲ್ಲ.

ಪರಿಶಿಷ್ಟ ಜಾತಿಗೆ ಸೇರಿದ 101 ಉಪಜಾತಿಗಳ ಪೈಕಿ 12 ಜಾತಿಗಳು ಸರ್ಕಾರಿ ಉದ್ಯೋಗಗಳಲ್ಲಿ ಪ್ರಾತಿನಿಧ್ಯವನ್ನೇ ಪಡೆದಿಲ್ಲ. ಬಿಂಡ್ಲಾ, ಚಾಂಡಾಲ, ಗಾರೋಡಾ ಗಾರೋ, ಕ್ಯಾಪ್‌ಮರೀಸ್, ಕೋಲುಪುಲುವಂದ್ಲು, ಕುಟುಂಬನ್, ಮಹ್ಯಾವಂಶಿ, ಧೇಡ್, ವಂಕರ್, ಮಾರು ವಂಕರ್, ಮಾಲಾ ಜಂಗಮ, ಮಾಲಾ ಮಸ್ತಿ, ಮನ್ನೆ, ಮಸ್ತಿ, ಸಿಂದೊಳ್ಳು–ಚಿಂದೊಳ್ಳು ಜಾತಿಗಳಿಗೆ ಸೇರಿದವರು ಯಾರೊಬ್ಬರೂ ಸರ್ಕಾರಿ ನೌಕರಿಯಲ್ಲಿಲ್ಲ.

ಹೊಲಯ, ಹೊಲರ್, ಹೊಲೆಯ, ಮಾದಿಗ, ಬಂಜಾರ, ಲಂಬಾಣಿ, ಭೋವಿ, ಛಲವಾದಿ, ಭಾಂಬಿ, ಬೇಡ ಜಂಗಮ, ಕೊರಮ, ಸಮಗಾರ, ಆದಿ ದ್ರಾವಿಡ ಸೇರಿದಂತೆ ಪ್ರಮುಖ 10 ಜಾತಿಗಳಿಗೆ ಸೇರಿದವವರು ಗರಿಷ್ಠ ಸಂಖ್ಯೆಯಲ್ಲಿ ಸರ್ಕಾರಿ ನೌಕರಿ ಪಡೆದಿದ್ದಾರೆ.

ಚೆನ್ನದಾಸರಿ, ಹೊಲಯ ದಾಸರಿ, ಪರೈಯನ್, ಕೊರಚ, ಆದಿಕರ್ನಾಟಕ, ಮೊಗೇರ್, ಮಾಲಾ, ಭಂಗಿ, ಸುಡುಗಾಡು ಸಿದ್ಧ ಸೇರಿದಂತೆ 28 ಜಾತಿಗಳಿಗೆ ಸೇರಿದವರು ಮಧ್ಯಮ ಪ್ರಮಾಣದಲ್ಲಿ ಸರ್ಕಾರಿ ಉದ್ಯೋಗಗಳಲ್ಲಿ ಪ್ರಾತಿನಿಧ್ಯ ಹೊಂದಿದ್ದಾರೆ. ಆದಿ ಆಂಧ್ರ, ಅದಿಯಾ, ಪರವನ್, ಅಜಿಲಾ ಸೇರಿದಂತೆ 51 ಜಾತಿಗಳ ಜನರು ಕಡಿಮೆ ಸಂಖ್ಯೆಯಲ್ಲಿ ಸರ್ಕಾರಿ ನೌಕರಿಯಲ್ಲಿದ್ದಾರೆ.

**ರಾಜ್ಯ ಸರ್ಕಾರದ 45 ಇಲಾಖೆಗಳಲ್ಲಿರುವ ಎಸ್‌ಸಿ ಸರ್ಕಾರಿ ಉದ್ಯೋಗಿಗಳು** (ಶ್ರೇಣಿವಾರು)

| ಹುದ್ದೆಗಳ ವಿವರ | ಎ | ಬಿ | ಸಿ | ಡಿ | ಒಟ್ಟು |
|---|---|---|---|---|---|
| ಎಸ್‌ಸಿ ಪ್ರಾತಿನಿಧ್ಯ ಶೇ 17ರಷ್ಟು | 8,764 | 13,898 | 1,38,619 | 38,180 | 1,99,460 |
| ನೇಮಕಾತಿ ಆಗಿರುವುದು | 6,468 | 10,424 | 1,02,920 | 27,860 | 1,47,672 |
| ನೇಮಕಾತಿ ಮಾಡದಿರುವುದು | 2,296 | 3,474 | 35,699 | 10,320 | 51,788 |

## ಗುಂಡಣ್ಣ

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

**09 ಆಗಸ್ಟ್ 2025 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ:** ಶ್ರಾವಣ ಶುಕ್ಲ ಪೂರ್ಣಿಮಾ ಗಂ. 13-25 ನಕ್ಷತ್ರ: ಶ್ರವಣ ಗಂ. 14-24 ಯೋಗ: ಸೌಭಾಗ್ಯ ಗಂ. 26-15 ಕರಣ: ಬವ ಗಂ. 13-25 ಕರ್ಕಾಟಕ ಮಾಸದ 24 ನೇ ದಿನ. ಮಳೆ ನಕ್ಷತ್ರ : ಆಶ್ಲೇಷ 2 ನೇ ಪಾದ. **ರಾಹುಕಾಲ :** ಬೆಳಿಗ್ಗೆ 09-00 10-30 , **ಸೂರ್ಯೋದಯ :** 06-21 ಸೂರ್ಯಾಸ್ತ : 06-51, **ಮುಸ್ಲಿಂ ದಿನಾಂಕ :** 14 ಸಫರ್, **ದಿನ ವಿಶೇಷ :** ಉಪಾಕರ್ಮ, ಶ್ರಾವಣಿ ಪೂರ್ಣಿಮಾಅದೃಷ್ಟ ಸಂಖ್ಯೆ : 1, 4

**ಮೇಷ:** ಮಾಡುತ್ತಿರುವ ಕೆಲಸಗಳಿಗೆ ಶ್ರದ್ಧೆಯಿಂದ ಸಹಚರರು ಕೈಜೋಡಿಸದೆ ಇರುವುದು ಕಷ್ಟಕ್ಕೆ ಕಾರಣವಾಗಬಹುದು. ದೂಳು ಹಾಗು ಸಣ್ಣ ಕಸಗಳಿಂದ ಶ್ವಾಸಕೋಶ ಹಾಗು ಶ್ವಾಸನಾಳಕ್ಕೆ ತೊಂದರೆ ಉಂಟಾಗಬಹುದು.

**ವೃಷಭ:** ಕಟ್ಟಡ ರಚನೆಯಂಥ ಕಾರ್ಯಗಳು ಭರದಿಂದ ಸಾಗಲಿವೆ. ಈಗಿನ ಪೈಪೋಟಿ ಜೀವನದಲ್ಲಿ ಲಾಭದ ಅಂಶವನ್ನು ಪರಿಗಣಿಸಬೇಡಿ. ವಿದ್ಯುತ್ ಉಪಕರಣಗಳಿಂದ ಅಪಾಯ ಸಾಧ್ಯತೆ ಇರುವುದರಿಂದ ಎಚ್ಚರವಾಗಿರಿ.

**ಮಿಥುನ:** ಶಾಸ್ತ್ರಜ್ಞರಿಗೆ ಬಂದ ಉತ್ತಮ ಅವಕಾಶಗಳನ್ನು ಉಪಯೋಗಿಸಿಕೊ-ಳ್ಳಿ. ಇಚ್ಛೆಯ ಸಂಸ್ಥೆಯ ಕೆಲಸವನ್ನು ನಿರೀಕ್ಷಿಸುವುದರಲ್ಲಿ ಹುರುಳಿಲ್ಲವೆಂದು ಕಾಣುತ್ತದೆ. ವಿದ್ಯಾಭ್ಯಾಸದ ನಿರ್ಲಕ್ಷ್ಯ ತಲೆನೋವಾಗಬಹುದು.

**ಕರ್ಕಾಟಕ:** ಧಾರ್ಮಿಕ ಕಾರ್ಯಕ್ರಮದ ಜವಾಬ್ದಾರಿ ತೆಗೆದುಕೊಳ್ಳುವುದು ಶ್ರೇಯಸ್ಸಿಗೆ ಕಾರಣವಾಗುತ್ತದೆ. ವೈದ್ಯರು ವೃತ್ತಿಯಲ್ಲಿ ಮುಖ್ಯವಾಗಿ ಹೆಚ್ಚಿನ ಜಾಗ್ರತೆ ವಹಿಸುವುದು ಒಳ್ಳೆಯದು. ದೃಷ್ಟಿಕೋನದಲ್ಲಿ ಪರಾಮರ್ಶಿಸಿಕೊಳ್ಳಿರಿ.

**ಸಿಂಹ:** ಮನೆಯ ರಕ್ಷಣೆ ವಿಚಾರದಲ್ಲಿ ಎದುರಾದ ಸಮಸ್ಯೆಗಳು ಪರಿಹಾರ ಕಾಣಲಿವೆ. ಯಾವುದೇ ವಿಚಾರದಲ್ಲಿಯೂ ಆತುರದ ನಿರ್ಧಾರ ಒಳ್ಳೆಯದಲ್ಲ. ಹೆಂಡತಿಯ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆ ಕಾಣಲಿದೆ.

**ಕನ್ಯಾ:** ವೃತ್ತಿಪರವಾಗಿ ವಿದೇಶಕ್ಕೆ ಹೋಗುವ ಬಯಕೆಗೆ, ಕೆಲವೊಂದು ಷರತ್ತುಗಳನ್ನು ಒಪ್ಪಿಕೊಂಡಲ್ಲಿ ಈಡೇರುವ ಸಾಧ್ಯತೆಗಳಿದೆ. ಕೃಷಿ ಹಾಗೂ ಹೈನು ವ್ಯಾಪಾರಗಳಿಂದ ಅಧಿಕ ಲಾಭ. ಕೃಷ್ಣನನ್ನು ಆರಾಧಿಸಿ ಉತ್ತರ ಸಿಗುವುದು.

**ತುಲಾ:** ಅತಿಯಾದರೆ ಅಮೃತವು ವಿಷ ಎಂಬಂತೆ ಮಕ್ಕಳ ಮೇಲಿನ ಅತಿ ಪ್ರೀತಿ ಮಾರಕವಾಗಿ ಪರಿಣಮಿಸಬಹುದು. ಅಭಿವೃದ್ಧಿಗೆ ಕುಂಠಿತವಾಗಬಹುದು. ಸೌಹಾರ್ದಯುತ ಸಂಬಂಧಗಳನ್ನು ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾಗುವಿರಿ.

**ವೃಶ್ಚಿಕ:** ಮನೆಯ ವಿಸ್ತರಣೆ ವಿಷಯವಾಗಿ ಉತ್ತಮ ಆಲೋಚನೆಗಳು ಗರಿಗೆದರಲಿವೆ. ದೂರ ಪ್ರವಾಸದಿಂದ ಖರ್ಚು ಉಂಟಾದರೂ ಮನಸ್ಸಿಗೆ ಹಿತ. ಕುಟುಂಬದ ಸದಸ್ಯರ ಅಭಿವೃದ್ಧಿಯಿಂದ ಕೀರ್ತಿ ಪ್ರತಿಷ್ಠೆಗಳು ಹೆಚ್ಚಲಿವೆ.

**ಧನು:** ವೃತ್ತಿ ಮತ್ತು ಕನಸಿನ ನಡುವೆ ಮೂಡಿದ್ದ ಗೊಂದಲಗಳನ್ನು ಪರಿಹರಿ-ಸಿಕೊಳ್ಳುವಿರಿ. ವೃತ್ತಿಯಲ್ಲಿ ಪ್ರತಿಭೆ ಪ್ರದರ್ಶಿಸಲು ಸಕಾಲ. ಪ್ರೇಮ ಜೀವನದ ಸಾಫಲ್ಯಕ್ಕೆ ಹೊಂದಾಣಿಕೆಯೇ ಮೈಲಿಗಲ್ಲು ಎಂಬುವುದನ್ನು ಮರೆಯದಿರಿ.

**ಮಕರ:** ಬಿಡುವಿಲ್ಲದ ದಿನಚರಿಯಲ್ಲಿ ಆಯಾಸವಾಗಿದ್ದರೂ ಮನೆಯವರಿಗೆ ಸಮಯವು ಅತ್ಯಂತ ಪ್ರಮುಖವಾಗಿರುತ್ತದೆ. ಹರಿತವಾದ ಮಾತುಗಳು ನಿಮ್ಮನ್ನು ಇಂದು ಘಾಸಿಗೊಳಿಸಬಹುದು.

**ಕುಂಭ:** ಸಂಪೂರ್ಣ ಮುಗಿಸಲೇಬೇಕೆಂದು ಪಣತೊಟ್ಟು ನಿಯೋಜಿತ ಕೆಲಸಗಳನ್ನು ಮಾಡಿದರೆ ಇನ್ನೊಂದು ಹೊಸ ಕೆಲಸ ಕಾದಿರುತ್ತದೆ. ಸಂಗೀತಗಾರರಿಗೆ, ನೃತ್ಯ ಕಲೆಗಳಿಗೆ ಮನ್ನಣೆ ಸಿಗಲಿದೆ.

**ಮೀನ:** ಕೆಲಸಕ್ಕೆ ಬೇಕಾದ ಎಲ್ಲಾ ಮಾಹಿತಿಗಳನ್ನು ಸಂಗ್ರಹಿಸಿಕೊಳ್ಳುವು-ದು ಯಶಸ್ಸಿಗೆ ಕಾರಣವಾಗುತ್ತದೆ. ಆತ್ಮವಿಶ್ವಾಸದಿಂದ ಸಕಾರಾತ್ಮಕವಾಗಿ ಮುಂದುವರಿಯಿರಿ. ನೀಲಿ ಬಣ್ಣ ಶುಭದಾಯಕ.

## ಪದಬಂಧ 6129

ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ಇದು ಬರೀ ಊಹೆ (3)
3.ಎಲ್ಲಕ್ಕಿಂತ ಮುಖ್ಯವಾದುದು (3)
5.ಮನುಷ್ಯನನ್ನು ತಿನ್ನುವ ಪ್ರಾಣಿ (5)
6.ಚಿಲಿಪಿಲಿ ಪದದಲ್ಲಿರುವ ವರ್ಣ (2)
8.ಸಂತತಿಯಲ್ಲಿರುವ ಸಾಧು (2)
9.ಹಕ್ಕಿಯ ತುಪ್ಪಳ ಇಲ್ಲಿ ಕಾಣುತ್ತಿದೆ (2)
10.ನಾಯಿ ಜಾತಿಗೆ ಸೇರಿದ ಕಾಡುಮೃಗ ಉಲ್ಟಾ ನಿಂತಿದೆ (2)
11.ನಾಗರಿಕತೆ ಸಾರುತ್ತಿರುವ ಸ್ತ್ರೀ (2)
12.ದಾಖಲೆ ಪತ್ರಗಳ ಕೊನೆಯಲ್ಲಿ ಸೇರಿಸುವ ವಿಶೇಷಾಂಶ (2)
16.ಮತ ಧರ್ಮವನ್ನು ಅನುಸರಿಸದವನು (5)
17.ಯಾವ ವಸ್ತುವೂ ಸಿಗದ ಹಳ್ಳಿ (3)
18.ಸರವಿಟ್ಟು ಮಾಡಿರುವ ಉಪಚಾರ (3)

**ಮೇಲಿಂದ ಕೆಳಕ್ಕೆ**
1.ಅತ್ಯಂತ ಪರಾಕ್ರಮಿ ಇಲ್ಲಿದ್ದಾನೆ (4)
2.ಆಗಿಹೋಗಿದ್ದನ್ನು ಮನಸ್ಸಿಗೆ ತಂದುಕೊಳ್ಳುವುದು (3)
3.ಮುಚ್ಚುಮರೆ ಇಲ್ಲದೆ ನಿಚ್ಚಳವಾದುದು (3)
4.ಅದೇ ತಾನೆ ಹುಟ್ಟಿದುದು (4)
7.ತೂರಿಕೊಂಡು ನಡೆಸಿರುವ ಸಂಚು! (3)
8.ಆನಂದ ಹೀಗೆ ಬಂದಿದೆ (3)
11.ಹೆಸರು ಮುಂದಿಟ್ಟುಕೊಂಡು ಮೋಸಮಾಡು! (4)
13.ಕೊನೆಗೆ ಒಜ್ಜೆಯೆನಿಸಿದ ಸಂಧಾನ (4)
14.ಅಲ್ಲಿದ್ದು ಧಮಕಿ ಹಾಕುತ್ತಿರುವ ನೀಚ (3)
15.ಅವಸರದಲ್ಲಿರುವ ರಾಜ ಕಾಣುತ್ತಿದ್ದಾನೆಯೇ? (3)



### 6128ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
2.ರಾಗ 3.ನಟರಾಜ
5.ರಮಣಿ 6.ಸುಧಾರಕ
8.ಸಮಾಗಮ 11.ಅಂತರ್ಧಾನ
14.ಅವಧೂತ 15.ಕಣಜ
16.ತಳಮಳ 17.ಭವಿ

**ಮೇಲಿಂದ ಕೆಳಕ್ಕೆ:**
1.ಭರವಸೆ 2.ರಾಣಿವಾಸ
3.ನವಸುಮ 4.ಜಟಕ 7.ರಹ
9.ಗಣಿತ 10.ಜಾವ
11.ಅಂತರಾಳ 12.ನವ್ಯಕವಿ
13.ಪ್ರಯೋಜನ 14.ಅಹಿತ

## ಸುಡೊಕು 6513

**ಆಡುವುದು ಹೀಗೆ:** ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

| | | | | | | | | |
|---|---|---|---|---|---|---|---|---|
| 8 | | 6 | | 4 | | 3 | | 5 |
| | | | 5 | | 7 | | | |
| | 9 | 2 | | 3 | | 7 | | 1 |
| 2 | 1 | | 9 | | 3 | 6 | | |
| | | | | 1 | | | | 3 |
| 3 | 8 | | | 5 | | | 7 | |
| 9 | | 8 | | | | | | 7 |
| | 6 | | | 9 | | | 3 | |
| 4 | | 3 | | | 1 | 2 | | 6 |

**6512 ಸುಡೊಕು**

| | | | | | | | | |
|---|---|---|---|---|---|---|---|---|
| 2 | 4 | 8 | 1 | 6 | 3 | 5 | 9 | 7 |
| 7 | 5 | 6 | 4 | 9 | 8 | 2 | 3 | 1 |
| 1 | 3 | 9 | 2 | 5 | 7 | 4 | 8 | 6 |
| 6 | 1 | 5 | 9 | 7 | 4 | 8 | 2 | 3 |
| 3 | 9 | 7 | 8 | 1 | 2 | 6 | 5 | 4 |
| 8 | 2 | 4 | 6 | 3 | 5 | 7 | 1 | 9 |
| 5 | 6 | 3 | 7 | 2 | 1 | 9 | 4 | 8 |
| 9 | 8 | 2 | 3 | 4 | 6 | 1 | 7 | 5 |
| 4 | 7 | 1 | 5 | 8 | 9 | 3 | 6 | 2 |

# ಶಾಲಾ ಶುಲ್ಕ ನಿಯಂತ್ರಣಕ್ಕೆ ಪ್ರತ್ಯೇಕ ಸಂಸ್ಥೆ

## ಮುಖ್ಯಮಂತ್ರಿಗೆ ಅಂತಿಮ ವರದಿ ಸಲ್ಲಿಸಿದ ಆಯೋಗ
## ಕರ್ನಾಟಕ ರಾಜ್ಯ ಮುಕ್ತ ಶಾಲೆಗಳ ಸಂಖ್ಯೆ ಹೆಚ್ಚಿಸಲು ಶಿಫಾರಸು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಖಾಸಗಿ ಶಾಲೆಗಳಲ್ಲಿನ ಶುಲ್ಕ ನಿಯಂತ್ರಿಸಲು ಸರ್ಕಾರ ಪ್ರತ್ಯೇಕ ಶುಲ್ಕ ನಿಯಂತ್ರಣ ಸಂಸ್ಥೆಯನ್ನು ಸ್ಥಾಪಿಸಬೇಕು ಎಂದು ಪ್ರೊ. ಸುಖದೇವ್ ಥೋರಟ್ ಅಧ್ಯಕ್ಷತೆಯ ರಾಜ್ಯ ಶಿಕ್ಷಣ ನೀತಿ ಆಯೋಗ ಶಿಫಾರಸು ಮಾಡಿದೆ.

ಖಾಸಗಿ ಶಾಲೆಗಳ ಜತೆಗೆ, ಖಾಸಗಿ ಪೂರ್ವ ಪ್ರಾಥಮಿಕ ಶಾಲೆಗಳನ್ನೂ ನಿಯಂತ್ರಿಸಬೇಕು. ಅದಕ್ಕಾಗಿ ಪ್ರತ್ಯೇಕ ನಿಯಂತ್ರಣ ಚೌಕಟ್ಟು ರೂಪಿಸಬೇಕು. ಮಾಧ್ಯಮಿಕ ಶಿಕ್ಷಣವನ್ನು ಸಾರ್ವತ್ರಿಕಗೊಳಿಸಬೇಕು. ಶಿಕ್ಷಣದ ಖಾಸಗೀಕರಣವನ್ನು ತಡೆಯಬೇಕು. ಪಠ್ಯಪುಸ್ತಕಗಳಿಗಾಗಿ ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯ ಮೇಲಿನ ಅವಲಂಬನೆ ಕಡಿಮೆ ಮಾಡಬೇಕು. ಪಠ್ಯ ವಿಷಯಗಳನ್ನು ಸ್ಥಳೀಯವಾಗಿಸಬೇಕು. ಶಾಲಾ ಶಿಕ್ಷಣಕ್ಕೆ ಪ್ರತ್ಯೇಕವಾದ ಸಮಗ್ರ ಪಠ್ಯಪುಸ್ತಕಗಳನ್ನು ರಚಿಸಬೇಕು ಎಂದು ಹೇಳಿದೆ.

ಎನ್‌ಇಪಿಯಲ್ಲಿ ತರಗತಿಗಳನ್ನು ಪೂರ್ವಪ್ರಾಥಮಿಕ ಒಳಗೊಂಡು 5ರವರೆಗೆ, 6ರಿಂದ 8, 9ರಿಂದ 12ನೇ ತರಗತಿ ಎಂದು ಮೂರು ಹಂತದ ವಿಂಗಡಣೆ ಮಾಡಲಾಗಿತ್ತು. ಎಸ್‌ಇಪಿ ಅದನ್ನು ಮಾರ್ಪಡಿಸಿ, ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಪ್ರತ್ಯೇಕಗೊಳಿಸಿದೆ. 1ರಿಂದ 8ನೇ ತರಗತಿ ಹಾಗೂ 9ರಿಂದ 12ನೇ ತರಗತಿಯನ್ನು ಎರಡು ಗುಂಪುಗಳಾಗಿ ವಿಂಗಡಿಸಿದೆ. ಪರಿಣಾಮಕಾರಿ ಶಿಕ್ಷಣದ ಅನುಷ್ಠಾನಕ್ಕೆ ಕ್ಷೇತ್ರ ಶಿಕ್ಷಣ ವಲಯಕ್ಕೆ ಹೆಚ್ಚು ಅಧಿಕಾರ ನೀಡಬೇಕು. ಸಮಾನಾಂತರ ವಿಭಾಗಗಳನ್ನು ಆಯುಕ್ತಾಲಯದಲ್ಲಿ ವಿಲೀನಗೊಳಿಸಬೇಕು. ಭಾರತೀಯ ಜ್ಞಾನ ವ್ಯವಸ್ಥೆ ಕೋರ್ಸ್‌ಗಾಗಿ ಸಮಿತಿ ರಚಿಸಬೇಕು. ಜೀವಮಾನ ಕಲಿಕೆ ನಿರ್ದೇಶನಾಲಯ ಸ್ಥಾಪಿಸಬೇಕು. ರಾಜ್ಯ ಬಜೆಟ್‌ನ ಒಟ್ಟು ವೆಚ್ಚದಲ್ಲಿ ಶಿಕ್ಷಣಕ್ಕೆ ಶೇ 30ರಷ್ಟು ಮೀಸಲಿಡಬೇಕು. ಸಮಾನತೆ, ಗುಣಮಟ್ಟ ಮತ್ತು ತರಬೇತಿಗಾಗಿ ಹಣ ಮೀಸಲಿಡಬೇಕು. ಸಂವಿಧಾನ ಮೌಲ್ಯ ಶಿಕ್ಷಣವನ್ನು ಕಡ್ಡಾಯಗೊಳಿಸಬೇಕು. ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಎಲ್ಲ ಸರ್ಕಾರಿ ಶಾಲೆಗಳಲ್ಲೂ ಆರಂಭಿಸಬೇಕು ಎಂದು ಆಯೋಗ ಶಿಫಾರಸು ಮಾಡಿದೆ.

### ಆರ್‌ಟಿಇ ವ್ಯಾಪ್ತಿ 4 ರಿಂದ 18ಕ್ಕೆ

ಕಡ್ಡಾಯ ಶಿಕ್ಷಣ ಕಾಯ್ದೆ ಅನ್ವಯ (ಆರ್‌ಟಿಇ) ರಾಜ್ಯದಲ್ಲಿ 6ರಿಂದ 14ನೇ ವಯಸ್ಸಿನ ಮಕ್ಕಳಿಗೆ ಉಚಿತ ಪ್ರವೇಶ ನೀಡಲಾಗುತ್ತಿದೆ. ಒಂದನೇ ತರಗತಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು 8ನೇ ತಗರಗತಿಯ ನಂತರ ಶುಲ್ಕ ಭರಿಸಬೇಕಿದೆ. ಈ ನಿಯಮವನ್ನು ಬದಲಿಸಿ, 4ರಿಂದ 18ನೇ ವಯಸ್ಸಿನವರೆಗೂ ಹಂತಹಂತವಾಗಿ ನಿಯಮ ಅನ್ವಯ ಮಾಡಲು ಆಯೋಗ ಶಿಫಾರಸು ಮಾಡಿದೆ.

ಶಿಕ್ಷಕರ ನೇಮಕಾತಿಗೆ ಆದ್ಯತೆ ನೀಡಿ, ಗುತ್ತಿಗೆ, ಅತಿಥಿ ಶಿಕ್ಷಕರ ನೇಮಕವನ್ನು ಸಂಪೂರ್ಣ ಸ್ಥಗಿತಗೊಳಿಸಬೇಕು. ಸರ್ಕಾರಿ ಶಾಲೆಗಳಲ್ಲಿ ಕೇಂದ್ರೀಯ ಶಾಲೆಗಳ ಗುಣಮಟ್ಟದ ಶಿಕ್ಷಣ ಖಾತ್ರಿಪಡಿಬೇಕು ಎಂದು ಹೇಳಿದೆ.

### ಉನ್ನತ ಶಿಕ್ಷಣಕ್ಕೆ ಶಿಫಾರಸು

- ಪ್ರಾಧ್ಯಾಪಕರ ನೇಮಕಕ್ಕೆ ಲಿಖಿತ ಪರೀಕ್ಷೆ ಜತೆಗೆ ಸಂದರ್ಶನ
- ಪ್ರಾಶುಪಾಲರ ಹುದ್ದೆ ಸರ್ಕಾರಿ ಕಾಲೇಜುಗಳ ಅಧ್ಯಾಪಕರಿಗೆ ಮೀಸಲು
- ಪಿಎಚ್‌.ಡಿ ವಿದ್ಯಾರ್ಥಿಗಳಿಗೆ ರಾಜ್ಯದಿಂದಲೂ ಶಿಷ್ಯ ವೇತನ
- ಕರ್ನಾಟಕ ರಾಜ್ಯ ಶಿಕ್ಷಣ ಹಣಕಾಸು ನಿಗಮ ಸ್ಥಾಪನೆ
- ಖಾಸಗಿ ಕಾಲೇಜುಗಳ ಪ್ರವೇಶಕ್ಕೆ ಏಕರೀತಿಯ ಪ್ರವೇಶ ಪರೀಕ್ಷೆ
- ಖಾಸಗಿ ಶಿಕ್ಷಣ ಸಂಸ್ಥೆ, ವಿಶ್ವವಿದ್ಯಾಲಯಗಳಲ್ಲೂ ಮೀಸಲಾತಿ
- ಜಂಟಿ ನಿರ್ದೇಶಕರ ಕಚೇರಿಗಳ ಸಂಖ್ಯೆ 4ಕ್ಕೆ ಇಳಿಕೆ
- ಪ್ರತಿ ವಿಶ್ವವಿದ್ಯಾಲಯದಲ್ಲೂ ವಿದೇಶಿ ವಿದ್ಯಾರ್ಥಿ ಕೋಶ

### ವೃತ್ತಿ ಶಿಕ್ಷಣ ಶಿಫಾರಸು

- ಎಲ್ಲ ವಿಭಾಗದಲ್ಲೂ ಉದ್ಯೋಗ ಆಧಾರಿತ ಕೋರ್ಸ್‌ಗಳು
- ತಂತ್ರಜ್ಞಾನ ಆಧಾರಿತ ಕಲಿಕೆ, ಡಿಜಿಟಲ್ ಸಾಕ್ಷರತೆ
- ಎಲ್ಲ ಪದವಿ ಕಾಲೇಜುಗಳಲ್ಲೂ ಇಂಟರ್ನ್‌ಶಿಪ್ ಕೋರ್ಸ್
- ಆಹಾರ ಸಂಸ್ಕರಣೆ, ನಿಖರ ಕೃಷಿಯಲ್ಲಿ ಡಿಪ್ಲೊಮಾ
- ಶಾಲಾ ಹಂತದಿಂದಲೇ ಕೃಷಿ ಅಧ್ಯಯನ ಪಠ್ಯ
- ಖಾಸಗಿ ಕೃಷಿ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ನಿರ್ಬಂಧ
- ತಾಂತ್ರಿಕ, ಕೃಷಿ ಶಿಕ್ಷಣಕ್ಕೆ ಕನ್ನಡದಲ್ಲೇ ಪಠ್ಯಪುಸ್ತಕ

## ಸುದ್ದಿ 2 ನಿಮಿಷ

### ದೇಗುಲ ಜೀರ್ಣೋದ್ಧಾರಕ್ಕೆ ಭಿಕ್ಷುಕಿಯಿಂದ ₹1.83 ಲಕ್ಷ ದೇಣಿಗೆ

**ರಾಯಚೂರು:** ತಾಲ್ಲೂಕಿನ ರಾಯಚೂರು–ಜಂಬಲದಿನ್ನಿ ಮಾರ್ಗದಲ್ಲಿರುವ ಬಿಜನಗೇರಾ ಗ್ರಾಮದ ಹಳೆಯ ಆಂಜನೇಯ ದೇಗುಲದ ಜೀರ್ಣೋದ್ಧಾರಕ್ಕೆ 60 ವರ್ಷದ ಭಿಕ್ಷುಕಿ ರಂಗಮ್ಮ ಅವರು ₹1.83 ಲಕ್ಷ ದೇಣಿಗೆ ನೀಡಿದ್ದಾರೆ. 35 ವರ್ಷದ ಹಿಂದೆ ಆಂಧ್ರಪ್ರದೇಶದಿಂದ ಗ್ರಾಮಕ್ಕೆ ಬಂದಿರುವ ರಂಗಮ್ಮ ಅವರಿಗೆ ತೆಲುಗು ಬಿಟ್ಟರೆ ಬೇರೆ ಭಾಷೆ ಬರುವುದಿಲ್ಲ. ಮೊದಲು ವಾಸವಿದ್ದ ಹಳೆಯ ಮನೆ ತೆರವುಗೊಳಿಸುವಾಗ ಗೋಣಿ ಚೀಲದಲ್ಲಿ ಹಣ ಇದ್ದುದು ಕಂಡುಬಂದಿತ್ತು. ವಿಚಾರಿಸಿದಾಗ ದೇವಸ್ಥಾನಕ್ಕೆ ಕೊಡುವುದಾಗಿ ಹೇಳಿದ್ದರು ಎನ್ನಲಾಗಿದೆ.

‘ಗ್ರಾಮದ ಮುಖಂಡರೆಲ್ಲ ಸೇರಿ ರಂಗಮ್ಮ ಚೀಲದಲ್ಲಿ ಇಟ್ಟಿದ್ದ ಹಣ ಎಣಿಕೆ ಮಾಡಿದಾಗ ₹1.83 ಲಕ್ಷ ಇರುವುದು ಗೊತ್ತಾಗಿದೆ. ಗ್ರಾಮಸ್ಥರು ಭಿಕ್ಷುಕಿಗಾಗಿ ಚಿಕ್ಕದಾದ ಟಿನ್‌ಶೀಟ್ ಶೆಡ್ ಕಟ್ಟಿಸಿಕೊಟ್ಟಿದ್ದಾರೆ. ಅವರ ಒಪ್ಪಿಗೆಯಂತೆ ಉಳಿದ ಹಣವನ್ನು ದೇವಸ್ಥಾನದ ಜೀರ್ಣೋದ್ಧಾರಕ್ಕೆ ಬಳಸಿದ್ದೇವೆ’ ಎಂದು ಆಂಜನೇಯಸ್ವಾಮಿ ದೇವಸ್ಥಾನ ಸೇವಾ ಸಮಿತಿ ಕಾರ್ಯದರ್ಶಿ ಬಸವರಾಜ ಯಾದವ ತಿಳಿಸಿದರು.

‘ರಂಗಮ್ಮ ಭಿಕ್ಷೆಯಲ್ಲಿ ಸಿಕ್ಕ ಹಣವನ್ನು ಗೋಣಿ ಚೀಲದಲ್ಲಿ ಇಡುತ್ತಿದ್ದರು. ಹೀಗಾಗಿ ₹6 ಸಾವಿರ ಮೊತ್ತದ ನೋಟು ಹಾಳಾಗಿದ್ದವು. ಗ್ರಾಮಸ್ಥರು ಅವರ ಕೈಬಿಟ್ಟಿಲ್ಲ. ನಿತ್ಯ ಉಪಾಹಾರ, ಊಟ ಕೊಡುತ್ತಿದ್ದಾರೆ. ಆದರೆ, ಅವರು ಭಿಕ್ಷೆ ಬೇಡುವ ಕಾಯಕವನ್ನು ನಿಲ್ಲಿಸಿಲ್ಲ’ ಎಂದು ಹೇಳಿದರು.

‘ದೈವದ ಕಾರ್ಯಕ್ಕೆ ಕೈಜೋಡಿಸಿದ್ದ ರಂಗಮ್ಮನಿಗೆ ಗ್ರಾಮಸ್ಥರು ಸನ್ಮಾನಿಸಿದ್ದಾರೆ’ ಎಂದು ತಿಳಿಸಿದರು.

### ಆಶಾ ಕಾರ್ಯಕರ್ತೆಯರ ಅಹೋರಾತ್ರಿ ಧರಣಿ 12ರಿಂದ

**ಬೆಳಗಾವಿ:** ಆಶಾ ಕಾರ್ಯಕರ್ತೆಯರ ಗೌರವಧನ ಹೆಚ್ಚಿಸಬೇಕು ಎಂಬುದು ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಆಗಸ್ಟ್ 12 ರಿಂದ 14ರವರೆಗೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿ ಕಚೇರಿ ಎದುರು ಎಐಯುಟಿಯುಸಿ ಸಂಯೋಜಿತ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘಟನೆ ಅಹೋರಾತ್ರಿ ಧರಣಿ ನಡೆಸಲಿದೆ.

‘ಜನವರಿಯಲ್ಲಿ ಬೆಂಗಳೂರಿನಲ್ಲಿ ಅನಿರ್ದಿಷ್ಟಾವಧಿ ಧರಣಿ ನಡೆಸಿದ್ದಾಗ ಗೌರವಧನವನ್ನು ₹ 10 ಸಾವಿರಕ್ಕೆ ಏರಿಸುವುದಾಗಿ ಸರ್ಕಾರ ತಿಳಿಸಿತ್ತು. ಈವರೆಗೆ ಕ್ರಮ ತೆಗೆದುಕೊಂಡಿಲ್ಲ’ ಎಂದು ಸಂಘಟನೆ ಕಾರ್ಯದರ್ಶಿ ಡಿ.ನಾಗಲಕ್ಷ್ಮಿ ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

‘ಅಂಗನವಾಡಿ ಕಾರ್ಯಕರ್ತೆಯರು ಮತ್ತು ಬಿಸಿಯೂಟ ನೌಕರರ ಪ್ರೋತ್ಸಾಹಧನ ಹೆಚ್ಚಿಸಿದಂತೆ, ಆಶಾ ಕಾರ್ಯಕರ್ತೆಯರ ಪ್ರೋತ್ಸಾಹ ಧನವನ್ನೂ ₹ 1 ಸಾವಿರ ಹೆಚ್ಚಿಸಬೇಕು’ ಎಂದರು. ಸಂಘಟನೆಯ ಲಕ್ಷ್ಮಣ ಜಡಗನ್ನವರ, ಗೀತಾ ರಾಯಗೋಳ, ರೂಪಾ ಅಂಗಡಿ ಇದ್ದರು.

ಬೀಬಿ ಫಾತಿಮಾ ಸಂಘದ ಸದಸ್ಯೆಯರು

## ‘ಬೀಬಿ ಫಾತಿಮಾ ಸಂಘ’ಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

**ಹುಬ್ಬಳ್ಳಿ:** ಜೀವವೈವಿಧ್ಯ ಸಂರಕ್ಷಣಾ ಕ್ಷೇತ್ರದ ನೊಬೆಲ್ ಪುರಸ್ಕಾರ ಎಂದೇ ಪರಿಗಣಿಸಲ್ಪಡುವ ವಿಶ್ವಸಂಸ್ಥೆ ಅಭಿವೃದ್ಧಿ ಕಾರ್ಯಕ್ರಮ (ಯುಎನ್‌ಡಿಪಿ) ನೀಡುವ ‘ಈಕ್ವೇಟರ್ ಇನಿಷಿಯೇಟಿವ್’ ಪ್ರಶಸ್ತಿಗೆ ಧಾರವಾಡ ಜಿಲ್ಲೆ ಕುಂದಗೋಳ ತಾಲ್ಲೂಕಿನ ತೀರ್ಥ ಗ್ರಾಮದ ‘ಬೀಬಿ ಫಾತಿಮಾ ಮಹಿಳಾ ಸಂಘ’ ಪಾತ್ರವಾಗಿದೆ.

‘ನಿಸರ್ಗ ಆಧಾರಿತ ತಾಪಮಾನ ನಿಯಂತ್ರಣಕ್ಕೆ ಮಹಿಳೆ ಹಾಗೂ ಯುವಜನರ ನಾಯಕತ್ವ’ ವಿಷಯ ಆಧರಿಸಿ ನಡೆದ ಈ ವರ್ಷದ ಆಯ್ಕೆ ಪ್ರಕ್ರಿಯೆಯಲ್ಲಿ ಭಾರತದ ಬೀಬಿ ಫಾತಿಮಾ ಮಹಿಳಾ ಸಂಘ ಸೇರಿ 103 ದೇಶಗಳ 700 ಸ್ಪರ್ಧಿಗಳು ಪಾಲ್ಗೊಂಡಿದ್ದರು. ಪ್ರಶಸ್ತಿಯು ₹10,000 ಅಮೆರಿಕನ್ ಡಾಲರ್ (₹8.5 ಲಕ್ಷ) ನಗದು ಬಹುಮಾನ ಒಳಗೊಂಡಿದೆ.

‘ಸಹಜ ಸಮೃದ್ಧ’ ಬಳಗದ ಬೀಬಿ ಫಾತಿಮಾ ಮಹಿಳಾ ಸಂಘವು ತೀರ್ಥ ಗ್ರಾಮದಲ್ಲಿ 15 ಮಹಿಳೆಯರ ಶ್ರಮದಿಂದ 2018ರಲ್ಲಿ ಅಸ್ತಿತ್ವಕ್ಕೆ ಬಂತು. ಪರಿಸರ ಸ್ನೇಹಿ ಕೃಷಿಗೆ ಉತ್ತೇಜನ ನೀಡುತ್ತಿದ್ದು, 30 ಗ್ರಾಮಗಳಲ್ಲಿ ನೈಸರ್ಗಿಕ ವಿಧಾನದಲ್ಲಿ ಸಿರಿಧಾನ್ಯ ಆಧಾರಿತ ಮಿಶ್ರ ಬೆಳೆ ಬೇಸಾಯವನ್ನು ಮತ್ತೆ ಚಾಲ್ತಿಗೆ ತಂದಿದೆ.

‘ಪ್ರಶಸ್ತಿ ವಿಜೇತರ ವಿವರ ‘ಈಕ್ವೇಟರ್ ಇನಿಷಿಯೇಟಿವ್’ ವೆಬ್‌ಸೈಟ್‌ನಲ್ಲಿದೆ. ಅಕ್ಟೋಬರ್‌ನಲ್ಲಿ ವರ್ಚುವಲ್ ಮೂಲಕ ಪ್ರಶಸ್ತಿ ಪ್ರದಾನವಾಗಲಿದೆ’ ಎಂದು ಸಹಜ ಸಮೃದ್ಧ ಸಂಸ್ಥೆಯ ಜಿ. ಕೃಷ್ಣಪ್ರಸಾದ್ ತಿಳಿಸಿದರು.

‘ಪ್ರಶಸ್ತಿ ಸಿಕ್ಕಿರುವುದು ಖುಷಿ ತಂದಿದೆ. ಜವಾಬ್ದಾರಿಯೂ ಹೆಚ್ಚಿಸಿದೆ’ ಎಂದು ಸಂಘದ ಅಧ್ಯಕ್ಷೆ ಬೀಬಿಜಾನ್ ಮೌಲಾಸಾಬ್ ಹಳೇಮನಿ ತಿಳಿಸಿದರು.

### ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

| ಜಲಾಶಯ | ಗರಿಷ್ಠ ಮಟ್ಟ (ಅಡಿಗಳಲ್ಲಿ) | ಇಂದಿನ ಮಟ್ಟ | ಒಳಹರಿವು (ಕ್ಯೂಸೆಕ್‌ಗಳಲ್ಲಿ) | ಹೊರಹರಿವು (ಕ್ಯೂಸೆಕ್‌ಗಳಲ್ಲಿ) |
|---|---|---|---|---|
| ಕೆಆರ್‌ಎಸ್* | 124.80 | 124.22 | 7,817 | 6,477 |
| ಹಾರಂಗಿ | 2,859 | 2,855.79 | 1,310 | 2,500 |
| ಕಬಿನಿ | 2,284.00 | 2,281.92 | 5,256 | 5,350 |
| ಹೇಮಾವತಿ | 2,922 | 2,920 | 8,141 | 8,083 |
| ಲಿಂಗನಮಕ್ಕಿ | 1,819 | 1,811.85 | 7,733 | 7,558 |
| ಸೂಪಾ (ಮೀ) | 564 | 551.62 | 3,694.16 | 2,481.89 |
| ಮಾಣಿ | 595 | 590.77 | 903 | 708 |
| ತುಂಗಭದ್ರಾ | 1,633 | 1,626.06 | 33,000 | 32,488 |
| ಮಲಪ್ರಭಾ | 2,079.5 | 2,075.80 | 1,687 | 194 |
| ಘಟಪ್ರಭಾ | 2175 | 2,172.16 | 3,476 | 2,844 |
| ಭದ್ರಾ * | 186 | 183 | 7,513 | 164 |
| ಆಲಮಟ್ಟಿ (ಮೀ) | 519.6 | 519.48 | 45,455 | 14,170 |
| ನಾರಾಯಣಪುರ (ಮೀ) | 492.25 | 492.23 | 55,000 | 52,760 |

* ನೆಲಮಟ್ಟದಿಂದ

## ವರದಿ ಅಂಗೀಕಾರದ ಬಗ್ಗೆ ಒಲವು: ಇದೇ 16ರಂದು ವಿಶೇಷ ಸಂಪುಟ ಸಭೆ
# ಒಳ ಮೀಸಲು ವರದಿ: ಸಂಪುಟ ಒಮ್ಮತ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪರಿಶಿಷ್ಟ ಜಾತಿಗಳಲ್ಲಿ ಒಳಮೀಸಲಾತಿ ಕುರಿತ ನ್ಯಾಯಮೂರ್ತಿ ಎಚ್‌.ಎನ್‌.ನಾಗಮೋಹನ್ ದಾಸ್ ನೇತೃತ್ವದ ಏಕ ಸದಸ್ಯ ಆಯೋಗ ಸಲ್ಲಿಸಿದ ವರದಿಯ ಬಗ್ಗೆ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಒಮ್ಮತ ವ್ಯಕ್ತವಾಗಿದ್ದು, ಯಾರೊಬ್ಬರೂ ವಿರೋಧ ವ್ಯಕ್ತಪಡಿಸಿಲ್ಲ ಎಂದು ಗೊತ್ತಾಗಿದೆ.

‘ಸಚಿವ ಸಂಪುಟ ಸಭೆಯಲ್ಲಿ ವರದಿಯನ್ನು ಮಂಡಿಸಲಾಯಿತು. ಆಯೋಗದ ವರದಿಯ ಬಗ್ಗೆ ಎಲ್ಲ ಸಚಿವರೂ ಸಹಮತ ಹೊಂದಿದ್ದಾರೆ. ಸಣ್ಣ–ಪುಟ್ಟ ಲೋಪಗಳು ಇದ್ದರೆ ಸರಿಪಡಿಸಿಕೊಂಡು ಜಾರಿ ಮಾಡಲು ಎಲ್ಲರೂ ಒಪ್ಪಿದರು’ ಎಂದು ಮೂಲಗಳು ಹೇಳಿವೆ.

‘ಆದಿ ದ್ರಾವಿಡ, ಆದಿ ಕರ್ನಾಟಕ ಎಂದು ಪ್ರತ್ಯೇಕವಾಗಿ ಗುರುತಿಸಿ ಶೇ 1ರಷ್ಟು ಮೀಸಲಾತಿ ನೀಡುವ ಅಗತ್ಯ ಇರಲಿಲ್ಲ. ಈ ಎರಡೂ ಉಪ ಜಾತಿಗಳು ಬಲಗೈ ಅಥವಾ ಎಡಗೈ ಪಂಗಡದಲ್ಲೇ ಬರುತ್ತವೆ. ಅದನ್ನು ಪರಿಷ್ಕರಿಸುವುದು ಸೂಕ್ತ ಎಂದು ಹಿರಿಯ ಸಚಿವರೊಬ್ಬರು ಅಭಿಪ್ರಾಯ ವ್ಯಕ್ತಪಡಿಸಿದರು’ ಎಂದು ಮೂಲಗಳು ತಿಳಿಸಿವೆ.

‘ಸಚಿವ ಸಂಪುಟದಲ್ಲಿ ವರದಿಯನ್ನು ಮಂಡಿಸಿಯಾಗಿದೆ. ಇಂದೇ ಅಂಗೀಕರಿಸಿದರೆ ಒಳ್ಳೆಯದು ಎಂದು ಮತ್ತೊಬ್ಬ ಹಿರಿಯ ಸಚಿವರು ಹೇಳಿದರು. ವರದಿ ಸುದೀರ್ಘವಾಗಿದ್ದು, ಎಲ್ಲರೂ ಒಂದು ಸಲ ಓದಿಕೊಂಡು ಬಂದರೆ ಸೂಕ್ತ ಎಂಬುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ ನೀಡಿದರು’ ಎಂದು ಗೊತ್ತಾಗಿದೆ.

‘ಸರ್ಕಾರ ರಚಿಸಿದ ಆಯೋಗವು ನೀಡಿದ ವರದಿಯನ್ನು ಒಂದೋ ಯಥಾವತ್ತಾಗಿ ಅಂಗೀಕರಿಸಬೇಕು ಅಥವಾ ಸಣ್ಣಪುಟ್ಟ ಪರಿಷ್ಕರಣೆಯೊಂದಿಗೆ ಪುರಸ್ಕರಿಸಬೇಕು, ಇಲ್ಲವೇ ತಿರಸ್ಕರಿಸಬೇಕು. ಅದು ಬಿಟ್ಟರೆ ಬೇರೆ ದಾರಿ ಇಲ್ಲ’ ಎಂದು ಸಿದ್ದರಾಮಯ್ಯ ತಮ್ಮ ಸಹೋದ್ಯೋಗಿಗಳಿಗೆ ತಿಳಿಸಿದರು. ‘ನಮ್ಮ ಸರ್ಕಾರವೇ ಆಯೋಗ ರಚಿಸಿ ವರದಿ ಪಡೆದಿರುವಾಗ, ತಿರಸ್ಕರಿಸುವುದು ಸರಿಯಲ್ಲ ಎಂದು ಬಹುತೇಕ ಸಚಿವರು ಅಭಿಪ್ರಾಯಪಟ್ಟರು’ ಎಂದು ಗೊತ್ತಾಗಿದೆ.

‘ವಿಧಾನಸಭೆ ಚುನಾವಣೆ ಪೂರ್ವದಲ್ಲಿ ಚಿತ್ರದುರ್ಗದಲ್ಲಿ ನಡೆದ ಸಮಾವೇಶದಲ್ಲಿ ಒಳಮೀಸಲಾತಿ ಜಾರಿಯ ಬಗ್ಗೆ ವಾಗ್ದಾನ ಮಾಡಿದ್ದು, ಪ್ರಣಾಳಿಕೆಯಲ್ಲೂ ಸೇರಿಸಿದ್ದೇವೆ. ಹೀಗಿರುವಾಗ ಜಾರಿ ಮಾಡಲೇಬೇಕು’ ಎಂದು ಪರಿಶಿಷ್ಟ ಜಾತಿಯನ್ನು ಪ್ರತಿನಿಧಿಸುವ ಎಲ್ಲ ಸಚಿವರು ಪ್ರತಿಪಾದಿಸಿದರು’ ಎಂದು ಮೂಲಗಳು ತಿಳಿಸಿವೆ.

‘ಆಗ ಮಧ್ಯ ಪ್ರವೇಶಿಸಿದ ಕಾನೂನು ಸಚಿವ ಎಚ್‌.ಕೆ.ಪಾಟೀಲ ಅವರು, ಎಲ್ಲರ ಸಹಮತ ಇರುವುದರಿಂದ ಎರಡು ದಿನಗಳಲ್ಲೇ ಮತ್ತೊಂದು ಸಭೆ ಕರೆದು ನಿರ್ಣಯ ತೆಗೆದುಕೊಳ್ಳಬಹುದು. ಇಲ್ಲವಾದರೆ ತಪ್ಪು ಸಂದೇಶ ಹೋಗುತ್ತದೆ’ ಎಂದು ಹೇಳಿದರು. ಆಗ ಮಾತನಾಡಿದ ಡಿ.ಕೆ. ಶಿವಕುಮಾರ್, ‘ವರದಿಯನ್ನು ತಿರಸ್ಕರಿಸುವುದು ಬೇಡ. ಎಲ್ಲ ಸಮುದಾಯಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಜಾರಿ ಮಾಡೋಣ ಎಂದು ಸಲಹೆ ನೀಡಿದರು’ ಎಂದು ಮೂಲಗಳು ಹೇಳಿವೆ. ‘ಆಗಸ್ಟ್ 16ರಂದು ವಿಶೇಷ ಸಚಿವ ಸಂಪುಟ ಸಭೆ ನಡೆಸಿ ಚರ್ಚೆ ಮಾಡೋಣ ಎಂದು ಮುಖ್ಯಮಂತ್ರಿ ಹೇಳಿದರು’ ಎಂದು ಮೂಲಗಳು ಹೇಳಿವೆ.

### ಪರಿಶಿಷ್ಟ ಸಮುದಾಯದ ಸಚಿವರ ಸಭೆ

‘ಆ.16ಕ್ಕೂ ಮೊದಲೇ ಗೃಹ ಸಚಿವ ಜಿ.ಪರಮೇಶ್ವರ ಅವರ ನಿವಾಸದಲ್ಲಿ ಪರಿಶಿಷ್ಟ ಸಮುದಾಯದ ಸಚಿವರ ಸಭೆ ನಡೆಯಲಿದೆ. ವರದಿ ಶಿಫಾರಸಿನ ಜಾರಿಯ ಬಗ್ಗೆ ಎಡಗೈ ಮತ್ತು ಬಲಗೈ ಸಮುದಾಯದ ಸಚಿವರು ಸೇರಿ ಒಮ್ಮತದ ತೀರ್ಮಾನ ತೆಗೆದುಕೊಳ್ಳಲಿದ್ದೇವೆ’ ಎಂದು ಹಿರಿಯ ಸಚಿವರೊಬ್ಬರು ತಿಳಿಸಿದರು.

## ವಿಜಯಪುರ, ಸವದತ್ತಿ: ತುಂಬಿ ಹರಿದ ಹಳ್ಳ

ಪ್ರಜಾವಾಣಿ ವಾರ್ತೆ

**ಹುಬ್ಬಳ್ಳಿ:** ವಿಜಯಪುರ, ಬಾಗಲಕೋಟೆ, ಬೆಳಗಾವಿ ಜಿಲ್ಲೆಯ ವಿವಿಧೆಡೆ ಶುಕ್ರವಾರ ಮಳೆಯಾಯಿತು.

ತಾಳಿಕೋಟೆಯಿಂದ ವಿಜಯಪುರಕ್ಕೆ ಹೋಗುವ ಹೆದ್ದಾರಿಯಲ್ಲಿ, ಡೋಣಿ ನದಿ ಸೇತುವೆ ಮೇಲಿನ ಪ್ರವಾಹ ಹೆಚ್ಚಿದೆ. ಮುದ್ದೇಬಿಹಾಳ, ಬಸವನ ಬಾಗೇವಾಡಿ, ವಿಜಯಪುರ, ಬಾಗಲಕೋಟೆ, ಹುಬ್ಬಳ್ಳಿ, ಹುಣಸಗಿ, ಸುರಪುರ, ಕಲಬುರ್ಗಿ, ಬೀದರ್ ಮೊದಲಾದ ಕಡೆ ಹೋಗುವ ಮಾರ್ಗಗಳು ಬಂದ್ ಆಗಿವೆ.

ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯಲ್ಲಿ ಸತತ ಮಳೆಯಾಗುತ್ತಿದ್ದು, ಸೀನಾ ನದಿ ತುಂಬಿ ಹರಿಯುತ್ತಿದೆ.

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಉಗರಗೋಳ ಗ್ರಾಮದಲ್ಲಿ ಶುಕ್ರವಾರ ಉಗರಗೋಳ–ಯಲ್ಲಮ್ಮನ ಗುಡ್ಡ ಮಾರ್ಗದಲ್ಲಿನ ಹಳ್ಳ ಉಕ್ಕಿ ಹರಿಯಿತು. ಶನಿವಾರ (ಆಗಸ್ಟ್ 9) ಯಲ್ಲಮ್ಮನಗುಡ್ಡದಲ್ಲಿ ನೂಲು ಹುಣ್ಣಿಮೆ ಪ್ರಯುಕ್ತ ಜಾತ್ರೆ ನಡೆಯಲಿದೆ.

**ಚಿಂಚೋಳಿ ತಗ್ಗು ಪ್ರದೇಶಗಳಿಗೆ ನೀರು:** ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ನಾಗರಾಳ ಜಲಾಶಯದಿಂದ ಗುರುವಾರ 2,500 ಕ್ಯೂಸೆಕ್ ನೀರು ನದಿಗೆ ಬಿಟ್ಟಿದ್ದು, ನದಿ ಪಾತ್ರದ ತಾಜಲಾಪುರ ಸೇತುವೆ ಮುಳುಗಿ ಸಂಪರ್ಕ ಕಡಿತಗೊಂಡಿತ್ತು.

ಅಫಜಲಪುರ ತಾಲ್ಲೂಕಿನಲ್ಲಿ ಶುಕ್ರವಾರ ಧಾರಾಕಾರ ಮಳೆಯಾಗಿದೆ. ಸಿದ್ದನೂರು ಗ್ರಾಮದಿಂದ ರೇವೂರು(ಬಿ) ಗ್ರಾಮಕ್ಕೆ ಸಂಚರಿಸುವ ರಸ್ತೆ ಮೇಲೆ ನೀರು ಹರಿದು ಸಂಚಾರ ವ್ಯತ್ಯಯವಾಗಿತ್ತು.

ಕೊಪ್ಪಳ ಜಿಲ್ಲೆಯಲ್ಲಿ ಬಿರುಸಿನ ಮಳೆಯಾಗಿದೆ. ಕೃಷಿ ಚಟುವಟಿಕೆಗೆ ಅನುಕೂಲವಾಗಿದೆ. ಇದರೊಂದಿಗೆ ಯೂರಿಯಾ ರಸಗೊಬ್ಬರಕ್ಕೆ ಬೇಡಿಕೆಯೂ ಹೆಚ್ಚಿದೆ.

ಉಗರಗೋಳ–ಯಲ್ಲಮ್ಮನಗುಡ್ಡ ಮಾರ್ಗದಲ್ಲಿ ಸಂಪರ್ಕ ಕಡಿತಗೊಂಡಿದೆ

### ಸಿಡಿಲು: ತಮ್ಮ ಸಾವು, ಅಣ್ಣನಿಗೆ ಗಾಯ

**ಹುಣಸಗಿ (ಯಾದಗಿರಿ ಜಿಲ್ಲೆ):** ತಾಲ್ಲೂಕಿನ ಮದಲಿಂಗನಾಳ ಗ್ರಾಮದಲ್ಲಿ ಶುಕ್ರವಾರ ಇಬ್ಬರು ಸಹೋದರರಿಗೆ ಸಿಡಿಲು ಬಡಿದಿದ್ದು, ತಮ್ಮ ಮೃತಪಟ್ಟಿದ್ದಾರೆ.

‘ಪರಮಣ್ಣ ಸೋಮನಿಂಗಪ್ಪ ಕಕ್ಕೇರಿ (28) ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅಣ್ಣ ಹಣಮಂತ ಸೋಮನಿಂಗಪ್ಪ ಆಸ್ಪತ್ರೆಗೆ ದಾಖಲಾಗಿದ್ದಾರೆ’ ಎಂದು ತಹಶೀಲ್ದಾರ್ ಎಂ.ಬಸವರಾಜ್ ತಿಳಿಸಿದ್ದಾರೆ.

## ಕಟಾವಿಗೆ ಮೊದಲೇ ನೋಂದಣಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪ್ರಸಕ್ತ ಹಂಗಾಮಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ(ಎಂಎಸ್‌ಪಿ) ರಾಗಿ, ಜೋಳ, ಭತ್ತ, ಸಿರಿಧಾನ್ಯ ಸೇರಿ 15 ಲಕ್ಷ ಟನ್ ಆಹಾರ ಧಾನ್ಯಗಳನ್ನು ಖರೀದಿಸಲಾಗುತ್ತಿದ್ದು, ಅದಕ್ಕಾಗಿ ₹8,000 ಕೋಟಿ ವೆಚ್ಚ ಮಾಡಲಾಗುತ್ತಿದೆ ಎಂದು ಕೃಷಿ ಸಚಿವ ಎನ್‌.ಚಲುವರಾಯಸ್ವಾಮಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ‘ಪಡಿತರ ವಿತರಣೆಗಾಗಿ 6 ಲಕ್ಷ ಟನ್ ರಾಗಿ ಖರೀದಿಸಲಾಗುತ್ತಿದೆ. ಒಂದು ಎಕರೆಗೆ 10 ಕ್ವಿಂಟಲ್‌ನಂತೆ ಒಬ್ಬ ರೈತರಿಂದ ಗರಿಷ್ಠ 50 ಕ್ವಿಂಟಲ್ ಖರೀದಿಸಲಾಗುವುದು. ಕ್ವಿಂಟಲ್‌ಗೆ ₹4,886 ನಿಗದಿ ಮಾಡಲಾಗಿದೆ. ರಾಜ್ಯದಲ್ಲಿ ರಾಗಿ ಬೆಳೆ ಉತ್ಪಾದನೆ 13 ಲಕ್ಷ ಟನ್ ಇದ್ದು, ಶೇ 50ರಷ್ಟನ್ನು ಬೆಂಬಲ ಬೆಲೆ ಅಡಿ ಖರೀದಿಸಲಾಗುವುದು. ತೆಲಂಗಾಣ ಸೇರಿದಂತೆ ಹೊರ ರಾಜ್ಯಗಳಿಗೂ ನೀಡಲಾಗುವುದು. ಇದೇ ಮೊದಲ ಬಾರಿ ಕಟಾವಿಗೂ ಮೊದಲೇ ನೋಂದಣಿ ಆರಂಭವಾಗಿದ್ದು, ರೈತರಿಗೆ ಆರಂಭದಲ್ಲೇ ಮಾರುಕಟ್ಟೆ ಖಾತರಿ ಸಿಗಲಿದೆ. ಮಧ್ಯವರ್ತಿಗಳ ಹಾವಳಿಗೂ ಕಡಿವಾಣ ಬೀಳಲಿದೆ’ ಎಂದು ಮಾಹಿತಿ ನೀಡಿದರು.

ರಸಗೊಬ್ಬರ ಕೊರತೆಗೆ ಕೇಂದ್ರ ಸರ್ಕಾರದ ಪೂರೈಕೆ ವ್ಯತ್ಯಯವೇ ಕಾರಣ. ಬಿಜೆಪಿ ನಾಯಕರ ಆರೋಪಕ್ಕೆ ದಾಖಲೆಗಳ ಸಮೇತ ಉತ್ತರ ನೀಡುತ್ತೇನೆ
**ಎನ್‌. ಚಲುವರಾಯಸ್ವಾಮಿ**
ಕೃಷಿ ಸಚಿವ

ರಾಗಿಗೆ ನಿಗದಿ ಮಾಡಿದ ದರದಲ್ಲೇ ನವಣೆ, ಹಾರಕ ಸೇರಿದಂತೆ ಸಿರಿಧಾನ್ಯಗಳನ್ನು ಖರೀದಿಸಲಾಗುವುದು. ಪ್ರತಿ ಕ್ವಿಂಟಲ್‌ಗೆ ಹೆಚ್ಚುವರಿ ₹114 ಪ್ರೋತ್ಸಾಹಧನವನ್ನೂ ನೀಡಲಾಗುವುದು ಎಂದು ಹೇಳಿದರು. ಮಧ್ಯವರ್ತಿಗಳ ಮಧ್ಯಪ್ರವೇಶ ತಪ್ಪಿಸಿ, ರೈತರಿಗೆ ಲಾಭ ಸಿಗುವಂತೆ ಮಾಡಲು ಬೆಳೆಗಳ ಡಿಜಿಟಲ್ ಸಮೀಕ್ಷೆ ನಡೆಸಲಾಗುವುದು. ರೈತರ ಎಷ್ಟು ಜಮೀನಿನಲ್ಲಿ ಯಾವ ಯಾವ ಬೆಳೆ ಬೆಳೆದಿದ್ದಾರೆ ಎಂಬ ಮಾಹಿತಿಯನ್ನೂ ಬಳಸಿಕೊಳ್ಳಲಾಗುವುದು. ಖರೀದಿ ಹಣ ತಕ್ಷಣವೇ ರೈತರಿಗೆ ಜಮೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಜೂನ್‌ವರೆಗೆ ಖರೀದಿಸಿದ ಬೆಳೆಗಳ ಬಾಕಿ ಮೊತ್ತ ₹765 ಕೋಟಿ ಪಾವತಿಸಲಾಗಿದೆ ಎಂದರು.

## ₹97 ಲಕ್ಷ ಮೌಲ್ಯದ ಅವಧಿ ಮೀರಿದ ಔಷಧಿ ಪತ್ತೆ

ಪಾಟೀಲ

**ಬೆಳಗಾವಿ:** ‘ಜಿಲ್ಲೆಯ ಗೋಕಾಕ್‌ನ ಸರ್ಕಾರಿ ಔಷಧ ಉಗ್ರಾಣದಲ್ಲಿ ₹97 ಲಕ್ಷ ಮೌಲ್ಯದ ಅವಧಿ ಮುಗಿದ ಔಷಧಿಗಳು ಪತ್ತೆಯಾಗಿವೆ. ಇದನ್ನೇ ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಗಳಿಗೆ ಪೂರೈಸಲಾಗುತ್ತಿದೆ. ಇದು ದೊಡ್ಡ ಅಪರಾಧ. ಇಲಾಖೆ ಅಧಿಕಾರಿಗಳು ಸೇರಿ ಎಲ್ಲರನ್ನೂ ಹೊಣೆ ಮಾಡುತ್ತೇವೆ. ನೋಟಿಸ್ ನೀಡಿ, ಪ್ರಕರಣ ದಾಖಲಿಸುತ್ತೇವೆ’ ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಹೇಳಿದರು.

‘ಉಗ್ರಾಣಕ್ಕೆ ಬರುವ ಮುನ್ನವೇ ಅರ್ಧದಷ್ಟು ಔಷಧಿಗಳ ಅವಧಿ ಮುಗಿದಿದೆ. ಆದರೂ ಖರೀದಿಸಿ, ಸಂಗ್ರಹಿಸಿದ್ದಾರೆ. ಅವುಗಳನ್ನೇ ಪೂರೈಸುತ್ತಿರುವ ರೋಗಿಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಬಹುದು. ಇದರಲ್ಲಿ ದೊಡ್ಡ–ಪ್ರಮಾಣದ ಭ್ರಷ್ಟಾಚಾರ ನಡೆದಿದೆ. ರಾಜ್ಯದ ಎಲ್ಲ ಔಷಧಿ ಉಗ್ರಾಣಗಳನ್ನೂ ಪರಿಶೀಲಿಸುತ್ತೇವೆ’ ಎಂದು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

# ಬಾಲಕಿ ಕೊಲೆ; ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

**ಹೊಸಪೇಟೆ (ವಿಜಯನಗರ):** 17 ವರ್ಷದ ಬಾಲಕಿಯನ್ನು ಪ್ರೀತಿಸಿ, ಮದುವೆಯಾಗಿ, ಬಳಿಕ ಆಕೆಯನ್ನು ಕೊಲೆ ಮಾಡಿ ಹೂತು ಹಾಕಿದ ಘಟನೆ ಇಲ್ಲಿ ನಡೆದಿದೆ.

‘ಕೃತ್ಯದ ಸಂಬಂಧ ಆರೋಪಿಗಳಾದ ಮಂಜುನಾಥ, ಆತನ ತಾಯಿ ಲಕ್ಷ್ಮಿ, ಸ್ನೇಹಿತರಾದ ತರುಣ್ ಮತ್ತು ಅಕ್ಬರ್ ಅವರನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ನೇಕಾರ ಕಾಲೊನಿ ನಿವಾಸಿ ಮಂಜುನಾಥ, 4 ತಿಂಗಳ ಹಿಂದೆ ಬಾಲಕಿಯನ್ನು ವಿವಾಹವಾಗಿದ್ದ. ಬಳಿಕ ಈತ ಮತ್ತು ಆತನ ತಾಯಿ ಲಕ್ಷ್ಮಿ, ಬಾಲಕಿಗೆ ಕಿರುಕುಳ ನೀಡತೊಡಗಿದರು. ಎರಡೂವರೆ ತಿಂಗಳ ಹಿಂದೆ ಬಾಲಕಿ ಕೊಂದ ಮಂಜುನಾಥ, ಬೈಕ್‌ನಲ್ಲಿ ಶವ ಸಾಗಿಸಿ ಕೊಪ್ಪಳ ಜಿಲ್ಲೆಯ ಮುನಿರಾಬಾದ್ ಸೇತುವೆ ಬಳಿ ಹೂತಿದ್ದ. ಸ್ನೇಹಿತರಾದ ತರುಣ್, ಅಕ್ಬರ್ ನೆರವಾಗಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಒಬ್ಬ ಆರೋಪಿ ಪ್ರಾಪಪ್ರಜ್ಞೆಯಿಂದ ಎರಡು ದಿನದ ಹಿಂದೆ ಬಾಲಕಿಯ ತಂದೆಗೆ ಕೊಲೆಯ ವಿಷಯ ತಿಳಿಸಿದಾಗ, ಕೃತ್ಯ ಬಯಲಾಯಿತು. ಹೂತಿದ್ದ ಸ್ಥಳ ಅಗೆದಾಗ, ಕೊಳೆತ ಸ್ಥಿತಿಯಲ್ಲಿ ಶವ ಪತ್ತೆಯಾಗಿದೆ. ಶವದ ನಿಖರ ಗುರುತಿಸುವಿಕೆಗೆ ಡಿಎನ್‌ಎ ಪರೀಕ್ಷೆ ನಡೆಸಲಾಗುವುದು’ ಎಂದು ತಿಳಿಸಿದ್ದಾರೆ.

ಮಂಜುನಾಥ

ಅಕ್ಬರ್

ತರುಣ್

# ವಂಚನೆ: ₹ 9.5 ಕೋಟಿ ಆಸ್ತಿ ಜಪ್ತಿ

ಪ್ರಜಾವಾಣಿ ವಾರ್ತೆ

**ಮಂಗಳೂರು:** ಬ್ಯಾಂಕ್‌ಗಳಿಂದ ಸಾಲ ಕೊಡಿಸುವ ಆಮಿಷ ಒಡ್ಡಿ ಕಮಿಷನ್ ರೂಪದಲ್ಲಿ ಉದ್ಯಮಿಗಳಿಂದ ಕೋಟ್ಯಂತರ ರೂಪಾಯಿ ಪಡೆದು ವಂಚಿಸಿದ್ದ ನಗರದ ರೋಷನ್ ಸಲ್ಡಾನಗೆ ಸಂಬಂಧಿಸಿದ ಪ್ರಕರಣಗಳಲ್ಲಿ 5 ಕಡೆ (ಇಡಿ) ಅಧಿಕಾರಿಗಳು ಶೋಧ ನಡೆಸಿದ್ದಾರೆ.

‘₹ 5.75 ಕೋಟಿ ಮೌಲ್ಯದ ಮೀನುಗಾರಿಕೆಯ ಬೋಟ್‌ಗಳು ಸೇರಿದಂತೆ ₹ 9.5 ಕೋಟಿ ಮೊತ್ತದ ಆಸ್ತಿಯನ್ನು ಮುಟ್ಟುಗೋಲು ಹಾಕಲಾಗಿದೆ’ ಎಂದು ಜಾರಿ ನಿರ್ದೇಶನಾಲಯದ (ಇ.ಡಿ) ಮಂಗಳೂರು ಉಪವಲಯ ಕಚೇರಿಯ ಪ್ರಕಟಣೆ ತಿಳಿಸಿದೆ.

ಕಂಕನಾಡಿ ಬೊಲ್ಲಗುಡ್ಡದ ರೋಷನ್ ಸಲ್ಡಾನ ವಿರುದ್ಧ ಮಂಗಳೂರು ಮತ್ತು ಚಿತ್ರದುರ್ಗದಲ್ಲಿ ದಾಖಲಾಗಿದ್ದ ದೂರುಗಳ ಆಧಾರದಲ್ಲಿ ಜುಲೈ 17ರಂದು ಆತನ ವಿಲಾಸಿ ಬಂಗಲೆ ಮೇಲೆ ದಾಳಿ ನಡೆಸಿದ ನಗರದ ಸೆನ್ ಠಾಣೆ ಪೊಲೀಸರು ಆತನನ್ನು ಬಂಧಿಸಿದ್ದರು.

ರೋಷನ್

‘ಕಡಿಮೆ ಬಡ್ಡಿಗೆ ಕೋಟ್ಯಂತರ ಸಾಲ ಕೊಡಿಸುವುದಾಗಿ ಹೇಳಿ ಕಮಿಷನ್ ಮತ್ತು ಸ್ಟ್ಯಾಂಪ್ ಡ್ಯೂಟಿ ನೆಪದಲ್ಲಿ ಹಲವು ಉದ್ಯಮಿಗಳಿಂದ ಅಂದಾಜು ₹ 39 ಕೋಟಿ ಮೊತ್ತವನ್ನು ರೋಷನ್, ಆತನ ಪತ್ನಿ ಡಾಫ್ನಿ ನೀತು ಡಿಸೋಜ ಮತ್ತು ಇತರರು ಪಡೆದು ವಂಚಿಸಿದ್ದಾರೆ.

‘ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆ 2002ರಡಿ ಶೋಧ ನಡೆಸಲಾಗಿತ್ತು. ಈ ಸಂದರ್ಭದಲ್ಲಿ ದಿನಚರಿ ಪುಸ್ತಕ, ಕಾಗದ ಪತ್ರಗಳು ಸೇರಿದಂತೆ ಮಹತ್ವದ ದಾಖಲೆಗಳು ಲಭಿಸಿವೆ. ಬ್ಯಾಂಕ್ ಖಾತೆಯಲ್ಲಿ ₹ 3.75 ಕೋಟಿ ಮೊತ್ತ ಪತ್ತೆಯಾಗಿತ್ತು. ₹ 5.75 ಕೋಟಿ ಮೊತ್ತದಲ್ಲಿ ಪತ್ನಿಯ ಹೆಸರಿನಲ್ಲಿ 5 ಮೀನುಗಾರಿಕಾ ಬೋಟ್‌ಗಳನ್ನು ಖರೀದಿಸಿರುವುದೂ ಪತ್ತೆಯಾಗಿದೆ. ಈ ಬೋಟ್‌ಗಳನ್ನು ಮುಟ್ಟುಗೋಲು ಹಾಕಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

‘ದಾಳಿ ನಡೆಸಿದ್ದಾಗ, ‘ಬೆಂಗಳೂರು, ವಿಜಯಪುರ, ತುಮಕೂರು, ಬಾಗಲಕೋಟೆ, ಕೋಲ್ಕತ್ತ, ಗೋವಾ, ಪುಣೆ, ಲಖನೌ ಮುಂತಾದೆಡೆ ವಂಚಿಸಿದ್ದಾನೆ’ ಎಂದು ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ ತಿಳಿಸಿದ್ದರು. ರೋಷನ್ ನ್ಯಾಯಾಂಗ ಬಂಧನದಲ್ಲಿದ್ದಾನೆ.

## ತ್ರಿಭಾಷ ಸೂತ್ರ ಪಾಲಿಸುವುದಿಲ್ಲ: ಸ್ಟಾಲಿನ್

**ಚೆನ್ನೈ (ಪಿಟಿಐ):** ಯಾವುದೇ ಕಾರಣಕ್ಕೂ ತಮಿಳುನಾಡು ತ್ರಿಭಾಷಾ ಸೂತ್ರ ಪಾಲಿಸುವುದಿಲ್ಲ. ದ್ವಿಭಾಷಾ ಸೂತ್ರವನ್ನೇ ಅನುಸರಿಸಲಾಗುವುದು ಎಂದು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಶುಕ್ರವಾರ ಪುನರುಚ್ಚರಿಸಿದ್ದಾರೆ.

ಕೇಂದ್ರ ಸರ್ಕಾರದ ರಾಷ್ಟ್ರೀಯ ಶಿಕ್ಷಣ ನೀತಿಗೆ (ಎನ್‌ಇಪಿ) ಪರ್ಯಾಯವಾಗಿ ತಮಿಳುನಾಡು ಸರ್ಕಾರ ರೂಪಿಸಿರುವ ಶಾಲಾ ಶಿಕ್ಷಣ ನೀತಿ–2025 (ಎಸ್‌ಇಪಿ) ಅನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ‘ಮಾತೃಭಾಷೆ ತಮಿಳು ನಮ್ಮ ಅಸ್ಮಿತೆ, ನಮ್ಮ ಹೆಮ್ಮೆ. ಎನ್‌ಇಪಿ ಮೂಲಕ ಹಿಂದಿ ಹೇರಿಕೆ ಮಾಡುವ ಪ್ರಯತ್ನಗಳಿಗೆ ನಾವು ಮಣಿಯುವುದಿಲ್ಲ’ ಎಂದು ಹೇಳಿದರು.

‘ತಮಿಳುನಾಡಿನ ಸಂಸ್ಕೃತಿ, ಭಾಷೆ ಮತ್ತು ಸಾಮಾಜಿಕ ಪರಂಪರೆ ಶಿಕ್ಷಣ ನೀತಿಯಲ್ಲಿ ಅಡಗಿದೆ. ತಮಿಳುನಾಡು ಎಲ್ಲದರಲ್ಲೂ ವಿಶಿಷ್ಟತೆಯನ್ನು ಹೊಂದಿದೆ. ನಮ್ಮಲ್ಲಿ ಪ್ರಗತಿಪರ ಆಲೋಚನೆಗಳಿವೆ. ಇದೆಲ್ಲದರ ಆಧಾರದ ಮೇಲೆ ಶಿಕ್ಷಣ ನೀತಿ ರಚಿಸಲಾಗಿದೆ’ ಎಂದರು.

ಈ ಮೂಲಕ ತಮಿಳುನಾಡು ದೆಹಲಿ ಹೈಕೋರ್ಟ್‌ನ ನಿವೃತ್ತ ಮುಖ್ಯನ್ಯಾಯಮೂರ್ತಿ ಡಿ.ಮುರುಗೇಶನ್ ಅವರ ನೇತೃತ್ವದ 14 ಸದಸ್ಯರ ಸಮಿತಿಯ ಶಿಫಾರಸು ಆಧರಿಸಿ ನೂತನ ಶಿಕ್ಷಣ ನೀತಿ ಜಾರಿಗೆ ತಂದ ಮೊದಲ ರಾಜ್ಯ ಎನಿಸಿಕೊಂಡಿದೆ.

## ಮೂರು ದಿನಗಳ ‘ಬುಕ್ ಬ್ರಹ್ಮ’ ಸಾಹಿತ್ಯ ಉತ್ಸವಕ್ಕೆ ಚಾಲನೆ
# ಭಾಷೆಗಳ ಬೆಸುಗೆಗೆ ಸಾಹಿತ್ಯದ ಬಂಧ

• ವರುಣ ಹೆಗಡೆ

**ಬೆಂಗಳೂರು:** ಒಂದೆಡೆ ಗಹನವಾದ ಸಾಹಿತ್ಯ ಚರ್ಚೆಗಳು ವಿವಿಧ ಭಾಷೆಗಳ ಬೆಸುಗೆಗೆ ಕಾರಣವಾದರೆ, ಇನ್ನೊಂದೆಡೆ ಮಕ್ಕಳ ಕಲರವ ಪಾಲಕರ ಸಂಭ್ರಮವನ್ನು ಇಮ್ಮಡಿಸಿತ್ತು. ಪುಸ್ತಕದ ಜೋಳಿಗೆ ಹೊತ್ತ ಸಾಹಿತ್ಯ ಪ್ರೇಮಿಗಳು ಸರದಿಯಲ್ಲಿ ನಿಂತು ನೆಚ್ಚಿನ ಲೇಖಕರ ಹಸ್ತಾಕ್ಷರ ಪಡೆದರೆ, ಸಾಹಿತಿಗಳು ‘ಅಂಗಳ’ದಲ್ಲಿ ಕುಳಿತು ಭಾಷೆಯ ಬಗೆಗೆ ಹೊಸ ಹೊಳಹು ನೀಡಿದರು.

ಬುಕ್ ಬ್ರಹ್ಮ ಸಂಸ್ಥೆಯು ಕೋರಮಂಗಲದ ಸೇಂಟ್ ಜಾನ್ಸ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಮೂರು ದಿನಗಳ ‘ಬುಕ್ ಬ್ರಹ್ಮ ಸಾಹಿತ್ಯ ಉತ್ಸವ’ಕ್ಕೆ ಶುಕ್ರವಾರ ಚಾಲನೆ ದೊರೆಯಿತು. ಎಂಟು ವೇದಿಕೆಗಳು ಸಾಹಿತ್ಯ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ತೆರೆದುಕೊಂಡವು. ಕನ್ನಡ ಮತ್ತು ಇಂಗ್ಲಿಷ್ ಜತೆಗೆ ತಮಿಳು, ತೆಲುಗು, ಮಲೆಯಾಳ ಹಾಗೂ ಮರಾಠಿ ಭಾಷೆಯಲ್ಲಿಯೂ ವಿವಿಧ ಗೋಷ್ಠಿಗಳು ನಡೆದವು. ಬೆಳಿಗ್ಗೆಯಿಂದ ಸಂಜೆಯವರೆಗೆ ನಡೆದ ಮೊದಲ ದಿನದ ವಿವಿಧ ಕಾರ್ಯಕ್ರಮಗಳಿಗೆ ಸಾವಿರಾರು ಸಾಹಿತ್ಯ ಪ್ರೇಮಿಗಳು ಸಾಕ್ಷಿಯಾದರು.

ಸಭಾಂಗಣದ ಆವರಣದಲ್ಲಿ ತೂಗು ಬಿಟ್ಟಿದ್ದ ವಿವಿಧ ಭಾಷೆಗಳ ಅಕ್ಷರಗಳು ಭಾಷಾ ಬೆಸುಗೆಯನ್ನು ಪ್ರತಿಬಿಂಬಿಸುವಂತಿತ್ತು. ಇದಕ್ಕೆ ಪೂರಕ ಎಂಬಂತೆ ಪಾಲ್ಗೊಂಡಿದ್ದ ವಿವಿಧ ಭಾಷೆಗಳ ಬರಹಗಾರರು ಇದೇ ಸೂರಿನಡಿ ಆಂಗ್ಲ ಭಾಷೆಯನ್ನು ಸಂಪರ್ಕ ಸೇತುವೆಯಾಗಿ ಬಳಸಿ, ಸಾಹಿತ್ಯ ಚಟುವಟಿಕೆಗಳ ಬಗ್ಗೆ ಸಮಾಲೋಚನೆ ಹಾಗೂ ಚರ್ಚೆ ನಡೆಸಿದರು. ಸಭಾಂಗಣದ ಆವರಣದಲ್ಲಿ ಇಂಡಿಯನ್ ಮ್ಯೂಸಿಕ್ ಎಕ್ಸ್‌ಪೀರಿಯನ್ಸ್ ವತಿಯಿಂದ ವಿವಿಧ ವಾದ್ಯ ಪರಿಕರಗಳನ್ನು ಪ್ರದರ್ಶನಕ್ಕೆ ಇರಿಸಲಾಗಿದ್ದು, ಈ ವಾದ್ಯಗಳನ್ನು ನುಡಿಸಿದಾಗ ಹೊರಹೊಮ್ಮುವ ನಾದವನ್ನು ಡಿಜಿಟಲ್ ಸಾಧನದ ನೆರವಿನಿಂದ ಅನುಭವಿಸುವ ಅವಕಾಶವನ್ನೂ ನೀಡಲಾಗಿದೆ. ವರ್ಚುವಲ್ ರಿಯಾಲಿಟಿ ಅನುಭವವೂ ಇಲ್ಲಿ ಲಭ್ಯ.

ಸಾಹಿತ್ಯ, ಸಿನಿಮಾ, ಭಾಷೆ, ಸಾಮಾಜಿಕ ಮಾಧ್ಯಮ ಸೇರಿ ಹಲವು ವಿಷಯಗಳ ಬಗ್ಗೆ ಒಳನೋಟಗಳಿಂದ ಕೂಡಿದ ಚರ್ಚೆ–ಸಂವಾದಗಳಿಗೆ ಉತ್ಸವ ವೇದಿಕೆ ಕಲ್ಪಿಸಿತು. ‘ಮಂಟಪ’, ‘ಮಥನ’, ‘ಅಕ್ಷರ’, ‘ಅಂಗಳ’, ‘ಮುಖಾಮುಖಿ’ ವೇದಿಕೆಗಳಲ್ಲಿ ಸಾಹಿತ್ಯ ಹಾಗೂ ಸಾಂಸ್ಕೃತಿಕ ಲೋಕದ ಆಗುಹೋಗುಗಳ ಬಗ್ಗೆ ಒಂದೆಡೆ ಚಿಂತನ ಮಂಥನ ನಡೆಯಿತು.

ಮಧ್ಯಾಹ್ನ ನಡೆದ ಲಕ್ಷ್ಮಿ ಚಂದ್ರಶೇಖರ್ ಅವರ ಏಕವ್ಯಕ್ತಿ ಪ್ರದರ್ಶನ ‘ಸಿಂಗಾರವ್ವ’ ಪ್ರೇಕ್ಷಕರನ್ನು ತನ್ನತ್ತ ಸೆಳೆದುಕೊಳ್ಳುವಲ್ಲಿ ಯಶಸ್ವಿಯಾಯಿತು.

ರಂಗಕರ್ಮಿ ಬಿ. ಜಯಶ್ರೀ ಮತ್ತು ತಂಡವು ರಂಗ ಗೀತೆಗಳನ್ನು ಪ್ರಸ್ತುತಪಡಿಸಿತು.

ಸಾಹಿತ್ಯ ಉತ್ಸವದಲ್ಲಿ ಸಾಹಿತ್ಯಾಸಕ್ತರು ಸಮಾಲೋಚನೆ ನಡೆಸುತ್ತಾ ಹೆಜ್ಜೆ ಹಾಕಿದರು ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

### ಸುಶೀಲಾಗೆ ‘ಕಾದಂಬರಿ ಪುರಸ್ಕಾರ’

ಬುಕ್ ಬ್ರಹ್ಮ ಸಂಸ್ಥೆ ಹಮ್ಮಿಕೊಂಡಿದ್ದ ‘ಸ್ವಾತಂತ್ರ್ಯೋತ್ಸವ ಕಾದಂಬರಿ ಪುರಸ್ಕಾರ’ ಸ್ಪರ್ಧೆಯ ಫಲಿತಾಂಶವನ್ನು ಉತ್ಸವದಲ್ಲಿ ಘೋಷಿಸಲಾಯಿತು. ‘ಪ್ರಜಾವಾಣಿ’ಯ ಉಪ ಸಂಪಾದಕಿ ಸುಶೀಲಾ ಡೋಣೂರ ಅವರ ‘ಪೀಜಿ’ ಕಾದಂಬರಿ ಈ ಪುರಸ್ಕಾರಕ್ಕೆ ಭಾಜನವಾಯಿತು. ಈ ಪ್ರಶಸ್ತಿಯು ₹ 1 ಲಕ್ಷ ನಗದು ಸಹಿತ ಪ್ರಶಸ್ತಿ ಫಲಕ ಒಳಗೊಂಡಿದೆ. ಈ ಪುಸ್ತಕವನ್ನು ‘ಅಂಕಿತ ಪುಸ್ತಕ’ ಪ್ರಕಟಿಸಿದೆ. ಪ್ರಶಸ್ತಿಯ ನಗದಿನಲ್ಲಿ ₹ 75 ಸಾವಿರ ಲೇಖಕರಿಗೆ ಹಾಗೂ ₹ 25 ಸಾವಿರ ಪ್ರಕಾಶಕರಿಗೆ ನೀಡಲಾಯಿತು. ರಾಜಶೇಖರ ಹಳೆಮನೆ ಅವರ ‘ಒಡಲುಗೊಂಡವರು’, ಗುರುಪ್ರಸಾದ್ ಕಂಟಲಗೆರೆ ಅವರ ‘ಅಟ್ರಾಸಿಟಿ’, ದೀಪಾ ಜೋಶಿ ಅವರ ‘ತತ್ರಾಣಿ’ ಹಾಗೂ ತುಂಬಾಡಿ ರಾಮಯ್ಯ ಅವರ ‘ಜಾಲ್ಗಿರಿ’ ಕಾದಂಬರಿ ಸಮಾಧಾನಕರ ಬಹುಮಾನಕ್ಕೆ ಭಾಜನವಾದವು. ಈ ಬಹುಮಾನ ತಲಾ ₹ 5 ಸಾವಿರ ನಗದು ಒಳಗೊಂಡಿದೆ.

ಅಟ್ಲಿ ನಿರ್ದೇಶನದ 'ಜವಾನ್', ಸಂದೀಪ್ ರೆಡ್ಡಿ ವಂಗ ಆ್ಯಕ್ಷನ್ ಕಟ್ ಹೇಳಿದ 'ಅನಿಮಲ್' ಚಿತ್ರಗಳು ಭರ್ಜರಿ ಗೆಲವು ದಾಖಲಿಸಿದ ಬಳಿಕ ಪ್ರಮುಖ ಬಾಲಿವುಡ್ ಸ್ಟಾರ್‌ಗಳು ದಕ್ಷಿಣದ ನಿರ್ದೇಶಕರತ್ತ ಒಲವು ತೋರುತ್ತಿದ್ದಾರೆ. ಆ ಸಾಲಿಗೆ ಈಗ ನಟ ಸಲ್ಮಾನ್ ಖಾನ್ ಕೂಡ ಸೇರಿಕೊಂಡಿದ್ದಾರೆ.

# ದಕ್ಷಿಣದ ನಿರ್ದೇಶಕರತ್ತ ಬಾಲಿವುಡ್ ಸ್ಟಾರ್‌ಗಳ ಚಿತ್ತ

ನಟ ಸಲ್ಮಾನ್ ಖಾನ್ ಮಲಯಾಳದ ಪ್ರತಿಭಾವಂತ ನಿರ್ದೇಶಕ ಮಹೇಶ್ ನಾರಾಯಣನ್ ಜತೆ ಕೈಜೋಡಿಸುತ್ತಿರುವುದಾಗಿ ವರದಿಯಾಗಿದೆ. 'ಟೇಕ್ ಆಫ್' ಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ಪಡೆದ ನಿರ್ದೇಶಕ ನಂತರ ಗುರುತಿಸಿಕೊಂಡಿದ್ದು ಫಹಾದ್ ಫಾಸಿಲ್ ಪಾಳಯದಲ್ಲಿ. ಕೋವಿಡ್ ಸಮಯದಲ್ಲಿ ಬಹಳ ಜನಪ್ರಿಯವಾದ 'ಸಿ ಯು ಸೂನ್' ಚಿತ್ರವನ್ನು ನೀಡಿದರು. ಬಳಿಕ ಫಹಾದ್ ಫಾಸಿಲ್‌ಗೆ 'ಮಾಲಿಕ್' ಎಂಬ ಸಿನಿಮಾ ನಿರ್ದೇಶಿಸಿದ್ದರು. ಈ ನಿರ್ದೇಶಕನ ಜತೆ ಸಲ್ಮಾನ್ ತಮ್ಮ ಮುಂದಿನ ಚಿತ್ರಕ್ಕೆ ಅಣಿಯಾಗಿರುವುದು ಕುತೂಹಲ ಹೆಚ್ಚಿಸಿದೆ.

'ಇದು 70–90ರ ದಶಕಗಳಲ್ಲಿ ನಡೆಯುವ ಐತಿಹಾಸಿಕ ಕಥೆ. ಈ ಸಂಬಂಧ ಸಲ್ಮಾನ್ ಖಾನ್ ನಿರ್ದೇಶಕರ ಜತೆ 4–5 ಸಲ ಮೀಟಿಂಗ್ ನಡೆಸಿದ್ದಾರೆ. ಸದ್ಯದಲ್ಲಿಯೇ ಮಹೇಶ್ ಪೂರ್ಣ ಸ್ಕ್ರಿಪ್ಟ್ ಅನ್ನು ಸಲ್ಮಾನ್‌ಗೆ ವಿವರಿಸಲಿದ್ದಾರೆ' ಎಂದು ಮಾಧ್ಯಮಗಳು ವರದಿ ಮಾಡಿವೆ.

ಒಂದು ಕಾಲದಲ್ಲಿ ಬಾಲಿವುಡ್ ನಟರಿಗೆ ದಕ್ಷಿಣ ಭಾರತದ ಸಿನಿಮಾಗಳು ತಮ್ಮೊಂದಿಗೆ ಪೈಪೋಟಿ ನೀಡಲಾರವು ಎಂಬ ಭಾವನೆ ಇತ್ತು. ಅಲ್ಲಿನ ಸೂಪರ್‌ಸ್ಟಾರ್‌ಗಳು ಹಿಂದಿ ನಿರ್ದೇಶಕರ ಹೊರತಾಗಿ ಬೇರೆಯವರಿಗೆ ಕಾಲ್‌ಶೀಟ್ ನೀಡುತ್ತಿರಲಿಲ್ಲ. ಕೆಲವಷ್ಟು ನಿರ್ದೇಶಕರು ದಕ್ಷಿಣದಲ್ಲಿ ಯಶಸ್ಸು ಕಂಡ ತಮ್ಮದೇ ಸಿನಿಮಾಗಳನ್ನು ಬಾಲಿವುಡ್‌ನಲ್ಲಿ ರಿಮೇಕ್ ಮಾಡಿದ್ದರು. ಆದರೆ ನೇರವಾಗಿ ಹಿಂದಿಯ ಸ್ಟಾರ್ ನಟನಿಗೆ ಆ್ಯಕ್ಷನ್ ಕಟ್ ಹೇಳಿದ ನಿರ್ದೇಶಕರು ಬಹಳ ವಿರಳ. ಮಣಿರತ್ನಂ, ರಾಮ್‌ಗೋಪಾಲ್ ವರ್ಮಾರಂಥ ಬೆರಳೆಣಿಕೆಯಷ್ಟು ನಿರ್ದೇಶಕರು ಮಾತ್ರ ನೇರವಾಗಿ ಬಾಲಿವುಡ್‌ನಲ್ಲಿ ಸಿನಿಮಾ ಮಾಡಿ ಗೆದ್ದವರು.

ಕಳೆದ ನಾಲ್ಕರು ವರ್ಷಗಳಲ್ಲಿ ಈ ಸನ್ನಿವೇಶ ಬದಲಾಗಿದೆ. 'ಕೆಜಿಎಫ್', 'ಕಾಂತಾರ'ದಂಥ ಚಿತ್ರಗಳ ವಿಶ್ವ ವ್ಯಾಪಿ ಗೆಲುವು ಬಾಲಿವುಡ್ ಸ್ಟಾರ್‌ಗಳನ್ನು ದಕ್ಷಿಣದತ್ತ ತಿರುಗಿ ನೋಡುವಂತೆ ಮಾಡಿತು. ಈ ತಲೆಮಾರಿನ ನಿರ್ದೇಶಕರಲ್ಲಿ ಮೊದಲು ಬಾಲಿವುಡ್‌ಗೆ ಲಗ್ಗೆ ಇಟ್ಟದ್ದು ತಮಿಳಿನ ಅಟ್ಲಿ. 'ಜವಾನ್' ಸಿನಿಮಾ ನಿರೀಕ್ಷೆಗೂ ಮೀರಿದ ಯಶಸ್ಸು ಗಳಿಸಿತು.

ಲೋಕೇಶ್ ಕನಗರಾಜ್ ನಿರ್ದೇಶನದ 'ಕೂಲಿ' ಚಿತ್ರದಲ್ಲಿ ಅಮೀರ್ ಖಾನ್ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಭವಿಷ್ಯದಲ್ಲಿ ಈ ನಿರ್ದೇಶಕನ ಜತೆ ಸಿನಿಮಾ ಮಾಡುವುದಾಗಿ ಅಮೀರ್ ಹೇಳಿದ್ದಾರೆ. ರಣಬೀರ್ ಕಪೂರ್‌ಗೆ 'ಅನಿಮಲ್'ನಂಥ ದೊಡ್ಡ ಹಿಟ್ ಕೊಟ್ಟ ತೆಲುಗಿನ ಸಂದೀಪ್ ರೆಡ್ಡಿ ವಂಗ ಕೂಡ ಅಮೀರ್ ಖಾನ್‌ಗೆ ಕಥೆ ಹೇಳಿದ್ದಾರೆ ಎಂಬ ವದಂತಿಯಿದೆ.

ಸತತ ಸೋಲುಗಳಿಂದ ಕಂಗೆಟ್ಟಿರುವ ಸಲ್ಮಾನ್ ಖಾನ್‌ಗೆ ತಮಿಳಿನ ಮುರುಗದಾಸ್ ಜೊತೆ ಕೈಜೋಡಿಸಿ ಮಾಡಿದ 'ಸಿಖಂಧರ್' ಸಿನಿಮಾ ಕೂಡ ಕೈಹಿಡಿಯಲಿಲ್ಲ. ಆದಾಗ್ಯೂ ಮತ್ತೆ ದಕ್ಷಿಣದ ನಿರ್ದೇಶಕನ ಜತೆ ಕೈಜೋಡಿಸಿ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ. ❖

# ದಸರಾ ಅಥವಾ ದೀಪಾವಳಿಗೆ ಲ್ಯಾಂಡ್‌ಲಾರ್ಡ್

**'ಕಾಟೇರ'** ಸಿನಿಮಾದ ಕಥೆಗಾರ ಜಡೇಶ ಕೆ. ಹಂಪಿ ನಿರ್ದೇಶನದ, 'ದುನಿಯಾ' ವಿಜಯ್ ನಟನೆಯ ಸಿನಿಮಾ 'ಲ್ಯಾಂಡ್‌ಲಾರ್ಡ್' ದಸರಾ ಅಥವಾ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಬಿಡುಗಡೆ ಆಗಲಿದೆ ಎಂದು ಚಿತ್ರತಂಡ ತಿಳಿಸಿದೆ.

ಸಾರಥಿ ಫಿಲಂಸ್ ಬ್ಯಾನರ್‌ನಡಿಯಲ್ಲಿ ಹೇಮಂತ್ ಗೌಡ ಕೆ.ಎಸ್ ಹಾಗೂ ಕೆ.ವಿ ಸತ್ಯಪ್ರಕಾಶ್ ನಿರ್ಮಾಣ ಮಾಡುತ್ತಿರುವ ಈ ಸಿನಿಮಾದ ಚಿತ್ರೀಕರಣ ಪೂರ್ಣಗೊಂಡಿದ್ದು, ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಬಿರುಸಿನಿಂದ ನಡೆಯುತ್ತಿದೆ ಎಂದು ಚಿತ್ರತಂಡ ತಿಳಿಸಿದೆ. ವರಮಹಾಲಕ್ಷ್ಮಿ ಹಬ್ಬದಂದು ಚಿತ್ರತಂಡ ಹೊಸ ಸುದ್ದಿ ನೀಡಿದ್ದು, ಆನಂದ್ ಆಡಿಯೊ ಕಂಪನಿ 'ಲ್ಯಾಂಡ್‌ಲಾರ್ಡ್' ಚಿತ್ರದ ಆಡಿಯೊ ಹಕ್ಕುಗಳನ್ನು ದೊಡ್ಡ ಬೆಲೆಗೆ ಖರೀದಿಸಿದೆ. ಈ ಆಲ್ಬಂ ವಿಶೇಷತೆಗಳಿಂದ ಕೂಡಿದ್ದು, ಹಿನ್ನೆಲೆ ಸಂಗೀತ ಚಿತ್ರದ ಹೈಲೈಟ್ ಎಂದಿದೆ ಚಿತ್ರತಂಡ.

ಚಿತ್ರದಲ್ಲಿ ವಿಜಯ್ ಅವರ ಮಗಳಾದ ರಿತಿನ್ಯ ನಟಿಸಿದ್ದು, ರಚಿತಾರಾಮ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಸ್ವತಂತ್ರ ಭೂಮಿಯ ಕಲ್ಪನೆ, ಶಿಕ್ಷಣ, ಕೂಲಿಗೆ ತಕ್ಕ ಕಾಸು ಎಂಬ ವಿಷಯಗಳ ಕುರಿತು ಚಿತ್ರದ ಕಥಾಹಂದರವಿದೆ. ಹಳ್ಳಿಯ ಹಿನ್ನೆಲೆಯಲ್ಲಿ ನಡೆಯುವ ಈ ಕಥೆಯಲ್ಲಿ ಅಸ್ತಿತ್ವದ ಹೋರಾಟವಿದೆ. ಸ್ವಾವಲಂಬಿಯಾಗಬೇಕು ಎನ್ನುವ ನಾಯಕನ ಯೋಚನೆ ಹೇಗೆ ಕ್ರಾಂತಿ ಆಗುತ್ತದೆ ಎನ್ನುವುದೇ ಕಥೆಯ ಜೀವಾಳ ಎಂದು ಚಿತ್ರತಂಡ ತಿಳಿಸಿದೆ. ❖

ದುನಿಯಾ ವಿಜಯ್

ರುಕ್ಮಿಣಿ ವಸಂತ್

# ಕನಕವತಿಯಾಗಿ ಬಂದ ರುಕ್ಮಿಣಿ ವಸಂತ್

ನಟ ರಿಷಬ್ ಶೆಟ್ಟಿ ನಟಿಸಿ, ನಿರ್ದೇಶಿಸಿರುವ 'ಕಾಂತಾರ' ಪ್ರೀಕ್ವೆಲ್‌ನ ತಾರಾಬಳಗ ಇಷ್ಟು ದಿನ ಗೌಪ್ಯವಾಗಿಯೇ ಇತ್ತು. ರಿಷಬ್ ಶೆಟ್ಟಿ ಅವರ ಪಾತ್ರವನ್ನು ಹೊರತುಪಡಿಸಿ ಇನ್ಯಾವ ಪಾತ್ರಗಳ ಗುಟ್ಟನ್ನು ತಂಡ ಬಿಟ್ಟುಕೊಟ್ಟಿರಲಿಲ್ಲ. ಇದೀಗ ಚಿತ್ರದ ನಾಯಕಿಯನ್ನು ಹೊಂಬಾಳೆ ಫಿಲ್ಮ್ಸ್ ಪರಿಚಯಿಸಿದೆ. ನಟಿ ರುಕ್ಮಿಣಿ ವಸಂತ್ 'ಕನಕವತಿ'ಯಾಗಿ ಈ ಚಿತ್ರದಲ್ಲಿ ಕಾಣಿಸಿ ಕೊಳ್ಳಲಿದ್ದಾರೆ.

ವರಮಹಾಲಕ್ಷ್ಮಿ ಹಬ್ಬದ ದಿನವೇ ಚಿತ್ರತಂಡ ನಾಯಕಿಯನ್ನು ಪರಿಚಯಿಸಿದೆ. 'ಬೀರ್‌ಬಲ್' ಬೆಡಗಿಯಾಗಿ ಚಂದನವನ ಪ್ರವೇಶಿಸಿದ್ದ ರುಕ್ಮಿಣಿ ವಸಂತ್ 'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾ ಬಳಿಕ 'ಪುಟ್ಟಿ'ಯಾಗಿ ಎಲ್ಲರಿಗೂ ಪರಿಚಿತ. 'ಬಾನದಾರಿಯಲ್ಲಿ', 'ಬಘೀರ', 'ಭೈರತಿ ರಣಗಲ್' ಬಳಿಕ ತಮಿಳಿನಲ್ಲಿ ವಿಜಯ್ ಸೇತುಪತಿ ಜೊತೆ ತೆರೆ ಹಂಚಿಕೊಂಡಿದ್ದರು ರುಕ್ಮಿಣಿ. ನಂತರದಲ್ಲಿ ಕಾಲಿವುಡ್‌ನ ಖ್ಯಾತ ನಟ ಶಿವಕಾರ್ತಿಕೇಯನ್ ನಟನೆಯ ಮುರುಗದಾಸ್ ನಿರ್ದೇಶನದ 'ಮದರಾಸಿ' ಸೆಟ್ಟೇರಿತ್ತು. ಈ ಸಿನಿಮಾ ಸೆ.5ಕ್ಕೆ ತೆರೆಕಾಣಲಿದ್ದು, ಇದಾಗಿ ಒಂದು ತಿಂಗಳಲ್ಲೇ ಅಂದರೆ ಅ.2ರಂದು 'ಕಾಂತಾರ' ಪ್ರೀಕ್ವೆಲ್ ರಿಲೀಸ್ ಆಗಲಿದೆ.

ಈ ವರ್ಷದ ಬಹುನಿರೀಕ್ಷಿತ ಸಿನಿಮಾಗಳಲ್ಲಿ ಒಂದಾದ 'ಕಾಂತಾರ' ಪ್ರೀಕ್ವೆಲ್‌ನ ಚಿತ್ರೀಕರಣದ ದೃಶ್ಯಗಳ ತುಣುಕುಗಳನ್ನು ಇತ್ತೀಚೆಗೆ ಹೊಂಬಾಳೆ ಫಿಲ್ಮ್ಸ್ ಬಿಡುಗಡೆಗೊಳಿಸಿತ್ತು. ಸಿನಿಮಾಗಾಗಿ ನೂರಾರು ಕೋಟಿ ವ್ಯಯಿಸಿರುವ ಹೊಂಬಾಳೆ ಅದ್ದೂರಿಯಾದ ಹೊಸ ಲೋಕವನ್ನೇ ಈ ಸಿನಿಮಾಗಾಗಿ ಸೃಷ್ಟಿಸಿದೆ. ಕುಂದಾಪುರ ಬಳಿ 25 ಎಕರೆ ಪ್ರದೇಶದಲ್ಲಿ ಬೃಹತ್ ಸೆಟ್ ಹಾಕಿ ಈ ಸಿನಿಮಾದ ಕಾಲ್ಪನಿಕ ಊರನ್ನು ನಿರ್ಮಿಸಲಾಗಿತ್ತು. ಕದಂಬರ ಆಳ್ವಿಕೆಯ ಕಾಲದಲ್ಲಿ ಹುಟ್ಟಿದ ದಂತಕಥೆಯ ಕಥಾಹಂದರ ಹೊಂದಿರುವ ಈ ಸಿನಿಮಾದಲ್ಲಿ ಯುವರಾಣಿಯ ವೇಷದಲ್ಲಿ ರುಕ್ಮಿಣಿ ಕಾಣಿಸಿಕೊಂಡಿದ್ದಾರೆ.

ಚಿತ್ರಕ್ಕೆ ಅರವಿಂದ್ ಎಸ್. ಕಶ್ಯಪ್ ಛಾಯಾಚಿತ್ರಗ್ರಹಣ ಹಾಗೂ ಬಿ.ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನವಿದೆ. ಆಸ್ಕರ್ ಪ್ರಶಸ್ತಿಯನ್ನು ಗಮನದಲ್ಲಿಟ್ಟುಕೊಂಡೇ ನಿರ್ಮಾಣವಾಗಿರುವ ಈ ಸಿನಿಮಾ ಕನ್ನಡ, ಹಿಂದಿ, ತೆಲುಗು, ಮಲಯಾಳ, ತಮಿಳು, ಬೆಂಗಾಲಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ತೆರೆ ಕಾಣಲಿದೆ. ಪ್ರೀಕ್ವೆಲ್ ಅನ್ನು ಈಗಾಗಲೇ ಪ್ರೈಮ್ ವಿಡಿಯೊ ದೊಡ್ಡ ಮೊತ್ತಕ್ಕೆ ಖರೀದಿಸಿದೆ. ❖

# ಉತ್ತರಕಾಶಿಯಲ್ಲಿ 250 ಮಂದಿ ರಕ್ಷಣೆ

ಉತ್ತರಕಾಶಿ (ಪಿಟಿಐ): ಮೇಘ ಸ್ಫೋಟದಿಂದ ಉಂಟಾದ ಪ್ರವಾಹದಿಂದ ನಲುಗಿರುವ ಧರಾಲಿ ಗ್ರಾಮದಲ್ಲಿ ನಾಪತ್ತೆ ಆಗಿರುವವರ ಶೋಧಕ್ಕಾಗಿ ರಕ್ಷಣಾ ಸಿಬ್ಬಂದಿ ಶುಕ್ರವಾರವೂ ಕಾರ್ಯಾಚರಣೆ ನಡೆಸಿದರು.

ಮಣ್ಣಿನ ರಾಶಿ, ಅವಶೇಷಗಳಲ್ಲಿ ಸಿಲುಕಿರುವವರ ಪತ್ತೆಗಾಗಿ ಶ್ವಾನಗಳು, ಡ್ರೋನ್ ಬಳಸಲಾಗಿದೆ. ಶುಕ್ರವಾರ 250 ಮಂದಿಯನ್ನು ರಕ್ಷಿಸಿದ್ದು, ಮಂಗಳವಾರದಿಂದ ಈವರೆಗೆ ಒಟ್ಟು 650 ಜನರನ್ನು ರಕ್ಷಿಸಲಾಗಿದೆ ಎಂದು ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ತಿಳಿಸಿದ್ದಾರೆ.

ಪ್ರವಾಹದಿಂದಾಗಿ ನಾಲ್ವರು ಮೃತಪಟ್ಟಿದ್ದು, ಬುಧವಾರ ಇಬ್ಬರ ಮೃತದೇಹ ಹೊರತೆಗೆಯಲಾಗಿತ್ತು. ಸೇನೆಯ 9 ಯೋಧರು, 7 ನಾಗರಿಕರು ನಾಪತ್ತೆ ಆಗಿದ್ದಾರೆ ಎಂದು ಉತ್ತರಾಖಂಡ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಹೇಳಿದೆ.

ಧರಾಲಿಯಲ್ಲಿ 24 ದೊಡ್ಡ ಹೋಟೆಲ್‌ಗಳಿದ್ದು, ಅನೇಕ ಪ್ರವಾಸಿಗರು ತಂಗಿದ್ದರು. ನಿರ್ಮಾಣ ಹಂತದ ಹೋಟೆಲ್‌ಗಳಲ್ಲಿ ನೇಪಾಳ, ಬಿಹಾರದ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಹೀಗಾಗಿ, ಪ್ರವಾಹದಿಂದ ನಾಪತ್ತೆ ಆದವರ ಪ್ರಮಾಣ ಮತ್ತಷ್ಟು ಹೆಚ್ಚಿರಬಹುದು ಎಂದು ಮುಖ್ಬಾ ಗ್ರಾಮಸ್ಥರು ಹೇಳಿದ್ದಾರೆ.

ಸೇನೆ, ಇಂಡೋ–ಟಿಬೆಟನ್ ಗಡಿ ಪೊಲೀಸರು (ಐಟಿಬಿಪಿ), ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ, ರಾಜ್ಯ ವಿಪತ್ತು ನಿರ್ವಹಣಾ ಪಡೆ ಹಾಗೂ ಪೊಲೀಸ್ ಇಲಾಖೆಯ 800ಕ್ಕೂ ಹೆಚ್ಚು ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿದ್ದಾರೆ.

**ನದಿಗೆ ಸೇತುವೆ:** ರಕ್ಷಣಾ ಕಾರ್ಯವನ್ನು ಚುರುಕುಗೊಳಿಸುವ ಉದ್ದೇಶದಿಂದ ಸೇನೆಯು ಭಾಗೀರಥಿ ನದಿಗೆ ಸೇತುವೆಯನ್ನು ನಿರ್ಮಿಸಿದೆ.

ಡೆಹ್ರಾಡೂನ್‌ನಿಂದ 432 ಕಿ.ಮೀ. ದೂರವಿರುವ ಮತಲಿ ಹೆಲಿಪ್ಯಾಡ್‌ಗೆ ಕರೆತರಲಾದ 128 ಜನರನ್ನು ರಕ್ಷಿಸಲಾಯಿತು. ಹರ್ಶಿಲ್‌ನಲ್ಲಿ ಸಿಲುಕಿದ್ದ ಜನರು ಹಾಗೂ ಗಾಯಾಳುಗಳನ್ನು ಹೆಲಿಕಾಪ್ಟರ್ ಮೂಲಕ ಕಳುಹಿಸಲಾಯಿತು.

'ಉತ್ತರಕಾಶಿ, ಹರ್ಶಿಲ್ ಹಾಗೂ ಧರಾಲಿಗೆ ರಸ್ತೆ ಸಂಪರ್ಕ ಕಲ್ಪಿಸುವ ಕಡೆಗೆ ಗಮನಹರಿಸಿದ್ದೇವೆ. ಹರ್ಶಿಲ್‌ನ ಉತ್ತರ ಭಾಗದ ಗ್ರಾಮಗಳಿಗೆ ವಿದ್ಯುತ್ ಹಾಗೂ ಮೊಬೈಲ್ ಸಂಪರ್ಕ ಕಲ್ಪಿಸಲು ಪ್ರಯತ್ನಿಸುತ್ತಿದ್ದೇವೆ. ವೈದ್ಯಕೀಯ ಸಾಮಗ್ರಿ ಪೂರೈಸಲಾಗಿದೆ ಎಂದು ಲೆಫ್ಟಿನೆಂಟ್ ಜನರಲ್ ಡಿ.ಜಿ. ಮಿಶ್ರಾ ತಿಳಿಸಿದ್ದಾರೆ.

ಉತ್ತರಕಾಶಿ ಜಿಲ್ಲೆಯಲ್ಲಿ ಪ್ರವಾಹದಿಂದ ಕೊಚ್ಚಿಹೋದ ಗಂಗಾನಾನಿ– ಹರ್ಶಿಲ್ ರಸ್ತೆಯ ಸೇತುವೆಯನ್ನು ಸೇನಾ ಸಿಬ್ಬಂದಿ ಮರು ನಿರ್ಮಿಸಿದರು ಪಿಟಿಐ ಚಿತ್ರ


**ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಉಡುಪಿ**
ಆದಿ ಉಡುಪಿ, ಉಡುಪಿ–576103 ದೂರವಾಣಿ: 0820–2530062
ಸಂ.: ಕೃಉಮಾಸ(ಉಡುಪಿ)/597/2025–26 ದಿನಾಂಕ: 01–08–2025

**ಇ–ಟೆಂಡರ್ ಪ್ರಕಟಣೆ**

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಉಡುಪಿ 2024–25ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ ಅನುಮೋದಿತ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ವಿವಿಧ ಕಟ್ಟಡಗಳ ಮೇಲ್ಭಾಗದಲ್ಲಿ ಮಳೆ ನೀರು ಸೋರದಂತೆ ಗ್ಯಾಲ್ವಾಲಿಯಂ ಶೀಟ್ ನಿರ್ಮಿಸುವುದರೊಂದಿಗೆ ವಿವಿಧ ಕಟ್ಟಡಗಳ ಸುಧಾರಣೆ ಮತ್ತು ತಾತ್ಕಾಲಿಕ ಶೆಡ್ ನಿರ್ಮಿಸುವ ಕಾಮಗಾರಿ (ಐಟಂವಾರು ಟೆಂಡರ್) ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಕಾಯಿದೆ 1999 ಮತ್ತು ನಿಯಮ 2000 ಹಾಗೂ ತತ್ಸಂಬಂಧವಾಗಿ ಹೊರಡಿಸಿರುವ ಸರ್ಕಾರದ ಆದೇಶ, ಸುತ್ತೋಲೆಗಳಂತೆ ಮತ್ತು ಮಾರ್ಗಸೂಚಿ ಅನುಸಾರ ಲೋಕೋಪಯೋಗಿ ಇಲಾಖೆಯಲ್ಲಿ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿತ ಹಾಗೂ Standard Tender Documents KW-3 Clause 3ನಲ್ಲಿ ಅರ್ಹರಿರುವ ಸಿವಿಲ್ ಗುತ್ತಿಗೆದಾರರಿಂದ https://kppp.karnataka.gov.in/ ನಲ್ಲಿ ಎರಡು ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ಮೊತ್ತ ರೂ. 88.60 ಲಕ್ಷಗಳು ಭರ್ತಿ ಮಾಡಿದ ಸ್ವೀಕರಿಸುವ ಕೊನೆಯ ದಿನಾಂಕ: 25–08–2025 ಸಂಜೆ 4.30 ಗಂಟೆವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 26–08–2025 ಬೆಳಿಗ್ಗೆ 11.00 ಗಂಟೆಗೆ. ಹೆಚ್ಚಿನ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಹಾಗೂ ಈ ಕಛೇರಿಯಿಂದ ಪಡೆಯಬಹುದಾಗಿದೆ. ಯಾವುದೇ ಲಿಖಿತ ಕಾರಣವನ್ನು ಕೊಡದೆ ಟೆಂಡರ್‌ನ್ನು ತಿರಸ್ಕರಿಸುವ ಅಥವಾ ಪುರಸ್ಕರಿಸುವ ಹಕ್ಕನ್ನು ಸಮಿತಿಯ ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/– ಕಾರ್ಯದರ್ಶಿ (ಪ್ರ) ಕೃ. ಉ.ಮಾಸ., ಉಡುಪಿ
ಸಹಿ/– ಆಡಳಿತಾಧಿಕಾರಿ, ಕೃ.ಉ.ಮಾ. ಸ. ಉಡುಪಿ.

**PRL DISTRICT AND SESSIONS COURT, BELAGAVI**
**SHORT TENDER NOTIFICATION NO: 1/2025 DATED: 23.07.2025**

**Sub:** For Hiring Cleaning Persons (Menials) through Services Agencies on contract basis as per the order of Government letter No. LAW/LAC/16/ 2023 dated 07.03.2025 for the cleaning the Court premises.
Sealed short tenders are invited by the undersigned from the intending registered services agencies for providing cleaning persons /menials at Court Premises of Belagavi Unit.
Last date for submitting the tender quotation is: **12.08.2025 at 5.00 p.m.**
**TERMS AND CONDITIONS: 1)** The tenders offering services shall have an experience in providing such service/Manpower to reputed organizations. **2)** The tenderer shall submit their quotation in the prescribed format attached to this notification. The tender accepting authority reserves the right either to accept or reject the proposal. **3)** The tenderer shall enclose **EMD of Rs.10,000/-** by way of demand draft in favour of "Prl. District & Sessions Judge, Belagavi". **4)** The Tenderer shall produce necessary license details.
The commencement of work of sanitation services should start immediately after acceptance of the short tender.
The sealed quotations are to be sent to Prl. District and Sessions Judge, Belagavi on or before **12.08.2025 before 05.00 p.m.** and will be opened on **13.08.2025 at 05.00 p.m.** The sealed cover shall be super-scribed as "Tender For Providing Service Contract For Menials/cleaning Staff".

**Place : Belagavi**
**Date : 23.07.2025**
DIPR/CP/2259/Zen/2025-26
By order of the Court,
Chief Administrative Officer.
District & Session Court, Belagavi

ಕರ್ನಾಟಕ ಸರಕಾರ
**ಜಿಲ್ಲಾ ಪಂಚಾಯತ ಉತ್ತರ ಕನ್ನಡ**
**ಉಪನಿರ್ದೇಶಕರು(ಆಡಳಿತ) ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ, ಸಾರ್ವಜನಿಕ ಶಿಕ್ಷಣ ಇಲಾಖೆ, ಉತ್ತರ ಕನ್ನಡ ಜಿಲ್ಲೆ, ಕಾರವಾರ.**
email: ssakarwar@gmail.com
ಸಂ:ಅ1:ಸ.ಶಿ.ಕ/ಹೊ.ಗು.ನೌ/ಇ–ಟೆಂಡರ್/2025–26 ದಿನಾಂಕ: 04–08–2025

**ಟೆಂಡರ್ ಪ್ರಕಟಣೆ**
(ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ವಿಷಯ: 2025–26 ನೇ ಸಾಲಿಗೆ ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿ ಜಿಲ್ಲಾ ಮತ್ತು ತಾಲ್ಲೂಕು ಹಂತದ ಕಚೇರಿಗಳಿಗೆ ಅಗತ್ಯವಿರುವ ಕಂಪ್ಯೂಟರ್ ಪ್ರೋಗ್ರಾಮರ್ಸ್, ಡೇಟಾ ಎಂಟ್ರಿ ಆಪರೇಟರ್, ಲೆಕ್ಕಸಹಾಯಕರು ಮತ್ತು 'ಡಿ'ಗ್ರೂಪ್ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವ ಬಗ್ಗೆ

ಉತ್ತರ ಕನ್ನಡ ಜಿಲ್ಲೆಯ ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿಯಲ್ಲಿ 2025–26ನೇ ಸಾಲಿಗೆ ಷರತ್ತಿಗೊಳಪಟ್ಟು ಹೊರಗುತ್ತಿಗೆ ಆಧಾರದ ಮೇಲೆ ಜಿಲ್ಲಾ ಹಾಗೂ ತಾಲೂಕಾ ಮಟ್ಟದಲ್ಲಿ ವಿವಿಧ ಹುದ್ದೆಗಳ ಸೇವೆಯನ್ನು ಒದಗಿಸಲು ಅರ್ಹ ಹೊರಗುತ್ತಿಗೆ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳಿಗಾಗಿ, ಇ.ಎಂ.ಡಿ. ಬಗ್ಗೆ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ನೋಡಬಹುದಾಗಿದೆ.

ಸಹಿ/– ಉಪನಿರ್ದೇಶಕರು (ಆಡಳಿತ) ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು ಸಮಗ್ರ ಶಿಕ್ಷಣ ಕರ್ನಾಟಕ, ಉತ್ತರ ಕನ್ನಡ, ಕಾರವಾರ
DIPR/KWR/KSMCA/366/ 25-26 Dt. 08.08.2025

ಕರ್ನಾಟಕ ಸರ್ಕಾರ
**ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ**
**ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಹಳಿಯಾಳ ವಿಭಾಗ (ಉ.ಕ)**
ಇ–ಮೇಲ್: midhly@yahoo.co.in ಫೋ.ನಂ: 08284–220113
ನಂ:ಕಾನಿಅ/ಸನೀವಿಹ/ತಾವಿ/ಅಲ್ಪಾವಧಿ ಟೆಂಡರ್/4702/2025–26/1187 ದಿನಾಂಕ: 06/08/2025

**ಅಲ್ಪಾವಧಿ ಟೆಂಡರ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್) ಕೆ.ಡಬ್ಲ್ಯೂ.–1&2**

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿ ನವೀಕರಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ KW-1 & 2 (ದ್ವಿ–ಲಕೋಟೆ) ಪದ್ಧತಿಯಲ್ಲಿ "ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನ" ಮುಖಾಂತರ ಟೆಂಡರ ಕರೆಯಲಾಗಿದೆ.
1) ಇಂಟೆಂಡ್ ನಂ: 6738 2) ಇಂಟೆಂಡ್ ನಂ: 6739 3) ಇಂಟೆಂಡ್ ನಂ: 6740
ಖಾಲಿ ಟೆಂಡರ ಫಾರಂಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ ವೆಬ್‌ಸೈಟ್ ವಿಳಾಸ: https://kppp.karnataka.gov.in ದಲ್ಲಿ ದಿನಾಂಕ: 11–08–2025 ರ ನಂತರದಿಂದ ಡೌನಲೋಡ್ ಮಾಡಿಕೊಳ್ಳುವುದು. ಟೆಂಡರ್ ಕುರಿತಂತೆ ದಿನಾಂಕ: 22–08–2025 ರೊಳಗಾಗಿ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕಚೇರಿ ಅಥವಾ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಸಂಪರ್ಕಿಸಿ ಪರಿಹರಿಸಿಕೊಳ್ಳಬಹುದಾಗಿದೆ. ಟೆಂಡರಗಳನ್ನು ದಿನಾಂಕ: 25–08–2025 ರ ಸಾಯಂಕಾಲ 05.15 ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಗಳ ತಾಂತ್ರಿಕ ಬಿಡ್‌ನ್ನು ದಿನಾಂಕ: 26–08–2025 ಸಾಯಂಕಾಲ 05.30 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್‌ನ ಅನುಮೋದನೆ ನಂತರ ತೆರೆಯಲಾಗುವುದು.
ಕಾಮಗಾರಿಗಳ ಟೆಂಡರನ್ನು ಒಪ್ಪಿಕೊಳ್ಳುವ ಕನಿಷ್ಠ ಅರ್ಹತಾ ಮಾನದಂಡಗಳನ್ನು ಕೆ.ಡಬ್ಲ್ಯೂ– 1 & 2 ಬಿಡ್ ಡಾಕ್ಯುಮೆಂಟ್ ರಲ್ಲಿರುವಂತೆ ಪರಿಗಣಿಸಲಾಗುವುದು ಹಾಗೂ ವೆಬ್‌ಸೈಟನಲ್ಲಿರುವ ವಿವರಗಳೇ ಅಂತಿಮ.
ವಿ.ಸೂ: ಸದರಿ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– (ಎಂ. ನಾಗರಾಜ) ಕಾರ್ಯನಿರ್ವಾಹಕ ಅಭಿಯಂತರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಹಳಿಯಾಳ ವಿಭಾಗ (ಉ.ಕ)
DIPR/ADK/KSMCA/359/ 25-26 Dt.08.08.2025

ಕರ್ನಾಟಕ ಸರ್ಕಾರ
**ಕಾರ್ಯಪಾಲಕ ಇಂಜಿನಿಯರ್ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಶಿವಮೊಗ್ಗ.**
ಟೆಂಡರ್ ಸಂಖ್ಯೆ: ಕಾಇಂ/ಪಂರಾಇಂ/ವಿಶಿ/ಕಿಇಂ/ಟೆಂಡರ್/2025–26/
Date: 05.08.2025

**ಟೆಂಡರ್ ಪ್ರಕಟಣೆ**

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಶಿವಮೊಗ್ಗ ವ್ಯಾಪ್ತಿಯ ಭದ್ರಾವತಿ ತಾಲ್ಲೂಕಿನ ಲೆಕ್ಕ ಶೀರ್ಷಿಕೆ: 2022–23 ನೇ ಸಾಲಿನ ವಿವೇಕ ಶಾಲಾ ಕೊಠಡಿ ನಿರ್ಮಾಣ ಯೋಜನೆ ಕಾಮಗಾಲಯ ಟೆಂಡರ್‌ನ ಒಟ್ಟು ಮೊತ್ತ ರೂ. 72.97 ಲಕ್ಷಗಳು ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in ಈ ವೆಬ್‌ಸೈಟ್‌ನಲ್ಲಿ ದಿನಾಂಕ: 05.08.2025 ರಿಂದ ಪಡೆಯಬಹುದಾಗಿರುತ್ತದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 20.08.2025 ಸಂಜೆ 4:00 ಗಂಟೆರವರೆಗೆ ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/25–26/41/08/737

**ಕರ್ನಾಟಕ ಲೋಕಸೇವಾ ಆಯೋಗ**
ಲೋಕಸೇವಾ ಆಯೋಗದ ಕಛೇರಿ, 'ಉದ್ಯೋಗ ಸೌಧ', ಬೆಂಗಳೂರು–560001
ಸಂಖ್ಯೆ: KPSCKA/RCT2/2CTF/4/2025-RCT-2 Park(2)/2107 ದಿನಾಂಕ:07.08.2025

**ಪತ್ರಿಕಾ ಪ್ರಕಟಣೆ**

ಆಯೋಗದಿಂದ ಅಧಿಸೂಚಿಸಲಾದ ಅಧಿಸೂಚನೆ ಸಂಖ್ಯೆ: ಪಿಎಸ್‌ಸಿ 503 ಆರ್‌ಟಿಬಿ (2)2023–24/3494, ದಿನಾಂಕ:15.03.2024ರ ಪದವಿ ಪೂರ್ವ ಮಟ್ಟದ (Below Degree) ಉಳಿಕೆ ಮೂಲ ವೃಂದದ ವಿವಿಧ ಇಲಾಖೆಗಳಲ್ಲಿನ ಗ್ರೂಪ್ 'ಸಿ' –313 ಹುದ್ದೆಗಳಿಗೆ ಆಯೋಗವು ಈ ಹಿಂದೆ ದಿನಾಂಕ:16–03–2025ರಂದು ನಡೆಸಲಾದ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳಲ್ಲಿ ಕರ್ನಾಟಕ ನಾಗರಿಕ ಸೇವಾ (ನೇರ ನೇಮಕಾತಿ) (ಸಾಮಾನ್ಯ) ನಿಯಮ 2021ರ ತಿದ್ದುಪಡಿ ನಿಯಮಗಳನ್ವಯ ಕನ್ನಡ ಭಾಷಾ ಪರೀಕ್ಷೆಯಿಂದ ವಿನಾಯಿತಿ ಇಲ್ಲದ ಅಭ್ಯರ್ಥಿಗಳಿಗೆ ಮಾತ್ರ ಪ್ರಸ್ತುತ ದಿನಾಂಕ:16–08–2025ರಂದು ಕನ್ನಡ ಭಾಷಾ ಪರೀಕ್ಷೆಯನ್ನು ನಡೆಸಲಾಗುತ್ತಿದ್ದು, ಸದರಿ ಕನ್ನಡ ಭಾಷಾ ಪರೀಕ್ಷೆಯ "ಪ್ರವೇಶ ಪತ್ರವನ್ನು" ದಿನಾಂಕ:07–08–2025 ರಿಂದ ಆಯೋಗದ ವೆಬ್‌ಸೈಟ್ http://kpsconline.karnataka.gov.in ರ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆಯೆಂದು ಈ ಮೂಲಕ ತಿಳಿಸಿದೆ.

ಸಹಿ/– ಪರೀಕ್ಷಾ ನಿಯಂತ್ರಕರು ಕರ್ನಾಟಕ ಲೋಕಸೇವಾ ಆಯೋಗ
ಡಿಐಪಿಆರ್/ಸಿಪಿ/2250/ಸಿಸಿಎಲ್/2025–26

**ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಚೇರಿ ಆವರಣ, ವಿಜಯಪುರ**
ದೂರವಾಣಿ ಸಂ: 08352–259855,
ಇ–ಮೇಲ್: ka.vijayapura.dudc@gmail.com
ಕ್ರ.ಸಂ:ಜಿನಕೊ–5/ಪಿಎಂಸಿ/ಟೆಂಡರ್/2025–26/347 ದಿನಾಂಕ:05.08.2025

**ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)**

ವಿಜಯಪುರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಕಿರಿಯ ಅಭಿಯಂತರರ ಹುದ್ದೆಗಳು ಖಾಲಿ ಇರುವದರಿಂದ ಎಸ್.ಎಫ್.ಸಿ, 14/15ನೇ ಹಣಕಾಸು ಯೋಜನೆ, ಕುಡಿಯುವ ನೀರು ಸರಬರಾಜು ಹಾಗೂ ಇತರೆ ಅಭಿವೃದ್ಧಿ ಯೋಜನೆ ಕಾಮಗಾರಿಗಳ ಅಂದಾಜು ಪತ್ರಿಕೆಗಳನ್ನು ತಯಾರಿಸಿ ಟೆಂಡರ್ ಹಾಗೂ ಕಾಮಗಾರಿಗಳನ್ನು ನಿರ್ವಹಿಸುವ ಕುರಿತು ಯೋಜನಾ ಸಮಾಲೋಚಕರನ್ನು (PROJECT MANAGEMENT CONSULTANTS) ನೇಮಿಸಲು ಮಾನ್ಯ ಸರ್ಕಾರವು ಆದೇಶಿಸಿದ್ದು, ಅದರಂತೆ ಒಂದು ವರ್ಷದ ಅವಧಿಗೆ ಕಾಮಗಾರಿಗಳನ್ನು ನಿರ್ವಹಿಸುವ ಕಾರ್ಯಕ್ಕಾಗಿ ಯೋಜನಾ ಸಮಾಲೋಚಕರ ನೇಮಕಾತಿ ಟೆಂಡರ್‌ನ್ನು (ಇಂಡೆಂಟ್ ನಂ: DMA/2025-26/SE5851) (https://kppp.karnataka.gov.in) ನಲ್ಲಿ ಸಲ್ಲಿಸತಕ್ಕದ್ದು.
1) ಟೆಂಡರ್ ಪೂರ್ವಭಾವಿ ಸಭೆ ದಿನಾಂಕ: 19.08.2025 ರಂದು 11.00 ಘಂಟೆಗೆ.
2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:22.08.2025 ರಂದು 17.00 ಘಂಟೆಯವರೆಗೆ.
3) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 25.08.2025 ರಂದು 11.00 ಘಂಟೆಗೆ.
4) ಟೆಂಡರ್ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 28.08.2025 ರಂದು 11.00 ಘಂಟೆ ನಂತರ.

ಸಹಿ– ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ವಿಜಯಪುರ
ವಾಸಾಸಂಇ/ವಿಜಯಪುರ/241/ ಕೆಎಸ್‌ಎಂಸಿಎ/2025–26

**ಪೊಲೀಸ್ ಅಧೀಕ್ಷಕರು, ವೈರಲೆಸ್‌ರವರ ಕಛೇರಿ**
ನಂ.1, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ದೂರವಾಣಿ : +91–80–22864626, ಇ–ಮೇಲ್: spwireless@ksp.gov.in
ಟೆಂಡರ್ ಸಂಖ್ಯೆ: KSP/2025-26/IND0312/CALL-2 ದಿನಾಂಕ: 08.08.2025

**ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)**

ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಸಂಪರ್ಕ, ಲಾಜಿಸ್ಟಿಕ್ಸ್ ಮತ್ತು ಆಧುನೀಕರಣ, ಬೆಂಗಳೂರು ರವರಿಂದ ಹಾವೇರಿ ಜಿಲ್ಲೆಯ ಡಿಜಿಟಲ್ ವಿ.ಎಚ್.ಎಫ್ ರೇಡಿಯೋ ಕಮ್ಯೂನಿಕೇಷನ್ ನೆಟ್ವರ್ಕ್‌ನ ವಿನ್ಯಾಸ, ಸರಬರಾಜು, ಅಳವಡಿಕೆ ಮತ್ತು ನಿರ್ವಹಣೆಗಾಗಿ ಆನ್‌ಲೈನ್ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೌಲ್ಯ **ರೂ. 410.34 ಲಕ್ಷಗಳು,** ಟೆಂಡರ್ ಪೂರ್ವಭಾವಿ ಸಭೆಯ **ದಿನಾಂಕ : 20.08.2025 ಸಮಯ ಸಂಜೆ 11.30 ಗಂಟೆ** ಹಾಗೂ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ : 08.09.2025 ಸಮಯ ಸಂಜೆ 17.00 ಗಂಟೆಗಳು.** ಇತರೆ ಮಾಹಿತಿಯನ್ನು https://kppp.karnataka.gov.in ರಲ್ಲಿ ಪಡೆಯಬಹುದು ಹಾಗು ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಪೊಲೀಸ್ ಅಧೀಕ್ಷಕರು, ವೈರ್‌ಲೆಸ್, ಬೆಂಗಳೂರು
ವಾಸಾಸಂಇ/ವಾ.ಪ್ರ./2216/2025–26

**ಕರ್ನಾಟಕ ನೀರಾವರಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರವರ ಕಚೇರಿ, ಕ.ನೀ.ನಿ.ನಿ., ಮ.ಬ.ದ.ಕಾ.ನಿ. ವಿಭಾಗ, ನಂ. 3, ಬ್ಯಾಹಟ್ಟಿ. ತಾ॥ ಹುಬ್ಬಳ್ಳಿ, ಜಿ॥ ಧಾರವಾಡ – 580 023.
ದೂರವಾಣಿ: 0836–2315225, ಇ–ಮೇಲ್: eeknnl3byt@gmail.com
ಸಂಖ್ಯೆ : ಕ.ನೀ.ನಿ.ನಿ./ಮ.ಬ.ದ.ವಿ.–3/ಎ.ಇ.–2/ಇ–ಟೆಂಡರ್/2025–26/755
ದಿನಾಂಕ : 07–08–2025

**ಅನಿರ್ಧಿಷ್ಟಾವಧಿವರೆಗೆ ಮುಂದುಡಿಸುವ ಟೆಂಡರ್ ಪ್ರಕಟಣೆ**

ಈ ಕಚೇರಿಯ 2ನೇ – ಮುಂದೂಡಿಕೆ ಟೆಂಡರ್ ಪ್ರಕಟಣೆ ಸಂ. 405 ದಿನಾಂಕ : 17–06–2025 ರಂದು ಕರೆಯಲಾದ ಈ ಕೆಳಗೆ ನಮೂದಿಸಿರುವ ಕಾಮಗಾರಿಯು ತಾಂತ್ರಿಕ ಕಾರಣಗಳಿಂದ ಅನಿರ್ಧಿಷ್ಟಾವಧಿವರೆಗೆ ಮುಂದೂಡಿಸಿಲಾಗಿದೆ.

ಕಾಮಗಾರಿಯ ಹೆಸರು : **Flood Control and Flood Management for Management for Tuparihalla Phase-II upto Confluence of Bennihalla from Km 0.000 to Km 90.00. (WI NO. : KNNL/2024-25/FP/WORK_ INDENT2891).**

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಕ.ನೀ.ನಿ.ನಿ., ಮ.ಬ.ದ.ಕಾ.ನಿ., ವಿಭಾಗ ನಂ. 3, ಬ್ಯಾಹಟಿ.
ಡಿಐಪಿಆರ್/ಧಾರವಾಡ/529/ಮಣಿಪಾಲ್/2025–26

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆ ವಿಭಾಗ, ಪಶ್ಚಿಮ ವಲಯ ಜಂಟಿ ಆಯುಕ್ತರು (ಪಶ್ಚಿಮ) ಕಚೇರಿ ಆವರಣ, 2ನೇ ಮಹಡಿ, ಸಂಪಿಗೆ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020.
ಸಂಖ್ಯೆ:ಕಾಪಾಅ/ಯೋಪಶ್ಚಿಮ/ಟೆಂಡರ್/02/2025–26 ದಿನಾಂಕ:07.08.2025

**ಅಲ್ಪಾವಧಿ ಟೆಂಡರ್ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಪದ್ಧತಿ)**
(ಸೇವೆ ಮತ್ತು ಸಾಮಾಗ್ರಿಗಳ ಟೆಂಡರ್)

ಕಾರ್ಯಪಾಲಕ ಅಭಿಯಂತರರು, (ಯೋಜನೆ–ಪಶ್ಚಿಮ) ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳಿಗೆ ಸೇವೆಗಳು ಮತ್ತು ಸಾಮಾಗ್ರಿಗಳನ್ನು ಸರಬರಾಜು ಮಾಡಲು ಹೆಸರಾಂತ ಸೇವಾ ಪೂರೈಕೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

| ಕ್ರ. ಸಂ. | ಕಾಮಗಾರಿಯ ಹೆಸರು |
|---|---|
| 1. | ಪಶ್ಚಿಮ ವಲಯದಲ್ಲಿರುವ ಬೃ.ಬೆಂ.ಮ.ಪಾಲಿಕೆ ಶಾಲೆಗಳು ಮತ್ತು ಕಾಲೇಜುಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಸ್ವಚ್ಛತಾ ಸಿಬ್ಬಂದಿಗಳನ್ನು ಒದಗಿಸುವುದು (ಟೆಂಡರ್ ಮಾದರಿ–ಸೇವೆ) **ಅಂದಾಜು ಮೊತ್ತ : ₹ 84,99,687/- ಇಎಂಡಿ ಮೊತ್ತ: ₹ 1,70,000/-** |
| 2. | ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರ ಕೃಷ್ಣರಾಜೇಂದ್ರ ಮಾರ್ಕೆಟ್‌ನಲ್ಲಿ ಸ್ಮಾರ್ಟ್ ಪಾರ್ಕಿಂಗ್ ಸಲ್ಯೂಷನ್‌ಗಾಗಿ ಸಿವಿಲ್ ಕಾಮಗಾರಿಗಳ ಅಳವಡಿಕೆ ಒಳಗೊಂಡಂತೆ ಪಾರ್ಕಿಂಗ್ ಪ್ರದೇಶದ ಅಭಿವೃದ್ಧಿ, ಕಾರ್ಯಾಚರಣೆ ಮತ್ತು ನಿರ್ವಹಣೆ ಮಾಡುವುದು. (ಟೆಂಡರ್ ಮಾದರಿ–ಸೇವೆ) **ಅಂದಾಜು ಮೊತ್ತ : ₹ 4,32,07,651/- ಇಎಂಡಿ ಮೊತ್ತ: ₹ 4,32,100/-** |
| 3. | ಗಾಂಧಿನಗರದಲ್ಲಿ ಇಂದಿರಾ ಕ್ಯಾಂಟೀನ್ ಅಡುಗೆ ಕೋಣೆಗೆ ಅವಶ್ಯಕವಿರುವ ಅಡುಗೆ ಕೋಣೆ ಉಪಕರಣಗಳನ್ನು ಒದಗಿಸುವುದು ಮತ್ತು ಅಳವಡಿಸುವುದು (ಟೆಂಡರ್ ಮಾದರಿ–ಸಾಮಾಗ್ರಿಗಳು) **ಅಂದಾಜು ಮೊತ್ತ : ₹ 33,01,640/- ಇಎಂಡಿ ಮೊತ್ತ: ₹ 66,100/-** |
| 4. | ಮಹಾಲಕ್ಷ್ಮಿ ಬಡಾವಣೆಯಲ್ಲಿ ಇಂದಿರಾ ಕ್ಯಾಂಟೀನ್ ಅಡುಗೆ ಕೋಣೆಗೆ ಅವಶ್ಯಕವಿರುವ ಅಡುಗೆ ಕೋಣೆ ಉಪಕರಣಗಳನ್ನು ಒದಗಿಸುವುದು ಮತ್ತು ಅಳವಡಿಸುವುದು (ಟೆಂಡರ್ ಮಾದರಿ–ಸಾಮಾಗ್ರಿಗಳು) **ಅಂದಾಜು ಮೊತ್ತ : ₹ 33,01,640/- ಇಎಂಡಿ ಮೊತ್ತ: ₹ 66,100/-** |

ಟೆಂಡರ್ ವೇಳಾಪಟ್ಟಿ: (1). ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭಿಸುವ ದಿನಾಂಕ **12.08.2025**ರ ಮಧ್ಯಾಹ್ನ **3:00** ಗಂಟೆಯ ನಂತರ. (2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **16.08.2025**ರ ಸಂಜೆ **4:00** ಗಂಟೆಗೆ ನಡೆಸಲಾಗುವುದು. (3) ಟೆಂಡರ್‌ಗಳನ್ನು ಅಪ್‌ಲೊಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ **25.08.2025**ರ ಸಂಜೆ **4:00** ಗಂಟೆಯವರೆಗೆ. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **26.08.2025**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. (5) ಆರ್ಥಿಕ ಬಿಡ್‌ಗಳನ್ನು ದಿನಾಂಕ **28.08.2025**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು (ಸಾಧ್ಯವಾದಲ್ಲಿ)

ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನೆ – ಪಶ್ಚಿಮ

# ತೈಲ ಕಂಪನಿಗಳಿಗೆ ₹30 ಸಾವಿರ ಕೋಟಿ ನೆರವು

## ಕಡಿಮೆ ಬೆಲೆಗೆ ಎಲ್‌ಪಿಜಿ ಮಾರಾಟ ಮಾಡಿದ್ದರಿಂದ ಉಂಟಾದ ನಷ್ಟ ಸರಿದೂಗಿಸಲು ಸಬ್ಸಿಡಿ • 12 ಕಂತುಗಳಲ್ಲಿ ಪಾವತಿ: ಕೇಂದ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ನಿಯಂತ್ರಿತ ಬೆಲೆಯಲ್ಲಿ ಮನೆಗಳಿಗೆ ಅಡುಗೆ ಅನಿಲ ಸಿಲಿಂಡರ್‌ಗಳನ್ನು ಪೂರೈಸಿದ್ದಕ್ಕಾಗಿ ಸರ್ಕಾರಿ ಸ್ವಾಮ್ಯದ ಮೂರು ತೈಲ ಮಾರುಕಟ್ಟೆ ಕಂಪನಿಗಳಾದ ಇಂಡಿಯನ್ ಆಯಿಲ್, ಭಾರತ್ ಪೆಟ್ರೋಲಿಯಂ ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂಗೆ ಪರಿಹಾರವಾಗಿ ₹30 ಸಾವಿರ ಕೋಟಿ ನೀಡುವುದಾಗಿ ಕೇಂದ್ರ ಸರ್ಕಾರ ಶುಕ್ರವಾರ ಘೋಷಿಸಿದೆ.

ಪ್ರಸ್ತುತ ಭೌಗೋಳಿಕ ರಾಜಕೀಯ ಸನ್ನಿವೇಶಗಳು, ತೈಲ ಮತ್ತು ಅನಿಲ ವಲಯದಲ್ಲಿನ ಅನಿಶ್ಚಿತತೆ ಗಮನದಲ್ಲಿಟ್ಟುಕೊಂಡು ಈ ಸಬ್ಸಿಡಿ ನೀಡಲು ನಿರ್ಧರಿಸಲಾಗಿದೆ ಎಂದು ಕೇಂದ್ರ ವಾರ್ತಾ ಹಾಗೂ ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಸುದ್ದಿಗಾರರಿಗೆ ತಿಳಿಸಿದರು. ರಷ್ಯಾದಿಂದ ಕಚ್ಚಾ ತೈಲ ಖರೀದಿ ನಿಲ್ಲಿಸುವಂತೆ ಅಮೆರಿಕ ಒತ್ತಡ ಹೇರುತ್ತಿರುವುದರಿಂದ ಭಾರತದಲ್ಲಿ ಇಂಧನ ಬೆಲೆಗಳು ಹೆಚ್ಚಳವಾಗುವ ನಿರೀಕ್ಷೆ ಇದೆ.

ಕಳೆದ 15 ತಿಂಗಳುಗಳಲ್ಲಿ ಕಡಿಮೆ ಬೆಲೆಗೆ ಎಲ್‌ಪಿಜಿ ಮಾರಾಟ ಮಾಡಿರುವುದರಿಂದ ಉಂಟಾದ ನಷ್ಟ ಸರಿದೂಗಿಸಲು ಸಬ್ಸಿಡಿ ನೀಡಲು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಲಾಗಿದೆ. ತೈಲ ಮಾರುಕಟ್ಟೆ ಕಂಪನಿಗಳಿಗೆ 12 ಕಂತುಗಳಲ್ಲಿ ಈ ಮೊತ್ತ ಪಾವತಿಸಲಾಗುವುದು.

2024-25ರಲ್ಲಿ ಎಲ್‌ಪಿಜಿಯ ಅಂತರರಾಷ್ಟ್ರೀಯ ಬೆಲೆ ಗರಿಷ್ಠ ಮಟ್ಟದಲ್ಲಿದ್ದವು. ಆದಾಗ್ಯೂ, ದೇಶದಲ್ಲಿ ಎಲ್‌ಪಿಜಿ ಬೆಲೆ ಹೆಚ್ಚಳವಾಗದಂತೆ ನೋಡಿಕೊಳ್ಳಲಾಗಿತ್ತು. ಇದರಿಂದಾಗಿ, ಮೂರು ಕಂಪನಿಗಳು ಗಮನಾರ್ಹ ನಷ್ಟ ಅನುಭವಿಸಿದ್ದವು. ಈ ಸಬ್ಸಿಡಿಯಿಂದಾಗಿ ಕಚ್ಚಾ ತೈಲ ಮತ್ತು ಎಲ್‌ಪಿಜಿ ಖರೀದಿ, ಸಾಲ ಮರುಪಾವತಿ ಮತ್ತು ಬಂಡವಾಳ ವೆಚ್ಚದಂತಹ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಕಂಪನಿಗಳಿಗೆ ಅನುಕೂಲವಾಗಲಿದೆ. ಇದರಿಂದಾಗಿ ದೇಶದಾದ್ಯಂತ ಮನೆಗಳಿಗೆ ಎಲ್‌ಪಿಜಿ ಸಿಲಿಂಡರ್‌ಗಳ ನಿರಂತರ ಪೂರೈಕೆ ಖಚಿತಪಡಿಸಲು ಸಾಧ್ಯವಾಗಲಿದೆ ಎಂದು ಸಚಿವರು ತಿಳಿಸಿದರು.

### ಉಜ್ವಲ ಯೋಜನೆಗೆ ₹12 ಸಾವಿರ ಕೋಟಿ

2025-26ನೇ ಸಾಲಿನಲ್ಲಿ ಪ್ರಧಾನ ಮಂತ್ರಿ ಉಜ್ವಲ ಯೋಜನೆ ಅಡಿಯಲ್ಲಿ ₹12 ಸಾವಿರ ಕೋಟಿ ಸಬ್ಸಿಡಿ ನೀಡಲು ಸಂಪುಟ ಅನುಮೋದಿಸಿದೆ.

ದೇಶದಾದ್ಯಂತ ಬಡ ಕುಟುಂಬಗಳ ವಯಸ್ಕ ಮಹಿಳೆಯರಿಗೆ ಉಚಿತ ಎಲ್‌ಪಿಜಿ ಸಂಪರ್ಕ ಒದಗಿಸಲು ಈ ಯೋಜನೆಯನ್ನು 2016ರ ಮೇ ತಿಂಗಳಲ್ಲಿ ಪ್ರಾರಂಭಿಸಲಾಗಿತ್ತು. ಈ ಯೋಜನೆಯಡಿ ದೇಶದಲ್ಲಿ 10.33 ಕೋಟಿ ಸಂಪರ್ಕಗಳಿವೆ.

ಈ ಯೋಜನೆಯ ಫಲಾನುಭವಿಗಳಿಗೆ 14.2 ಕೆ.ಜಿ ತೂಕದ ಅಡುಗೆ ಅನಿಲ ಸಿಲಿಂಡರ್‌ಗೆ ವರ್ಷಕ್ಕೆ 9 ಪುನರ್ ಭರ್ತಿಗೊಳಿಸುವಿಕೆ (ಮತ್ತು 5 ಕೆ.ಜಿ ಸಿಲಿಂಡರ್‌ಗೆ ಅನುಗುಣವಾದ ಅನುಪಾತದಲ್ಲಿ) ₹300 ಸಬ್ಸಿಡಿ ನೀಡುವ ಪ್ರಸ್ತಾವಕ್ಕೆ ಸಂಪುಟ ಅನುಮೋದನೆ ನೀಡಿದೆ ಎಂದು ವೈಷ್ಣವ್ ತಿಳಿಸಿದರು. ಭಾರತವು ತನ್ನ ಎಲ್‌ಪಿಜಿಯ ಅಗತ್ಯದ ಸುಮಾರು 60 ಪ್ರತಿಶತವನ್ನು ಆಮದು ಮಾಡಿಕೊಳ್ಳುತ್ತದೆ.

### ತಾಂತ್ರಿಕ ಸಂಸ್ಥೆಗಳ ಸುಧಾರಣೆಗೆ ಅನುದಾನ

175 ಎಂಜಿನಿಯರಿಂಗ್ ಸಂಸ್ಥೆಗಳು ಮತ್ತು 100 ಪಾಲಿಟೆಕ್ನಿಕ್‌ಗಳನ್ನು ಒಳಗೊಂಡಿರುವ 275 ತಾಂತ್ರಿಕ ಸಂಸ್ಥೆಗಳಲ್ಲಿ ಬಹುಶಿಸ್ತೀಯ ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣದಲ್ಲಿ ಸಂಶೋಧನಾ ಸುಧಾರಣೆ ಯೋಜನೆ ಅನುಷ್ಠಾನಗೊಳಿಸುವ ಪ್ರಸ್ತಾವಕ್ಕೆ ಸಂಪುಟ ಒಪ್ಪಿಗೆ ಕೊಟ್ಟಿದೆ.

ಈ ಯೋಜನೆಗೆ 2025-26ರಿಂದ 2029-30ರವರೆಗೆ ₹4,200 ಕೋಟಿ ವೆಚ್ಚ ಮಾಡಲಾಗುತ್ತದೆ. ಇದರಲ್ಲಿ ₹2,100 ಕೋಟಿಯನ್ನು ವಿಶ್ವ ಬ್ಯಾಂಕ್‌ನಿಂದ ಸಾಲ ಪಡೆಯಲಾಗುತ್ತದೆ.

# ರಾಜ್ಯದಲ್ಲಿ ರಸಗೊಬ್ಬರ ಕೊರತೆ ಇಲ್ಲ

ಕರ್ನಾಟಕದಲ್ಲಿ ಮುಂಗಾರು ಹಂಗಾಮಿನಲ್ಲಿ ರೈತರಿಗೆ ಬೇಕಿರುವಷ್ಟು ರಸಗೊಬ್ಬರ ದಾಸ್ತಾನು ಇದೆ ಎಂದು ಕೇಂದ್ರ ರಸಗೊಬ್ಬರ ಖಾತೆಯ ರಾಜ್ಯ ಸಚಿವೆ ಅನುಪ್ರಿಯಾ ಪಟೇಲ್ ತಿಳಿಸಿದರು.

ಲೋಕಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ ಕೇಳಿದ ಪ್ರಶ್ನೆಗೆ ಅವರು ಶುಕ್ರವಾರ ಈ ಉತ್ತರ ನೀಡಿದರು.

ಪ್ರತಿ ಬೆಳೆ ಋತುವಿನ ಆರಂಭದ ಮೊದಲು, ಕೃಷಿ ಮತ್ತು ರೈತ ಕಲ್ಯಾಣ ಇಲಾಖೆಯು ಎಲ್ಲ ರಾಜ್ಯ ಸರ್ಕಾರಗಳೊಂದಿಗೆ ಸಮಾಲೋಚಿಸಿ, ರಾಜ್ಯವಾರು ಮತ್ತು ಮಾಸಿಕ ರಸಗೊಬ್ಬರಗಳ ಅಗತ್ಯವನ್ನು ನಿರ್ಣಯಿಸುತ್ತದೆ. ರಾಜ್ಯಗಳಿಗೆ ಸಾಕಷ್ಟು ಪ್ರಮಾಣದ ರಸಗೊಬ್ಬರಗಳನ್ನು ಹಂಚಿಕೆ ಮಾಡುತ್ತದೆ ಮತ್ತು ಲಭ್ಯತೆಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡುತ್ತದೆ ಎಂದರು.

| ಕರ್ನಾಟಕದಲ್ಲಿ ರಸಗೊಬ್ಬರ ದಾಸ್ತಾನು (ಆ. 04 ವರೆಗೆ) (ಲಕ್ಷ ಟನ್‌ಗಳಲ್ಲಿ) | | | | | |
|---|---|---|---|---|---|
| ಉತ್ಪನ್ನ | ಮುಂಗಾರಿನ ಬೇಡಿಕೆ | ಏಪ್ರಿಲ್‌ನಿಂದ ಆಗಸ್ಟ್‌ವರೆಗೆ ಬೇಡಿಕೆ | ಲಭ್ಯತೆ | ಈವರೆಗೆ ಮಾರಾಟ | ಸಂಗ್ರಹ |
| ಯೂರಿಯಾ | 11.17 | 7.09 | 9.25 | 8.28 | 0.97 |
| ಡಿಎಪಿ | 4 | 3.09 | 3.22 | 2.56 | 0.66 |
| ಎಂಒಪಿ | 1.30 | 0.88 | 1.60 | 1.03 | 0.57 |
| ಎನ್‌ಪಿಕೆಎಸ್ | 9.90 | 6.70 | 13.24 | 9.55 | 3.70 |

**ಕಳಪೆ ರಸಗೊಬ್ಬರ- ಐದು ಎಫ್‌ಐಆರ್:** ದಾವಣಗೆರೆ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಪ್ರಶ್ನೆಗೆ ಉತ್ತರಿಸಿರುವ ಸಚಿವರು, 'ರೈತರಿಗೆ ನಕಲಿ ಅಥವಾ ಕಳಪೆ ಗುಣಮಟ್ಟದ ರಸಗೊಬ್ಬರಗಳನ್ನು ಮಾರಾಟ ಮಾಡುತ್ತಿರುವ ಕೆಲವು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿವೆ. ಪ್ರಸ್ತುತ ವರ್ಷದಲ್ಲಿ, ರಾಜ್ಯದಲ್ಲಿ 05 ಪ್ರಕರಣಗಳನ್ನು ದಾಖಲಿಸಲಾಗಿದೆ. ಬಾಗಲಕೋಟೆ ಜಿಲ್ಲೆಯಲ್ಲಿ ಎರಡು ಹಾಗೂ ಹಾವೇರಿಯಲ್ಲಿ ಎರಡು ಪ್ರಕರಣಗಳು ದಾಖಲಾಗಿವೆ ಎಂದರು.

# ಪಿ.ಎಂ ಕಿಸಾನ್ ಸಮ್ಮಾನ್: ಕರ್ನಾಟಕದ ರೈತರಿಗೆ ₹15,127 ಕೋಟಿ ವಿತರಣೆ

ಕೇಂದ್ರ ಸರ್ಕಾರದ ಪ್ರಮುಖ ಯೋಜನೆಯಾದ ಪಿಎಂ-ಕಿಸಾನ್ ಸಮ್ಮಾನ್ ಯೋಜನೆಯಡಿ 2020ರ ಏಪ್ರಿಲ್‌ನಿಂದ ಇಲ್ಲಿಯವರೆಗೆ ಕರ್ನಾಟಕದ ಫಲಾನುಭವಿಗಳಿಗೆ ಒಟ್ಟು ₹15,127.88 ಕೋಟಿ ವಿತರಿಸಲಾಗಿದೆ ಎಂದು ಕೇಂದ್ರ ಕೃಷಿ ಸಚಿವಾಲಯ ತಿಳಿಸಿದೆ.

ರಾಜ್ಯಸಭೆಯಲ್ಲಿ ಶುಕ್ರವಾರ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಲಹರ್ ಸಿಂಗ್ ಸಿರೋಯಾ ಕೇಳಿರುವ ಪ್ರಶ್ನೆಗೆ ಉತ್ತರ ನೀಡಿರುವ ಕೃಷಿ ಖಾತೆ ರಾಜ್ಯ ಸಚಿವ ರಾಮನಾಥ ಠಾಕೂರ್, 'ಏಪ್ರಿಲ್-ಜೂನ್ ತ್ರೈಮಾಸಿಕದಲ್ಲಿ 43,29,135 ಫಲಾನುಭವಿಗಳಿಗೆ 20ನೇ ಕಂತಿನ ₹877.32 ಕೋಟಿ ವಿತರಿಸಲಾಗಿದೆ ಎಂದರು.

ಯೋಜನೆ ಪ್ರಾರಂಭವಾದಾಗಿನಿಂದ ಕೇಂದ್ರವು ದೇಶದಾದ್ಯಂತ ರೈತರಿಗೆ 20 ಕಂತುಗಳಲ್ಲಿ ₹3.90 ಲಕ್ಷ ಕೋಟಿಗೂ ಹೆಚ್ಚು ಹಣ ವಿತರಿಸಿದೆ ಎಂದು ಅವರು ಮಾಹಿತಿ ನೀಡಿದರು.

# ಸುದ್ದಿ 2 ನಿಮಿಷ

## ಇ.ವಿ ಮಾರಾಟ ಶೇ 93 ಏರಿಕೆ

ನವದೆಹಲಿ (ಪಿಟಿಐ): ವಿದ್ಯುತ್‌ಚಾಲಿತ ಪ್ರಯಾಣಿಕ ವಾಹನಗಳ ಚಿಲ್ಲರೆ ಮಾರಾಟವು ಜುಲೈ ತಿಂಗಳಿನಲ್ಲಿ ಶೇ 93ರಷ್ಟು ಏರಿಕೆಯಾಗಿದೆ ಎಂದು ವಾಹನ ವಿತರಕರ ಸಂಘಟನೆಗಳ ಒಕ್ಕೂಟ (ಎಫ್‌ಎಡಿಎ) ಶುಕ್ರವಾರ ತಿಳಿಸಿದೆ.

ಕಳೆದ ಜುಲೈನಲ್ಲಿ 8,037 ವಾಹನಗಳು ಮಾರಾಟವಾಗಿದ್ದವು. ಈ ಬಾರಿ 15,528 ಮಾರಾಟವಾಗಿವೆ ಎಂದು ತಿಳಿಸಿದೆ.

ಟಾಟಾ ಮೋಟರ್ಸ್ ಕಂಪನಿಯ ವಾಹನಗಳ ಮಾರಾಟದಲ್ಲಿ ಶೇ 19ರಷ್ಟು ಹೆಚ್ಚಳವಾಗಿದ್ದು, 6,047 ವಾಹನಗಳು ಮಾರಾಟವಾಗಿವೆ. ವಿದ್ಯುತ್‌ಚಾಲಿತ ದ್ವಿಚಕ್ರ ವಾಹನಗಳ ಮಾರಾಟದಲ್ಲಿ ಶೇ 4ರಷ್ಟು ಕಡಿಮೆಯಾಗಿದ್ದು, 1,02,973 ವಾಹನಗಳು ಮಾರಾಟವಾಗಿವೆ.

ಟಿವಿಎಸ್ ಮೋಟರ್ ಕಂಪನಿಯ 22,256 ವಾಹನಗಳು ಮಾರಾಟವಾಗಿವೆ. ಕಳೆದ ಜುಲೈನಲ್ಲಿ 19,655 ಮಾರಾಟವಾಗಿದ್ದವು. ವಿದ್ಯುತ್‌ಚಾಲಿತ ತ್ರಿಚಕ್ರ ವಾಹನಗಳ ಮಾರಾಟದಲ್ಲಿ ಶೇ 9ರಷ್ಟು ಹೆಚ್ಚಳವಾಗಿದ್ದು, 69,146 ಮಾರಾಟವಾಗಿವೆ. ಮಹೀಂದ್ರ ಸಮೂಹದ 9,766 ವಾಹನಗಳು ಮಾರಾಟವಾಗಿವೆ. ವಿದ್ಯುತ್‌ಚಾಲಿತ ವಾಣಿಜ್ಯ ವಾಹನಗಳ ಚಿಲ್ಲರೆ ಮಾರಾಟವು ಶೇ 52ರಷ್ಟು ಹೆಚ್ಚಳವಾಗಿದ್ದು, 1,244 ಮಾರಾಟವಾಗಿವೆ.

'ಸರ್ಕಾರದ ಯೋಜನೆಗಳ ಬೆಂಬಲ, ಹಣಕಾಸಿನ ನೆರವು, ಚಾರ್ಜಿಂಗ್ ಮೂಲಸೌಕರ್ಯ ಕೇಂದ್ರಗಳ ತ್ವರಿತ ವಿಸ್ತರಣೆಯು ವಾಹನಗಳ ಮಾರಾಟದ ಹೆಚ್ಚಳಕ್ಕೆ ಕಾರಣವಾಗಿದೆ' ಎಂದು ಎಫ್‌ಎಡಿಎ ಅಧ್ಯಕ್ಷ ಸಿ.ಎಸ್.ವಿಘ್ನೇಶ್ವರ್ ತಿಳಿಸಿದ್ದಾರೆ.

## ಆರ್ಥಿಕ ಅಂಶ ಪರಿಗಣಿಸಿ ತೈಲ ಖರೀದಿ–ಎಚ್‌ಪಿಸಿಎಲ್

ನವದೆಹಲಿ (ಪಿಟಿಐ): ರಷ್ಯಾದಿಂದ ತೈಲ ಖರೀದಿ ಮುಂದುವರಿಸಲು ಅಥವಾ ನಿಲ್ಲಿಸಲು ಕೇಂದ್ರ ಸರ್ಕಾರ ಯಾವುದೇ ಸೂಚನೆ ನೀಡಿಲ್ಲ ಎಂದು ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಎಚ್‌ಪಿಸಿಎಲ್) ಶುಕ್ರವಾರ ತಿಳಿಸಿದೆ.

ಆರ್ಥಿಕ ಅಂಶಗಳನ್ನು ಪರಿಗಣಿಸಿ ತೈಲ ಖರೀದಿಸುವ ಸ್ವಾತಂತ್ರ್ಯವನ್ನು ಸರ್ಕಾರ ನೀಡಿದೆ ಎಂದು ಎಚ್‌ಪಿಸಿಎಲ್ ಅಧ್ಯಕ್ಷ ವಿಕಾಸ್ ಕೌಶಲ್ ಶುಕ್ರವಾರ ತಿಳಿಸಿದ್ದಾರೆ.

ಜೂನ್ ತ್ರೈಮಾಸಿಕದಲ್ಲಿ ಕಂಪನಿಯು ಪೆಟ್ರೋಲ್ ಮತ್ತು ಡೀಸೆಲ್ ಆಗಿ ಸಂಸ್ಕರಿಸಿದ ಒಟ್ಟು ಕಚ್ಚಾ ತೈಲದಲ್ಲಿ, ರಷ್ಯಾದ ಪಾಲು ಶೇ 13.2ರಷ್ಟಿದೆ. ರಷ್ಯಾದಿಂದ ಸಂಪೂರ್ಣವಾಗಿ ಕಚ್ಚಾ ತೈಲ ಆಮದು ನಿಲ್ಲಿಸಿದರೂ, ಭಾರತದ ಮೇಲೆ ಹೆಚ್ಚಿನ ಪರಿಣಾಮ ಬೀರಲ್ಲ ಎಂದು ತಿಳಿಸಿದ್ದಾರೆ.

ಜುಲೈನಲ್ಲಿ ಪ್ರತಿ ದಿನ 16 ಲಕ್ಷ ಬ್ಯಾರೆಲ್ ಕಚ್ಚಾ ತೈಲ ಖರೀದಿಸುವ ಮೂಲಕ ಭಾರತವು, ರಷ್ಯಾದ ಅತಿದೊಡ್ಡ ಕಚ್ಚಾ ತೈಲ ಆಮದು ಮಾಡಿಕೊಳ್ಳುವ ದೇಶವಾಗಿತ್ತು. ಆಗಸ್ಟ್ ಮತ್ತು ಸೆಪ್ಟೆಂಬರ್‌ಗೆ ತೈಲ ಖರೀದಿ ಸಂಬಂಧ ಯಾವುದೇ ಕಾರ್ಯಾದೇಶ ನೀಡಿಲ್ಲ. ಜೂನ್ ತ್ರೈಮಾಸಿಕದಲ್ಲಿ ಕಂಪನಿಯು 66 ಲಕ್ಷ ಟನ್ ಕಚ್ಚಾ ತೈಲವನ್ನು ಸಂಸ್ಕರಣೆ ಮಾಡಿತ್ತು ಎಂದು ಹೇಳಿದ್ದಾರೆ.

**ಷೇರುಪೇಟೆ ವಹಿವಾಟು**




**ಎನ್‌ಎಸ್‌ಇ ನಿಫ್ಟಿ**
ಹಿಂದಿನ ಅಂತ್ಯ: 24,596
ಇಂದಿನ ಅಂತ್ಯ: 24,363
ದಿನದ ಕನಿಷ್ಠ: 24,337
↓ 232

**ಮೊಟ್ಟೆ ಧಾರಣೆ (ಎನ್‌ಇಸಿಸಿ)**
ಬೆಂಗಳೂರು: 100 ಕ್ಕೆ ₹490; 12 ಕ್ಕೆ ₹66
ಮೈಸೂರು: 100 ಕ್ಕೆ ₹500

**ರಾಮನಗರ ರೇಷ್ಮೆಗೂಡು**
ಮಿಶ್ರತಳಿ(ಸಿ.ಬಿ) ₹336-660
ದ್ವಿತಳಿ (ಬಿ.ವಿ) ₹400-789

**ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)**
ಆರ್‌ಎಸ್‌ಎಸ್-4 ₹200
ಆರ್‌ಎಸ್‌ಎಸ್-5 ₹194
ಗುಡ್ ಲಾಟ್ ₹178

**ಅಡಿಕೆ ಧಾರಣೆ**

| ಕುಮಟಾ | |
|---|---|
| ಚಾಲಿ | 38998-42599 |
| ಚಿಪ್ಪು | 24509-31289 |
| ಕೋಕ | 7069-22719 |
| ಫ್ಯಾಕ್ಟರಿ | 4890-29300 |
| ಹೊಸಚಾಲಿ | 35599-42799 |
| **ಕುಮಟಾ** | |
| ಕೋಕ | 20000-28000 |
| ಹೊಸತು | 26000-48500 |
| **ಶಿವಮೊಗ್ಗ** | |
| ಬೆಟ್ಟೆ | 55500-60599 |
| ಗೊರಬಲು | 12009-34699 |
| ರಾಶಿ | 46158-58701 |
| ಸರಕು | 68009-89240 |
| **ಸಿದ್ದಾಪುರ** | |
| ಬಿಳಿಗೋಟು | 25259-32122 |
| ಚಾಲಿ | 35039-42333 |
| ಕೋಕ | 16319-25099 |
| ಕೆಂಪುಗೋಟು | 20219-23700 |
| ರಾಶಿ | 44699-50399 |
| ತಟ್ಟಿಬೆಟ್ಟೆ | 32319-39099 |
| **ಶಿರಸಿ** | |
| ಬೆಟ್ಟೆ | 27899-46259 |
| ಬಿಳಿಗೋಟು | 24199-33898 |
| ಚಾಲಿ | 38099-43629 |
| ರಾಶಿ | 45100-49600 |
| **ಯಲ್ಲಾಪುರ** | |
| ಅಪಿ | 58199-65699 |
| ಬಿಳಿಗೋಟು | 17691-32589 |
| ಚಾಲಿ | 34500-43699 |
| ಕೋಕ | 10112-19308 |
| ಕೆಂಪುಗೋಟು | 18499-26009 |
| ರಾಶಿ | 40921-57399 |
| ತಟ್ಟಿಬೆಟ್ಟೆ | 28099-37919 |

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

# ಎಸ್‌ಬಿಐ ಲಾಭ ಶೇ 12ರಷ್ಟು ಹೆಚ್ಚಳ

## ಕಾರ್ಪೊರೇಟ್ ಸಾಲ ನೀಡಿಕೆ ಎರಡಂಕಿ: ಸಿ.ಎಸ್. ಸೆಟ್ಟಿ

ನವದೆಹಲಿ/ಬೆಂಗಳೂರು (ಪಿಟಿಐ/ರಾಯಿಟರ್ಸ್): ಪ್ರಸಕ್ತ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ₹19,160 ಕೋಟಿ ನಿವ್ವಳ ಲಾಭ ಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹17,035 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದ ಪ್ರಮಾಣದಲ್ಲಿ ಶೇ 12ರಷ್ಟು ಹೆಚ್ಚಳವಾಗಿದೆ ಎಂದು ಬ್ಯಾಂಕ್ ಷೇರುಪೇಟೆಗೆ ಶುಕ್ರವಾರ ತಿಳಿಸಿದೆ.

ಕಳೆದ ಜೂನ್ ತ್ರೈಮಾಸಿಕದಲ್ಲಿ ಒಟ್ಟು ₹1,22,688 ಕೋಟಿ ವರಮಾನ ಗಳಿಸಿತ್ತು. ಈ ಬಾರಿ ₹1,35,342 ಕೋಟಿ ಗಳಿಸಿದೆ. ಬಡ್ಡಿ ಮೂಲಕ ₹1,17,996 ಕೋಟಿ ಗಳಿಸಲಾಗಿದೆ. ಕಾರ್ಯಾಚರಣೆ ಲಾಭ ₹30,544 ಕೋಟಿಯಾಗಿದೆ ಎಂದು ತಿಳಿಸಿದೆ.

ಒಟ್ಟು ವಸೂಲಾಗದ ಸಾಲದ ಪ್ರಮಾಣವು (ಜಿಎನ್‌ಪಿಎ) ಶೇ 1.83ಕ್ಕೆ ಇಳಿದಿದೆ. ನಿವ್ವಳ ಎನ್‌ಪಿಎ ಶೇ 0.57ರಿಂದ ಶೇ 0.47ಕ್ಕೆ ತಗ್ಗಿದೆ. ಬ್ಯಾಂಕ್‌ನ ಸಮರ್ಪಕ ಬಂಡವಾಳ ಅನುಪಾತವು (ಸಿಎಆರ್) ಶೇ 13.86ರಿಂದ ಶೇ 14.63ಕ್ಕೆ ಏರಿಕೆಯಾಗಿದೆ ಎಂದು ತಿಳಿಸಿದೆ.

'ಅಮೆರಿಕದ ಸುಂಕ ಅನಿಶ್ಚಿತತೆಯ ನಡುವೆಯೂ ಬ್ಯಾಂಕ್‌ನ ಕಾರ್ಪೊರೇಟ್ ಸಾಲ ನೀಡಿಕೆ ಪ್ರಮಾಣವು ಎರಡಂಕಿ ಬೆಳವಣಿಗೆ ದಾಖಲಿಸುವ ವಿಶ್ವಾಸವನ್ನು ಹೊಂದಲಾಗಿದೆ' ಎಂದು ಬ್ಯಾಂಕ್‌ನ ಅಧ್ಯಕ್ಷ ಸಿ.ಎಸ್.ಸೆಟ್ಟಿ ಹೇಳಿದ್ದಾರೆ.

ಅಮೆರಿಕದ ಸುಂಕದಿಂದ ವ್ಯವಹಾರದ ಮೇಲೆ ನೇರ ಪರಿಣಾಮ ಕಡಿಮೆ ಇರಲಿದೆ. ಅನಿಶ್ಚಿತತೆಯು ವ್ಯವಹಾರಗಳನ್ನು ನಿಧಾನಗೊಳಿಸಬಹುದು, ಇದು ಹೂಡಿಕೆ ನಿರ್ಧಾರಗಳನ್ನು ವಿಳಂಬಗೊಳಿಸಬಹುದು. ಆದರೂ, ಈ ಆರ್ಥಿಕ ವರ್ಷದಲ್ಲಿ ಕಾರ್ಪೊರೇಟ್ ಸಾಲ ನೀಡಿಕೆ ಪ್ರಮಾಣ ಶೇ 10ರಷ್ಟು ಬೆಳವಣಿಗೆ ಕಾಣುವ ನಿರೀಕ್ಷೆಯಿದೆ ಎಂದು ತಿಳಿಸಿದ್ದಾರೆ.

### ಬ್ಯಾಂಕ್‌ಗಳ ಲಾಭ ₹44,218 ಕೋಟಿ

ನವದೆಹಲಿ (ಪಿಟಿಐ): ಸಾರ್ವಜನಿಕ ವಲಯದ 12 ಬ್ಯಾಂಕ್‌ಗಳು ಜೂನ್ ತ್ರೈಮಾಸಿಕದಲ್ಲಿ ₹44,218 ಕೋಟಿ ಲಾಭ ಗಳಿಸಿವೆ.

ಕಳೆದ ಜೂನ್ ತ್ರೈಮಾಸಿಕದಲ್ಲಿ ₹39,974 ಕೋಟಿ ಲಾಭ ಗಳಿಸಿದ್ದವು. ಇದಕ್ಕೆ ಹೋಲಿಸಿದರೆ ಲಾಭದ ಪ್ರಮಾಣದಲ್ಲಿ ಶೇ 11ರಷ್ಟು ಹೆಚ್ಚಳವಾಗಿದೆ. ಈ ಲಾಭದಲ್ಲಿ ಎಸ್‌ಬಿಐ ಪಾಲು ಶೇ 43ರಷ್ಟಿದ್ದು, ₹19,160 ಕೋಟಿ ಆಗಿದೆ.

ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ₹1,111 ಕೋಟಿ, ಪಂಜಾಬ್ ಆ್ಯಂಡ್ ಸಿಂಧ್ ಬ್ಯಾಂಕ್ ₹269 ಕೋಟಿ, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ₹1,169 ಕೋಟಿ, ಇಂಡಿಯನ್ ಬ್ಯಾಂಕ್ ₹2,973 ಕೋಟಿ, ಬ್ಯಾಂಕ್ ಆಫ್ ಮಹಾರಾಷ್ಟ್ರ ₹1,593 ಕೋಟಿ ಲಾಭ ಗಳಿಸಿವೆ. ಆದರೆ, ಪಂಜಾಬ್ ನ್ಯಾಷನಲ್ ಬ್ಯಾಂಕ್ ಲಾಭದಲ್ಲಿ ಶೇ 48ರಷ್ಟು ಇಳಿಕೆಯಾಗಿದ್ದು, ₹1,675 ಕೋಟಿಯಾಗಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

**ನಿಧನ**

ಕೃಷ್ಣ ರೆಡ್ಡಿ
(ನಿವೃತ್ತ ಆರ್ಮಿ)
06.03.1950 – 07.08.2025
ಇವರು ದಿನಾಂಕ: 07-08-2025 ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ನಂ. 761, ಹೊಸ ಬಡಾವಣೆ, ಕಾಡುಗೋಡಿ ಪ್ಲಾಂಟೇಷನ್, ಕಾಡುಗೋಡಿ, ಬೆಂಗಳೂರು-560067.
ದುಃಖತಪ್ತರು: ಕುಟುಂಬ ವರ್ಗ
Mob: 8970897993, 9900747465

## ಮೋದಿ–ಪುಟಿನ್ ಮಾತುಕತೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರೊಂದಿಗೆ ದೂರವಾಣಿ ಮೂಲಕ ಶುಕ್ರವಾರ ಮಾತುಕತೆ ನಡೆಸಿದರು.

ಭಾರತ–ರಷ್ಯಾ ನಡುವಣ ಕಾರ್ಯತಂತ್ರದ ಪಾಲುದಾರಿಕೆಯ ವೃದ್ಧಿ ಮತ್ತಿತರ ವಿಚಾರಗಳ ಬಗ್ಗೆ ಉಭಯ ದೇಶಗಳ ನಾಯಕರು ಚರ್ಚೆ ನಡೆಸಿದರು.

ಉಕ್ರೇನ್‌ನೊಂದಿಗಿನ ಯುದ್ಧದ ಬಗ್ಗೆ ಪುಟಿನ್ ಅವರು ಸಂಕ್ಷಿಪ್ತವಾಗಿ ವಿವರಿಸಿದರು. ಉಭಯ ದೇಶಗಳ ನಡುವಣ ವ್ಯಾಜ್ಯವನ್ನು ಶಾಂತಿಯುತ ಮಾರ್ಗದ ಮೂಲಕವೇ ಪರಿಹರಿಸಿಕೊಳ್ಳಲು ಭಾರತ ಒತ್ತಾಯಿಸುತ್ತದೆ ಎಂದು ಮೋದಿ ಅವರು ತಿಳಿಸಿದರು.

ರಷ್ಯಾದಿಂದ ಕಚ್ಚಾತೈಲ ಖರೀದಿಸುತ್ತಿರುವ ಭಾರತದ ಮೇಲೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಒತ್ತಡ ಹೇರುತ್ತಿರುವ ಮಧ್ಯೆಯೇ ಮೋದಿ–ಪುಟಿನ್ ಮಾತುಕತೆ ನಡೆಸಿರುವುದು ಮಹತ್ವ ಪಡೆದಿದೆ.

## ಸಂಕ್ಷಿಪ್ತ ಸುದ್ದಿ

### ಸೆನ್ಸೆಕ್ಸ್ 765 ಅಂಶ ಕುಸಿತ



ಮುಂಬೈ (ಪಿಟಿಐ): ವಿದೇಶಿ ಬಂಡವಾಳದ ನಿರಂತರ ಹೊರಹರಿವು ಮತ್ತು ಅಮೆರಿಕದ ಸುಂಕ ನೀತಿಯಿಂದಾಗಿ ದೇಶದ ಷೇರುಪೇಟೆ ಸೂಚ್ಯಂಕಗಳು ಶುಕ್ರವಾರದ ವಹಿವಾಟಿನಲ್ಲಿ ಇಳಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 765 ಅಂಶ ಇಳಿಕೆಯಾಗಿ, 79,857ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 232 ಅಂಶ ಕಡಿಮೆಯಾಗಿ, 24,363ಕ್ಕೆ ಕೊನೆಗೊಂಡಿದೆ.

### 'ಆದಾಯ– ತೆರಿಗೆ ಮಸೂದೆ' ವಾಪಸ್

ನವದೆಹಲಿ: 'ಆದಾಯ– ತೆರಿಗೆ ಮಸೂದೆ, 2025' ಅನ್ನು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ವಿರೋಧ ಪಕ್ಷಗಳ ಗದ್ದಲದ ನಡುವೆಯೇ ಲೋಕಸಭೆಯಲ್ಲಿ ಹಿಂಪಡೆದರು.

ಈ ಮಸೂದೆಗೆ ಸಂಬಂಧಿಸಿದಂತೆ ಪರಿಶೀಲನಾ ಸಮಿತಿಯು ಸೂಚಿಸಿರುವ ಬದಲಾವಣೆಗಳನ್ನು ಸೇರ್ಪಡೆಗೊಳಿಸಿದ ನಂತರ, ಆ.11ರಂದು ಮತ್ತೆ ಮಂಡಿಸಲಿದೆ ಎಂದು ಮೂಲಗಳು ತಿಳಿಸಿವೆ. ಪರಿಷ್ಕೃತ ಮಸೂದೆಯು, ಪರಿಶೀಲನಾ ಸಮಿತಿಯ ಎಲ್ಲ ಶಿಫಾರಸುಗಳನ್ನು ಒಳಗೊಂಡಿದೆ ಎನ್ನಲಾಗಿದೆ.

### ಟಾಟಾ ಮೋಟರ್ಸ್ ಲಾಭ ಇಳಿಕೆ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ಟಾಟಾ ಮೋಟರ್ಸ್ ಲಿಮಿಟೆಡ್‌ನ ನಿವ್ವಳ ಲಾಭದಲ್ಲಿ ಶೇ 62ರಷ್ಟು ಇಳಿಕೆಯಾಗಿದೆ.

ಕಳೆದ ಜೂನ್ ತ್ರೈಮಾಸಿಕದಲ್ಲಿ ಕಂಪನಿಯು ₹10,587 ಕೋಟಿ ಲಾಭ ಗಳಿಸಿತ್ತು. ಈ ಬಾರಿ ₹4,003 ಕೋಟಿ ಲಾಭ ಗಳಿಸಿದೆ. ವಾಹನಗಳ ಮಾರಾಟದಲ್ಲಿನ ಇಳಿಕೆ ಲಾಭದ ಪ್ರಮಾಣ ಕಡಿಮೆಯಾಗಲು ಕಾರಣ ಎಂದು ಷೇರುಪೇಟೆಗೆ ಕಂಪನಿ ಶುಕ್ರವಾರ ತಿಳಿಸಿದೆ. ವರಮಾನವು ₹1,04,407 ಕೋಟಿಯಾಗಿದೆ. ಕಳೆದ ಜೂನ್ ತ್ರೈಮಾಸಿಕದಲ್ಲಿ ₹1,07,102 ಕೋಟಿಯಾಗಿತ್ತು ಎಂದು ತಿಳಿಸಿದೆ.

### 10 ನಿಮಿಷದಲ್ಲಿ ಔಷಧ: ಜೆಪ್ಟೊ

ನವದೆಹಲಿ (ಪಿಟಿಐ): 10 ನಿಮಿಷದಲ್ಲಿ ಔಷಧಗಳನ್ನು ಗ್ರಾಹಕರಿಗೆ ತಲುಪಿಸುವ 'ಜೆಪ್ಟೊ ಫಾರ್ಮಸಿ' ಸೇವೆ ಆರಂಭಿಸಲಾಗಿದೆ ಎಂದು ಆನ್‌ಲೈನ್ ವೇದಿಕೆ 'ಜೆಪ್ಟೊ' ತಿಳಿಸಿದೆ.

ಮುಂಬೈ, ಬೆಂಗಳೂರು, ದೆಹಲಿ–ಎನ್‌ಸಿಆರ್ ಮತ್ತು ಹೈದರಾಬಾದ್‌ನಲ್ಲಿ ಪ್ರಸ್ತುತ ಈ ಸೇವೆ ಆರಂಭಿಸಲಾಗಿದೆ ಎಂದು ಜೆಪ್ಟೊ ಸಹ ಸಂಸ್ಥಾಪಕ ಮತ್ತು ಸಿಇಒ ಆದಿತ್ ಪಲಿಚಾ ಲಿಂಕ್ಡ್‌ಇನ್‌ನಲ್ಲಿ ತಿಳಿಸಿದ್ದಾರೆ.

ಈಗಾಗಲೇ ಕಂಪನಿಯು 10 ನಿಮಿಷದಲ್ಲಿ ದಿನಸಿ ವಸ್ತುಗಳನ್ನು ತಲುಪಿಸುತ್ತಿದೆ. ಈಗ ಆಯ್ದ ಮಹಾನಗರಗಳಲ್ಲಿ ಜೆಪ್ಟೊ ಫಾರ್ಮಸಿ ಸೇವೆ ಆರಂಭಿಸಲಾಗಿದ್ದು, ಲಕ್ಷಾಂತರ ಗ್ರಾಹಕರಿಗೆ ಅನುಕೂಲವಾಗಲಿದೆ ಎಂದು ತಿಳಿಸಿದ್ದಾರೆ.

# 'ಭಾರತ–ಪಾಕ್ ಯುದ್ಧ ನಿಲ್ಲಿಸಿದ್ದು ನಾವೇ'

ನ್ಯೂಯಾರ್ಕ್ (ಪಿಟಿಐ): 'ಭಾರತ–ಪಾಕಿಸ್ತಾನ ಯುದ್ಧವನ್ನು ನಿಲ್ಲಿಸಲು ಅಮೆರಿಕ ನೇರವಾಗಿ ಕಣಕ್ಕಿಳಿಯಿತು' ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಹೇಳಿದ್ದಾರೆ.

'ಕದನ ವಿರಾಮ ಜಾರಿಗೆ ತರಲು ನಾನೇ ಕಾರಣ' ಎಂದು ಟ್ರಂಪ್ ಈಗಾಗಲೇ ಮೇ 10ರಿಂದ 25 ಬಾರಿ ಹೇಳಿದ್ದಾರೆ. ಇದೀಗ ರುಬಿಯೊ ಕೂಡ ಅಧ್ಯಕ್ಷರ ಹೇಳಿಕೆಯನ್ನು ಸಮರ್ಥಿಸಿಕೊಂಡಿದ್ದು, ಭಾರತ–ಪಾಕಿಸ್ತಾನ ಯುದ್ಧಕ್ಕೆ ಮುಂದಾದಾಗ ಅಮೆರಿಕ ನೇರವಾಗಿ ಕಣಕ್ಕಿಳಿಯಿತು. ಅಣ್ವಸ್ತ್ರ ಬಲ ಹೊಂದಿರುವ ನೆರೆಹೊರೆ ದೇಶಗಳ ನಡುವೆ ಟ್ರಂಪ್ ಅವರ ಪಾತ್ರದಿಂದ ಶಾಂತಿ ಸ್ಥಾಪನೆ ಸಾಧ್ಯವಾಯಿತು ಎಂದು ಪ್ರತಿಪಾದಿಸಿದ್ದಾರೆ.

ಮಾರ್ಕೊ ರುಬಿಯೊ

'ಶಾಂತಿ ಸ್ಥಾಪನೆಗೆ ಟ್ರಂಪ್ ಬದ್ಧರಾಗಿದ್ದಾರೆ. ಅವರು 'ಶಾಂತಿಯ ಪಿತಾಮಹ' ಎಂದು ರುಬಿಯೊ ಅಮೆರಿಕದ ಇಡಬ್ಲ್ಯುಟಿಎನ್ ವಾಹಿನಿಗೆ ನೀಡಿದ ಸಂದರ್ಶನದಲ್ಲಿ ಬಣ್ಣಿಸಿದ್ದಾರೆ.

ಕಾಂಬೋಡಿಯಾ–ಥಾಯ್ಲೆಂಡ್, ಅಜೆರ್‌ಬೈಜಾನ್ –ಅರ್ಮೇನಿಯಾ ಸೇರಿದಂತೆ ಜಗತ್ತಿನ ಹಲವು ದೇಶಗಳ ಮಧ್ಯದ ಸಂಘರ್ಷಗಳನ್ನು ಟ್ರಂಪ್ ಮಧ್ಯಪ್ರವೇಶಿಸಿ ಶಮನಗೊಳಿಸಿದ್ದಾರೆ ಎಂದು ರುಬಿಯೊ ಪಟ್ಟಿ ಮಾಡಿದ್ದಾರೆ. 70 ಲಕ್ಷ ಜನರ ಸಾವಿಗೆ ಕಾರಣವಾದ ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೊ ಮತ್ತು ರುವಾಂಡ ನಡುವೆ ಮೂರು ದಶಕಳಿಂದ ಮುಂದುವರಿದಿದ್ದ ಸಂಘರ್ಷವನ್ನು ಕೊನೆಗಾಣಿಸಿ ಶಾಂತಿ ಒಪ್ಪಂದಕ್ಕೆ ಸಹಿ ಹಾಕಿಸುವಲ್ಲಿ ಅಮೆರಿಕ ಮಹತ್ವದ ಪಾತ್ರ ವಹಿಸಿತು ಎಂದು ಅವರು ಹೇಳಿದ್ದಾರೆ.

### 'ಪ್ರಧಾನಿ ಯಾಕೆ ಹೆದರುತ್ತಿದ್ದಾರೆ'

'ಯುದ್ಧ ನಿಲ್ಲಿಸಿದ್ದು ನಾವೇ' ಎಂಬ ಮಾರ್ಕೊ ರುಬಿಯೊ ಹೇಳಿಕೆಗೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್, 'ಪ್ರಧಾನಿ ಯಾಕೆ ಹೆದರುತ್ತಿದ್ದಾರೆ, ಟ್ರಂಪ್ ಹೇಳಿಕೆಯನ್ನು ಅವರು ಸಾರ್ವಜನಿಕವಾಗಿ ಯಾಕೆ ಖಡಾಖಂಡಿತವಾಗಿ ತಿರಸ್ಕರಿಸುತ್ತಿಲ್ಲ' ಎಂದು ಪ್ರಶ್ನಿಸಿದೆ.'ಅಮೆರಿಕದ ಮಧ್ಯಪ್ರವೇಶದಿಂದ ಭಾರತ–ಪಾಕ್ ಕದನ ವಿರಾಮ ಘೋಷಿಸಿದೆ ಎಂದು ಮೊದಲ ಬಾರಿಗೆ ರುಬಿಯೊ ಮೇ 10ರಂದು ಹೇಳಿದ್ದರು. ಆ ನಂತರ ಇದುವರೆಗೆ ಟ್ರಂಪ್ 34 ಬಾರಿ ಇದನ್ನೇ ಪುನರುಚ್ಚರಿಸಿದ್ದಾರೆ'ಎಂದಿದೆ.

## ರಷ್ಯಾದಿಂದ ತೈಲ ಖರೀದಿಗೆ ಭಾರತದಿಂದ ಡಾಲರ್ ಬಳಕೆ ಆರೋಪ

# ಭಾರತಕ್ಕೆ ಶೇ 50 ಸುಂಕ: ಅಮೆರಿಕ ಸಮರ್ಥನೆ

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಅಮೆರಿಕ ಹೇರಿರುವ ಶೇ 25ರಷ್ಟು ಹೆಚ್ಚುವರಿ ಸುಂಕವು ನ್ಯಾಯ ಸಮ್ಮತವಾಗಿದ್ದು, ಇದು ದೇಶದ 'ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ವಿಚಾರವಾಗಿದೆ' ಎಂದು ವೈಟ್‌ಹೌಸ್‌ನ ವ್ಯಾಪಾರ ಸಲಹೆಗಾರ ಪೀಟರ್ ನವ್ರೊ ಸಮರ್ಥಿಸಿಕೊಂಡಿದ್ದಾರೆ.

ಭಾರತದಿಂದ ಅಮೆರಿಕಕ್ಕೆ ಸರಕುಗಳನ್ನು ಆಮದು ಮಾಡಿಕೊಳ್ಳುವವರು ಶೇ 25ರಷ್ಟು ಪ್ರತಿ ಸುಂಕ ಮತ್ತು ಶೇ 25ರಷ್ಟು ಹೆಚ್ಚುವರಿ ಸುಂಕ ಸೇರಿ ಸದ್ಯ ಶೇ 50ರಷ್ಟು ಸುಂಕ ಪಾವತಿಸಬೇಕಿದೆ. ಇದು ಅಮೆರಿಕವು ಇತರೆ ದೇಶಗಳ ಮೇಲೆ ಹೇರಿರುವ ಸುಂಕದಲ್ಲೇ ಗರಿಷ್ಠ ಮಟ್ಟದ್ದಾಗಿದೆ. ಹೆಚ್ಚುವರಿ ಸುಂಕವು ಆಗಸ್ಟ್ 27ರಿಂದ ಜಾರಿಗೆ ಬರಲಿದೆ.

'ಪ್ರತಿ ಸುಂಕಕ್ಕೂ, ಹೆಚ್ಚುವರಿ ಸುಂಕಕ್ಕೂ ವ್ಯತ್ಯಾಸವಿದೆ. ಭಾರತದ ಮೇಲೆ ಅಮೆರಿಕ ಹೆಚ್ಚುವರಿ ಸುಂಕ ವಿಧಿಸಿರುವುದಕ್ಕೆ ಸಕಾರಣವಿದೆ. ರಷ್ಯಾದಿಂದ ತೈಲ ಖರೀದಿಸಬಾರದು ಎಂಬ ಅಮೆರಿಕದ ಎಚ್ಚರಿಕೆಯನ್ನು ಭಾರತ ತಿರಸ್ಕರಿಸಿದೆ. ಹೀಗಾಗಿ ಇದು ಸಂಪೂರ್ಣವಾಗಿ ಅಮೆರಿಕದ ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ವಿಚಾರವಾಗಿದೆ' ಎಂದು ಅವರು ಪ್ರತಿಪಾದಿಸಿದ್ದಾರೆ.

ಭಾರತವನ್ನು 'ತೆರಿಗೆಯ ಮಹಾರಾಜ' ಎಂದು ಕರೆದಿರುವ ನವ್ರೊ, 'ಇತರೆ ದೇಶಗಳಿಗೆ ಹೋಲಿಸಿದರೆ ಭಾರತವು ಅಮೆರಿಕದ ಸರಕುಗಳಿಗೆ ಗರಿಷ್ಠ ಮಟ್ಟದ ಸುಂಕ ವಿಧಿಸುತ್ತಿದೆ. ಅಮೆರಿಕವು ಭಾರತದ ಸರಕುಗಳಿಗಾಗಿ ಲಕ್ಷಾಂತರ ಡಾಲರ್ ಮೊತ್ತವನ್ನು ವ್ಯಯಿಸುತ್ತಿದೆ. ಭಾರತವು ಇದೇ ಅಮೆರಿಕದ ಡಾಲರ್ ಬಳಸಿಕೊಂಡು ರಷ್ಯಾದಿಂದ ತೈಲ ಖರೀದಿಸುತ್ತದೆ. ನಮ್ಮ ಅಧ್ಯಕ್ಷರಿಗೆ ಆರ್ಥಿಕ ಭದ್ರತೆ ಮತ್ತು ರಾಷ್ಟ್ರೀಯ ಭದ್ರತೆ ನಡುವಿನ ಸಂಬಂಧ ಚೆನ್ನಾಗಿ ತಿಳಿದಿದೆ. ಹೀಗಾಗಿ ಅವರು ಕಾದು ನೋಡೋಣ ಎಂದು ಹೇಳಿದ್ದಾರೆ' ಎಂದರು.

ಭಾರತಕ್ಕಿಂತಲೂ ಚೀನಾ ರಷ್ಯಾದಿಂದ ಹೆಚ್ಚಿನ ತೈಲ ಖರೀದಿಸುತ್ತದೆಯಲ್ಲ ಎಂಬ ಪ್ರಶ್ನೆಗೆ ಉತ್ತರಿಸಿರುವ ನವ್ರೊ, ಚೀನಾ ಮೇಲೆ ಈಗಾಗಲೇ ಶೇ50ಕ್ಕಿಂತ ಹೆಚ್ಚಿನ ಸುಂಕ ವಿಧಿಸಿದೆ. ತೈಲ ಖರೀದಿ ವಿಚಾರವಾಗಿ ಮಾತುಕತೆ ನಡೆಸಲಾಗುವುದು ಎಂದು ಹೇಳಿದ್ದಾರೆ.

### 'ಪ್ರತಿಕೂಲ ಪರಿಣಾಮ'

ನ್ಯೂಯಾರ್ಕ್ (ಪಿಟಿಐ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಇತ್ತೀಚಿನ 'ಸುಂಕ ತಂತ್ರ'ವು ಭಾರತ–ಅಮೆರಿಕ ನಡುವೆ ದೀರ್ಘ ಕಾಲದಿಂದ ಬೆಳೆದು ಬಂದಿರುವ ಸದೃಢ ವ್ಯಾಪಾರ ಸಂಬಂಧದ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ ಎಂದು ಅಮೆರಿಕ ಸಂಸದ ಗ್ರೆಗೊರಿ ಮೀಕ್ಸ್ ಹೇಳಿದ್ದಾರೆ.

'ಅಮೆರಿಕವು ಭಾರತದೊಂದಿಗೆ ಸುಸ್ಥಿರ ವ್ಯಾಪಾರ ಸಂಬಂಧ ಮಾತ್ರವಲ್ಲ, ಅಲ್ಲಿನ ಜನರೊಂದಿಗೂ ಗಾಢವಾದ ಬಾಂಧ್ಯವ ಹೊಂದಿದೆ. ಹಾಗಾಗಿ ಸುಂಕದ ವಿಚಾರವನ್ನು ನಮ್ಮ ಪ್ರಜಾಪ್ರಭುತ್ವ ಮೌಲ್ಯಗಳನ್ನು ಗಮನದಲ್ಲಿಟ್ಟುಕೊಂಡು, ಪರಸ್ಪರ ಗೌರವದಿಂದ ಬಗೆಹರಿಸಿಕೊಳ್ಳಬೇಕು' ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಪ್ರಜಾವಾಣಿ
# ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

**PUBLIC NOTICE**

**KARNATAKA PRADESHA BALIJA SANGHA (R)**
No.31, 1st Main Road, Chamarajpet, Bangalore-560018
**PUBLIC NOTICE**
This notice is issued to inform the public that, the election process for the Governing Council of Karnataka Pradesha Balija Sangha (R), has resumed. The process commenced with the issuance of Calander of Events on 14.07.2025. Subsequently, Writ Petitions (W.P.No.22553/2025 C/w W.P.No.23133/2025) were filed before the Hon'ble High Court of Karnataka resulting in a stay order dated 01.08.2025. The stay order permitted only the nomination stage to proceed. An appeal was filed against the said order in Writ Appeal No.1297/2025, and by an order dated 07.08.2025, the stay was set-aside, thereby permitting the Sangha to continue with the election process without any impediment. The election process will now continue as per the Calendar of Events dated 14.07.2025.
Place: Bangalore
Date: 09.08.2025
Sd/-
JAGADEESH C K
Secretary

**ಉದ್ಯೋಗಾವಕಾಶ**

**General**

ಬಾರ್ ವೇಟರ್ಸ್ ಬೇಕಾಗಿದ್ದಾರೆ ಸಂಪರ್ಕಿಸಿ ಮೊಬೈಲ್ 7090650796 ಜೆ.ಪಿ.ನಗರ್ ಹಂತ 2 7090650796

**Part-Time Jobs**

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

**Wanted**

ಕರ್ನಾಟಕದಾದ್ಯಂತ ಪ್ರಸಿದ್ಧ MNCಕಂಪನಿಗೆ Work From Home & Office ಕೆಲಸಕ್ಕೆ ಯುವಕ, ಯುವತಿಯರು ಬೇಕಾಗಿದ್ದಾರೆ. (18,000-35,000) 7th, 10th, Any Degree. Ph: +917411273440/ +917625020184.

ಶೇಷಾದ್ರಿಪುರಂನಲ್ಲಿರುವ ಫಾರ್ಮಾ ಕಂಪನಿಯು ಗೋದಾಮು ಮೇಲ್ವಿಚಾರಕರು ಮತ್ತು ಸರಕುಗಳ ನಿರ್ವಹಣೆ, ಲೋಡಿಂಗ್ ಮತ್ತು ಅನ್‌ಲೋಡಿಂಗ್‌ಗೆ ಕಾರ್ಮಿಕರನ್ನು ನೇಮಿಸಿಕೊಳ್ಳುತ್ತಿದೆ. ಸ್ಪರ್ಧಾತ್ಮಕ ಸಂಬಳವನ್ನು ನೀಡಲಾಗುತ್ತದೆ. 8660700898.

**ರಿಯಲ್ ಎಸ್ಟೇಟ್ ಸೆಲ್ಲಿಂಗ್**

**Commercial Land**

**Mysore Road**

**ಬಿಲ್ಡರ್ ಎಸೆನ್ಷಿಯಲ್**

**Water Proofing**

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

**ವ್ಯಾಪಾರ**

**Business Offers**

**Distributors**

ತನ್ಮಯಿ ಪ್ರೋಟಿನ್ ಪೌಡರ್ ಕೆಲಸ ಮಾಡಲು ಯುವಕ ಯುವತಿಯರು ಬೇಕಾಗಿದ್ದಾರೆ. ತಿಂಗಳಿಗೆ ವೇತನ 20,000 ಇರುತ್ತದೆ. ರಕ್ತದೊತ್ತಡ, ತೂಕ, ಕಡಿಮೆಯಾಗುತ್ತದೆ. ದೇಹಕ್ಕೆ ಶಕ್ತಿ ಮಂಡಿನೋವು, ಕಾಲುನೋವು, ನಿದ್ರೆ ಸಮಸ್ಯೆ, ಶಕ್ತಿ ಇಲ್ಲದವರಿಗೆ, ಬಿಸಿನೀರು ಅಥವಾ ಹಾಲಿನಲ್ಲಿ ಬೆರಸಿ ಕುಡಿಯುವುದರಿಂದ ನಿಮ್ಮ ಕಾಯಿಲೆಗಳು ಮುಕ್ತಿಗೊಳ್ಳುತ್ತವೆ. ಬೆಂಗಳೂರು Ph: 9019626612.

**ಪ್ರವಾಸ**

**Travel**

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 14.10.2025 ರಿಂದ 10 ದಿನಗಳ ಕಾಶಿ,ಗಯಾ,ಅಯೋಧ್ಯೆ ಪ್ರಯಾಗ್‌ರಾಜ್ ನೈಮಿಶಾರಣ್ಯ ಜಾರ್ಖಂಡ್ ವೈದ್ಯನಾಥೇಶ್ವರ ರೂ.24000. 26000. 29000. 9448390735 9449721678

7ದಿನಗಳ ಕಾಶಿಯಾತ್ರೆ, 9 ದಿನಗಳ ಗುಜರಾತ್. 12 ದಿನಗಳ ಮಧ್ಯಪ್ರದೇಶ. 10 ದಿನಗಳ ನೇಪಾಳ ಮುಕ್ತಿನಾಥ.13 ದಿನಗಳ ಚಾರ್‌ಧಾಮಯಾತ್ರೆ. 6ದಿನಗಳ ದುಬೈ ಪ್ರವಾಸ. ನಂದಿ ಹಾಲಿಡೇಸ್ ಬಸವನಗುಡಿ ಬೆಂಗಳೂರು.04 9980270467 9740228186

ಹೆಸರಾಂತ ಏಷ್ಯನ್ ಟ್ರಾವೆಲ್ ಏಜೆನ್ಸಿಯಿಂದ ಪಿತೃಪಕ್ಷ ಪ್ರಯುಕ್ತ 10.09.2025 02.10.2025 ಕಾಶಿ,ಅಯೋಧ್ಯ,ಬುದ್ಧಗಯಾ 19.09.2025 08.10.2025 ಚಾರ್‌ಧಾಮ ಪ್ರವಾಸ. 03.10.2025 ನೇಪಾಳ ಮುಕ್ತಿನಾಥ,ಪೋಕ್ರಾ,ಲುಂಬಿನಿ 26.10.2025 23.11.2025 ಸೋಮನಾಥ ದ್ವಾರಕಾ ಮಹಂಕಾಲೇಶ್ವರ ಓಂಕಾರೇಶ್ವರ ದಕ್ಷಿಣಭಾರತ ಆಂಧ್ರ ಪ್ರವಾಸಗಳಿಗೆ ಸಂಪರ್ಕಿಸಿ. 26574131 8431888138 8317446683 9686708171

ಭಾರತಪರಂಪರ ದರ್ಶನ: 17.8.25 ಪುರಿಜಗನ್ನಾಥ, 2ಶಕ್ತಿಪೀಠ, ಲಿಂಗರಾಜ,ಕೊಲ್ಕತ್ತ, 6ದಿನ ವಿಮಾನದಲ್ಲಿ. 31.8.25 11ದಿನ 4ಜ್ಯೋತಿರ್ಲಿಂಗ ಮಾತೃಗಯ,ಗುಜರಾತ್, ಮಧ್ಯಪ್ರದೇಶ. ಪ್ರಕಾಶ್ ಹೆಬ್ಬಾರ್ 9448792891.

**ವೈಯಕ್ತಿಕ**

**Lost**

**DOCUMENT LOST**
I, V Janardhanan, R/at No 25, RMV, 2nd Stage, 2nd Cross, Devappa Garden, Sanjaynagar, Bangalore-560094, have lost the Original Mother Deed Document / Identification No.: Registration No158/97-98, Lost Report No. 1739767/2025 while in transit. If finders please Contact No: 9538770022

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

# ಕರ್ನಾಟಕದ ಬಾಲಕಿಯರಿಗೆ ಬೆಳ್ಳಿ

## ಜೂನಿಯರ್ ರಾಷ್ಟ್ರೀಯ ವಾಟರ್‌ಪೋಲೊ • ಜಾಯ್ ಮಂಡಲ್ ಶ್ರೇಷ್ಠ ಆಟಗಾರ

ಪ್ರಮುಖ ಅಂಶಗಳು
- ಫೈನಲ್‌ನಲ್ಲಿ ಕೇರಳ ಎದುರು 8–14ರಿಂದ ಪರಾಭವಗೊಂಡ ಆತಿಥೇಯ ಬಾಲಕಿಯರು
- ಕಂಚಿನ ಪದಕಕ್ಕಾಗಿ ನಡೆದ ಪಂದ್ಯದಲ್ಲಿ ಕೇರಳಕ್ಕೆ ಮಣಿದ ಬಾಲಕರ ತಂಡ
- ಕೇರಳದ ಸಫ್ವಾ ಸಕೀರ್‌ಗೆ ಶ್ರೇಷ್ಠ ಆಟಗಾರ್ತಿ ಗೌರವ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕದ ಈಜುಪಟುಗಳು ಬಸವನಗುಡಿ ಈಜು ಕೇಂದ್ರದಲ್ಲಿ ನಡೆದ 51ನೇ ಜೂನಿಯರ್ ರಾಷ್ಟ್ರೀಯ ಅಕ್ವಾಟಿಕ್ಸ್ ಚಾಂಪಿಯನ್‌ಷಿಪ್ ವಾಟರ್‌ಪೋಲೊ ಸ್ಪರ್ಧೆಯಲ್ಲಿ ನಿರಾಶೆ ಅನುಭವಿಸಿದರು. ಬಾಲಕಿಯರ ಈಜು ತಂಡವು ಬೆಳ್ಳಿ ಪದಕಕ್ಕೆ ತೃಪ್ತಿಪಟ್ಟರೆ, ಬಾಲಕರ ತಂಡವು ಕಂಚಿನ ಪದಕಕ್ಕಾಗಿ ನಡೆದ ಪಂದ್ಯದಲ್ಲಿ ಕೇರಳಕ್ಕೆ ಮಣಿಯಿತು.

ಟೂರ್ನಿಯ ಅಂತಿಮ ದಿನವಾದ ಶುಕ್ರವಾರ ನಡೆದ ಫೈನಲ್ ಪಂದ್ಯದಲ್ಲಿ ಆತಿಥೇಯ ಬಾಲಕಿಯರ ತಂಡವು 8–14ರಿಂದ ಕೇರಳ ಎದುರು ಪರಾಭವಗೊಂಡಿತು. ಸಂಘಟಿತವಾಗಿ ಆಡಿದ ಕೇರಳ ತಂಡದ ಪರ ನಿತ್ಯಾ 4 ಅಂಕ ಗಳಿಸಿ, ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದರು. ಕರ್ನಾಟಕ ತಂಡದ ರೋಶಿಣಿ ಎಸ್. (5) ಹಾಗೂ ನಿತ್ಯಾ (3) ಪ್ರಬಲ ಪ್ರತಿರೋಧ ತೋರಿದರಾದರೂ, ಇತರರು ಅಂಕ ಗಳಿಸುವಲ್ಲಿ ವಿಫಲರಾದರು.

ಗುರುವಾರ ನಡೆದ ಸೆಮಿಫೈನಲ್‌ನ ರೋಚಕ ಹಣಾಹಣಿಯಲ್ಲಿ ಬಂಗಾಳ ತಂಡಕ್ಕೆ ಮಣಿದಿದ್ದ ಬಾಲಕರ ತಂಡವು ಕಂಚಿನ ಪದಕ ಗೆಲ್ಲುವಲ್ಲಿಯೂ ವಿಫಲವಾಯಿತು. ಕೇರಳ ತಂಡವು 15–10ರಿಂದ ಆತಿಥೇಯ ತಂಡವನ್ನು ಸುಲಭವಾಗಿ ಸೋಲಿಸಿತು.

ಗೋಕುಲ ಕೃಷ್ಣ 4 ಹಾಗೂ ಇರ್ಫಾನ್, ವಿಶಾಲ್ ವಿ. ಮತ್ತು ಆದಿತ್ಯನ್ ಎ.ಎಸ್. ತಲಾ 3 ಅಂಕ ಗಳಿಸಿ ಕೇರಳ ತಂಡಕ್ಕೆ ಗೆಲುವು ತಂದುಕೊಟ್ಟರು. ಆತಿಥೇಯ ತಂಡದ ಚಿನ್ಮಯ್ ಪೈ (3) ಕೊಂಚ ಪ್ರತಿರೋಧ ತೋರಿದರು.

ತುರುಸಿನ ಪೈಪೋಟಿಯಿಂದ ಕೂಡಿದ್ದ ಬಾಲಕರ ವಿಭಾಗದ ಫೈನಲ್ ಸ್ಪರ್ಧೆಯಲ್ಲಿ ಬಂಗಾಳ ತಂಡವು 16–15ರಿಂದ ಮಹಾರಾಷ್ಟ್ರ ತಂಡವನ್ನು ಮಣಿಸಿತು. ಜಾಯ್ ಮಂಡಲ್ (5) ಹಾಗೂ ರಾಜೇಶ್ ಎಸ್.(4) ಬಂಗಾಳದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಮಹಾರಾಷ್ಟ್ರ ತಂಡದ ಮಂಥನ್ ಐ.ಎಸ್. (7) ಹಾಗೂ ಸಾಮ್ರಾಟ್ ರವೀಂದ್ರ ಬಿ. (5) ಪ್ರಬಲ ಹೋರಾಟ ತೋರಿದರು.

ಬಾಲಕಿಯರ ವಿಭಾಗದ ಕಂಚಿನ ಪದಕಕ್ಕಾಗಿ ನಡೆದ ಪಂದ್ಯದಲ್ಲಿ ಮಹಾರಾಷ್ಟ್ರ ತಂಡವು 13–8ರಿಂದ ಒಡಿಶಾ ತಂಡವನ್ನು ಪರಾಭವಗೊಳಿಸಿತು.

ಬಂಗಾಳದ ಜಾಯ್ ಮಂಡಲ್ ಬಾಲಕರ ವಿಭಾಗದ ಶ್ರೇಷ್ಠ ಈಜುಪಟು ಪ್ರಶಸ್ತಿ ಭಾಜನರಾದರು. ಕೇರಳದ ಸಫ್ವಾ ಸಕೀರ್ ಅವರು ಬಾಲಕಿಯರ ವಿಭಾಗದಲ್ಲಿ ಈ ಗೌರವ ಪಡೆದರು.

